ಶುಕ್ರವಾರ, ಜನವರಿ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 17 | ಪುಟ 16
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
2025ರ ನಿರೀಕ್ಷಿತ ಚಿತ್ರಗಳು ಈಗಾಗಲೇ ಸದ್ದು ಮಾಡಿ ಈ ವರ್ಷ ಬಿಡುಗಡೆ ಕಾಣಲಿರುವ ಪ್ರಮುಖ ಚಿತ್ರಗಳ ಇಣುಕುನೋಟ

ಆಳ-ಅಗಲ
ಸಿಸೇರಿಯನ್ ಹೆಚ್ಚಳ ತಂದ ಕಳವಳ

ಛತ್ತೀಸಗಢ: 12 ನಕ್ಸಲರ ಹತ್ಯೆ 11

ರಾಜ್ಯದಾದ್ಯಂತ 'ಆಶಾ ಕಿರಣ' ವಿಸ್ತರಣೆ 7

ಸೆನ್ಸೆಕ್ಸ್	ನಿಫ್ಟಿ	₹/$
77,042	23,311	86.61

₹17,311 ಕೋಟಿ ಆಸ್ತಿ: ವಶಕ್ಕೆ ಯತ್ನ

ಎಚ್ಎಂಟಿ ಹಾಗೂ ಮೈಸೂರು ರಾಜವಂಶಸ್ಥರ ವಶದಲ್ಲಿರುವ ಒಟ್ಟು ₹17,311 ಕೋಟಿ ಮೌಲ್ಯದ ಆಸ್ತಿಯನ್ನು ತನ್ನ ಸ್ವಾಧೀನಕ್ಕೆ ಪಡೆಯಲು ರಾಜ್ಯ ಸರ್ಕಾರ ಮುಂದಡಿ ಇಟ್ಟಿದೆ. ಎರಡು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಲು ಗುರುವಾರ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್ಎಂಟಿ ಸ್ವಾಧೀನದಲ್ಲಿರುವ ₹14,300 ಕೋಟಿ ಮೌಲ್ಯದ 180 ಎಕರೆ ಅರಣ್ಯ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಹಿಂಪಡೆಯಲು ಅಗತ್ಯ ಕ್ರಮ ಜರುಗಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.



ಎಚ್.ಕೆ.ಪಾಟೀಲ

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಎಚ್ಎಂಟಿಗೆ ನೀಡಲಾಗಿದ್ದ 443 ಎಕರೆ ಜಮೀನಿನ ಪೈಕಿ 160 ಎಕರೆ ಪ್ರದೇಶವನ್ನು ಸರ್ಕಾರಿ ಮತ್ತು ಖಾಸಗಿಯವರಿಗೆ ಮಾರಾಟ ಅಥವಾ ಲೀಸ್ ಆಧಾರದಲ್ಲಿ ಈಗಾಗಲೇ ಪರಭಾರೆ ಮಾಡಲಾಗಿದೆ. ಆ ಬಳಿಕ 180 ಎಕರೆ ಪ್ರದೇಶದಲ್ಲಿ ಅರಣ್ಯದ ಯಾವುದೇ ಲಕ್ಷಣ ಇಲ್ಲದೇ ಇರುವುದರಿಂದ ಡಿನೋಟಿಫಿಕೇಷನ್ ಮಾಡಲು ಅನುಮತಿ ಕೋರಿ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿ ವಾಪಸ್ ಪಡೆಯಲಾಗುವುದು ಎಂದು ತಿಳಿಸಿದರು.

ಎಚ್ಎಂಟಿ ವ್ಯಾಪ್ತಿಯಲ್ಲಿರುವ 180 ಎಕರೆ ಅರಣ್ಯ ಭೂಮಿಯ ಡಿನೋಟಿಫಿಕೇಶನ್‌ಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು 2015ರಲ್ಲಿ ಸಚಿವ ಸಂಪುಟದ ಪೂರ್ವಾನುಮತಿ ಪಡೆಯದೇ ಮತ್ತು ಉನ್ನತ ಮಟ್ಟದ ಸಮಿತಿಯ ಅನುಮೋದನೆ ಪಡೆಯದೇ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಾಪಸ್ ಪಡೆಯುವುದರ ಜತೆಗೆ, ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಮಧ್ಯಂತರ ಅರ್ಜಿಯನ್ನು ಹಿಂದಕ್ಕೆ ಪಡೆಯುವ ವಿಚಾರದಲ್ಲಿ ಅರಣ್ಯ ಸಚಿವರು ತೆಗೆದುಕೊಂಡಿರುವ ನಿರ್ಣಯಕ್ಕೆ ಸಂಪುಟ ಸಭೆ ಘಟನೋತ್ತರ ಮಂಜೂರಾತಿ ನೀಡಿದೆ ಎಂದು ಹೇಳಿದರು.

7ನೇ ಪುಟ ನೋಡಿ

ಅರಮನೆ ಮಾಲೀಕತ್ವ ವಿಷಯ ಇತ್ಯರ್ಥ: 'ಸುಪ್ರೀಂ'ಗೆ ಮನವಿ

ಬೆಂಗಳೂರು ಅರಮನೆಯನ್ನು ವಶಪಡಿಸಿಕೊಂಡಿರುವ 1997ರ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿಯಲು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ತುರ್ತು ವಿಚಾರಣೆ ನಡೆಸಿ, ಪ್ರಕರಣವನ್ನು ಬೇಗನೆ ಇತ್ಯರ್ಥ ಪಡಿಸಬೇಕು ಎಂದು ಮನವಿ ಸಲ್ಲಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸುಪ್ರೀಂ ಕೋರ್ಟ್ 2024ರ ಡಿಸೆಂಬರ್ 10ರಂದು ನೀಡಿದ ತೀರ್ಪಿನ ಪ್ರಕಾರ ಬೆಂಗಳೂರು ಅರಮನೆ ಮೈದಾನಕ್ಕೆ ಸೇರಿದ 15 ಎಕರೆ 17.5 ಗುಂಟೆ ಜಮೀನು ಉಪಯೋಗಿಸಿಕೊಳ್ಳುವುದಕ್ಕೆ ನಿಗದಿಪಡಿಸಿದ ಟಿಡಿಆರ್ (ಅಭಿವೃದ್ಧಿ ಹಕ್ಕುಗಳ ವರ್ಗಾವಣೆ) ದರದ ಬಗ್ಗೆ ಸಚಿವ ಸಂಪುಟ ಇಂದು ವಿಸ್ತೃತವಾಗಿ ಚರ್ಚಿಸಿತು. ನ್ಯಾಯಾಂಗ ನಿಂದನೆ ಅರ್ಜಿಯ ವಿಷಯದಲ್ಲಿ ಕಾನೂನಿನ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು ಎಂದರು.

ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಬಳ್ಳಾರಿ ರಸ್ತೆಯ ಬದಿಯಲ್ಲಿ ಪ್ರತಿ ಚದರ ಮೀಟರ್‌ಗೆ ₹2,83,500 ಮತ್ತು ಜಯಮಹಲ್ ರಸ್ತೆಯ ಕಡೆ ಪ್ರತಿ ಚದರ ಮೀಟರ್‌ಗೆ ₹2,04,000ರಂತೆ ಒಟ್ಟು ₹3,011 ಕೋಟಿ ಟಿಡಿಆರ್ ಪಾವತಿಸಬೇಕು. ಇದು ಸರ್ಕಾರಕ್ಕೆ ಆರ್ಥಿವಾಗಿ ಹೊರೆ ಆಗುತ್ತದೆ. ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಅಪೀಲು ಸಲ್ಲಿಸಿದರೂ ಅದನ್ನು ತಿರಸ್ಕರಿಸಲಾಗಿದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

7ನೇ ಪುಟ ನೋಡಿ

ಅರಮನೆ ಆವರಣದಲ್ಲಿ ಚಟುವಟಿಕೆಗೆ ನಿರ್ಬಂಧ

ಸುಪ್ರೀಂ ಕೋರ್ಟ್‌ನ 2000ರ ಆದೇಶ ಉಲ್ಲಂಘಿಸಿ ಬೆಂಗಳೂರು ಅರಮನೆ ಮೈದಾನದಲ್ಲಿ ಸುಮಾರು 2 ಲಕ್ಷ ಚದರ ಮೀಟರ್ ವ್ಯಾಪ್ತಿಯಲ್ಲಿ ಕಾಯಂ ಕಟ್ಟಡ ಗಳನ್ನು ನಿರ್ಮಿಸಿರುವ ಮಹಾರಾಜರ ಉತ್ತರಾಧಿಕಾರಿಗಳ ಮೇಲೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ.

15 ದಿನಗಳಲ್ಲಿ ಅನಧಿಕೃತ ಕಟ್ಟಡ ಗಳನ್ನು ತೆರವುಗೊಳಿಸಲು ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲಿ ಯಾವುದೇ ಚಟುವಟಿಕೆಗೆ ಅನುಮತಿ ನೀಡದಿರಲು ತೀರ್ಮಾನಿಸಲಾಗಿದೆ ಎಂದು ಎಚ್.ಕೆ.ಪಾಟೀಲ ಹೇಳಿದರು.

ಮಿರ್ಚಿ ದಾಸೋಹ ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವಕ್ಕೆ ಬಂದ ಭಕ್ತರಿಗೆ ನೀಡಲು ಗುರುವಾರ ತಯಾರಿಸಿದ ಮಿರ್ಚಿ ಭಜಿಗಳನ್ನು ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಪರಿಶೀಲಿಸಿದರು. ಸಮಾನ ಮನಸ್ಕ ಸ್ನೇಹಿತರು ಸೇರಿ ನಾಲ್ಕೂವರೆ ಲಕ್ಷ ಮಿರ್ಚಿ ತಯಾರಿಸಿ, ದಾಸೋಹದ ಜೊತೆ ನೀಡಿದರು ಚಿತ್ರ: ಭರತ್ ಕಂದಕೂರ

ನಟ ಸೈಫ್‌ಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ/ ಪಿಟಿಐ



ಮುಂಬೈ: ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರ ಮುಂಬೈನಲ್ಲಿರುವ ನಿವಾಸಕ್ಕೆ ನುಗ್ಗಿದ ದುಷ್ಕರ್ಮಿಯೊಬ್ಬ ಅವರಿಗೆ ಚಾಕುವಿನಿಂದ ಹಲವು ಬಾರಿ ಇರಿದು ಪರಾರಿಯಾಗಿದ್ದಾನೆ.

ಗಂಭೀರವಾಗಿ ಗಾಯಗೊಂಡಿರುವ ಸೈಫ್, ಲೀಲಾವತಿ ಆಸ್ಪತ್ರೆಯಲ್ಲಿ ತುರ್ತು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. 54 ವರ್ಷದ ಅವರು, 'ಪ್ರಾಣಾಪಾಯ'ದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಮುಂಬೈನ ಬಾಂದ್ರಾದಲ್ಲಿರುವ 'ಸದ್ಗುರು ಶರಣ್' ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಲ್ಲಿರುವ ನಿವಾಸದಲ್ಲಿ ಗುರುವಾರ ಬೆಳಗಿನ ಜಾವ 2.30ರ ಸುಮಾರಿಗೆ ನಡೆದಿರುವ ಈ ಘಟನೆಯು ಖ್ಯಾತನಾಮರ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಮುಂಬೈನ ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಮಹಾರಾಷ್ಟ್ರದ ಆಡಳಿತ ಮತ್ತು ವಿರೋಧ ಪಕ್ಷಗಳು ಆರೋಪ–ಪ್ರತ್ಯಾರೋಪ ಮಾಡಿವೆ.

'ಸೈಫ್ ಅವರ ಬೆನ್ನೆಲುಬಿಗೆ ಗಂಭೀರ ಗಾಯ ಆಗಿದ್ದು, ಅಲ್ಲಿ ಹೊಕ್ಕಿದ್ದ ಚಾಕು ಹೊರತೆಗೆಯಲು ಮತ್ತು ಬೆನ್ನುಮೂಳೆಯ ಮಜ್ಜೆಯನ್ನು ಸರಿಪಡಿಸಲು ಶಸ್ತ್ರಚಿಕಿತ್ಸೆ ನಡೆಸಲಾಗಿದೆ' ಎಂದು ಲೀಲಾವತಿ ಆಸ್ಪತ್ರೆಯ ನ್ಯೂರೋ ಸರ್ಜನ್ ಡಾ.ನಿತಿನ್ ಡಾಂಗೆ ಹೇಳಿದ್ದಾರೆ.

6ನೇ ಪುಟ ನೋಡಿ

ಘಟನಾವಳಿ

- ಮುಂಬೈನ ಬಾಂದ್ರಾದಲ್ಲಿರುವ ನಿವಾಸಕ್ಕೆ ನುಗ್ಗಿದ ದುಷ್ಕರ್ಮಿ
- ಗುರುವಾರ ಬೆಳಗಿನ ಜಾವ 2.30ರ ಸುಮಾರಿಗೆ ಘಟನೆ
- ನಸುಕಿನ 3.30ಕ್ಕೆ ಲೀಲಾವತಿ ಆಸ್ಪತ್ರೆಗೆ ದಾಖಲು
- ಆರು ಸಲ ಇರಿತ; ಎರಡು ಕಡೆ ಆಳವಾದ ಗಾಯ
- ಬೆನ್ನುಮೂಳೆಗೆ ತುರ್ತು ಶಸ್ತ್ರಚಿಕಿತ್ಸೆ
- ಆರೋಪಿಯ ಪತ್ತೆಗೆ 20 ತಂಡಗಳ ರಚನೆ

'ಬಲವಂತವಾಗಿ ಪ್ರವೇಶಿಸಿಲ್ಲ'

ದುಷ್ಕರ್ಮಿಯು ಸೈಫ್ ಅವರ ಮನೆಗೆ ಬಲವಂತವಾಗಿ ಅಥವಾ ಬಾಗಿಲು ಮುರಿದು ಪ್ರವೇಶಿಸಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಆದರೆ ಆತ, ರಾತ್ರಿಯೇ ಅಪಾರ್ಟ್‌ಮೆಂಟ್‌ನ ಆವರಣದಲ್ಲಿ ಅಡಗಿ ಕುಳಿತಿದ್ದ ಸಾಧ್ಯತೆಯಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

6ನೇ ಪುಟ ನೋಡಿ

ಚಾಕು ಇರಿದ ಆರೋಪಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಗುಂಡಿನ ದಾಳಿ: ಒಬ್ಬನ ಸಾವು, ₹92 ಲಕ್ಷ ದರೋಡೆ

ಪ್ರಜಾವಾಣಿ ವಾರ್ತೆ

ಬೀದರ್: ಎಟಿಎಂಗೆ ಜಮಾ ಮಾಡಲು ಬ್ಯಾಂಕಿನಿಂದ ಹಣ ಸಾಗಿಸುತ್ತಿದ್ದ ಸಿಬ್ಬಂದಿ ಮೇಲೆ ಗುಂಡಿನ ದಾಳಿ ನಡೆಸಿದ ಇಬ್ಬರು ಅಪರಿಚಿತರು, ₹92 ಲಕ್ಷ ನಗದು ದರೋಡೆ ಮಾಡಿ ಬೈಕ್‌ನಲ್ಲಿ ಪರಾರಿಯಾಗಿರುವ ಸಿನಿಮೀಯ ರೀತಿಯ ಘಟನೆ ನಗರದ ಹೃದಯ ಭಾಗದಲ್ಲಿ ಗುರುವಾರ ನಡೆದಿದೆ. ಘಟನೆಯಲ್ಲಿ ಒಬ್ಬ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದು, ಗಾಯಗೊಂಡ ಇನ್ನೊಬ್ಬನ ಸ್ಥಿತಿ ಚಿಂತಾಜನಕವಾಗಿದೆ.

ನಗರದ ಚಿದ್ರಿ ನಿವಾಸಿ ಗಿರಿ ವೆಂಕಟೇಶ ಮಲ್ಲಪ್ಪ (37) ಮೃತ ವ್ಯಕ್ತಿ. ನಗರದ ಲಾಡಗೇರಿ ನಿವಾಸಿ ಶಿವಕುಮಾರ (35) ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಸಿಎಂಎಸ್ ಖಾಸಗಿ ಸಂಸ್ಥೆಯ 'ಕ್ಯಾಶ್ ಕಸ್ಟೋಡಿಯನ್'ಗಳಾಗಿದ್ದರು. ನಿತ್ಯ ಬ್ಯಾಂಕಿನಿಂದ ಹಣ ಸಂಗ್ರಹಿಸಿ, ಅದನ್ನು ನಗರದ ವಿವಿಧ ಎಟಿಎಂಗಳಲ್ಲಿ ಜಮೆ ಮಾಡುವ ಕೆಲಸ ಮಾಡುತ್ತಿದ್ದರು.

'ಗುರುವಾರ ಬೆಳಿಗ್ಗೆ 10.30ರಿಂದ 11ರ ನಡುವೆ ಘಟನೆ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

7ನೇ ಪುಟ ನೋಡಿ

ನೋಟಿನ ಕಂತೆಗಳಿರುವ ಟ್ರಂಕ್‌ನೊಂದಿಗೆ ಬೈಕ್ ಮೇಲೆ ಪರಾರಿಯಾದ ಅಪರಿಚಿತರು

ಹೈದರಾಬಾದ್‌ನಲ್ಲೂ ಫೈರಿಂಗ್

ಘಟನೆಯ ಬಳಿಕ ಅಪರಿಚಿತರು ಟ್ರಂಕ್‌ನೊಂದಿಗೆ ಬೈಕ್ ಮೇಲೆ ನಗರದ ವಿವಿಧ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಬಳಿಕ ತೆಲಂಗಾಣ ಗಡಿ ಮೂಲಕ ಹೈದರಾಬಾದ್‌ನ ಅಪ್ಜಲ್ ಗಂಜ್ ಪ್ರವೇಶಿಸಿದ್ದಾರೆ. ಅಲ್ಲಿಂದ ಛತ್ತೀಸಗಢದ ರಾಯಪುರಕ್ಕೆ ಹೋಗಲು ಯೋಜನೆ ರೂಪಿಸಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯಗಳ ಬೆನ್ನು ಹತ್ತಿ ಸ್ಥಳಕ್ಕೆ ಧಾವಿಸಿದ್ದ ಬೀದರ್ ಹಾಗೂ ಹೈದರಾಬಾದ್ ಪೊಲೀಸರ ಮೇಲೆ ದರೋಡೆಕೋರರು ಗುಂಡಿನ ದಾಳಿ ನಡೆಸಿ, ಅಲ್ಲಿಂದ ಪರಾರಿಯಾಗಿದ್ದಾರೆ. ಘಟನೆಯಲ್ಲಿ ಒಬ್ಬ ವ್ಯಕ್ತಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸ್ಪೇಡೆಕ್ಸ್' ಯಶಸ್ವಿ: ಸಾಧನೆ ಐತಿಹಾಸಿಕ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ಬಾಹ್ಯಾಕಾಶದಲ್ಲಿ ಎರಡು ಉಪಗ್ರಹಗಳನ್ನು ಜೋಡಿಸುವ 'ಸ್ಪೇಸ್ ಡಾಕಿಂಗ್ ಎಕ್ಸ್‌ಪೆರಿಮೆಂಟ್' (ಸ್ಪೇಡೆಕ್ಸ್) ಕಾರ್ಯಾಚರಣೆಯು ಗುರುವಾರ ಯಶಸ್ವಿಯಾಗಿದೆ. ಈ ಐತಿಹಾಸಿಕ ಸಾಧನೆಗಾಗಿ ಭಾರತೀಯ ಬಾಹ್ಯಾಕಾಶ ಸಂಸ್ಥೆಗೆ (ಇಸ್ರೊ) ಶುಭಾಶಯಗಳ ಮಹಾಪೂರವೇ ಹರಿದುಬಂದಿತು. ಈ ಮೂಲಕ ಉಪಗ್ರಹ ಜೋಡಣೆ ತಂತ್ರಜ್ಞಾನ ಕರಗತ ಮಾಡಿಕೊಂಡ ನಾಲ್ಕನೇ ದೇಶ ಎಂಬ ಹೆಗ್ಗಳಿಕೆಗೂ ಭಾರತ ಪಾತ್ರವಾಯಿತು.

ಬಾಹ್ಯಾಕಾಶಕ್ಕೆ ಮನುಷ್ಯನನ್ನು ಕಳುಹಿಸುವ 'ಗಗನಯಾನ' ಯೋಜನೆ, ಚಂದ್ರಯಾನ 4, ಚಂದ್ರನ ಮೇಲ್ಮೈನಲ್ಲಿನ ಮಣ್ಣಿನ ಮಾದರಿಗಳನ್ನು ತರುವುದು, ಭಾರತೀಯ ಅಂತರಿಕ್ಷ ಕೇಂದ್ರ (ಬಿಎಎಸ್) ಸ್ಥಾಪನೆ ಸೇರಿದಂತೆ ಭಾರತದ ಭವಿಷ್ಯದ ಮಹತ್ವದ ಬಾಹ್ಯಾಕಾಶ ಯೋಜನೆಗಳಿಗೆ ಇಸ್ರೊದ ಈ ಯಶಸ್ಸು ನಾಂದಿಯಾಗಲಿದೆ.

2024ರ ಡಿಸೆಂಬರ್ 30ರಂದು ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಪಿಎಸ್ಎಲ್‌ವಿ ರಾಕೆಟ್ ಮೂಲಕ ಚೇಸರ್ ಮತ್ತು ಟಾರ್ಗೆಟ್ ಎಂಬ ಹೆಸರಿನ ಎರಡು ಪುಟ್ಟ ಉಪಗ್ರಹಗಳನ್ನು ಉಡ್ಡಯನ ಮಾಡಲಾಗಿತ್ತು.

ಜ.7ರಂದು ಈ ಉಪಗ್ರಹಗಳ ಜೋಡಣೆ ಆಗಬೇಕಿತ್ತು. ಆದರೆ, ತಾಂತ್ರಿಕ ಸಮಸ್ಯೆಗಳ ಕಾರಣಗಳಿಂದ ಈ ಪ್ರಕ್ರಿಯೆಯನ್ನು ಎರಡು ಬಾರಿ ಇಸ್ರೊ ಮುಂದೂಡಿತ್ತು. ಈಗ, ಉಪಗ್ರಹಗಳ ಜೋಡಣೆ ಕಾರ್ಯಾಚರಣೆಯು ಯಶಸ್ವಿಯಾಗಿದೆ. ಉಪಗ್ರಹಗಳನ್ನು ಜೋಡಣೆ ಮಾಡುವುದೊಂದೆ ಈ ಯೋಜನೆಯ ಉದ್ದೇಶವಲ್ಲ. ಈ ಉಪಗ್ರಹಗಳನ್ನು ಬೇರ್ಪಡಿಸುವುದೂ ಯೋಜನೆಯ ಭಾಗವೇ ಆಗಿದೆ. ಈ ಪ್ರಕ್ರಿಯೆ ಶೀಘ್ರವೇ ನಡೆಯಲಿದೆ ಎಂದು ಇಸ್ರೊ ಹೇಳಿದೆ.

'ಡಾಕಿಂಗ್' ಕರಗತ 11

ಡಾಕಿಂಗ್ ಯಶಸ್ವಿಯಾಗಿದೆ. ಇದೊಂದು ಐತಿಹಾಸಿಕ ಗಳಿಗೆ. ಜೋಡಣೆ ಪ್ರಕ್ರಿಯೆ ಬಳಿಕ ಉಪಗ್ರಹಗಳು ನಿಯಂತ್ರಣದಲ್ಲಿವೆ
ಇಸ್ರೊ

ಭವಿಷ್ಯದ ನಮ್ಮ ಬಾಹ್ಯಾಕಾಶ ಯೋಜನೆಗಳಿಗೆ ಈ ಯಶಸ್ಸು ಮೊದಲ ಮೆಟ್ಟಿಲಾಗಲಿದೆ. ಎಲ್ಲ ವಿಜ್ಞಾನಿಗಳೂ ಅಭಿನಂದನೆಗೆ ಅರ್ಹರು
ನರೇಂದ್ರ ಮೋದಿ, ಪ್ರಧಾನಿ

ಭಾರತದ ಭವಿಷ್ಯದ ಬಾಹ್ಯಾಕಾಶ ಯೋಜನೆಗಳಿಗೆ ಇದು ಪ್ರಮುಖ ಹೆಜ್ಜೆಯಾಗಿದೆ. ಇದು ದೇಶದ ಸಾಮೂಹಿಕ ಸಾಧನೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



8ನೇ ವೇತನ ಆಯೋಗ ರಚನೆಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ತಿಂಗಳು ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಗೆ ಮುನ್ನ, ಕೇಂದ್ರ ಸರ್ಕಾರಿ ನೌಕರರ ವೇತನ ಮತ್ತು ಪಿಂಚಣಿದಾರರ ಭತ್ಯೆಗಳನ್ನು ಪರಿಷ್ಕರಿಸಲು ಎಂಟನೇ ವೇತನ ಆಯೋಗ ರಚಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯ ನಂತರ ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಈ ನಿರ್ಧಾರವನ್ನು ಪ್ರಕಟಿಸಿದರು.

'ಏಳನೇ ವೇತನ ಆಯೋಗದ ಅವಧಿ ಪೂರ್ಣಗೊಳ್ಳುವ ಮೊದಲೇ ಶಿಫಾರಸುಗಳನ್ನು ಸ್ವೀಕರಿಸಲು ಸರ್ಕಾರವು ಈ ನಿರ್ಧಾರವನ್ನು ಬಹಳ ಮುಂಚಿತವಾಗಿ ತೆಗೆದುಕೊಂಡಿದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ದೆಹಲಿ ಸರ್ಕಾರದ ನೌಕರರ ವೇತನವೂ ಪರಿಷ್ಕರಣೆ ಆಗಲಿದೆ. ಆಯೋಗದ ಶಿಫಾರಸುಗಳು ಜಾರಿಯಾದ ಬಳಿಕ ಕೇಂದ್ರ ಹಾಗೂ ದೆಹಲಿ ರಾಜ್ಯ ಸರ್ಕಾರದ 4 ಲಕ್ಷ ನೌಕರರ ವೇತನ ಪರಿಷ್ಕರಣೆ ಆಗಲಿದೆ.

ಎಐಸಿಸಿ ಅಧ್ಯಕ್ಷರ ನಿರ್ಧಾರವನ್ನೇ ಪ್ರಶ್ನೆ ಮಾಡಲಾಗುತ್ತಿದೆ: ಡಿಸಿಎಂ

'ಕೆಪಿಸಿಸಿ ಹುದ್ದೆ ಅಂಗಡಿಯಲ್ಲಿ ಸಿಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಹುದ್ದೆ ಅಂಗಡಿಯಲ್ಲೂ ಸಿಗುವುದಿಲ್ಲ ಮಾಧ್ಯಮಗಳ ಮುಂದೆ ಮಾತನಾಡಿದರೂ ಸಿಗುವುದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಶಿವಕುಮಾರ್

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಇತ್ತೀಚೆಗೆ ಭೇಟಿ ಮಾಡಿ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿ.ಕೆ. ಶಿವಕುಮಾರ್ ಅವರನ್ನು ಬದಲಿಸುವಂತೆ ಆಗ್ರಹಿಸಿದ್ದರು.

ಜಾರಕಿಹೊಳಿ ಬೇಡಿಕೆಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ನಾವು ಮಾಡುವ ಕೆಲಸವನ್ನು ಗುರುತಿಸಿ ಪಕ್ಷದ ನಾಯಕರು ಸೂಕ್ತ ಹುದ್ದೆ ನೀಡುತ್ತಾರೆ. ಮಾಧ್ಯಮಗಳ ಮುಖಾಂತರ ಯಾರಾದರೂ ಹುದ್ದೆ ಕೇಳುತ್ತಾರೆಯೇ' ಎಂದು ಪ್ರಶ್ನಿಸಿದರು.

'ಪಕ್ಷದ ಸಂಘಟನೆ ಕುಂಠಿತವಾಗಿದೆ. ಪಕ್ಷಕ್ಕೆ ಪೂರ್ಣ ಪ್ರಮಾಣದ ಅಧ್ಯಕ್ಷರು ಬೇಕು' ಎಂಬ ಸತೀಶ ಜಾರಕಿಹೊಳಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಸ್ಪಷ್ಟನೆ ನೀಡಬೇಕಿರುವುದು ನಾನಲ್ಲ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ. ಅವರ ನಿರ್ಧಾರವನ್ನು ಪ್ರಶ್ನೆ ಮಾಡಲಾಗುತ್ತಿದೆ' ಎಂದರು.

'ಪಕ್ಷದ ವಿಚಾರ ಮಾಧ್ಯಮಗಳ ಮುಂದೆ ಮಾತನಾಡುವಂಥದ್ದಲ್ಲ. ಏನೇ ಇದ್ದರೂ ಎಐಸಿಸಿ ಅಧ್ಯಕ್ಷರು, ರಾಹುಲ್ ಗಾಂಧಿ, ಮುಖ್ಯಮಂತ್ರಿ ಅಥವಾ ನನ್ನ ಬಳಿ ಬಂದು ಮಾತನಾಡಲಿ. ನಾನು ಯಾವುದಾದರೂ ಹುದ್ದೆ ಬಯಸಿದರೆ ನೀವು (ಮಾಧ್ಯಮಗಳು) ಆ ಸ್ಥಾನ ನನಗೆ ಕೊಡಿಸುತ್ತೀರಾ? ಅಥವಾ ಈ ಹುದ್ದೆಗಳು ಅಂಗಡಿಯಲ್ಲಿ ಸಿಗುತ್ತದೆಯೇ? ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದರೆ ಯಾವುದೇ ಪ್ರಯೋಜನವಿಲ್ಲ. ಬದಲಿಗೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ' ಎಂದರು.

ಯಾರೇ ಇರಲಿ, ಹೋಗಲಿ ಪಕ್ಷ ಇರುತ್ತದೆ: 'ಕಾಂಗ್ರೆಸ್ ಪಕ್ಷವನ್ನು ಶಿವಕುಮಾರ್ ಒಬ್ಬನೇ ಅಧಿಕಾರಕ್ಕೆ ತಂದಿಲ್ಲ. ಕಾರ್ಯಕರ್ತರು, ಮತದಾರರು ವಿಶ್ವಾಸ ಇಟ್ಟು ಅಧಿಕಾರ ನೀಡಿದ್ದಾರೆ. ಇದನ್ನು ಉಳಿಸಿಕೊಳ್ಳಬೇಕು, ಉಳಿಸಿಕೊಳ್ಳುತ್ತೇವೆ. ಯಾರೇ ಇರಲಿ, ಹೋಗಲಿ ತನ್ನನ್ನು ತಾನು ಉಳಿಸಿಕೊಳ್ಳುವ ಶಕ್ತಿ ಈ ಪಕ್ಷಕ್ಕಿದೆ' ಎಂದರು.

'ಬದಲಾವಣೆ ಹೇಳಿಕೆ ಸಹಜ'

'ಡಿ.ಕೆ. ಶಿವಕುಮಾರ್ ಬಳಿ ಎರಡು ಪ್ರಮುಖ ಖಾತೆಗಳಿವೆ. ಪಕ್ಷದ ಅಧ್ಯಕ್ಷ ಸ್ಥಾನವೂ ಇದೆ. ಹೀಗಾಗಿ ಕಾರ್ಯಭಾರ ಹೆಚ್ಚಿರುತ್ತದೆ. ಬದಲಾವಣೆ ಮಾಡಿ ಎಂಬ ಹೇಳಿಕೆ ಸಹಜ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಲೋಕಸಭಾ ಚುನಾವಣೆವರೆಗೆ ಡಿ.ಕೆ. ಶಿವಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ಮುಂದುವರಿಸುವುದಾಗಿ ಎಐಸಿಸಿ ನಾಯಕರು ಮುಖ್ಯಮಂತ್ರಿ ಆಯ್ಕೆ ಸಂದರ್ಭದಲ್ಲಿ ಹೇಳಿದ್ದರು. ಇದನ್ನು ನೆನಪಿಸಲು ಸುರ್ಜೇವಾಲಾ ಅವರನ್ನು ಭೇಟಿ ಮಾಡಿರುವುದಾಗಿ ಸತೀಶ ಹೇಳಿದ್ದಾರೆ' ಎಂದರು.

ನಾನು ಹೇಳಿದ್ದೇ ಬೇರೆ, ವರದಿ ಆಗಿರುವುದೇ ಬೇರೆ. ಮಾಧ್ಯಮಗಳ ನಡೆಯಿಂದ ನನಗೂ ಪಕ್ಷಕ್ಕೂ ಹಾನಿಯಾಗುತ್ತದೆ. ನೋಟಿಸ್ ನೀಡಿದರೆ ಉತ್ತರ ಕೊಡುತ್ತೇನೆ
ಸತೀಶ ಜಾರಕಿಹೊಳಿ, ಸಚಿವ



ಹೃದಯಾಘಾತದಿಂದ ವಿದ್ಯಾರ್ಥಿ ಸಾವು

ಗುಬ್ಬಿ: ತಾಲ್ಲೂಕಿನ ನಿಟ್ಟೂರು ವಿನಾಯಕ ಕಾಲೇಜಿನ ಪ್ರಥಮ ಪಿಯು ವಿದ್ಯಾರ್ಥಿ ಶಮಂತ್ (17) ಹೃದಯಾಘಾತದಿಂದ ಗುರುವಾರ ಮೃತಪಟ್ಟಿದ್ದಾರೆ.

ನಿಟ್ಟೂರು ಸಮೀಪದ ಎಸ್. ನಂದಿಹಳ್ಳಿ ಗ್ರಾಮದ ಶಮಂತ್ ಗುರುವಾರ ಮಧ್ಯಾಹ್ನ ಕಾಲೇಜಿನ ಆವರಣದಲ್ಲಿಯೇ ಕುಸಿದುಬಿದ್ದ, ತಕ್ಷಣವೇ ಆತನನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ, ಗುಬ್ಬಿಗೆ ಕರೆದೊಯ್ಯುವ ಮಾರ್ಗಮಧ್ಯೆ ವಿದ್ಯಾರ್ಥಿ ಕೊನೆಯುಸಿರೆಳೆದ.

PUBLIC NOTICE

Publics are hereby informed that my client **M/s. DS-Max Properties Pvt. Ltd.**, Having its Office at No. 1854, 17th Main, 30th 'B' Cross, HBR Layout, 1st Stage, 5th Block, Bangalore- 43 and intend to enter into Joint Development Agreement with Owner/s **Sri. A. Manjunatha** s/o. Late P. Appaiahanna is the absolute owner of converted land property bearing old Sy. No. **213/2A**, New Sy. No. **213/4**, measuring **30 guntas, out of 1 acre**, situated at **Kengeri Village**, Kengeri Hobli, Bangalore South Taluk, in vide; Conversion Order dated **19/01/2005**, bearing No.**ALN(S)SR(K)77/2004-05**, from Agricultural to Non-Agricultural residential purposes, issued by Deputy Commissioner, Bangalore District and bounded on **East by:** Land of Sy.No. 236/5 & 236/6, **West by:** Remaining Land of Sy.No. 213/4, **North by:** Land of Sy.No. 213/2A, **South by:** Remaining Land of Sy.No. 213/4 and BDA Road and referred to as schedule property of **Item.No.I.**

Sri. A. Manjunatha s/o. Late P. Appaiahanna is the absolute owner of converted land property bearing Sy.No. **213/2A**, measuring **06 Guntas**, situated at **Kengeri Village**, Kengeri Hobli, Bangalore South Taluk, in vide; Conversion Order dated **25/07/2015**, bearing No.**ALN(S)SR(K)93/2014-15**, from Agricultural to Non-Agricultural residential purposes, issued by Deputy Commissioner, Bangalore District and bounded on **East by:** Land of Sy.No. 236/6 & 214/1, **West by:** Private Land, **North by:** Ramasandra Gadi, **South by:** Land of Sy.No. 213/4 and referred to as schedule property of **Item.No.II.**

Sri. A. Manjunatha s/o. Late P. Appaiahanna is the absolute owner of converted land bearing Sy. No. **214/1**, measuring **17 guntas**, situated at **Kengeri Village**, Kengeri Hobli, Bangalore South Taluk, vide Conversion Order dated **25/07/2015**, bearing No. **ALN(S)SR(K)93/2014-15**, from Agricultural to Non-Agricultural residential purposes, issued by Deputy Commissioner, Bangalore District and bounded on **East by:** Private Land, **West by:** Land of Sy.No. 213/2A, **North by:** Ramasandra Gadi, **South by:** Land of Sy.No. 236/6 & 236/7 and referred to as schedule property of **Item.No.III.**

Smt. A. Anusuya d/o Late P. Appaiahanna is the owner of converted land bearing old Sy.No. **236/1**, New Sy. No. **236/5**, which measuring **08 guntas**, situated at **Kengeri Village**, Kengeri Hobli, Bangalore South Taluk, vide; Conversion Order dated **21/06/2016**, bearing No. **ALN(S)SR(K)56/2015-16**, from Agricultural to Non-Agricultural Residential purposes, issued by Deputy Commissioner, Bangalore District and bounded on **East by:** Land of Sy.No. 236/1, **West by:** Land bearing Sy.No. 213/4, **North by:** Land bearing Sy.No. 236/6, **South by:** BDA Road and Private Land and referred to as schedule property of **Item.No.IV.**

Smt. A.Sowbhagya D/o Late P.Appaiahanna is the absolute owner of converted land bearing old Sy.No. **236/1**, New Sy. No. **236/6**, which measuring **08 guntas**, situated at **Kengeri Village**, Kengeri Hobli, Bangalore South Taluk, vide Conversion Order dated **21/06/2016**, bearing No. **ALN(S)SR(K)55/2015-16**, from Agricultural to Non-Agricultural Residential purposes, issued by Deputy Commissioner, Bangalore District and bounded on **East by:** Land of Sy.No. 236/7, **West by:** Land bearing Sy.No. 213/4 & 213/2A, **North by:** Land bearing Sy.No. 214/1, **South by:** Land of Sy.No. 236/5 and referred to as schedule property of **Item.No.V.**

Dr. A. Ramesh s/o Late P. Appaiahanna is the absolute owner of converted land bearing old Sy.No. **236/1**, New Sy.No. **236/7**, which measuring **8 guntas**, situated at **Kengeri Village**, Kengeri Hobli, Bangalore South Taluk, vide Conversion Order dated **21/06/2016** bearing No. **ALN(S)SR(K)58/2015-16**, from Agricultural to Non Agricultural Residential purposes, issued by Deputy Commissioner, Bangalore District. and bounded on **East by:** Private Land, **West by:** Land of Sy.No. 236/6, **North by:** Land of Sy.No. 214/1, **South by:** Land of Sy.No. 236/1 and referred to as schedule property of **Item.No.VI.**

Dr. A. Ramesh s/o Late P. Appaiahanna is the absolute owner of converted land bearing Sy. No. **236/1**, which measuring **8 Guntas**, out of **32 Guntas**, situated at **Kengeri Village**, Kengeri Hobli, Bangalore South Taluk, in vide; Conversion Order dated **21/06/2016**, in Order No. **ALN(S)SR(K)58/2015-16**, for Residential, issued by Deputy Commissioner, Bangalore District and bounded on **East by:** Private Land, **West by:** Land bearing Sy.No. 236/5, **North by:** Land bearing Sy.No. 236/7, **South by:** Road and Private Land and referred to as schedule property of **Item.No.VII.**

which total measuring of **Item.No.I, to VII = 30 guntas + 06 guntas + 17 guntas + 8 guntas + 8 guntas + 8 guntas + 8 guntas = 2 Acres 05 Guntas** and referred to as **"composite schedule property"** and commonly bounded on: **East by:** Private Land, **West by:** Private Land, **North by:** Ramasandra Gadi, **South by:** Road and Private Land.

Any person or Any Authority or Any promoters having any asserting right, title, interest and claims to oppose for Joint Development Agreement of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and deemed for entering into Joint Development Agreement of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ನಾಳೆಯಿಂದ ಶರಣ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಇದೇ 18 ಮತ್ತು 19 ರಂದು ಚಿತ್ರದುರ್ಗದ ಮುರುಘಾರಾಜೇಂದ್ರ ಬೃಹನ್ಮಠದ ಅನುಭವ ಮಂಟಪದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, 'ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ತೋಂಟದಾರ್ಯ ಮಠದ ತೋಂಟದ ಸಿದ್ದರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುತ್ತಾರೆ. 'ಅನುಭವ ಸಂಗಮ' ಸ್ಮರಣ ಸಂಚಿಕೆಯನ್ನು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಬಿಡುಗಡೆ ಮಾಡುತ್ತಾರೆ. ಬಸವಕಲ್ಯಾಣದ ಬಸವ ಮಹಾಮನೆಯ ಬೆಲ್ದಾಳ ಸಿದ್ದರಾಮ ಶರಣರ ಸರ್ವಾಧ್ಯಕ್ಷತೆಯಲ್ಲಿ ಈ ಸಮ್ಮೇಳನ ನಡೆಯಲಿದೆ' ಎಂದರು.

'ಸಮ್ಮೇಳನದಲ್ಲಿ ಸಾಂಸ್ಕೃತಿಕ ನಾಯಕ ಬಸವಣ್ಣ, ಶರಣ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ, ಶರಣ ಸಾಹಿತ್ಯದತ್ತ ಯುವಜನತೆ, ಪ್ರಾತಃಸ್ಮರಣೀಯರು, ಶರಣರು ಪ್ರತಿಪಾದಿಸಿದ ಜೀವನ ಮೌಲ್ಯಗಳು, ಶರಣ ಸಾಹಿತ್ಯಾಧಾರಿತ ನಾಟಕಗಳು, ಆಧುನಿಕ ವಚನ ಗೋಷ್ಠಿ ಮತ್ತು ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ಗೋಷ್ಠಿಗಳು ನಡೆಯಲಿವೆ' ಎಂದು ಹೇಳಿದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಹಾಗು ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲಾ ಹೋಬಳಿ, ಬೆಟ್ಟಹಲಸೂರು ಗ್ರಾಮದ ಸರ್ವೆ ನಂ.92/2, 35 ಗುಂಟೆ (5 ಗುಂಟೆ ಬಿ ಖರಾಬು ಹೊರತುಪಡಿಸಿ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು, ಬೆಂಗಳೂರು – 562157, ಬೆಟ್ಟಹಲಸೂರು ಪೋಸ್ಟ್, ಸೊಣ್ಣಪ್ಪನಹಳ್ಳಿ ವಿ.ಟಿ.ಸಿ, ಬೆಂಗಳೂರು ಉತ್ತರ ತಾಲ್ಲೂಕು, ಜಾಲಾ ಹೋಬಳಿ, ಕೆ.ಎನ್.ಎಸ್. ಕನ್ವೆಂಷನ್ ಸೆಂಟರ್, ಸೊಣ್ಣಪ್ಪನಹಳ್ಳಿ ಗ್ರಾಮ, ನಂ.86 ಇಲ್ಲಿ ವಾಸವಾಗಿರುವ ಲೇಟ್ ಶ್ರೀ ಅಂಜನಪ್ಪನವರ ಮಗ ಶ್ರೀ ರವಿ ಎ (**"ಮಾಲೀಕರು"**), ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಸದರಿ ಮಾಲೀಕರು ಸರ್ವೆ ನಂ.92/2 ಕ್ಕೆ ಸಂಬಂದಿಸಿದ ದಿನಾಂಕ 10.01.1984 ರ, ಪುಸ್ತಕ 1, ಸಂಪುಟ 1292 ಪುಟ 194 ರಿಂದ 195, ದಾಸಾವೇಜು ಸಂಖ್ಯೆ 1436/1983–84, ದೇವನಹಳ್ಳಿ ಉಪ ನೊಂದಣಾಧಿಕಾರಿಗಳಲ್ಲಿ ನೋಂದಾಯಿತವಾಗಿರುವ ಮೂಲ ಕ್ರಯ ಪತ್ರ ಕಳೆದುಹೋಗಿರುವುದೆಂತಲೂ, ಎಷ್ಟೇ ಹುಡುಕಿದರೂ ಸಿಕ್ಕಿಲ್ಲವೆಂತಲೂ, ಅದಕ್ಕಾಗಿ ಬೆಂಗಳೂರು ನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ 15.01.2025 ನಂ.1430505/2025 ರಂತೆ ದೂರು ದಾಖಲಿಸಿರುವುದಾಗಿಯೂ ಪ್ರತಿನಿಧಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಶಃ ಸ್ವತ್ತಿನ ಮೇಲೆ ಅಥವಾ ಮೇಲೆ ತಿಳಿಸಿದ ದಾಖಲೆಗಳ ಬಗ್ಗೆ, ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿರುವ ಅಥವಾ ಅವುಗಳ ದಾಖಲೆಗಳ ಬಗ್ಗೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ ಮಾಡಲಿಚ್ಛಿಸುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ಖರೀದಿ/ ವ್ಯವಹಾರದ ವಿರುದ್ಧ ಆಕ್ಷೇಪಣೆ ಇದ್ದಲ್ಲಿ, ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿದ್ದಾರೆ ಎಂಬುದರ ಬಗ್ಗೆ ಅಸಲಿ ಅಥವಾ ಇನ್ನಾವುದೇ ದಾಖಲೆ/ಗಳ ಸಹಿತ, ಈ ಸಾರ್ವಜನಿಕ ಸೂಚನೆ ಪ್ರಕಟಗೊಂಡ ಹತ್ತು (10) ದಿವಸಗಳೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು. ತದನಂತರ, ಯಾವುದೇ ನೈಜವಾದ ಹಾಗು ನ್ಯಾಯಸಮ್ಮತ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ, ಯಾವುದೇ ಆಕ್ಷೇಪಣೆ ಅಥವಾ ಹಕ್ಕು ಪ್ರತಿಪಾದನೆಗಳು ಬಿಟ್ಟುಬಿಡಲಾಗಿದೆ ಎಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲಾ ಹೋಬಳಿ, ಬೆಟ್ಟಹಲಸೂರು ಗ್ರಾಮದ ಸರ್ವೆ ನಂ.92/2 ವಿಸ್ತೀರ್ಣ 35 ಗುಂಟೆ (5 ಗುಂಟೆ ಬಿ ಖರಾಬು ಹೊರತುಪಡಿಸಿ) ವ್ಯವಸಾಯದ ಜಮೀನಿಗೆ ಚೆಕ್ಕುಬಂದಿ;

ಪೂರ್ವ : ಕಾಡಿಗಾನಹಳ್ಳಿ ಗ್ರಾಮದ ಗಡಿ
ಪಶ್ಚಿಮ : ಬೆಟ್ಟಹಲಸೂರು ಗ್ರಾಮದ ಸರ್ವೆ ನಂ.92ರ ಜಮೀನು.
ಉತ್ತರ : ಚೊಕ್ಕನಹಳ್ಳಿ ಗ್ರಾಮದ ಗಡಿ
ದಕ್ಷಿಣ : ಬೆಟ್ಟಹಲಸೂರು ಗ್ರಾಮದ ಸರ್ವೆ ನಂ.93ರ ಜಮೀನು

ದಿನಾಂಕ: 17.01.2025
ಸ್ಥಳ: ಬೆಂಗಳೂರು

ಸೌಮ್ಯ ಶಾಸ್ತ್ರೀ, ನಂ.1107,
11ನೇ ಮಹಡಿ, ಪೀಚ್ ಬ್ಲಾಕ್,
ಹೆಚ್.ಎಂ.ವರ್ಲ್ಡ್ ಸಿಟಿ, ಜೆ.ಪಿ.ನಗರ
9ನೇ ಫೇಸ್, ಬೆಂಗಳೂರು – 560 062.
ದೂ: 9611148108,
ಈ–ಮೇಲ್: vijayadeep@gmail.com

ಲಾಲ್‌ಬಾಗ್: 217ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಹೂವುಗಳ ಕಂಪು–ಮಹರ್ಷಿ ವಾಲ್ಮೀಕಿ ನೆನಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಸಸ್ಯೋದ್ಯಾನದಲ್ಲೀಗ ಕವಿ ಮಹರ್ಷಿ ವಾಲ್ಮೀಕಿಯ ಜಪ. ಇಲ್ಲಿನ ಗಾಜಿನಮನೆಯೊಳಗೊಂದು ಬೃಹತ್ ಹುತ್ತದ ಪ್ರತಿಕೃತಿ ತಲೆಯೆತ್ತಿದೆ. ಅದಕ್ಕೆ ಸಾವಿರಾರು ಬಣ್ಣ-ಬಣ್ಣದ ಹೂಗಳ ಸಿಂಗಾರ ಮಾಡಲಾಗಿದೆ. ಅದರ ಮುಂಭಾಗದಲ್ಲಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯ ರಚಿಸುವ ಭಂಗಿಯ ಪ್ರತಿಮೆ ಪುಷ್ಪ ಪ್ರಿಯರ ಗಮನ ಸೆಳೆಯುತ್ತಿದೆ.

ತೋಟಗಾರಿಕೆ ಇಲಾಖೆಯಿಂದ ಗಣರಾಜ್ಯೋತ್ಸವದ ಅಂಗವಾಗಿ ಆಯೋಜಿಸಿರುವ 'ಆದಿಕವಿ ಮಹರ್ಷಿ ವಾಲ್ಮೀಕಿ' ವಿಷಯ ಆಧಾರಿತ 217ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು. ಈ ಫಲಪುಷ್ಪ ಪ್ರದರ್ಶನವು ಜನವರಿ 27ರವರೆಗೆ ನಡೆಯಲಿದೆ.

ಗಾಜಿನ ಮನೆಯ ಕೇಂದ್ರ ಭಾಗದಲ್ಲಿ 10 ಅಡಿ ಎತ್ತರ ಹಾಗೂ 38 ಅಡಿ ಸುತ್ತಳತೆಯ ಬೃಹತ್ ಹುತ್ತದ ಮಾದರಿ ನಿರ್ಮಿಸಲಾಗಿದೆ. ಹತ್ತು ದಿನಗಳ ಅವಧಿಯ ಪ್ರದರ್ಶನದಲ್ಲಿ ಒಂದು ಬಾರಿ ಇಲ್ಲಿನ ಹೂಗಳನ್ನು ಬದಲಿಸಲಾಗುತ್ತದೆ. ಒಟ್ಟು 3 ಲಕ್ಷ ಡಚ್ ಗುಲಾಬಿ, 800 ಕೆ.ಜಿ. ಪಿಂಚ್ಡ್ ಗುಲಾಬಿ, 600 ಕೆ.ಜಿ. ಹೈದರಾಬಾದ್ ಸೇವಂತಿಗೆ ಹೂವುಗಳನ್ನು ಹುತ್ತದ ಪ್ರತಿಕೃತಿ ನಿರ್ಮಾಣಕ್ಕೆ ಬಳಸಲಾಗುತ್ತಿದೆ.

ಹುತ್ತದ ಹಿಂಭಾಗದಲ್ಲಿ ರಾಮಾಯಣ ಮಹಾಕಾವ್ಯದಲ್ಲಿ ವನವಾಸದ ಸಂದರ್ಭದಲ್ಲಿ ಪಂಚವಟಿಯಲ್ಲಿ ತಂಗಿದ್ದ ಶ್ರೀರಾಮ, ಸೀತೆ ಹಾಗೂ ಲಕ್ಷ್ಮಣರ 3ಡಿ ಕಲಾಕೃತಿಗಳು, ಹುಲ್ಲಿನ ಗುಡಿಸಲು ಮತ್ತು ಅರಣ್ಯ ಪರಿಸರದ ಮಾದರಿ ನಿರ್ಮಿಸಲಾಗಿದೆ. ಇದು ಮಕ್ಕಳು ಸೇರಿದಂತೆ ಎಲ್ಲರ ಆಕರ್ಷಣೆಯ ಕೇಂದ್ರವಾಗಿದ್ದು, ಸಾರ್ವಜನಿಕರು ಇದರ ಮುಂಭಾಗದಲ್ಲಿ ನಿಂತು ಫೋಟೊಗಳನ್ನು ತೆಗೆಸಿಕೊಳ್ಳುತ್ತಿದ್ದರು.

ಪುಷ್ಪಗಳಲ್ಲಿ ಅರಳಿದ ವಾಲ್ಮೀಕಿ ಆಶ್ರಮ: ಗಾಜಿನ ಮನೆ ಕೇಂದ್ರ ಭಾಗದ ಎಡ ಬದಿಯಲ್ಲಿ ನೇಪಾಳದ ಚಿತ್ವಾನ್ ರಾಷ್ಟ್ರೀಯ ಉದ್ಯಾನದ ತಮಸಾ, ಸೋನಾ ಮತ್ತು ಗಂಡಕಿ ನದಿಗಳ ತ್ರಿವೇಣಿ ಸಂಗಮದಲ್ಲಿರುವ ವಾಲ್ಮೀಕಿ ಆಶ್ರಮದ ಮಾದರಿಯನ್ನು ಹೂಗಳಲ್ಲಿ ನಿರ್ಮಿಸಲಾಗಿದೆ. 14 ಅಡಿ ಅಗಲ ಮತ್ತು 24 ಅಡಿ ಎತ್ತರವಿರುವ ಆಶ್ರಮದ ಮಾದರಿ ನಿರ್ಮಿಸಲು 1 ಲಕ್ಷ ಗುಲಾಬಿ ಹಾಗೂ ಶ್ವೇತ, ಹಳದಿ ಮತ್ತು ಚಾಕೊಲೇಟ್ ವರ್ಣದ ಸೇವಂತಿಗೆ ಸೇರಿದಂತೆ ಒಟ್ಟು 1.75 ಲಕ್ಷ ಆಕರ್ಷಕ ಹೂವುಗಳನ್ನು ಬಳಕೆ ಮಾಡಲಾಗಿದೆ. ಈ ಮಾದರಿ ನಿರ್ಮಿಸಲು ಎರಡು ಬಾರಿ ಒಟ್ಟು 5.5 ಲಕ್ಷ ಪುಷ್ಪಗಳನ್ನು ಬಳಕೆ ಮಾಡಲಾಗುತ್ತದೆ. ಈ ಪ್ರತಿಕೃತಿಯ ಮುಂಭಾಗದಲ್ಲಿ ಯುವಕರು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

ಗಾಜಿನ ಮನೆಯ ಹಿಂಭಾಗದಲ್ಲಿ ವಾಲ್ಮೀಕಿ ಪರಂಪರೆಯನ್ನು ಬಿಂಬಿಸುವ ಕನ್ನಡದ ನಾಗಚಂದ್ರ, ಕುಮುದೇಂದು, 'ತೊರವೆ ರಾಮಾಯಣ' ಕೃತಿಕಾರ ಕುಮಾರ ವಾಲ್ಮೀಕಿ, ಕುವೆಂಪು, ತಮಿಳಿನ ಕಂಬರ್, ತೆಲುಗಿನ ಗೊನ್ನಬುದ್ದರೆಡ್ಡಿ, ಹಿಂದಿಯ ತುಳಸಿದಾಸ್, ಮಲಯಾಳದ 'ಅಧ್ಯಾತ್ಮ ರಾಮಾಯಣಂ ಕಿಳಿಪ್ಪಟ್ಟು' ಕೃತಿಕಾರ ತುಂಚತ್ತು ರಾಮಾನುಜನ್ ಎಝುತಾಚನ್ ಅವರ ಪುತ್ಥಳಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. 10 ಪುಷ್ಪ ಪಿರಮಿಡ್‌ಗಳಲ್ಲಿ ರಾಮಾಯಣ ಪಾತ್ರಧಾರಿಗಳ ಚಿತ್ರಗಳು ಕೈಬೀಸಿ ಕರೆದರೆ, ಮತ್ತೊಂದೆಡೆ ಹನುಮ, ಜಾಂಬವಂತ, ಜಟಾಯು, ಅಳಿಲಿನ ಕಲಾಕೃತಿಗಳ ನೋಡುಗರನ್ನು ಸೆಳೆಯುತ್ತಿವೆ. ಗಾಜಿನ ಮನೆಯ ಒಳಾಂಗಣದಲ್ಲಿ 60 ಫಲಕಗಳಲ್ಲಿ ವಾಲ್ಮೀಕಿ ಅವರ ಜೀವನ, ಸಾಧನೆ ಹಾಗೂ ರಾಮಾಯಣದ ಮಹಾಕಾವ್ಯದ ಮಾಹಿತಿಗಳನ್ನು ಪ್ರದರ್ಶಿಸಲಾಗಿದೆ.

ಫಲಪುಷ್ಪ ಪ್ರದರ್ಶನಕ್ಕೆ 30 ಲಕ್ಷ ಪುಷ್ಪಗಳ ಬಳಕೆ | ಜನವರಿ 16ರಿಂದ 27ರವರೆಗೆ ಫಲಪುಷ್ಪ ಪ್ರದರ್ಶನ | ಲಂಬಾಂತರ ಮಾದರಿ ಮತ್ತು ವಾಲ್ಮೀಕಿ ರಾಮಾಯಣದ ಕಲಾಕೃತಿಗಳ ಪ್ರದರ್ಶನ

ತೋಟಗಾರಿಕೆ ಇಲಾಖೆ ಆಯೋಜಿಸಿರುವ ಆದಿಕವಿ ಮಹರ್ಷಿ ವಾಲ್ಮೀಕಿ ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಲ್ಮೀಕಿ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು. ಹರಿಹರ ತಾಲೂಕಿನ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ, ಸಚಿವರಾದ ರಾಮಲಿಂಗಾರೆಡ್ಡಿ, ಜಮೀರ್ ಅಹ್ಮದ್ ಖಾನ್, ಎಸ್.ಎಸ್. ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು

ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನವನ್ನು ಸಾರ್ವಜನಿಕರು ವೀಕ್ಷಿಸಿದರು

ಗುರುವಾರ ಸಸ್ಯಕಾಶಿಗೆ ಭೇಟಿ

ವಯಸ್ಕರು	8,500
ಮಕ್ಕಳು	6,510
ಶಾಲಾ ಮಕ್ಕಳು	28,500
ಸಂಗ್ರಹವಾದ ಹಣ	₹5 ಲಕ್ಷ

ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನವನ್ನು ಸಾರ್ವಜನಿಕರು ವೀಕ್ಷಿಸಿದರು

ಜನರು ಏನಂತಾರೆ?

ಮೂಲತಃ ನಾನು ಭಾರತೀಯಳು. ಆದರೆ, ಇಂಗ್ಲೆಂಡಿನಲ್ಲಿ ನೆಲೆಸಿದ್ದೇನೆ. ನಾನು ಬೆಂಗಳೂರಿಗೆ ಹಲವಾರು ಬಾರಿ ಬಂದಿದ್ದೇನೆ. ಆದರೆ, ಇದೇ ಮೊದಲ ಬಾರಿಗೆ ಫಲಪುಷ್ಪ ಪ್ರದರ್ಶನ ವೀಕ್ಷಿಸುತ್ತಿದ್ದೇನೆ. ಒಂದೇ ವೇದಿಕೆಯಲ್ಲಿ ವಿವಿಧ ಬಣ್ಣದ ಹೂವುಗಳನ್ನು ನೋಡುತ್ತಿರುವುದು ಖುಷಿ ನೀಡಿದೆ.

ಮೀನಾಕ್ಷಿ, ಬ್ರಿಟನ್ ನಿವಾಸಿ

ವಾಲ್ಮೀಕಿ ಅವರ ಜೀವನದ ಸಂಪೂರ್ಣ ಮಾಹಿತಿಯನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಲಾಗಿದೆ. ಪ್ರತಿಯೊಬ್ಬರೂ ಪ್ರದರ್ಶನಕ್ಕೆ ಭೇಟಿ ನೀಡಿ ಅವರ ಕುರಿತು ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದು.

ಸೌಮ್ಯಾ, ನಾಗರಬಾವಿ

ರಾಮಾಯಣ ಮಹಾಕಾವ್ಯ ಬರೆದಂತಹ ಮಹರ್ಷಿ ವಾಲ್ಮೀಕಿ ಅವರ ಜೀವನದ ವಿವಿಧ ಘಟನೆಗಳು, ಅವರು ಕ್ರಮಿಸಿದ ಮಾರ್ಗಗಳ ಕುರಿತ ಮಾದರಿಗಳನ್ನು ಪುಷ್ಪಗಳ ಅನಾವರಣ ಮಾಡಲಾಗಿದೆ. ಶಾಲಾ–ಕಾಲೇಜಿನ ಮಕ್ಕಳು ಬಂದು ಈ ಪ್ರದರ್ಶನದ ಲಾಭ ಪಡೆದುಕೊಳ್ಳಬೇಕು.

ಅಮಿತ್, ನಾಗರಬಾವಿ

ವಾಲ್ಮೀಕಿ ರಾಮಾಯಣದ ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನ ಆಯೋಜಿಸಿರುವುದು ಬಹಳ ಖುಷಿ ನೀಡಿದೆ. ರಾಮಾಯಣ ಮಹಾಕಾವ್ಯದ ಬಗ್ಗೆ ಹೆಚ್ಚು ತಿಳಿದುಕೊಳ್ಳಬಹುದು. ನಗರ ಪ್ರದೇಶದಲ್ಲಿ ಪ್ರಕೃತಿಯ ಸೊಬಗು ನೋಡಲು ಸಿಗುವುದೇ ಅಪರೂಪ. ಅಂತಹದರಲ್ಲಿ ಒಂದೇ ವೇದಿಕೆಯಲ್ಲಿ ಲಕ್ಷಾಂತರ ಹೂವುಗಳನ್ನು ನೋಡುತ್ತಿರುವುದು ಮನಸಿಗೆ ಮುದ ನೀಡುತ್ತದೆ.

ಸ್ವಪ್ನಾ, ಬಿಟಿಎಂಪಿ ಲೇಔಟ್

ಫಲಪುಷ್ಪ ಪ್ರದರ್ಶನ ನೋಡುವುದಕ್ಕೆ ಪ್ರತಿವರ್ಷ ಬರುತ್ತೇವೆ. ಈ ವರ್ಷ ವಾಲ್ಮೀಕಿ ಅವರ ಜೀವನ ಮತ್ತು ಸಾಧನೆಯನ್ನು ಪುಷ್ಪಗಳಲ್ಲಿ ಅನಾವರಣ ಮಾಡಿದ್ದಾರೆ. ಲಾಲ್‌ಬಾಗ್‌ನ ಪರಿಸರ ಮನಸಿಗೆ ನೆಮ್ಮದಿ ನೀಡುತ್ತದೆ. ಮಧ್ಯಪ್ರದೇಶದಲ್ಲಿರುವ ನಮ್ಮ ಸಂಬಂಧಿಕರು ಈ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬಂದಿದ್ದಾರೆ.

ಕೃಷ್ಣವೇಣಿ, ಇಸ್ರೊ ಲೇಔಟ್

ಸಂಚಾರ ಮಾರ್ಗ ಬದಲು

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಜನವರಿ 16ರಿಂದ 27ರವರೆಗೆ ಫಲಪುಷ್ಪ ಪ್ರದರ್ಶನ ಹಮ್ಮಿಕೊಂಡಿರುವುದರಿಂದ ವಾಹನ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಡೇರಿ ಸರ್ಕಲ್ ಕಡೆಯಿಂದ ಲಾಲ್‌ಬಾಗ್ ಕಡೆಗೆ ಬರುವ ವಾಹನಗಳು 10ನೇ ಕ್ರಾಸ್ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಸಿಟಿ ಮಾರುಕಟ್ಟೆ, ಮೆಜೆಸ್ಟಿಕ್ ಕಡೆಗೆ ವಿಲ್ಸನ್ ಗಾರ್ಡನ್ ಮುಖ್ಯ ರಸ್ತೆ ಹಾಗೂ ಬಿಟಿಎಸ್ ರಸ್ತೆಯ ಮೂಲಕ ಬಿಎಂಟಿಸಿ ರಸ್ತೆ ಕಡೆ ಸಾಗಬಹುದು.

ಸುಬ್ಬಯ್ಯ ಸರ್ಕಲ್, ಸಿಟಿ ಮಾರುಕಟ್ಟೆ ಕಡೆಯಿಂದ ಲಾಲ್‌ಬಾಗ್, ಜಯನಗರ, ಎಲೆಕ್ಟ್ರಾನಿಕ್ ಸಿಟಿ, ಹೊಸೂರು ಕಡೆ ಸಂಚರಿಸುವ ವಾಹನಗಳು ಊರ್ವಶಿ ಜಂಕ್ಷನ್‌ನಲ್ಲಿ ನೇರ ಹಾಗೂ ಎಡ ತಿರುವು ಪಡೆದು ಸಿದ್ದಯ್ಯ ರಸ್ತೆ ಮೂಲಕ ಸಂಚರಿಸಿ ಡಾ.ಮರಿಗೌಡ ರಸ್ತೆ ಸಂಪರ್ಕಿಸಬಹುದು. ಲಾಲ್‌ಬಾಗ್ ರಸ್ತೆ ಕಡೆಯಿಂದ ಹಾಗೂ ಮರಿಗೌಡ ರಸ್ತೆ ಕಡೆಯಿಂದ ಬರುವ ವಾಹನಗಳು ಲಾಲ್‌ಬಾಗ್ ಮುಖ್ಯ ದ್ವಾರದ ಬಳಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಬಹುದು ಮತ್ತು ಇಳಿಸಬಹುದು.

ಮಂಗಳೂರು ಸೇರಿ 6 ಕಡೆ ಸಿಮ್ಯುಲೇಷನ್ ಲ್ಯಾಬ್

ಮಂಗಳೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು (ಆರ್‌ಜಿಯುಎಚ್‌ಎಸ್) ಮಂಗಳೂರು, ಕಲಬುರಗಿ, ದಾವಣಗೆರೆ, ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರಿನಲ್ಲಿ ಕೌಶಲ ಮತ್ತು ಸಿಮ್ಯುಲೇಷನ್ ಲ್ಯಾಬ್‌ಗಳನ್ನು ಆರಂಭಿಸಲಿದೆ' ಎಂದು ಕುಲಪತಿ ಡಾ.ಎಂ.ಕೆ.ರಮೇಶ್ ತಿಳಿಸಿದರು.

ಗುರುವಾರ ಇಲ್ಲಿ ನಡೆದ ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಗೂ ಸೆನೆಟ್ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು. ಕುಲಸಚಿವರಾದ ಪಿ.ಆರ್.ಶಿವಪ್ರಸಾದ್, ರಿಯಾಜ್ ಬಾಷಾ ಉಪಸ್ಥಿತರಿದ್ದರು.

ರಿಟರ್ನಿಂಗ್ ಅಧಿಕಾರಿ, ಹೆಚ್.ಎಂ.ಟಿ. ನೌಕರರ ಸಹಕಾರ ಗೃಹ ನಿರ್ಮಾಣ ಸಂಘ ನಿಯಮಿತ,
ಜಾಲಹಳ್ಳಿ, ಬೆಂಗಳೂರು – 560 013

ಪತ್ರಿಕಾ ಪ್ರಕಟಣೆ

ಹೆಚ್.ಎಂ.ಟಿ. ನೌಕರರ ಸಹಕಾರ ಗೃಹ ನಿರ್ಮಾಣ ಸಂಘ ನಿಯಮಿತ, ಜಾಲಹಳ್ಳಿ, ಬೆಂಗಳೂರು–560013, ಈ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರುಗಳ ಚುನಾವಣೆಯನ್ನು **ದಿನಾಂಕ 02.02.2025 ರ ಭಾನುವಾರದಂದು ಬೆಳಿಗ್ಗೆ 9.00 ರಿಂದ ಸಂಜೆ 4.00 ರ ವರೆಗೆ. ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ ನಿಯಮಿತ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010,** ಇಲ್ಲಿ ನಡೆಸಲು ತೀರ್ಮಾನಿಸಿ ಎಲ್ಲಾ ಸದಸ್ಯರಿಗೂ ಚುನಾವಣಾ ವೇಳಾಪಟ್ಟಿಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದೆ ಹಾಗೂ ಸಂಘದ ನಾಮಫಲಕದಲ್ಲಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಅರ್ಹ ಸದಸ್ಯರು ಚುನಾವಣಾ ವೇಳಾಪಟ್ಟಿಯಂತೆ ಚುನಾವಣೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ : 19.01.2025 (ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ರವರೆಗೆ)
ನಾಮಪತ್ರ ಸಲ್ಲಿಸಲು ಕಡೆಯ ದಿನಾಂಕ : 25.01.2025
ನಾಮಪತ್ರ ಪರಿಶೀಲನೆ ದಿನಾಂಕ : 26.01.2025
ನಾಮಪತ್ರ ಹಿಂಪಡೆಯಲು ಕಡೆಯ ದಿನಾಂಕ : 27.01.2025 (ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ರವರೆಗೆ)
ಚುನಾವಣೆ ದಿನಾಂಕ : 02.02.2025 (ಬೆಳಿಗ್ಗೆ 9.00 ರಿಂದ ಸಂಜೆ 4.00 ರ ವರೆಗೆ)

ಸಹಿ/–
(ಎನ್.ಮಂಜುನಾಥ್) ರಿಟರ್ನಿಂಗ್ ಅಧಿಕಾರಿ,
ಹೆಚ್.ಎಂ.ಟಿ. ನೌಕರರ ಸಹಕಾರ ಗೃಹ ನಿರ್ಮಾಣ ಸಂಘ ನಿಯಮಿತ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–289/2713/2024–25 ದಿನಾಂಕ:16.01.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ: ಅಭಿವೆಂಚರ್ಸ್ ಪ್ರೈ.ಲಿ. ಮತ್ತು ಇತರರು	ಆನೇಕಲ್	ಸರ್ಜಾಪುರ	ಚಿಕ್ಕವಡೇರ ಪುರ	22ರ ಪೈಕಿ	0–10	ವ್ಯವಸಾಯ	ವಸತಿ
2					24/3ರ ಪೈಕಿ	0–15		
3					32	0–12		
4				ತಿಗಳ ಚೌಡದೇನಹಳ್ಳಿ	125/1	1–00		
5					125/3	1–00		
6					125/4	1–20		
7					125/5	1–02		
8					125/6	1–06		
9					131/1	1–22		
10					131/2	0–03		
					ಒಟ್ಟು	8–10		

ಷರಾ: ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ. ಈ ಜಮೀನುಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗಳನ್ನು ಕೈಗೊಂಡಿದ್ದಲ್ಲಿ ಯೋಜಿತ ಬೆಳವಣಿಗೆಗೆ ಬೇಕಾಗುವ ಮೂಲಸೌಕರ್ಯಗಳು ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ತುಂಗಾ ರೇಣುಕಗೆ 'ಕದಳಿ ಮಹಿಳಾ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕದಳಿ ಮಹಿಳಾ ವೇದಿಕೆ ನೀಡುವ 'ಕದಳಿ ಮಹಿಳಾ ಪ್ರಶಸ್ತಿ'ಗೆ ಪತ್ರಕರ್ತೆ ಎಸ್.ಜಿ. ತುಂಗಾ ರೇಣುಕ ಆಯ್ಕೆಯಾಗಿದ್ದಾರೆ.

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ವೇದಿಕೆಯು ಇದೇ 22ರಂದು ಸಂಜೆ 5 ಗಂಟೆಗೆ ನಯನ ಸಭಾಂಗಣದಲ್ಲಿ ಕದಳಿ ಮಹಿಳಾ ಸಮಾವೇಶ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಸರ ಸೂಕ್ಷ್ಮ: ನಾಲ್ಕು ವನ್ಯಜೀವಿ ಧಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರಿನ ಭದ್ರಾ, ಚಿತ್ರದುರ್ಗದ ಉತ್ತರೆಗುಡ್ಡ, ಕೊಪ್ಪಳದ ಬಂಕಾಪುರ ತೋಳ ವನ್ಯಜೀವಿಧಾಮ ಮತ್ತು ಹಾಸನ ಜಿಲ್ಲೆಯ ಅರಸೀಕೆರೆ ಕರಡಿ ಧಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಘೋಷಣೆ ಮಾಡಲು ಸಂಪುಟ ಉಪಸಮಿತಿ ಗುರುವಾರ ಒಪ್ಪಿಗೆ ನೀಡಿತು.

ಪರಿಸರ ಸೂಕ್ಷ್ಮ ವಲಯ ಕುರಿತು ಅಧಿಸೂಚನೆ ಹೊರಡಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ರಚಿಸಲಾಗಿರುವ ಸಚಿವ ಸಂಪುಟದ ಉಪಸಮಿತಿ ಸಭೆಯ ನಂತರ ಮಾತನಾಡಿದ ಸಮಿತಿಯ ಅಧ್ಯಕ್ಷರಾದ ಅರಣ್ಯ ಸಚಿವ ಈಶ್ವರ ಖಂಡ್ರೆ, ಸಮಿತಿಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಸಂಪುಟಕ್ಕೆ ಶಿಫಾರಸು ಮಾಡಲಾಗುವುದು. ನಂತರ ಕೇಂದ್ರಕ್ಕೆ ಕಳುಹಿಸಲಾಗುವುದು. ಪರಿಸರ ಸೂಕ್ಷ್ಮ ವಲಯ ಘೋಷಣೆಯಿಂದ ರೈತರು, ಸ್ಥಳೀಯರಿಗೆ ತೊಡಕಾಗುವುದಿಲ್ಲ ಎಂದರು.

ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಮೃಗ ಧಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಘೋಷಿಸಬೇಕು ಎಂದು ಸುಪ್ರೀಂಕೋರ್ಟ್ ಸೂಚನೆಯಂತೆ ರಾಜ್ಯ ಸರ್ಕಾರ ಪ್ರಕ್ರಿಯೆ ಆರಂಭಿಸಿದೆ. ರಾಜ್ಯದ ನಾಲ್ಕು ವನ್ಯಜೀವಿಧಾಮಗಳ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಕಿ.ಮೀನಿಂದ 10 ಕಿ.ಮೀ ವರೆಗೆ ಪರಿಸರ ಸೂಕ್ಷ್ಮ ವಲಯ ಘೋಷಣೆ ಮಾಡಲಾಗುತ್ತದೆ. ಜನವಸತಿ ಮತ್ತು ಪಟ್ಟಾ ಜಮೀನು ಇರುವ ಪ್ರದೇಶದಲ್ಲಿ ಕೇವಲ ಒಂದು ಕಿ.ಮೀ ಮಾತ್ರ ಘೋಷಿಸುವ ಕಾರಣ ಯಾರಿಗೂ ತೊಂದರೆ ಆಗುವುದಿಲ್ಲ ಎಂದರು.

ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಮಾರ್ಗಸೂಚಿ ಅನ್ವಯ ಪರಿಸರ ಸೂಕ್ಷ್ಮ ವಲಯದಲ್ಲಿ ಉತ್ತೇಜಕ ಚಟುವಟಿಕೆ, ನಿರ್ಬಂಧಿತ ಮತ್ತು ನಿಷೇಧಿತ ಚಟುವಟಿಕೆಗಳೆಂದು ವರ್ಗೀಕರಿಸಲಾಗಿದೆ. ಉತ್ತೇಜಕ ಚಟುವಟಿಕೆಗಳಲ್ಲಿ ಹಾಲಿ ಇರುವ ಕೃಷಿ, ಸಾವಯವ ಕೃಷಿ, ತೋಟಗಾರಿಕೆ, ಸೌರ ಫಲಕ ಅಳವಡಿಕೆಯಂತಹ ಚಟುವಟಿಕೆಗಳಿಗೆ ನಿರ್ಬಂಧ ಇಲ್ಲ ಎಂದು ವಿವರಿಸಿದರು.

ಪರಿಸರ ಪ್ರವಾಸೋದ್ಯಮ, ಹೋಂಸ್ಟೇ, ರೆಸಾರ್ಟ್, ಹೋಟೆಲ್, ಶಾಲೆ, ಆಸ್ಪತ್ರೆ, ಸರ್ಕಾರಿ ಕಟ್ಟಡ, ಕಟ್ಟಡ ನಿರ್ಮಾಣ, ವಿದ್ಯುತ್ ಕೇಬಲ್ ಅಳವಡಿಕೆ, ಮೂಲಸೌಕರ್ಯ ಅಭಿವೃದ್ಧಿಗೆ ಪ್ರಾದೇಶಿಕ ಆಯುಕ್ತರ ಸಮಿತಿಯಿಂದ ಅನುಮತಿ ಪಡೆಯಬೇಕು. ಅಪಾಯಕಾರಿ ತ್ಯಾಜ್ಯ ಹೊರಹಾಕುವ, ಶಬ್ದ, ವಾಯು ಮಾಲಿನ್ಯದ ಕೆಂಪು ಪ್ರವರ್ಗದ ಕೈಗಾರಿಕೆ. ಗಣಿಗಾರಿಕೆಗೆ ನಿಷಿದ್ಧ ಎಂದರು.

ಶೇಷಗಿರಿ ರಾವ್ ಸೇರಿ ನಾಲ್ವರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ನೀಡುವ 2025ನೇ ಸಾಲಿನ 'ಜೀವಮಾನ ಸಾಧನ ಪುರಸ್ಕಾರ'ಕ್ಕೆ ಪಿಟೀಲು ವಾದಕ ಎಸ್. ಶೇಷಗಿರಿ ರಾವ್ ಆಯ್ಕೆಯಾಗಿದ್ದಾರೆ.

'ಕಲಾಜ್ಯೋತಿ ಪುರಸ್ಕಾರ'ಕ್ಕೆ ಗಾಯಕಿ ಟಿ.ಎಸ್. ಸತ್ಯವತಿ ಆಯ್ಕೆಯಾಗಿದ್ದಾರೆ. ಈ ಎರಡೂ ಪುರಸ್ಕಾರಗಳು ತಲಾ ₹ 20 ಸಾವಿರ ನಗದು ಒಳಗೊಂಡಿವೆ. 'ನಾದಜ್ಯೋತಿ ಪುರಸ್ಕಾರ'ಕ್ಕೆ ಗಾಯಕರಾದ ಬೆಂಗಳೂರು ಸಹೋದರರು (ಎಂ.ಬಿ. ಹರಿಹರನ್ ಮತ್ತು ಎಸ್. ಅಶೋಕ್) ಆಯ್ಕೆಯಾಗಿದ್ದಾರೆ. ಈ ಪುರಸ್ಕಾರವು ತಲಾ ₹ 15 ಸಾವಿರ ನಗದು ಒಳಗೊಂಡಿದೆ.

ಟ್ರಸ್ಟ್ ಫೆ.1ರಿಂದ ಫೆ.16ರವರೆಗೆ ವಜ್ರಮಹೋತ್ಸವ ಸಮಾರಂಭ ಹಮ್ಮಿಕೊಂಡಿದೆ. 16 ದಿನಗಳ ಈ ಸಮಾರಂಭವು ಮಲ್ಲೇಶ್ವರದ ಸೇವಾ ಸದನ, ಶ್ರೀರಾಮ ಮಂದಿರ ಹಾಗೂ ಯತಿರಾಜ ಮಠದಲ್ಲಿ ನಡೆಯಲಿದೆ. ಫೆ.9ರಂದು ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಟ್ರಸ್ಟ್ ಕಾರ್ಯದರ್ಶಿ ಸತ್ಯನಾರಾಯಣ ರಾವ್ ಕಟ್ಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ರೊಬೊಟಿಕ್ ತಂತ್ರಜ್ಞಾನ ಆಧಾರಿತ ಮಂಡಿಚಿಪ್ಪು ಬದಲಿ ಶಸ್ತ್ರ ಚಿಕಿತ್ಸೆಯ ಕಾರ್ಯಾಗಾರ: ಅತಿಥಿಗಳು: ಎಂ.ಆರ್. ದೊರೆಸ್ವಾಮಿ, ಜವಹರ್ ಡಿ., ಜೆ. ಸೂರ್ಯಪ್ರಸಾದ್, ನಾಗಾರ್ಜುನ ಎಸ್., ಕೆ.ಎಸ್. ಶ್ರೀಧರ್, ಅಜಯ್ ಕುಮಾರ್, ಡಾ. ನಾರಾಯಣ್ ಹುಲ್ಸೆ, ಡಾ. ರಾಜಶೇಖರ್ ಕೆ.ಟಿ., ಡಾ. ಅಶೋಕ್ ಕುಮಾರ್ ಪಿ.ಎಸ್., ಡಾ. ಆದರ್ಶ್ ಅಣ್ಣಪ್ಪರೆಡ್ಡಿ, ಆಯೋಜನೆ ಮತ್ತು ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಆ್ಯಂಡ್ ರಿಸರ್ಚ್, ಪಿಇಎಸ್ ವಿಶ್ವವಿದ್ಯಾಲಯ, ಎಲೆಕ್ಟ್ರಾನಿಕ್ ಸಿಟಿ, ಬೆಳಿಗ್ಗೆ 8ರಿಂದ

'ಕನ್ನಡ ಶಿಷ್ಟ ಪರಂಪರೆ ಮತ್ತು ಜಾನಪದ ಲೋಕ'ದ ಉದ್ಘಾಟನೆ: ಗೊಲ್ಲಹಳ್ಳಿ ಶಿವಪ್ರಸಾದ್, ಆಶಯ ನುಡಿ: ಅಗಸ್ಟಿನ್ ಜಾರ್ಜ್, ಅತಿಥಿಗಳು: ಮೈ.ಶ್ರೀ. ನಟರಾಜ, ಜಾನಪದ ಕಲಾ ಪ್ರದರ್ಶನ: ಮುಖವೀಣೆ ಆಂಜಿನಪ್ಪ, ಗಂಗಣ್ಣ ಬಿ.ಸಿ., ಪ್ರಧಾನ ಗೋಷ್ಠಿ: ಕೆ.ಆರ್. ದುರ್ಗಾದಾಸ್, ಡಿ.ಕೆ. ಚಿತ್ತಯ್ಯ ಪೂಜಾರ್, ಸುಜಾತಾ ಅಕ್ಕಿ, ಆಯೋಜನೆ: ಕ್ರಿಸ್ತು ಜಯಂತಿ ಕಾಲೇಜಿನ ಕನ್ನಡ ವಿಭಾಗ, ಸ್ಥಳ: ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣಪುರ, ಕೊತ್ತನೂರು, ಬೆಳಿಗ್ಗೆ 10

'ನವರಸ ರಾಮಾಯಣ' ನಾಟಕ ಪ್ರದರ್ಶನ: ಪರಿಕಲ್ಪನೆ: ಸಮುದ್ಯತ ಭಟ್, ಸಾಹಿತ್ಯ: ಕಬ್ಬಿನಾಲೆ ವಸಂತ ಭಾರದ್ವಾಜ್, ಸಂಗೀತ: ಸಮೀರ್ ರಾವ್, ನೃತ್ಯ ಸಂಯೋಜನೆ: ಭವಾನಿ ವಲ್ಲಭ್, ಬೆಳಕು: ಎಂ.ಜಿ. ನವೀನ್ ನರಸಿಂಹ, ಪ್ರಸಾಧನ: ವಿಜಯ ಬೆಣಚ್ಚ, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ಜಯನಗರ, ಸಂಜೆ 7.30

ದತ್ತಿ ಉಪನ್ಯಾಸ: ಸಾಜಿ ವರ್ಗೀಸ್, ಪಿ. ರಾಘವೇಂದ್ರ, ಆಯೋಜನೆ: ತತ್ವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಸ್ಥಳ: ಗಾಂಧಿಭವನ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

'ಸಂಗಂ ಸಾಹಿತ್ಯ: ಅನುವಾದಗಳು' ತಿಂಗಳ ಉಪನ್ಯಾಸ: ತಮಿಳ್ ಸೆಲ್ವಿ, ಪ್ರಸ್ತಾವನೆ: ಡಿ.ಕೆ. ಚಿತ್ತಯ್ಯ ಪೂಜಾರ್, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿಯ ಆವರಣ, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5

ಬ್ರಾಹ್ಮಣ ಮಹಾ ಸಮ್ಮೇಳನ: ಗುರು ಪ್ರಾರ್ಥನೆ, ಗಣಪತಿ ಪೂಜೆ, ಗೋಪೂಜೆ, ಮಹಾ ಸಂಕಲ್ಪ, ಪುಣ್ಯಾಹವಾಚನ, ಗಾಯತ್ರಿ ಮಹಾಯಾಗ ಕಲಶ ಸ್ಥಾಪನೆ, ಗಾಯತ್ರಿ ಜಪ ಪ್ರಾರಂಭ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ತ್ರಿಪುರವಾಸಿನಿ ಸಭಾಂಗಣ, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಸಂಜೆ 5.30ರಿಂದ

ಶಾಲಾ ಮಕ್ಕಳ ಸಂಭ್ರಮ, ಎಸ್. ಮಹಾದೇವಯ್ಯ (ಲಂಡನ್)–87: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಸುಶೀಲಮ್ಮ, ಎಂ. ಸದಾಶಿವಪ್ಪ, ವಿನೋದ ನರಸಿಂಹಮೂರ್ತಿ, ಎಸ್. ಶಾಂತರಾಜು, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಸಿದ್ದಲಿಂಗಸ್ವಾಮಿ, ಆಯೋಜನೆ: ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಸ್ಥಳ: ಅಲ್ಲಮ ಕಲಾಶಾಲೆ, ಕನ್ನಲ್ಲಿ, ಕೊಡಿಗೇಹಳ್ಳಿ ಮಾಗಡಿ ರಸ್ತೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಕೆಂಗೇರಿ: ವೃದ್ಧರು, ಅಂಗವಿಕಲರು, ಅಶಕ್ತರಿಗೆ ಪಾದಚಾರಿ ಮೇಲ್ಸೇತುವೆ ಹತ್ತಿಳಿಯುವುದೇ ಸವಾಲು • ಒಂದೂವರೆ ವರ್ಷದಿಂದ ಅರ್ಧಕ್ಕೆ ನಿಂತಿರುವ ಲಿಫ್ಟ್ ಕಾಮಗಾರಿ

ಲಿಫ್ಟ್ ಇಲ್ಲದ ಸ್ಕೈವಾಕ್: ಗಂಟು ನೋವಿನವರಿಗೆ ಕಗ್ಗಂಟು

ಸ್ಕೈ ವಾಕ್ ಬದಲು ರಸ್ತೆ ವಿಭಜಕ ದಾಟಿ ಬರುತ್ತಿರುವ ಪ್ರಯಾಣಿಕರು (ಎಡಚಿತ್ರ) ಪಾದಚಾರಿ ಮೇಲ್ಸೇತುವೆಯ ಲಿಫ್ಟ್ ನಿರ್ಮಾಣ ಕಾರ್ಯ ಅರ್ಧಕ್ಕೆ ಸ್ಥಗಿತಗೊಂಡಿದೆ

ಚಿತ್ರಗಳು: ಎಂ.ಎಸ್.ಮಂಜುನಾಥ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಇಕ್ಕಟ್ಟಾದ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್). ಬಳಕೆಗೆ ಸಿಗದ ಲಿಫ್ಟ್, ರಸ್ತೆಯಲ್ಲಿ ಪ್ರಯಾಣಿಕರನ್ನು ಹತ್ತಿಸಿ ಕೊಳ್ಳುವ ಬಸ್...

ಇದು ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದ ಎದುರಿನ ನಿತ್ಯದ ದುಃಸ್ಥಿತಿ.

ಮೈಸೂರು, ಮಂಡ್ಯ, ಮದ್ದೂರು ಕಡೆಗಳಿಂದ ಬರುವ ಬಸ್‌ಗಳು ಕೆಂಗೇರಿ ಬಸ್ ನಿಲ್ದಾಣ ಪ್ರವೇಶಿಸದೇ ರಸ್ತೆ ಬದಿಯಲ್ಲೇ ಪ್ರಯಾಣಿಕರನ್ನು ಇಳಿಸಿ ಮೆಜೆಸ್ಟಿಕ್ ಕಡೆಗೆ ಸಾಗುತ್ತವೆ. ಬಸ್ ನಿಲ್ದಾಣಕ್ಕೆ ಪ್ರವೇಶಿಸಲು ಒಂದು ಕಿಲೋ ಮೀಟರ್ ಮುಂದಕ್ಕೆ ಹೋಗಿ 'ಯು' ತಿರುವು ಪಡೆದು ಬರಬೇಕಿರುವುದರಿಂದ ಚಾಲಕರು ಬಸ್ಸನ್ನು ನಿಲ್ದಾಣಕ್ಕೆ ಒಯ್ಯದೇ ಮುಂದಕ್ಕೆ ಸಾಗುತ್ತಿದ್ದಾರೆ. ಇಳಿದ ಪ್ರಯಾಣಿಕರು ಪಾದಚಾರಿ ಮೇಲ್ಸೇತುವೆ ಹತ್ತಿ ಬಸ್ ನಿಲ್ದಾಣ ಕಡೆಗೆ ಬರಬೇಕು.

ಈ ಮೇಲ್ಸೇತುವೆ ಯಾವಾಗಲೂ ಗಿಜಿಗುಟ್ಟುತ್ತಿದ್ದು, ಬೆಳಿಗ್ಗೆ ಮತ್ತು ಸಂಜೆ ಜನದಟ್ಟಣೆ ಹೆಚ್ಚಿರುವ ಸಮಯದಲ್ಲಿ ಹತ್ತಿ-ಇಳಿಯುವುದೇ ಸಾಹಸವಾಗಿದೆ. ನೂಕುನುಗ್ಗಲು ಇಲ್ಲಿ ಸಾಮಾನ್ಯವಾಗಿದೆ.

ಮೇಲ್ಸೇತುವೆಯ ಎರಡೂ ಬದಿಗಳಲ್ಲಿ ಲಿಫ್ಟ್ ನಿರ್ಮಿಸಲು ಅವಕಾಶ ಮಾಡಿಕೊಡಲಾಗಿದೆ. ಆದರೆ, ಲಿಫ್ಟ್ ಕಾಮಗಾರಿ ಅರ್ಧಕ್ಕೆ ನಿಂತು ಒಂದೂವರೆ ವರ್ಷ ಕಳೆದಿದೆ. ಮೆಟ್ಟಿಲು ಹತ್ತಲಾಗದ ವೃದ್ಧರು, ನಿಶ್ಯಕ್ತರು ರಸ್ತೆ ವಿಭಜಕಕ್ಕೆ ಹಾಕಿರುವ ಬ್ಯಾರಿಕೇಡ್‌ಗಳನ್ನು ಲೆಕ್ಕಿಸದೇ ಮಧ್ಯೆ ಆಗಾಗ ನುಸುಳುತ್ತಿದ್ದಾರೆ. ಜನದಟ್ಟಣೆ ಹೆಚ್ಚಿರುವ ಸಮಯದಲ್ಲಿ ಯುವಜನರು ಕೂಡ ಮಧ್ಯೆ ಇಲ್ಲೇ ಅಪಾಯಕಾರಿ ರೀತಿಯಲ್ಲಿ ರಸ್ತೆ ದಾಟುತ್ತಿದ್ದಾರೆ.

'ಗುತ್ತಿಗೆದಾರರಿಗೆ ಬಿಬಿಎಂಪಿಯಿಂದ ಹಣ ಪಾವತಿ ಆಗದೇ ಇರುವುದರಿಂದ ಲಿಫ್ಟ್ ಅಳವಡಿಕೆ ಕಾಮಗಾರಿ ಅರ್ಧಕ್ಕೆ ನಿಂತಿದೆ' ಎಂದು ಸ್ಥಳೀಯರಾದ ಮಂಜುನಾಥ್ ಮಾಹಿತಿ ನೀಡಿದರು.

ಇದೇ ರಸ್ತೆಯ ಮತ್ತೊಂದು ಭಾಗದಲ್ಲಿ ಅಂದರೆ ಬಸ್ ನಿಲ್ದಾಣದ ಪ್ರವೇಶದಲ್ಲಿ ಮೈಸೂರು, ಮಂಡ್ಯ, ಮದ್ದೂರು ಕಡೆಗೆ ಸಾಗುವ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ರಸ್ತೆಯಲ್ಲೇ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿರುತ್ತಾರೆ. ಬಸ್ ನಿಲ್ದಾಣದಿಂದ ಹೊರಬರುವ ಬಿಎಂಟಿಸಿ ಬಸ್‌ಗಳು ಅದೇ ಸಮಯಕ್ಕೆ ಬರುತ್ತಿರುತ್ತವೆ. ಮೊದಲೇ ವಾಹನ ದಟ್ಟಣೆ ಹೆಚ್ಚಿರುವ ಈ ರಸ್ತೆಯಲ್ಲಿ ಬಸ್‌ಗಳನ್ನು ಹೀಗೆ ನಿಲ್ಲಿಸುತ್ತಿರುವುದರಿಂದ ಸರಾಗ ಪ್ರಯಾಣಕ್ಕೆ ಅಡ್ಡಿಯಾಗಿ ಕಿಲೋಮೀಟರ್ ವರೆಗೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಈ ವಾಹನ ದಟ್ಟಣೆಯ ಮಧ್ಯೆ ಸಿಲುಕಿಕೊಂಡ ಆಂಬುಲೆನ್ಸ್ ಹೊರ ಬರಲು ಸುಮಾರು 10 ನಿಮಿಷದಷ್ಟು ಕಾದಿರುವುದು ಗುರುವಾರ ಕಂಡು ಬಂತು.

ಸ್ಕೈವಾಕ್‌ನಿಂದ ಇಳಿಯುವಲ್ಲಿ ಹೊಂಡಗಳು ಬಿದ್ದಿವೆ. ಅಲ್ಲೇ ಸಿಮೆಂಟ್, ಜಲ್ಲಿಗಳನ್ನು ರಾಶಿ ಹಾಕಿದ್ದು, ಮಳೆ ಬಂದರೆ ರಾಡಿ ಏಳುವಂತಿದೆ. ಅಲ್ಲದೇ ರಸ್ತೆಯಲ್ಲಿಯೂ ಬೃಹದಾಕಾರದ ಹೊಂಡಗಳು ಬಿದ್ದು, ದ್ವಿಚಕ್ರ ವಾಹನಗಳ ಸಂಚಾರಕ್ಕೆ ಸವಾಲಾಗಿವೆ ಎಂದು ಆಟೊ ಚಾಲಕ ಮಂಜುನಾಥ್ ಸಮಸ್ಯೆ ಬಿಚ್ಚಿಟ್ಟರು.

ಜನರು ಏನಂತಾರೆ?



ಲಿಫ್ಟ್ ಅಳವಡಿಸಲು ಜಾಗ ಬಿಟ್ಟಿದ್ದಾರೆ. ಆದರೆ, ಲಿಫ್ಟ್ ಅಳವಡಿಸುತ್ತಿಲ್ಲ. ನಮ್ಮಂಥ ವಯಸ್ಸಾದವರು ಮೆಟ್ಟಿಲು ಹತ್ತಿಕೊಂಡು ಹೋಗುವುದು ಕಷ್ಟ. ಬಿಬಿಎಂಪಿಯವರು ಲಿಫ್ಟ್ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಿದರೆ ಹಿರಿಯ ನಾಗರಿಕರ ಮಂಡಿ ನೋವು ಹೆಚ್ಚಾಗುವುದನ್ನು ತಪ್ಪಿಸಬಹುದು

ರಾಜೇಂದ್ರ, ಕೇಂದ್ರೀಯ ಅಬಕಾರಿ ನಿವೃತ್ತ ಅಧಿಕಾರಿ

ಲಿಫ್ಟ್ ಅಳವಡಿಕೆ ಕಾಮಗಾರಿ ಮತ್ತೆ ಶುರುವಾಗುತ್ತದೆ ಎಂದು ಹೇಳುತ್ತಾರೆ. ಬೇಗ ಆದರೆ, ಜನರಿಗೆ ಉಪಯೋಗವಾಗುತ್ತದೆ. ಎಕ್ಸ್‌ಪ್ರೆಸ್ ಬಸ್‌ಗಳಲ್ಲದೇ ದೊಡ್ಡಾಲದಮರ, ರಾಮೋಹಳ್ಳಿ, ಕೆಂಗೇರಿ ಉಪನಗರ ಸಹಿತ ಹಳ್ಳಿ ಕಡೆಯಿಂದ ಬರುವ ಬಸ್‌ಗಳೆಲ್ಲ ನಿಲ್ದಾಣಕ್ಕೆ ಹೋಗದೇ ಇಲ್ಲೇ ಪ್ರಯಾಣಿಕರನ್ನು ಇಳಿಸಿ ಹೋಗುವುದರಿಂದ ಸ್ಕೈವಾಕ್‌ನಲ್ಲಿ ನೂಕುನುಗ್ಗಲು ಉಂಟಾಗುತ್ತದೆ. ನಿರ್ಮಾಣ ಮಾಡುವಾಗಲೇ ಸರಿಯಾಗಿ ಯೋಜನೆ ರೂಪಿಸಿ ಹತ್ತಿ, ಇಳಿಯುವ ಮೆಟ್ಟಿಲುಗಳು ಹೆಚ್ಚು ಅಗಲವಾಗಿ ಇರುವಂತೆ ಮಾಡಿದ್ದರೆ ಇಷ್ಟು ಸಮಸ್ಯೆ ಆಗುತ್ತಿರಲಿಲ್ಲ.

ರೂಪಾ, ವ್ಯಾಪಾರಿ, ಕೆಂಗೇರಿ

ಆಕಾಶದೆತ್ತರಕ್ಕೆ ಸೇತುವೆ ಕಟ್ಟಿಟ್ಟಿದ್ದಾರೆ. ಹಳ್ಳಿಯಿಂದ ಬರುವ ನಾವು ಚೀಲ ಹೊತ್ತುಕೊಂಡು ಹತ್ತುವುದೇ ಕಷ್ಟ. ಅಪರೂಪಕ್ಕೆ ಬರುವ ನಾವು ಅರ್ಧ ಮೆಟ್ಟಿಲು ಹತ್ತಿ ಕುಳಿತುಕೊಳ್ಳಬೇಕಿದೆ. ಲಿಫ್ಟ್ ಅಳವಡಿಸುತ್ತಾರಂತೆ. ಅದರ ಜೊತೆಗೆ ಎಸ್ಕಲೇಟರ್ ಕೂಡ ಅಳವಡಿಸಿದರೆ ಅನುಕೂಲವಾಗಬಹುದು

ಕವಿತಾ ಜಿಗಣಿ, ಪ್ರಯಾಣಿಕರು

ಗಿಜಿಗುಡುತ್ತಿರುವ ಪಾದಚಾರಿ ಮೇಲ್ಸೇತುವೆ

ಹೈಕಮಾಂಡ್ ವರದಿ ಕೇಳಿದೆ: ಭಂಡಾರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶಿಸ್ತು ಉಲ್ಲಂಘಿಸುವವರ ವಿವರ ಸಲ್ಲಿಸಲು ಸೂಚನೆ
- ಹೈಕಮಾಂಡ್ ಗಂಭೀರವಾಗಿ ಗಮನಿಸುತ್ತಿದೆ

ಬೆಂಗಳೂರು: 'ಅನಗತ್ಯವಾಗಿ ಗೊಂದಲ ಉಂಟು ಮಾಡುವ ಹೇಳಿಕೆಗಳನ್ನು ನೀಡುತ್ತಿರುವ ಸಚಿವರ ಬಗ್ಗೆ ಹೈಕಮಾಂಡ್ ನಾಯಕರು ವರದಿ ಕೇಳಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಹೇಳಿದ್ದಾರೆ.

'ಒಂದೂವರೆ ವರ್ಷದಿಂದ ಸಚಿವರು ತಮ್ಮ ಇಲಾಖೆಯಲ್ಲಿ ಯಾವ ರೀತಿ ಕಾರ್ಯನಿರ್ವಹಣೆ ಮಾಡಿದ್ದಾರೆ? ಜಿಲ್ಲಾ ಪ್ರವಾಸ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿದ್ದಾರೆಯೇ? ಪಕ್ಷದ ಸಂಘಟನೆಗೆ ಒತ್ತು ಕೊಡಲಾಗುತ್ತದೆಯೇ? ಪ್ರಣಾಳಿಕೆಯಲ್ಲಿ ಕೊಟ್ಟಿರುವ ಯೋಜನೆಗಳನ್ನು ಜಾರಿ ಮಾಡಲು ಸಹಕಾರ ಕೊಡುತ್ತಿದ್ದಾರೆಯೇ? ತಮ್ಮ ಇಲಾಖೆಯಲ್ಲಿ ಯೋಜನೆಗಳನ್ನು ಜಾರಿ ಮಾಡಿದ್ದಾರೆಯೇ? ಮುಂತಾದ ಮಾಹಿತಿಯನ್ನು ಹೈಕಮಾಂಡ್ ಕೇಳಿದೆ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಹೈಕಮಾಂಡ್ ಆದೇಶ ಉಲ್ಲಂಘಿಸುವವರು ಕಾಂಗ್ರೆಸ್‌ನ ಶಿಸ್ತಿನ ಸಿಪಾಯಿಗಳಲ್ಲ ಎನ್ನುವುದು ವರಿಷ್ಠರ ಅಭಿಪ್ರಾಯ. ಶಿಸ್ತು ಉಲ್ಲಂಘಿಸಿ ಪದೇ ಪದೇ ಮಾಧ್ಯಮಗಳಿಗೆ ಹೇಳಿಕೆ ಕೊಡುವ ಸಚಿವರ ಸಂಪೂರ್ಣ ವಿವರಗಳನ್ನು ಕೊಡುವಂತೆಯೂ ಹೈಕಮಾಂಡ್ ಸೂಚಿಸಿದೆ' ಎಂದೂ ಅವರು ತಿಳಿಸಿದ್ದಾರೆ.



ಮಂಜುನಾಥ ಭಂಡಾರಿ

'ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಎಚ್ಚರಿಕೆ ನೀಡಿದ ನಂತರವೂ ಕೆಲವು ನಾಯಕರು, ಸಚಿವರು ಪದೇ ಪದೆ ಮಾತನಾಡುತ್ತಿದ್ದಾರೆ. ಹೈಕಮಾಂಡ್ ಎಲ್ಲವನ್ನೂ ಗಂಭೀರವಾಗಿ ಗಮನಿಸುತ್ತಿದೆ. ಪಕ್ಷದ ಆದೇಶವನ್ನು ಉಲ್ಲಂಘನೆ ಮಾಡುವವರು ಮುಂದಿನ ದಿನಗಳಲ್ಲಿ ಪರಿಣಾಮ ಎದುರಿಸಬೇಕಾದೀತು ಎಂದು ವರಿಷ್ಠರು ತಾಕೀತು ಮಾಡಿದ್ದಾರೆ' ಎಂದೂ ಅವರು ಹೇಳಿದ್ದಾರೆ.

REQUIRED A PASSIONATE, QUALIFIED AND SKILLED TEACHER'S TO B M PUBLIC SCHOOL FOR THE ACADEMIC YEAR 2025-26

EDUCATOR'S

MONTESSORI PASSIONATE AND SKILLED TEACHER'S

English	MA B.Ed
Kannada	MA B.Ed
Hindi	MA B.Ed
Science	M.Sc B.Ed
Mathematics	M.Sc B.Ed
PT teacher	P.Ed
Art and craft teacher	MFA
Music teacher	B. Music
Yoga trainer	Dip in yoga

Submit your CV to bmpsmalavalli@gmail.com or call 7204223564 8618360733 on or before 24th of January.

Selected candidates will be called for an interview on 30th of January at hotel President, near Woodland theatre Mysuru.

Note. Mention the Post for which you are applying, while sending your CV.

2025ರ ನಿರೀಕ್ಷಿತ ಚಿತ್ರಗಳು

ಕಳೆದ ವರ್ಷದ(2024) ಮೊದಲಾರ್ಧ ಸ್ಟಾರ್‌ ನಟರ ಸಿನಿಮಾಗಳಿಲ್ಲದೆ ಚಂದನವನ ಸೊರಗಿತ್ತು. ಈ ವರ್ಷವೂ ಇದೇ ಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ. ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳ ಪೈಕಿ ಹಲವು ಇನ್ನೂ ಚಿತ್ರೀಕರಣದ ಹಂತದಲ್ಲೇ ಇವೆ. ವರ್ಷದ ಮೊದಲಾರ್ಧದಲ್ಲಿ ಸ್ಟಾರ್‌ ನಟರ ಒಂದೆರಡು ಸಿನಿಮಾಗಳಷ್ಟೇ ತೆರೆಕಾಣುವ ಸಾಧ್ಯತೆ ಇದೆ. 2025ರ ಬಹುನಿರೀಕ್ಷಿತ ಸಿನಿಮಾಗಳ ಮುನ್ನೋಟವನ್ನು **ಅಭಿಲಾಷ್‌ ಪಿ.ಎಸ್‌.** ನೀಡಿದ್ದಾರೆ.

ಡೆವಿಲ್‌

ದರ್ಶನ್‌ ನಟನೆಯ ಈ ಸಿನಿಮಾದ ಚಿತ್ರೀಕರಣ ಶೇ 50ರಷ್ಟು ಪೂರ್ಣಗೊಂಡಿದ್ದು, ಸದ್ಯಕ್ಕೆ ಚಿತ್ರೀಕರಣ ಸ್ಥಗಿತಗೊಂಡಿದೆ. ದರ್ಶನ್‌ ಇತ್ತೀಚೆಗೆ ಚಿತ್ರದ ಡಬ್ಬಿಂಗ್‌ ಆರಂಭಿಸಿದ್ದಾರೆ ಎನ್ನಲಾಗಿದ್ದು, ಚಿತ್ರತಂಡ ಅಧಿಕೃತವಾಗಿ ಈ ಬಗ್ಗೆ ಮಾಹಿತಿ ನೀಡಿಲ್ಲ. ಫೆಬ್ರುವರಿ ನಂತರ ಚಿತ್ರೀಕರಣ ಪುನರಾರಂಭವಾಗಲಿದೆ ಎನ್ನುವ ಮಾಹಿತಿಯಿದ್ದು, ವರ್ಷಾಂತ್ಯಕ್ಕೆ ಚಿತ್ರ ಬಿಡುಗಡೆಯಾಗುವ ಸಾಧ್ಯತೆ ಇದೆ. ಜೆ.ಜಯಮ್ಮ ನಿರ್ಮಾಣದ ಈ ಚಿತ್ರವನ್ನು ಪ್ರಕಾಶ್‌ ವೀರ್‌ ನಿರ್ದೇಶಿಸುತ್ತಿದ್ದಾರೆ. ಈ ಹಿಂದಿನ ಯೋಜನೆಯಂತೆ 2024ರ ಡಿಸೆಂಬರ್‌ 25ರಂದು ಸಿನಿಮಾ ಬಿಡುಗಡೆಯಾಗಬೇಕಿತ್ತು. ಕೊಲೆ ಆರೋಪದಲ್ಲಿ ನಟ ದರ್ಶನ್‌ ಬಂಧನದ ಬಳಿಕ ಚಿತ್ರೀಕರಣ ಸ್ಥಗಿತಗೊಂಡಿತ್ತು.

ಕಾಂತಾರ ಪ್ರೀಕ್ವೆಲ್‌



ನಟ ರಿಷಬ್‌ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ 'ಕಾಂತಾರ' ಸಿನಿಮಾ ಪ್ರೀಕ್ವೆಲ್‌ನ ಶೂಟಿಂಗ್‌ ಶೇ 60 ಪೂರ್ಣಗೊಂಡಿದೆ. ಕುಂದಾಪುರ, ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಮಾರ್ಚ್‌–ಏಪ್ರಿಲ್‌ ವೇಳೆಗೆ ಚಿತ್ರೀಕರಣ ಪೂರ್ಣಗೊಂಡು ಪೋಸ್ಟ್‌ ಪ್ರೊಡಕ್ಷನ್‌ಗೆ ಧುಮುಕಲಿದೆ ಚಿತ್ರತಂಡ. ಅಕ್ಟೋಬರ್‌ 2ರಂದು ಸಿನಿಮಾ ಬಿಡುಗಡೆಯಾಗಲಿದೆ. ಚಿತ್ರದ ಸಾಹಸ ನಿರ್ದೇಶನಕ್ಕಾಗಿ ಟೊಡರ್‌ ಲ್ಯಾಜರೋವ್‌ ತಂಡ ಸೇರಿಕೊಂಡಿದ್ದು, ಕನ್ನಡ, ಇಂಗ್ಲಿಷ್‌ ಸೇರಿದಂತೆ ಏಳು ಭಾಷೆಗಳಲ್ಲಿ ಏಕಕಾಲದಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ. ಅಜನೀಶ್‌ ಲೋಕನಾಥ್‌ ಸಂಗೀತ ನಿರ್ದೇಶನ, ಅರವಿಂದ್‌ ಎಸ್‌.ಕಶ್ಯಪ್‌ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಕೆಡಿ

ಪ್ರೇಮ್‌ ನಿರ್ದೇಶನದ, ಧ್ರುವ ಸರ್ಜಾ ನಟನೆಯ 'ಕೆಡಿ' ಯುಗಾದಿ ವೇಳೆಗೆ ತೆರೆಗೆ ಬರುವ ಸಾಧ್ಯತೆ ಇದೆ. 'ಕೆಡಿ' ಮಾತಿನ ಭಾಗದ ಚಿತ್ರೀಕರಣ ಪೂರ್ಣಗೊಂಡಿದ್ದು ಎರಡು ಹಾಡುಗಳ ಶೂಟಿಂಗ್‌ ಬಾಕಿ ಇದೆ. 1970ರ ಕಾಲಘಟ್ಟದಲ್ಲಿ ನಡೆಯುವ ಕಥೆಯನ್ನು ಈ ಸಿನಿಮಾ ಹೊಂದಿದ್ದು, ಆಗಿನ ಬೆಂಗಳೂರನ್ನು ಮೋಹನ್‌ ಬಿ.ಕೆರೆ ಸೆಟ್‌ ಮೂಲಕ ಮರುಸೃಷ್ಟಿಸಿದ್ದಾರೆ. 'ಏಕ್‌ ಲವ್‌ ಯಾ' ಸಿನಿಮಾ ನಂತರ ಪ್ರೇಮ್‌ ನಿರ್ದೇಶನದ ಪ್ಯಾನ್‌ ಇಂಡಿಯಾ ಚಿತ್ರ ಇದಾಗಿದ್ದು, ಚಿತ್ರವನ್ನು ಕೆ.ವಿ.ಎನ್‌. ಪ್ರೊಡಕ್ಷನ್ಸ್‌ ನಿರ್ಮಿಸುತ್ತಿದೆ. ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಚಿತ್ರದಲ್ಲಿ ಬಾಲಿವುಡ್‌ನ ಸಂಜಯ್‌ ದತ್‌, ಶಿಲ್ಪಾ ಶೆಟ್ಟಿ, ರವಿಚಂದ್ರನ್‌, ರಮೇಶ್‌ ಅರವಿಂದ್‌ ತಾರಾಬಳಗದಲ್ಲಿದ್ದಾರೆ.

ಟಾಕ್ಸಿಕ್‌

ಯಶ್‌ ನಟನೆಯ ಈ ಸಿನಿಮಾ ಚಿತ್ರೀಕರಣದ ಹಂತದಲ್ಲಿದೆ. ಗೀತು ಮೋಹನ್‌ದಾಸ್‌ ನಿರ್ದೇಶನ ಮಾಡುತ್ತಿರುವ ಈ ಚಿತ್ರದ ಟೀಸರ್‌ ಯಶ್‌ ಜನ್ಮದಿನದಂದು(ಜ.8)ಬಿಡುಗಡೆಯಾಗಿದೆ. ರೆಟ್ರೋ ಶೈಲಿಯಲ್ಲಿ ಚಿತ್ರದ ದೃಶ್ಯಗಳಿವೆ. ಬೆಂಗಳೂರಿನ ಎಚ್‌ಎಂಟಿ ಮೈದಾನದಲ್ಲಿ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿದ್ದ ಚಿತ್ರತಂಡ ಮುಂಬೈನಲ್ಲಿ ಚಿತ್ರೀಕರಣ ನಡೆಸುತ್ತಿದೆ. ಸಿನಿಮಾವನ್ನು ಕೆವಿಎನ್‌ ಪ್ರೊಡಕ್ಷನ್ಸ್‌ ಹಾಗೂ ಯಶ್‌ ಅವರ ಮಾನ್‌ಸ್ಟರ್‌ ಮೈಂಡ್‌ ಕ್ರಿಯೇಷನ್ಸ್‌ ನಿರ್ಮಾಣ ಮಾಡುತ್ತಿದೆ. ಏಪ್ರಿಲ್‌ 10ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತಾದರೂ, ಸಿನಿಮಾ ಮುಂದೂಡಲ್ಪಡುವ ಲಕ್ಷಣಗಳೇ ಹೆಚ್ಚಾಗಿ ಕಾಣಿಸುತ್ತಿದೆ.

45

ಸಂಗೀತ ನಿರ್ದೇಶಕ ಅರ್ಜುನ್‌ ಜನ್ಯ ಆ್ಯಕ್ಷನ್‌ ಕಟ್‌ ಹೇಳುತ್ತಿರುವ, ಶಿವರಾಜ್‌ಕುಮಾರ್‌, ಉಪೇಂದ್ರ ಹಾಗೂ ರಾಜ್‌ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ ಈ ಸಿನಿಮಾದ ಶೂಟಿಂಗ್‌ ಪೂರ್ಣಗೊಂಡಿದೆ. ಸದ್ಯ ಪೋಸ್ಟ್‌ ಪ್ರೊಡಕ್ಷನ್‌ ಹಂತದಲ್ಲಿ ಸಿನಿಮಾವಿದೆ. ಮೇ ಅಂತ್ಯದಲ್ಲಿ ಚಿತ್ರದ ವಿಎಫ್‌ಎಕ್ಸ್‌ ಕೆಲಸಗಳು ಪೂರ್ಣಗೊಳ್ಳಲಿದ್ದು, ಸಿನಿಮಾ ಆಗಸ್ಟ್‌ 15ರಂದು ಬಿಡುಗಡೆಯಾಗಲಿದೆ. ಬಿಗ್‌ಬಜೆಟ್‌ನಲ್ಲಿ ನಿರ್ಮಾಣವಾಗಿರುವ ಈ ಸಿನಿಮಾದ ಗ್ರಾಫಿಕ್ಸ್‌ ಕೆಲಸಗಳನ್ನು 'MARZ' ವಿಎಫ್‌ಎಕ್ಸ್‌ ಕಂಪನಿ ಮಾಡುತ್ತಿದೆ. ಹಾಲಿವುಡ್‌ನ ನೂರೈವತ್ತಕ್ಕೂ ಅಧಿಕ ಸಿನಿಮಾಗಳಿಗೆ ವಿಎಫ್‌ಎಕ್ಸ್‌ ಮಾಡಿರುವ ಈ ಕಂಪನಿ, ಮೊದಲ ಬಾರಿಗೆ ಕನ್ನಡ ಸಿನಿಮಾವೊಂದಕ್ಕೆ ಕೆಲಸ ಮಾಡುತ್ತಿದೆ. ಅರ್ಜುನ್‌ ಜನ್ಯ ನಿರ್ದೇಶನದ ಚೊಚ್ಚಲ ಚಿತ್ರವನ್ನು ಎಂ. ರಮೇಶ್‌ ರೆಡ್ಡಿ ಅವರು ತಮ್ಮ 'ಸೂರಜ್‌ ಪ್ರೊಡಕ್ಷನ್‌' ಬ್ಯಾನರ್‌ನಲ್ಲಿ ನಿರ್ಮಾಣ ಮಾಡಿದ್ದಾರೆ. ಈ ಸಿನಿಮಾ ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳದಲ್ಲಿ ತೆರೆಕಾಣಲಿದೆ.

Yours's sincerely ರಾಮ್‌

ರಮೇಶ್‌ ಅರವಿಂದ್‌ ಹಾಗೂ ಗಣೇಶ್‌ ನಟನೆಯ ಚಿತ್ರವಿದು. ಈ ಚಿತ್ರದ ಚಿತ್ರೀಕರಣ ಆರಂಭವಾಗಿದ್ದು, ನಾಯಕಿಯ ಹುಡುಕಾಟದಲ್ಲಿ ಚಿತ್ರತಂಡವಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಈ ಚಿತ್ರ ಸೆಟ್ಟೇರಿತ್ತು. 'ಪುಷ್ಪಕ ವಿಮಾನ', 'ಇನ್‌ಸ್ಪೆಕ್ಟರ್‌ ವಿಕ್ರಮ್‌' ಸಿನಿಮಾಗಳನ್ನು ನಿರ್ಮಾಣ ಮಾಡಿರುವ ವಿಖ್ಯಾತ್‌ ಎ.ಆರ್‌. ಈ ಚಿತ್ರದ ಮೂಲಕ ನಿರ್ದೇಶಕರಾಗಿದ್ದಾರೆ. ದಿ ರಾಯಲ್‌ ಸ್ಟುಡಿಯೋಸ್‌ ಬ್ಯಾನರ್‌ನಡಿ ಸತ್ಯ ರಾಯಲ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ಟೀಸರ್‌ ಮೂಲಕ ಕುತೂಹಲ ಹುಟ್ಟಿಸಿರುವ ಈ ಸಿನಿಮಾ ಈ ವರ್ಷದ ದ್ವಿತೀಯಾರ್ಧದಲ್ಲಿ ಬಿಡುಗಡೆಯಾಗಲಿದೆ.

'ಅಣ್ಣ ಫ್ರಂ ಮೆಕ್ಸಿಕೊ' ಮತ್ತು 'ಜಿಂಗೋ'

'ಬಡವ ರಾಸ್ಕಲ್‌' ಸಿನಿಮಾ ಖ್ಯಾತಿಯ ಶಂಕರ್‌ ಗುರು ನಿರ್ದೇಶನದ, ಧನಂಜಯ ನಟನೆಯ 'ಅಣ್ಣ ಫ್ರಂ ಮೆಕ್ಸಿಕೊ' ಸಿನಿಮಾದ ಚಿತ್ರೀಕರಣ ಅಂತಿಮ ಹಂತದಲ್ಲಿದ್ದು, ಹಾಡುಗಳ ಚಿತ್ರೀಕರಣ ಬಾಕಿ ಇದೆ. ಮೈಸೂರು, ಬೆಂಗಳೂರಿನಲ್ಲಿ ಈ ಚಿತ್ರದ ಚಿತ್ರೀಕರಣ ನಡೆದಿದ್ದು, ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಧನಂಜಯ ನಟನೆಯ ಮತ್ತೊಂದು ಸಿನಿಮಾ, ಶಶಾಂಕ್‌ ಸೋಗಾಲ್‌ ನಿರ್ದೇಶನದ 'ಜಿಂಗೋ' ಮಾರ್ಚ್‌ನಲ್ಲಿ ಸೆಟ್ಟೇರಲಿದ್ದು, ಮೂರು ತಿಂಗಳು ಚಿತ್ರೀಕರಣ ನಡೆಯಲಿದೆ. ದೀಪಾವಳಿಗೆ ಈ ಸಿನಿಮಾ ಬಿಡುಗಡೆಯಾಗುವ ಸಾಧ್ಯತೆ ಇದೆ.

ಎಕ್ಕ

'ರತ್ನನ್‌ ಪ್ರಪಂಚ' ಖ್ಯಾತಿಯ ರೋಹಿತ್‌ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್‌ ನಟನೆಯ ಈ ಸಿನಿಮಾದ ಚಿತ್ರೀಕರಣ ನಡೆಯುತ್ತಿದೆ. ಸಿನಿಮಾ ಜೂನ್‌ 6ರಂದು ತೆರೆಕಾಣಲಿದೆ. ಇದು ಯುವ ರಾಜ್‌ಕುಮಾರ್‌ ಎರಡನೇ ಸಿನಿಮಾವಾಗಿದ್ದು, ಭೂಗತ ಜಗತ್ತಿನ ಕಥೆಯನ್ನು ಸಿನಿಮಾ ಹೊಂದಿದೆ. ಯುವಗೆ ಜೋಡಿಯಾಗಿ ಸಂಪದ ನಟಿಸಿದ್ದಾರೆ. ಮತ್ತೋರ್ವ ನಾಯಕಿಯಾಗಿ 'ಸಲಗ' ಖ್ಯಾತಿಯ ಸಂಜನಾ ಆನಂದ್‌ ಚಿತ್ರತಂಡ ಸೇರಿಕೊಂಡಿದ್ದಾರೆ. ಕಾಶ್ಮೀರ, ಬೆಂಗಳೂರು, ಮೈಸೂರು, ಮುಂಬೈ, ಕೋಲ್ಕತ್ತ ಹಾಗೂ ದೆಹಲಿಯಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ. ಚಿತ್ರವನ್ನು ಪಿ.ಆರ್‌. ಕೆ.ಪ್ರೊಡಕ್ಷನ್ಸ್‌, ಜಯಣ್ಣ ಕಂಬೈನ್ಸ್‌ ಹಾಗೂ ಕೆ.ಆರ್‌. ಜಿ.ಸ್ಟುಡಿಯೊಸ್‌ ಬ್ಯಾನರ್‌ ಅಡಿಯಲ್ಲಿ ಜಂಟಿಯಾಗಿ ನಿರ್ಮಿಸಲಾಗುತ್ತಿದೆ.

ದುನಿಯಾ ವಿಜಯ್‌ '29'

ದುನಿಯಾ ವಿಜಯ್‌ ನಟನೆಯ 29ನೇ ಸಿನಿಮಾವನ್ನು 'ಕಾಟೇರ' ಕಥೆಗಾರ ಜಡೇಶ್‌ ಕೆ.ಹಂಪಿ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದ ಚಿತ್ರೀಕರಣ ಶೇ 60 ಪೂರ್ಣಗೊಂಡಿದ್ದು, ಸಾಹಸ ದೃಶ್ಯಗಳ ಚಿತ್ರೀಕರಣ ಬಾಕಿ ಇದೆ. ಮೇ ಅಥವಾ ಜೂನ್‌ನಲ್ಲಿ ಈ ಸಿನಿಮಾ ತೆರೆ ಕಾಣುವ ಸಾಧ್ಯತೆ ಇದೆ. ಜ.19ರಂದು ಚಿತ್ರದ ಶೀರ್ಷಿಕೆ ಘೋಷಣೆಯಾಗಲಿದೆ. ಶರಣ್‌ ನಟನೆಯ 'ಗುರುಶಿಷ್ಯರು' ಸಿನಿಮಾ ಮೂಲಕ ತಮ್ಮ ನಿರ್ದೇಶನದ ಸಾಮರ್ಥ್ಯವನ್ನು ಜಡೇಶ್‌ ಸಾಬೀತುಪಡಿಸಿದ್ದರು. 'ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ..!' ಎನ್ನುವ ಅಡಿಬರಹ ಈ ಸಿನಿಮಾಗಿದ್ದು, ವಿಜಯ್‌ ಅವರ ಹಿರಿಯ ಮಗಳು ಮೋನಿಕಾ ತಂದೆಯ ಜೊತೆಗೆ ಮಗಳ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಕರಾವಳಿ

ಗುರುದತ್‌ ಗಾಣಿಗ ನಿರ್ದೇಶನದ ಈ ಸಿನಿಮಾ ಕರಾವಳಿಯ ಮತ್ತೊಂದು ಕಥೆ ಹೊತ್ತುಬಂದಿದೆ. ಈಗಾಗಲೇ ಚಿತ್ರದ ಶೇ 80ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಏಪ್ರಿಲ್‌ ವೇಳೆಗೆ ಸಿನಿಮಾ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ನಾಯಕನಾಗಿ ಪ್ರಜ್ವಲ್‌ ದೇವರಾಜ್‌ ನಟಿಸಿದ್ದು, ಸಂಪದ ನಾಯಕಿಯಾಗಿದ್ದಾರೆ. ಕರಾವಳಿ ಸುತ್ತಮುತ್ತ ಚಿತ್ರೀಕರಣ ನಡೆದಿದ್ದು, ಕಂಬಳ, ಯಕ್ಷಗಾನ ಈ ಸಿನಿಮಾದ ಹೈಲೈಟ್ಸ್‌. ಮನುಷ್ಯ ಮತ್ತು ಪ್ರಾಣಿ ಮಧ್ಯೆ ನಡೆಯುವ ಸಂಘರ್ಷದ ಕಥೆ ಇದಾಗಿದ್ದು, ಇತ್ತೀಚೆಗೆ ಚಿತ್ರದ 'ಪ್ರತಿಷ್ಠೆಯ ಪಿಶಾಚಿ' ಎಂಬ ಟೀಸರ್‌ ಬಿಡುಗಡೆಯಾಗಿದೆ. ನಟರಾದ ರಮೇಶ್‌ ಇಂದಿರಾ, ಮಿತ್ರ ತಾರಾಬಳಗದಲ್ಲಿದ್ದಾರೆ.

ಸಂಜು ವೆಡ್ಸ್‌ ಗೀತಾ-2 ತೆರೆಗೆ



ರಚಿತಾ ರಾಮ್‌, ಶ್ರೀನಗರ ಕಿಟ್ಟಿ

ಶ್ರೀನಗರ ಕಿಟ್ಟಿ, ರಚಿತಾ ರಾಮ್‌ ಜೋಡಿಯಾಗಿ ನಟಿಸಿರುವ 'ಸಂಜು ವೆಡ್ಸ್‌ ಗೀತಾ-2' ಕಳೆದ ವಾರವೇ ತೆರೆಗೆ ಬರಬೇಕಿತ್ತು. ಕೊನೆ ಕ್ಷಣದಲ್ಲಿ ಮುಂದೂಡಲಾಗಿದ್ದ ಚಿತ್ರ ಇಂದು (ಜ.17) ತೆರೆ ಕಾಣುತ್ತಿದೆ.

'ನಾನು ಈ ಸಿನಿಮಾ ಮಾಡಬೇಕೆಂದು ನಿರ್ಧರಿಸಿದಾಗ ಮೊದಲು ಹಾಡುಗಳನ್ನು ರೆಡಿ ಮಾಡಿಕೊಂಡೆ. ಒಟ್ಟು ಆರು ಹಾಡುಗಳು ಚಿತ್ರದಲ್ಲಿದ್ದು, ಇವೇ ಚಿತ್ರಕ್ಕೆ ಆಹ್ವಾನ ಪತ್ರಿಕೆ. ರೇಷ್ಮೆ ಬೆಳೆಗಾರರ ಸಂಕಷ್ಟದ ಜೊತೆಗೆ ನವಿರಾದ ಪ್ರೇಮಕಥೆಯ ಚಿತ್ರವಿದು. ಕಿಟ್ಟಿ, ರಮ್ಯಾ ಜೋಡಿಯ 'ಸಂಜು ವೆಡ್ಸ್‌ ಗೀತಾ' ಹಿಟ್‌ ಆಗಿತ್ತು. ಅದೇ ರೀತಿ ಈ ಚಿತ್ರವನ್ನು ಜನ ಮೆಚ್ಚಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ. ನಮ್ಮ ನೆಲದ ಸೊಗಡಿನ ಚಿತ್ರ' ಎನ್ನುತ್ತಾರೆ ನಾಗಶೇಖರ್‌.

ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಶ್ರೀಧರ್‌ ವಿ. ಸಂಭ್ರಮ್‌ ಸಂಗೀತ ಚಿತ್ರಕ್ಕಿದೆ. ನಟ ಚೇತನ್‌ ಚಂದ್ರ, ರಾಗಿಣಿ ದ್ವಿವೇದಿ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಸಾಧು ಕೋಕಿಲ, ತಬಲಾ ನಾಣಿ, ಗಿಚ್ಚಿ ಗಿಲಿಗಿಲಿ ವಿನೋದ್‌, ಖಳನಟ ಸಂಪತ್‌ಕುಮಾರ್‌ ಸೇರಿದಂತೆ ಸಾಕಷ್ಟು ಕಲಾವಿದರು ತಾರಾಗಣದಲ್ಲಿದ್ದಾರೆ.

ಪವಿತ್ರ ಇಂಟರ್‌ನ್ಯಾಷನಲ್‌ ಮೂವೀಮೇಕರ್ಸ್‌ ಅಡಿಯಲ್ಲಿ ಛಲವಾದಿ ಕುಮಾರ್‌ ಚಿತ್ರವನ್ನು ನಿರ್ಮಿಸಿದ್ದಾರೆ.

ಕಣ್ಣಾ ಮುಚ್ಚೆ ಕಾಡೇ ಗೂಡೇ:

ರಾಘವೇಂದ್ರ ರಾಜಕುಮಾರ್‌ ಪ್ರಮುಖ ಪಾತ್ರದಲ್ಲಿ ನಟಿಸಿರುವ ಚಿತ್ರ 'ಕಣ್ಣಾ ಮುಚ್ಚೆ ಕಾಡೇ ಗೂಡೇ'. ಡಾರ್ಲಿಂಗ್‌ ಪ್ರೊಡಕ್ಷನ್ಸ್‌ ಅಡಿಯಲ್ಲಿ ಅನಿತಾ ವೀರೇಶ್‌ಕುಮಾರ್‌ ನಿರ್ಮಾಣ ಮಾಡಿದ್ದು, ಹಲವು ನಿರ್ದೇಶಕರ ಬಳಿ ಸಹಾಯಕರಾಗಿ ಅನುಭವ ಪಡೆದುಕೊಂಡಿರುವ ನಟರಾಜ್‌ ಕೃಷ್ಣೇಗೌಡ ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್‌ ಕಟ್‌ ಹೇಳಿದ್ದಾರೆ.

'ಕತೆ ಒಂದು ಕೊಲೆಯ ಸುತ್ತ ನಡೆಯುತ್ತದೆ. ಅದನ್ನು ಕಂಡು ಹಿಡಿಯಲು ಖಾಸಗಿ, ಸರ್ಕಾರಿ ಪಡೆ ಮುಂದೆ ಬರುತ್ತದೆ. ಇದರ ನಡುವೆ ಹುಡುಗಿಯೊಬ್ಬಳು ಸಮಸ್ಯೆಯಲ್ಲಿ ಸಿಲುಕಿಕೊಳ್ಳುತ್ತಾಳೆ. ಅಂತಿಮವಾಗಿ ಅಪರಾಧಿ ಸಿಗುತ್ತಾನಾ? ಆಕೆ ಕಷ್ಟದಿಂದ ಹೊರ ಬರುತ್ತಾಳಾ? ಎಂಬುದನ್ನು ಸಸ್ಪೆನ್ಸ್‌, ಥ್ರಿಲ್ಲರ್‌ ರೀತಿಯಲ್ಲಿ ತೋರಿಸಿದ್ದೇವೆ' ಎಂದಿದ್ದಾರೆ ನಿರ್ದೇಶಕರು.

ಅಥರ್ವಪ್ರಕಾಶ್‌ಗೆ ಪ್ರಾರ್ಥನಾ ಜೋಡಿಯಾಗಿದ್ದಾರೆ. ನಿವೃತ್ತ ವೈದ್ಯರಾಗಿ ರಾಘವೇಂದ್ರ ರಾಜ್‌ಕುಮಾರ್‌ ನಟಿಸಿದ್ದಾರೆ. ಜ್ಯೋತಿಷ್‌ ಶೆಟ್ಟಿ, ದೀಪಕ್‌ ರೈ, ಅರವಿಂದ ಬೋಳಾರ್‌ ಮುಂತಾದವರು ಅಭಿನಯಿಸಿದ್ದಾರೆ. ದೀಪಕ್‌ಕುಮಾರ್‌.ಜೆ.ಕೆ ಛಾಯಾಚಿತ್ರಗ್ರಹಣವಿದೆ. ಮಂಗಳೂರು, ಬೆಂಗಳೂರಿನ ಹಲವೆಡೆ ಚಿತ್ರೀಕರಣಗೊಂಡಿದೆ. ❖

ಕಣ್ಮಣಿಯ ನೆನೆದ ರಾಜು ಜೇಮ್ಸ್‌ ಬಾಂಡ್‌

ಗುರುನಂದನ್‌ ನಾಯಕರಾಗಿ ನಟಿಸಿರುವ 'ರಾಜು ಜೇಮ್ಸ್‌ ಬಾಂಡ್‌' ಚಿತ್ರದ 'ಕಣ್ಮಣಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದೀಪಕ್‌ ಮಧುವನಹಳ್ಳಿ ನಿರ್ದೇಶನದ ಚಿತ್ರ ಫೆಬ್ರುವರಿ 14 ರಂದು ತೆರೆಗೆ ಬರಲಿದೆ.

ಅನೂಪ್‌ ಸೀಳಿನ್‌ ಸಂಗೀತ ನೀಡಿರುವ ಈ ಹಾಡನ್ನು ಸಂಜಿತ್‌ ಹೆಗಡೆ ಹಾಡಿದ್ದಾರೆ. ಜ್ಯೋತಿ ವ್ಯಾಸರಾಜ್‌ ಸಾಹಿತ್ಯವಿದೆ. 'ರಾಜಕುಮಾರ್‌ ಅಭಿನಯಿಸಿದ್ದ 'ಜೇಮ್ಸ್‌ ಬಾಂಡ್‌' ಚಿತ್ರದ ಕಥೆಯೇ ಬೇರೆ. ನಮ್ಮ ಚಿತ್ರದ ಕಥೆಯೇ ಬೇರೆ. ನಾಯಕ ಹಾಗೂ ನಾಯಕಿ ಲಂಡನ್‌ ಸುತ್ತಮುತ್ತಲಿನ ಪರಿಸರದಲ್ಲಿ ತಿರುಗಾಡುವ ಸನ್ನಿವೇಶದಲ್ಲಿ ಚಿತ್ರೀಕರಣವಾಗಿರುವ ಪ್ರೇಮಗೀತೆಯಿದು. ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

'ನಮ್ಮ ಚಿತ್ರ ಡಿಸೆಂಬರ್‌ ಕೊನೆಯಲ್ಲೇ ಬಿಡುಗಡೆಯಾಗಬೇಕಿತ್ತು. ಆದರೆ ಎರಡು ದೊಡ್ಡ ಚಿತ್ರಗಳು ಅದೇ ಸಮಯಕ್ಕೆ ಬಿಡುಗಡೆಯಾದ್ದುದ್ದರಿಂದ ನಮ್ಮ ಚಿತ್ರದ ಬಿಡುಗಡೆ ಸ್ವಲ್ಪ ಮುಂದೆ ಹೋಯಿತು. ಈ ಹಾಡಿನಲ್ಲಿ ನಾನು ಚೆನ್ನಾಗಿ ನೃತ್ಯ ಮಾಡಿದ್ದೇನೆ ಎಂದರೆ ಅದಕ್ಕೆ ಮುರಳಿ ಮಾಸ್ಟರ್‌ ಕಾರಣ' ಎಂದರು ಗುರುನಂದನ್‌.

'ನೇಪಾಳಿ ಭಾಷೆಗೂ ನಮ್ಮ ಚಿತ್ರದ ರೈಟ್ಸ್‌ ಮಾರಾಟವಾಗಿದೆ. ಕರ್ನಾಟಕದಲ್ಲಿ ಸತ್ಯ ಪಿಕ್ಚರ್ಸ್‌ ಮೂಲಕ ಚಿತ್ರ ಬಿಡುಗಡೆಯಾಗುತ್ತಿದೆ' ಎಂದರು ನಿರ್ಮಾಪಕರು.

ಸಾಧು ಕೋಕಿಲ, ಅಚ್ಯುತ್‌ಕುಮಾರ್‌, ಚಿಕ್ಕಣ್ಣ, ರವಿಶಂಕರ್‌, ಜೈಜಗದೀಶ್‌ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ರುದ್ರ ಗರುಡ.. ಟ್ರೇಲರ್‌ ಬಿಡುಗಡೆ

ರಿಷಿ ನಾಯಕರಾಗಿ ನಟಿಸಿರುವ 'ರುದ್ರ ಗರುಡ ಪುರಾಣ' ಚಿತ್ರದ ಟ್ರೇಲರ್‌ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಧನಂಜಯ ಟ್ರೇಲರ್‌ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ನಂದೀಶ್‌ ನಿರ್ದೇಶನದ ಚಿತ್ರ ಜನವರಿ 24ರಂದು ತೆರೆಗೆ ಬರಲಿದೆ.

ಪೊಲೀಸ್‌ ಅಧಿಕಾರಿಯಾಗಿರುವ ನಾಯಕ ರಿಷಿ ಕೆಲವು ಪ್ರಕರಣಗಳನ್ನು ಬೆನ್ನು ಹತ್ತಿ ಹೋಗುತ್ತಾರೆ. ಕಣ್ಮರೆಯಾದ ಶಾಸಕನ ಮಗನ ಪತ್ತೆ ಹಚ್ಚುವ ಪ್ರಕರಣದ ಸುತ್ತ ಕಥೆ ಸಾಗುತ್ತದೆ. ಜೊತೆಗೆ ನಾಯಕನ ಪ್ರೇಮ ಪಯಣವೂ ಸಾಗುತ್ತದೆ. ಮಾಸ್‌ ಅಂಶಗಳೊಂದಿಗೆ ಪ್ರೀತಿ, ಹಾಸ್ಯವನ್ನು ಸೇರಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಟ್ರೇಲರ್‌ನಿಂದ ಗೊತ್ತಾಗುತ್ತಿದೆ.

'ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಹಾಗೂ ಟೀಸರ್‌ ಮೂಲಕ ನಮ್ಮ ಚಿತ್ರ ಜನರ ಮನ ತಲುಪಿದೆ. ಟ್ರೇಲರ್‌ ಕೂಡ ಚೆನ್ನಾಗಿದೆ. ಚಿತ್ರಕ್ಕಾಗಿ ನಿರ್ದೇಶಕರ ಶ್ರಮ ಸಾಕಷ್ಟಿದೆ. ಈ ಚಿತ್ರದಲ್ಲಿ ಪೊಲೀಸ್‌ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ' ಎಂದರು ರಿಷಿ.

ಅಶ್ವಿನಿ ಆರ್ಟ್ಸ್‌ ಲಾಂಛನದಲ್ಲಿ ಅಶ್ವಿನಿ ಲೋಹಿತ್‌ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಪ್ರಿಯಾಂಕ ಕುಮಾರ್‌ ಚಿತ್ರದ ನಾಯಕಿ. ಸಂದೀಪ್‌ ಕುಮಾರ್‌ ಛಾಯಾಚಿತ್ರಗ್ರಹಣ, ಕೆ.ಪಿ ಸಂಗೀತ, ರಘು ನಿಡವಳ್ಳಿ ಸಂಭಾಷಣೆ ಚಿತ್ರಕ್ಕಿದೆ. ಶಿವರಾಜ್‌ ಕೆ.ಆರ್‌ ಪೇಟೆ, ಅಶ್ವಿನಿ ಗೌಡ, ಪ್ರಭಾಕರ್‌, ರಾಮ್‌ ಪವನ್‌ ಮುಂತಾದವರು ತಾರಾಗಣದಲ್ಲಿದ್ದಾರೆ. ❖

ಪ್ರಿಯಾಂಕ ಕುಮಾರ್‌, ರಿಷಿ

ಶಿವರಾತ್ರಿಗೆ ಶಭಾಷ್‌ ಬಡ್ಡಿಮಗ್ನೆ

ಪ್ರಮೋದ್‌ ಶೆಟ್ಟಿ ನಾಯಕನಾಗಿ ನಟಿಸಿರುವ 'ಶಭಾಷ್‌ ಬಡ್ಡಿಮಗ್ನೆ' ಚಿತ್ರ ಶಿವರಾತ್ರಿಯಂದು(ಫೆ.26) ತೆರೆಗೆ ಬರಲು ಸಜ್ಜಾಗಿದೆ. ಬಿ.ಎಸ್‌.ರಾಜಶೇಖರ್‌ ನಿರ್ದೇಶನದ ಚಿತ್ರವನ್ನು ಚೈತ್ರಾ ಪ್ರಕಾಶ್‌ ನಿರ್ಮಿಸಿದ್ದಾರೆ.

'ಅಶ್ವಿನಿ ಪುನೀತ್‌ ರಾಜಕುಮಾರ್‌ ಒಡೆತನದ ಪಿಆರ್‌ಕೆ ಆಡಿಯೊ ಸಂಸ್ಥೆ ಚಿತ್ರದ ಹಾಡುಗಳ ಹಕ್ಕು ಖರೀದಿಸಿದೆ. ಜನವರಿ 26ರಂದು ಮೊದಲ ಹಾಡು ಬಿಡುಗಡೆ ಮಾಡುತ್ತಿದ್ದೇವೆ. ಕೆ.ಕಲ್ಯಾಣ್‌ ಮತ್ತು ಪ್ರಮೋದ್‌ ಮರವಂತೆ ಸಾಹಿತ್ಯ, ಎಸ್‌.ಪಿ.ಭೂಪತಿ ಹಾಗೂ ಪ್ರಶಾಂತ್‌ ಸಿದ್ಧಿ ಸಂಗೀತದಲ್ಲಿ, ಸಿದ್ದಾರ್ಥ್‌ ಬೆಳ್ಮಣ್ಣು, ಪೃಥ್ವಿ ಭಟ್‌, ಅಭಿಷೇಕ್‌, ಐಶ್ವರ್ಯ ರಂಗರಾಜನ್‌, ನವೀನ್‌ ಸಜ್ಜು ಹಾಡುಗಳಿಗೆ ಧ್ವನಿಯಾಗಿದ್ದಾರೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಆದ್ಯಪ್ರಿಯ ಚಿತ್ರದ ನಾಯಕಿ. ಉಳಿದಂತೆ ಶಂಕರ್‌ ಅಶ್ವಥ್‌, ಮೂಗು ಸುರೇಶ್‌, ಮಿತ್ರ, ಪ್ರಕಾಶ್‌ ತುಮ್ಮಿನಾಡು ಮುಂತಾದವರು ಅಭಿನಯಿಸಿದ್ದಾರೆ. ಚಿತ್ರಕ್ಕೆ ಅಣಜಿ ನಾಗರಾಜ್‌ ಛಾಯಾಚಿತ್ರಗ್ರಹಣ, ಶ್ರೀನಿವಾಸ್‌ ಕಲಾಲ್‌ ಸಂಕಲನವಿದೆ. ❖

ಆದ್ಯಪ್ರಿಯ, ಪ್ರಮೋದ್‌ಶೆಟ್ಟಿ

‘ಬ್ರ್ಯಾಂಡ್ ಬೆಂಗಳೂರು’ ಅಡಿ ಅಭಿವೃದ್ಧಿ • ಸಚಿವ ಸಂಪುಟ ಒಪ್ಪಿಗೆ

ಆರೋಗ್ಯ ಸೌಲಭ್ಯ ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರ್ಯಾಂಡ್ ಬೆಂಗಳೂರು’ ಯೋಜನೆ ಅಡಿ ಬಿಬಿಎಂಪಿ ಆರೋಗ್ಯ ಇಲಾಖೆಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಬಿಬಿಎಂಪಿಯ ಈಗಿರುವ 13 ಹೆರಿಗೆ ಆಸ್ಪತ್ರೆಗಳನ್ನು 30 ಹಾಸಿಗೆಗಳ ಮತ್ತು 5 ಆಸ್ಪತ್ರೆಗಳನ್ನು 50 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು. ಅಲ್ಲದೇ, ಮೂರು ಆಸ್ಪತ್ರೆಗಳಲ್ಲಿ ಶಿಥಿಲಗೊಂಡಿರುವ ಹಳೆಯ ಕಟ್ಟಡಗಳ ಬದಲಿಗೆ ಹೊಸ ಕಟ್ಟಡಗಳ ನಿರ್ಮಾಣ ಮಾಡಲಾಗುವುದು. ಒಟ್ಟು ಹಾಸಿಗೆಗಳ ಸಂಖ್ಯೆಯನ್ನು 852ರಿಂದ 1,122ಕ್ಕೆ ಹೆಚ್ಚಿಸಲಾಗುವುದು ಎಂದು ತಿಳಿಸಿದರು.

ಅಲ್ಲದೇ, 26 ದಂತ ಚಿಕಿತ್ಸಾಲಯಗಳು, ಏಳು ಫಿಜಿಯೋಥೆರಪಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇವುಗಳು ಸುಸಜ್ಜಿತ ವೈದ್ಯಕೀಯ ಉಪಕರಣಗಳನ್ನು ಹೊಂದಿರಲಿವೆ. ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ಬೆಂಗಳೂರಿನ ನಾಗರಿಕರಿಗೆ ಹೆಚ್ಚುವರಿ ಆರೋಗ್ಯ ಸೇವೆಗಳನ್ನು ಒದಗಿಸಲಾಗುವುದು. ಇದಕ್ಕಾಗಿ ₹413.71 ಕೋಟಿ ವೆಚ್ಚ ಮಾಡುವ ಕ್ರಿಯಾ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ ಎಂದು ಹೇಳಿದರು.

ಮನೆಗಳ ನಿರ್ಮಾಣ: ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಸ್ಥಗಿತಗೊಳಿಸಿದ್ದ 61,894 ಮನೆಗಳ ನಿರ್ಮಾಣ ಯೋಜನೆಯನ್ನು ಮತ್ತೆ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ₹2,643 ಕೋಟಿ ಅನುದಾನ ನೀಡಲು ಒಪ್ಪಿಗೆ ನೀಡಲಾಗಿದೆ ಎಂದು ಪಾಟೀಲ ತಿಳಿಸಿದರು.

ಜಾತಿವಾರು ಜನಗಣತಿ ವರದಿ ಮೇಲಿನ ಚರ್ಚೆ ಮುಂದೂಡಿಕೆ

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಜನಗಣತಿ) ವರದಿ ಕುರಿತ ವಿಷಯ ಸಭೆಯ ಕಾರ್ಯಸೂಚಿಯಲ್ಲಿದ್ದರೂ ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಆಡಳಿತಾತ್ಮಕ ಕಾರಣಕ್ಕಾಗಿ ಮುಂದೂಡುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಯಿತು ಎಂದು ಎಚ್‌.ಕೆ.ಪಾಟೀಲ ಹೇಳಿದರು.

ಸಚಿವ ಸಂಪುಟದ ಮುಂದಿನ ಸಭೆಯಲ್ಲಿ ಈ ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ. ಮುಂದೂಡಿಕೆಗೆ ರಾಜಕೀಯ ಕಾರಣಗಳಿಲ್ಲ. ಸಂಪುಟ ಸಭೆಗೂ ಒಂದು– ಅಥವಾ ಎರಡು ಗಂಟೆಗೂ ಮುನ್ನ ಮುಚ್ಚಿದ ಲಕೋಟೆಯಲ್ಲಿರುವ ವರದಿಯನ್ನು ತೆರೆಯಬೇಕು. ಆ ಬಳಿಕ ಚರ್ಚೆ ಆಗಬೇಕು ಎಂದು ವಿವರಿಸಿದರು.

ಆನಂದರಾವ್ ವೃತ್ತದಲ್ಲಿ ಅವಳಿ ಗೋಪುರ

ಆನಂದರಾವ್ ವೃತ್ತದಲ್ಲಿರುವ ಎನ್‌.ಎಚ್‌.ಕಾಂಪೌಂಡ್ ಆವರಣದಲ್ಲಿರುವ 8.78 ಎಕರೆ ವಿಸ್ತೀರ್ಣ ನಿವೇಶನ ಲೋಕೋಪಯೋಗಿ ಇಲಾಖೆ ವಶಕ್ಕೆ ಪಡೆದು ಅವಳಿ ಗೋಪುರ ನಿರ್ಮಾಣ ಯೋಜನೆ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಲಾಗಿದೆ.

ಇದಕ್ಕಾಗಿ ಆರ್ಥಿಕ ಹೂಡಿಕೆಗೆ ವ್ಯವಹಾರ ಸಲಹೆಗಾರರನ್ನು ನೇಮಕ ಮಾಡಿ ಮತ್ತೊಮ್ಮೆ ಸಚಿವ ಸಂಪುಟದ ಮುಂದೆ ಪ್ರಸ್ತಾವ ಮಂಡಿಸಲು ಸಂಪುಟ ಸಭೆ ನಿರ್ಣಯಿಸಿದೆ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ಮುಂದುವರಿದ ‘ಲೋಕಾ’ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಸಹಾಯಕ ಕಂದಾಯ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿಯು ಗುರುವಾರವೂ ಮುಂದುವರೆದಿದ್ದು, ನಗರದ ವಿವಿಧ ಭಾಗದಲ್ಲಿರುವ 12 ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಶೋಧ ನಡೆಸಲಾಗಿದೆ.

‘ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್‌.ಫಣೀಂದ್ರ ಅವರು ಡಾ.ಟಿಸಿಎಂ ರಾಯನ್ ರಸ್ತೆಯಲ್ಲಿ ರುವ ಗಾಂಧಿನಗರ ಉಪ ವಿಭಾಗದ ಎಆರ್‌ಒ ಕಚೇರಿ, ವಸಂತನಗರದ ತಿಮ್ಮಯ್ಯ ರಸ್ತೆಯಲ್ಲಿರುವ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿ, ವಿಜಯನಗರದ ಎಂ.ಸಿ ಬಡಾವಣೆಯಲ್ಲಿರುವ ಗೋವಿಂದ ರಾಜನಗರ ಉಪ ವಿಭಾಗದ ಎಆರ್‌ಒ ಕಚೇರಿ ಮತ್ತು ತಿಮ್ಮಯ್ಯ ರಸ್ತೆಯಲ್ಲಿರುವ ವಸಂತನಗರ ಉಪ ವಿಭಾಗದ ಎಆರ್‌ಒ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸಿದರು’ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್‌.ಫಣೀಂದ್ರ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು

‘ಸಿಬ್ಬಂದಿ ಕಚೇರಿಯಲ್ಲಿ ಇಲ್ಲದೇ ಇರುವುದು, ಹಾಜರಾತಿ ಪುಸ್ತಕ, ನಗದು ವಹಿ, ಸಿಬ್ಬಂದಿ ಚಲನ–ವಲನ ವಹಿಗಳನ್ನು ನಿರ್ವಹಣೆ ಮಾಡದಿರುವುದು ಪತ್ತೆಯಾಯಿತು. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಉಪ ಲೋಕಾಯುಕ್ತರು, ಲಿಖಿತ ವಿವರಣೆ ನೀಡುವಂತೆ ಸೂಚಿಸಿದರು. ಲೋಪಕ್ಕೆ ಕಾರಣವಾದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು’ ಎಂದು ಮಾಹಿತಿ ನೀಡಿವೆ.

ಈಚೆಗೆ 30 ಎಆರ್‌ಒ ಕಚೇರಿ ಮತ್ತು 24 ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗಳ ಮೇಲೆ ಲೋಕಾಯುಕ್ತವು ದಾಳಿ ನಡೆಸಿತ್ತು. ಅಕ್ರಮ ಪತ್ತೆಯಾಗಿರುವಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ

ಬಸ್‌ಗಳ ನಡುವೆ ಪೈಪೋಟಿ: ಬೈಕ್ ಸವಾರ, ಮಗು ಬಲಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಹಿಂದೂಪುರ- ಯಲಹಂಕ ರಾಜ್ಯ ಹೆದ್ದಾರಿಯ ತಪಸೀಹಳ್ಳಿ ಬಳಿ ಗುರುವಾರ ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಎರಡು ಬಸ್‌ಗಳ ನಡುವೆ ಸಿಕ್ಕಿ ಬೈಕ್ ಸವಾರ ಮತ್ತು ಬಾಲಕಿ ಮೃತಪಟ್ಟಿದ್ದಾರೆ.

ಬೈಕ್ ಸವಾರ ತಾಲ್ಲೂಕಿನ ಕೆಳಗಿನ ಜೋಗಹಳ್ಳಿ ನಿವಾಸಿ ವೆಂಕಟೇಶ್ ಮೂರ್ತಿ(31), ಹಿಂಬದಿಯಲ್ಲಿ ಕುಳಿತಿದ್ದ ಮೋಕ್ಷ (8) ಮೃತರು.

ತಂಗಿ ಮಗಳನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದ ವೆಂಕಟೇಶ್ ಮೂರ್ತಿ ಮೇಲೆ ಬಸ್ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟರೆ, ಹಿಂಬದಿಯಲ್ಲಿ ಕುಳಿತಿದ್ದ ಮೋಕ್ಷ ಗಾಯಗೊಂಡು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಹಿಂಬದಿಯಲ್ಲಿ ಕುಳಿತಿದ್ದ ನರಸಮ್ಮ ಹಾಗೂ ಅವರ ಮಗು ಲಾವಣ್ಯ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪ್ರೀಮಿಯಂ ಎಫ್‌ಎಆರ್‌ಗೆ ಶೇ 50ರಷ್ಟು ಶುಲ್ಕ

ಮಾರ್ಗಸೂಚಿ ದರದಂತೆ ಶುಲ್ಕ ನಿಗದಿ • ಹೊಸ ನಿಯಮಗಳ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನದ ಮಾರ್ಗಸೂಚಿ ದರದ ಶೇ 50ರಷ್ಟು ಶುಲ್ಕ ಪಾವತಿಸಿಕೊಂಡು, ಶೇ 60ರವರೆಗೂ ಪ್ರೀಮಿಯಂ ಎಫ್‌ಎಆರ್ ನೀಡಲು ಅವಕಾಶ ಕಲ್ಪಿಸಿ ನಗರಾಭಿವೃದ್ಧಿ ಇಲಾಖೆ ಕರಡು ಅಧಿಸೂಚನೆ ಹೊರಡಿಸಿದೆ.

ವಿಧಾನಮಂಡಲದಲ್ಲಿ ಅಂಗೀಕಾರವಾಗಿದ್ದ ‘ಪ್ರೀಮಿಯಂ ನೆಲ ವಿಸ್ತೀರ್ಣ ಅನುಪಾತ’ವನ್ನು (ಪ್ರೀಮಿಯಂ ಎಫ್‌ಎಆರ್) ಖರೀದಿ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸುವ ಮಸೂದೆಯನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಲಾಗಿತ್ತು. ಹಲವು ಪ್ರಶ್ನೆಗಳನ್ನು ಕೇಳಿ, ರಾಜ್ಯಪಾಲರು ಸರ್ಕಾರಕ್ಕೆ ಮಸೂದೆಯನ್ನು ವಾಪಸ್ ಕಳುಹಿಸಿದ್ದರು. ಅದಕ್ಕೆ ಉತ್ತರ ನೀಡುವ ಬದಲು ಹೊಸ ನಿಯಮಗಳನ್ನು ರೂಪಿಸಿ, ನಗರಾಭಿವೃದ್ಧಿ ಇಲಾಖೆ ಅಧಿಸೂಚನೆಯನ್ನು ಹೊರಡಿಸಿದೆ. ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಒಂದು ತಿಂಗಳ ಅವಕಾಶ ನೀಡಲಾಗಿದೆ.

‘ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ–2015’ರ ಸೆಕ್ಷನ್ 13–ಇಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದ್ದು, ಪ್ರೀಮಿಯಂ ಎಫ್‌ಎಆರ್‌ಗಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್–2015ರ ವಲಯ ನಿಯಮಗಳನ್ನು ಬದಲಾಯಿಸಲಾಗಿದೆ.

ನಕ್ಷೆ ಅನುಮೋದನೆಗೊಂಡು ಕಟ್ಟಡ ನಿರ್ಮಾಣ ಮಾಡಿರುವವರ ಹಾಗೂ ನಿರ್ಮಾಣ ಮಾಡುತ್ತಿರುವವರು ‘ಪ್ರೀಮಿಯಂ ಎಫ್‌ಎಆರ್’ ಪಡೆದುಕೊಂಡು, ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಬಹುದಾಗಿದೆ. ಎಫ್‌ಎಆರ್ ಅನ್ನು ಆ ಕಟ್ಟಡದಲ್ಲಿಯೇ ಉಪಯೋಗಿಸಿಕೊಳ್ಳಬೇಕಾಗಿದ್ದು, ಯಾರಿಗೂ ವರ್ಗಾಯಿಸುವಂತಿಲ್ಲ.

ಕಟ್ಟಡ ನಿರ್ಮಿಸುವವರು ಮಾರ್ಗಸೂಚಿ ದರದನ್ವಯ ಶುಲ್ಕ ಪಾವತಿಸಿ ಪ್ರೀಮಿಯಂ ಎಫ್‌ಎಆರ್‌ಗಳನ್ನು ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಪಡೆದುಕೊಳ್ಳಬಹುದು. ಈ ಮೂಲಕ ಕಟ್ಟಡದ ನಿವೇಶನದ ಅಳತೆಗೆ ನಿಗದಿಪಡಿಸಿದ ಎಫ್‌ಎಆರ್‌ಗಿಂತ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಬಹುದು. ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವ ಸಕ್ಷಮ ಪ್ರಾಧಿಕಾರದ ಅನುಮೋದಿತ ಮಾಸ್ಟರ್ ಪ್ಲಾನ್‌ನ ವಲಯ ನಿಯಮಗಳ ಅನ್ವಯವೇ ಪ್ರೀಮಿಯಂ ಎಫ್‌ಎಆರ್‌ಗೆ ಅನುಮತಿ ನೀಡಲಾಗುತ್ತದೆ.

9 ಮೀಟರ್‌ನಿಂದ 12 ಮೀಟರ್‌ವರೆಗಿನ ಅಗಲದ ರಸ್ತೆ ಹೊಂದಿರುವ ಕಟ್ಟಡಗಳ ನಿರ್ಮಿತ ಪ್ರದೇಶಕ್ಕಾನುಗುಣವಾಗಿ ಶೇ 20ರಷ್ಟು ಪ್ರೀಮಿಯಂ ಎಫ್‌ಎಆರ್ ನೀಡಲಾಗುತ್ತದೆ. 12 ಮೀಟರ್‌ನಿಂದ 18 ಮೀಟರ್ ಅಗಲದ ರಸ್ತೆ ಹೊಂದಿರುವ ಕಟ್ಟಡಗಳಿಗೆ ಶೇ 40 ಹಾಗೂ 18 ಮೀಟರ್‌ಗೂ ಹೆಚ್ಚಿನ ಅಗಲದ ರಸ್ತೆ ಹೊಂದಿರುವ ಕಟ್ಟಡಗಳು ಶೇ 60ರಷ್ಟು ಗರಿಷ್ಠ ಪ್ರೀಮಿಯಂ ಎಫ್‌ಎಆರ್ ಪಡೆಯಬಹುದು. ಪ್ರೀಮಿಯಂ ಎಫ್‌ಎಆರ್ ಜೊತೆಗೆ ಟಿಡಿಆರ್ ಅನ್ನೂ ಪಡೆಯಬಹುದಾಗಿದೆ ಎಂದು ನಿಯಮಗಳಲ್ಲಿ ವಿವರಿಸಲಾಗಿದೆ.

ಪ್ರೀಮಿಯಂ ಎಫ್‌ಎಆರ್ ಪಡೆದರೂ, ಕಟ್ಟಡದ ಅನುಮೋದಿತ ವಿಸ್ತೀರ್ಣಕ್ಕಿಂತ ಶೇ 40ರಷ್ಟು ಮಾತ್ರ ಹೆಚ್ಚುವರಿಯಾಗಿ ನಿರ್ಮಿಸಬಹುದು. ಉಳಿದಿದ್ದನ್ನು ಟಿಡಿಆರ್ ಪಡೆಯುವುದಕ್ಕೆ ಅವಕಾಶವಿದ್ದು, ಇದನ್ನು ಮಾರಾಟ ಮಾಡಿಕೊಳ್ಳಲೂ ಹೊಸ ನಿಯಮದಲ್ಲಿ ಅನುವು ಮಾಡಿಕೊಡಲಾಗಿದೆ.

ಸೆಟ್‌ಬ್ಯಾಕ್‌ನಿಂದ ವಿನಾಯಿತಿ!

‘ಪ್ರೀಮಿಯಂ ಎಫ್‌ಎಆರ್ ಪಡೆದಾಗ ಕಟ್ಟಡದ ಎತ್ತರ ಹೆಚ್ಚಾಗುತ್ತದೆ. ಇದಕ್ಕೆ ಅಗತ್ಯವಾದ ರಚನಾತ್ಮಕ ವಿನ್ಯಾಸ ಹಾಗೂ ಸದೃಢತೆಯನ್ನು ಕಟ್ಟಡ ಹೊಂದಿರುವಂತೆ ನೋಡಿಕೊಳ್ಳುವುದು ಮಾಲೀಕನ ಕರ್ತವ್ಯವಾಗಿರುತ್ತದೆ. ಪ್ರೀಮಿಯಂ ಎಫ್‌ಎಆರ್ ಪಡೆದು ಹೆಚ್ಚುವರಿ ಅಂತಸ್ತು ನಿರ್ಮಿಸಿದಾಗ ಉಂಟಾಗುವ ಸೆಟ್‌ಬ್ಯಾಕ್‌ನಿಂದ ವಿನಾಯಿತಿ ನೀಡಲಾಗುತ್ತದೆ’ ಎಂದು ನಗರ ಯೋಜನೆ ಇಲಾಖೆ ಅಧಿಕಾರಿಗಳು ತಿಳಿಸಿದರು.

ಪ್ರೀಮಿಯಂ ಎಫ್‌ಎಆರ್ ವ್ಯವಸ್ಥೆಯಿಂದ 30 ಅಡಿx 40 ಅಡಿ ಅಥವಾ 40 ಅಡಿx 60 ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗಿರುವ ಕಟ್ಟಡಗಳಿಗೆ ಅನುಕೂಲವಾಗುವುದಿಲ್ಲ. ಅತಿಹೆಚ್ಚು ವಿಸ್ತೀರ್ಣದಲ್ಲಿ ನಿರ್ಮಾಣವಾಗಿರುವ ಅಪಾರ್ಟ್‌ಮೆಂಟ್‌ಗಳಿಗೇ ‘ಪ್ರೀಮಿಯಂ ಎಫ್‌ಎಆರ್’ ಅತ್ಯಂತ ಉಪಯೋಗವಾಗಲಿದೆ.

3 ಬಿಎಚ್‌ಕೆ, 4 ಬಿಎಚ್‌ಕೆ ವಿಲ್ಲಾಗಳ ಮಾರಾಟ: ಬಿಡಿಎ

ಹುಣ್ಣಿಗೆರೆ ವಿಲ್ಲಾ ಹರಾಜಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹುಣ್ಣಿಗೆರೆ ವಸತಿ ಯೋಜನೆ ಅಡಿ ನಿರ್ಮಿಸಿರುವ 80 ವಿಲ್ಲಾಗಳನ್ನು ಹರಾಜು ಮೂಲಕ ಮಾರಾಟ ಮಾಡಲು ನಿರ್ಧರಿಸಿದೆ.

ಬೆಂಗಳೂರು–ಮೈಸೂರು ರಸ್ತೆಗೆ ಸಮೀಪವಿರುವ ಕಣಿಮಿಣಿಕೆ ವಸತಿ ಯೋಜನೆ ಫ್ಲ್ಯಾಟ್‌ಗಳ ಹರಾಜು ಪ್ರಕ್ರಿಯೆಗೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ಬಂದ ಕಾರಣ ಈ ನಿರ್ಧಾರಕ್ಕೆ ಬರಲಾಗಿದೆ. ತುಮಕೂರು ರಸ್ತೆ ಮತ್ತು ಮಾಗಡಿ ರಸ್ತೆಯ ಮಧ್ಯೆ ದಾಸನಪುರ ಹೋಬಳಿಯಲ್ಲಿ 322 ವಿಲ್ಲಾ ನಿರ್ಮಿಸಲಾಗಿದೆ.

ಹುಣ್ಣಿಗೆರೆ ಯೋಜನೆಯಡಿ 1 ಬಿಎಚ್‌ಕೆ, 2 ಬಿಎಚ್‌ಕೆ, 3 ಬಿಎಚ್‌ಕೆ ಹಾಗೂ 4 ಬಿಎಚ್‌ಕೆ ಮಾದರಿಯಲ್ಲಿ ಪ್ರತ್ಯೇಕ ಮನೆಗಳನ್ನು ನಿರ್ಮಿಸಿದ್ದರೂ 3 ಬಿಎಚ್‌ಕೆ (150) ಮತ್ತು 4ಬಿಎಚ್‌ಕೆ (172) ವಿಲ್ಲಾಗಳನ್ನು ಮಾತ್ರ ಇ-ಹರಾಜು ಮೂಲಕ ಮಾರಾಟ ಮಾಡಲಾಗುತ್ತದೆ.

‘ಹರಾಜು ಪ್ರಕ್ರಿಯೆ ಆರಂಭವಾಗಿದೆ. ಹುಣ್ಣಿಗೆರೆ ಯೋಜನೆಗೆ ಸ್ವಾಧೀನಾನುಭವ ಪ್ರಮಾಣಪತ್ರ ದೊರೆತಿದೆ. 3 ಹಾಗೂ 4 ಬಿಎಚ್‌ಕೆ ವಿಲ್ಲಾಗಳನ್ನು ಮಾರಾಟ ಮಾಡಲು ಇ -ಹರಾಜು ನಡೆಸಲಾಗುವುದು. 3 ಬಿಎಚ್‌ಕೆ ವಿಲ್ಲಾಗಳಿಗೆ ಬಿಡಿಎ ಮೂಲ ದರ ₹76.50 ಲಕ್ಷ ನಿಗದಿಪಡಿಸಿದೆ. 4 ಬಿಎಚ್‌ಕೆ ವಿಲ್ಲಾಗಳಿಗೆ ₹1.35 ಕೋಟಿ ನಿಗದಿಪಡಿಸಿದೆ. ಇ–ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಇದಕ್ಕೂ ಮೇಲ್ಪಟ್ಟ ಮೊತ್ತಕ್ಕೆ ಬಿಡ್ ಮಾಡಬಹುದು’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

‘ಬಿಡಿಎ ಶೀಘ್ರದಲ್ಲೇ ಇನ್ನೂ 80 ವಿಲ್ಲಾಗಳನ್ನು ಹರಾಜು ಹಾಕಲಿದ್ದು, ಅದರಲ್ಲಿ 50 ವಿಲ್ಲಾಗಳು 4ಬಿಎಚ್‌ಕೆ ಆಗಿವೆ. ವಿಲ್ಲಾಗಳನ್ನು ಹಂತ ಹಂತವಾಗಿ ಹರಾಜು ಮಾಡಲಾಗುವುದು’ ಎಂದರು.

ಅಚ್ಚುಕಟ್ಟಾದ ರಸ್ತೆ, ಪ್ರತಿ ಮನೆಗೂ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ, ಇ.ವಿ ಚಾರ್ಜಿಂಗ್ ಸೌಲಭ್ಯ, ಈಜು ಕೊಳ, ಮನರಂಜನಾ ಕೇಂದ್ರ, ಬ್ಯಾಡ್ಮಿಂಟನ್ ಕೋರ್ಟ್ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಒತ್ತುವರಿಯಾಗಿದ್ದ 19 ಎಕರೆ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಗುರುವಾರ ನಡೆಸಿದ ಕಾರ್ಯಾಚರಣೆಯಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಒತ್ತುವರಿಯಾಗಿದ್ದ 19 ಎಕರೆ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಾಚೋಹಳ್ಳಿ ಗ್ರಾಮದಲ್ಲಿ 16 ಎಕರೆ, ಕನ್ನಲ್ಲಿ ಗ್ರಾಮದಲ್ಲಿ 2 ಎಕರೆ ಮತ್ತು ಕೆಂಚನಪುರ ಗ್ರಾಮದಲ್ಲಿ 1 ಎಕರೆ ಪ್ರದೇಶವನ್ನು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿಗಿತ್ತು.

ಈ ಪ್ರದೇಶದಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ 19 ಎಕರೆ ಜಾಗವನ್ನು ಪ್ರಾಧಿಕಾರವು ತನ್ನ ವಶಕ್ಕೆ ತೆಗೆದುಕೊಂಡಿದೆ.

ಕೆಂಪೇಗೌಡ ಬಡಾವಣೆಯಲ್ಲಿ ಎಂ.ಎ.ಆರ್. ರಸ್ತೆಯು ಒಟ್ಟು 10.3 ಕಿ.ಮೀ. ಉದ್ದವಿದ್ದು, ಈ ಪೈಕಿ 8 ಕಿ.ಮೀ. ರಸ್ತೆಯು ಪೂರ್ಣಗೊಂಡಿದೆ. ಉಳಿದ 2 ಕಿ.ಮೀ. ರಸ್ತೆ ನಿರ್ಮಾಣಕ್ಕೆ ಗುರುತಿಸಿರುವ ಜಮೀನುಗಳ ಸ್ವಾಧೀನಕ್ಕೆ ಒದ್ದ ತಡೆಯಾಜ್ಞೆಯನ್ನು ನ್ಯಾಯಾಲಯವು ತೆರವುಗೊಳಿಸಿತ್ತು. ಹಾಗಾಗಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ, ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ಎಂದು ಬಿಡಿಎ ತಿಳಿಸಿದೆ.

ಬಿಡಿಎ ಎಸ್‌.ಪಿ, ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಕಾರ್ಯಪಡೆ ಹಾಗೂ ಸ್ಥಳೀಯ ಪೊಲೀಸರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಕ್ರಮವಾಗಿ ನಿರ್ಮಿಸಿದ್ದ ಮಳಿಗೆಗಳನ್ನು ಬಿಡಿಎ ಸಿಬ್ಬಂದಿ ಗುರುವಾರ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದರು

ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದ ಕೇಂದ್ರ ಸಚಿವ ವಿ. ಸೋಮಣ್ಣ

ನಗರಕ್ಕೆ ಇನ್ನೆರಡು ರೈಲು ಟರ್ಮಿನಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಮತ್ತು ನೆಲಮಂಗಲದಲ್ಲಿ ಇನ್ನೆರಡು ರೈಲು ಟರ್ಮಿನಲ್ ನಿರ್ಮಿಸುವ ಚಿಂತನೆ ಇದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಹೂಡಿ ಹಾಲ್ಟ್, ವೈಟ್‌ಫೀಲ್ಡ್, ಪಣತ್ತೂರು, ಮಾರತ್‌ಹಳ್ಳಿ, ಕಾರ್ಮೆಲರಾಂ, ಸಹಿತ ವಿವಿಧೆಡೆ ರೈಲ್ವೆ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಬೆಂಗಳೂರು ನಗರವು ವೇಗವಾಗಿ ಬೆಳೆಯುತ್ತಿದೆ. ವೈಟ್‌ಫೀಲ್ಡ್, ನೆಲಮಂಗಲ ಸಹಿತ ವಿವಿಧೆಡೆ ಜನದಟ್ಟಣೆ ವಿಪರೀತವಾಗಿದೆ. ವೈಟ್‌ಫೀಲ್ಡ್ ಕಡೆ ಜಮೀನು ಸಿಗುವುದು ಕಷ್ಟ ಆಗಿರುವುದರಿಂದ ದೇವನಹಳ್ಳಿ ಸಮೀಪ 400 ಎಕರೆಯಲ್ಲಿ ಟರ್ಮಿನಲ್ ನಿರ್ಮಿಸಲಾಗುವುದು. ಅದೇ ರೀತಿ ನೆಲಮಂಗಲದಲ್ಲಿ ಟರ್ಮಿನಲ್ ನಿರ್ಮಿಸಿದರೆ ತುಮಕೂರು ಸಹಿತ ಸುತ್ತಮುತ್ತಲಿನವರಿಗೆ ಅನುಕೂಲ ಆಗಲಿದೆ ಎಂದರು.

ಎರಡು ಪ್ಲಾಟ್‌ಫಾರ್ಮ್ ನಿರ್ಮಾಣ: ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ₹180 ಕೋಟಿ ವೆಚ್ಚದಲ್ಲಿ ಎರಡು ಹೆಚ್ಚುವರಿ ಪ್ಲಾಟ್‌ಫಾರ್ಮ್‌ಗಳನ್ನು ನಿರ್ಮಿಸಲಾಗುವುದು. ಕೆಎಸ್‌ಆರ್ ನಿಲ್ದಾಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ₹1200 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದಿಂದ ಸದ್ಯದಲ್ಲೇ ಒಪ್ಪಿಗೆ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಸ್ತೆ ಮೇಲ್ಸೇತುವೆ (ಆರ್‌ಒಬಿ), ರಸ್ತೆ ಕೆಳ ಸೇತುವೆ (ಆರ್‌ಯುಬಿ) ನಿರ್ಮಿಸುವ ಪ್ರದೇಶಗಳಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಕ್ರಮ ವಹಿಸಲಾಗುವುದು. ನೀರಿನ ದ್ವಾರಗಳನ್ನು (ವೆಂಟ್) ನಿರ್ಮಿಸಲು ಗಮನ ಹರಿಸಲಾಗುವುದು ಎಂದರು ಮಾಹಿತಿ ನೀಡಿದರು.

2027ರ ಮಾರ್ಚ್ ಒಳಗೆ ಬಿಎಸ್‌ಆರ್‌ಪಿ ರೈಲು: ಬೆಂಗಳೂರು ಉಪನಗರ ರೈಲು ಯೋಜನೆಯಡಿ ಎರಡು ಕಾರಿಡಾರ್‌ಗಳಲ್ಲಿ ಕಾಮಗಾರಿ ನಡೆಯುತ್ತಿದೆ. 2027ರ ಮಾರ್ಚ್ ಒಳಗೆ ಕಾಮಗಾರಿ ಪೂರ್ಣಗೊಂಡು ರೈಲು ಸಂಚರಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಸದ ಪಿ.ಸಿ. ಮೋಹನ್, ಶಾಸಕಿ ಎಸ್. ಮಂಜುಳಾ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಮಿತೇಶ್ ಕುಮಾರ್ ಸಿನ್ಹಾ, ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕ ಅಶುತೋಷ್ ಮಾಥುರ್, ಗತಿ ಶಕ್ತಿ ಘಟಕದ ಮುಖ್ಯ ಯೋಜನಾ ವ್ಯವಸ್ಥಾಪಕ ಗುಲ್ ಅಶ್ಫಾಕ್ ಮೊಹಮ್ಮದ್ ಜೊತೆಗಿದ್ದರು.

ಬೆಂಗಳೂರು ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈಲ್ವೆಗೆ ಸಂಬಂಧಿಸಿದ ಕಾಮಗಾರಿಗಳ ವಿವರವನ್ನು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅಧಿಕಾರಿಗಳಿಂದ ಪಡೆದರು

ಬೆಳ್ಳಂದೂರು ನಿಲ್ದಾಣಕ್ಕೆ ಪಣತ್ತೂರು ಹೆಸರು

ಬೆಳ್ಳಂದೂರು ರಸ್ತೆಯ ರೈಲು ನಿಲ್ದಾಣವನ್ನು 'ಪಣತ್ತೂರು ರೈಲು ನಿಲ್ದಾಣ' ಎಂದು ಮರುನಾಮಕರಣ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವ ವಿ. ಸೋಮಣ್ಣ ತಿಳಿಸಿದರು.

ಬೆಳ್ಳಂದೂರು ನಿಲ್ದಾಣಕ್ಕೆ ಭೇಟಿ ನೀಡಿದ ಸಚಿವರು ಹಳಿ ದ್ವಿಪಥಗೊಳಿಸುವ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದರು. 134ನೇ ಲೆವಲ್ ಕ್ರಾಸಿಂಗ್ ಅನ್ನು ಪರಿಶೀಲಿಸಿದರು. ಪಣತ್ತೂರಿನಲ್ಲಿ ಸೇತುವೆ ಕಾಮಗಾರಿ ವೀಕ್ಷಿಸಿದರು.

ಯಶವಂತಪುರ ನಿಲ್ದಾಣಕ್ಕೆ ಕೊಳೆಗೇರಿ ಜಾಗ?

ಯಶವಂತಪುರ ನಿಲ್ದಾಣಕ್ಕೆ ಬಂದು ಹೋಗುವ ರೈಲುಗಳ ಸಂಖ್ಯೆ ಹೆಚ್ಚಿರುವುದರಿಂದ ಪ್ಲಾಟ್‌ಫಾರ್ಮ್‌ಗಳ ಸಂಖ್ಯೆ ಹೆಚ್ಚಿಸುವ ಅಗತ್ಯವಿದೆ. ಅದಕ್ಕಾಗಿ ಪಕ್ಕದಲ್ಲಿ ಇರುವ ಕೊಳೆಗೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಈ ಜಾಗ ಸಿಕ್ಕಿದರೆ ನಾಲ್ಕೈದು ಪ್ಲಾಟ್‌ಫಾರ್ಮ್ ನಿರ್ಮಿಸಬಹುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ನಗರದ ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಜ.18ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯಗೊಳ್ಳಲಿದೆ.

ವಿಕ್ಟೋರಿಯಾ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕೆಲಸ ಹಮ್ಮಿಕೊಳ್ಳಲಾಗಿದೆ. ಇದರಿಂದಾಗಿ ಎಸ್‌ಜೆಪಿ ರಸ್ತೆ, ಒಟಿಸಿ ರಸ್ತೆ, ಎಸ್‌ಪಿ ರಸ್ತೆ, ಅವೆನ್ಯೂ ರಸ್ತೆ ಟ್ಯಾಕ್ಸಿ ಸ್ಟ್ಯಾಂಡ್, ವಿಕ್ಟೋರಿಯಾ ಆಸ್ಪತ್ರೆ ಕಾಂಪೌಂಡ್, ನೆಫ್ರೋ ಯುರಾಲಜಿ, ಮಿಂಟೊ, ಗ್ಯಾಸ್ಟ್ರೋಎಂಟರಾಲಜಿ ಆಸ್ಪತ್ರೆ ಮತ್ತು ಅಲೈಡ್ ಆಸ್ಪತ್ರೆಗಳು, ಜೆ.ಸಿ. ರಸ್ತೆ, ಕಲಾಸಿಪಾಳ್ಯ ಎಂಟಿಬಿ ರಸ್ತೆ, ಕುಂಬಾರ ಗುಂಡಿ ರಸ್ತೆ, ಶಿವಾಜಿ ರಸ್ತೆ, ಗ್ರೇನ್ ಬಜಾರ್ ರಸ್ತೆ, ನಗರ್ತಪೇಟೆ, ತಿಗಳರಪೇಟೆ, ಚಿಕ್ಕಪೇಟೆ ಮುಖ್ಯರಸ್ತೆ, ಮಾಮೂಲ್‌ಪೇಟೆ, ಬೆಳ್ಳಿಬಸವಣ್ಣ ದೇವಸ್ಥಾನದ ಬೀದಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಲಿದೆ.

ಐ.ಟಿ.ಐ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೈ ಭುವನೇಶ್ವರ ಲೇಔಟ್, ಕೆ.ಆರ್. ಪುರ ಮುಖ್ಯರಸ್ತೆ, ದೀಪಾ ಆಸ್ಪತ್ರೆ ಸುತ್ತಮುತ್ತ, ವಿನಾಯಕ ಲೇಔಟ್, ಅಜಿತ್ ಲೇಔಟ್, ಟಿ.ಸಿ. ಪಾಳ್ಯ ಸಿಗ್ನಲ್, ಭಟ್ಟರಹಳ್ಳಿ, ಚಿಕ್ಕಬಸವನಪುರ ಮತ್ತು ಯರಪ್ಪನ ಪಾಳ್ಯ, ಕುವೆಂಪು ನಗರ, ರಾಮಮೂರ್ತಿ ನಗರ, ಎನ್‌ಆರ್‌ಐ ಲೇಔಟ್ ಸ್ವತಂತ್ರ ನಗರ, ರಾಜೇಶ್ವರಿ ಲೇಔಟ್, ಮುನೇಶ್ವರ ಲೇಔಟ್, ಬೆಥೆಲ್ ನಗರ, ಬೃಂದಾವನ ಲೇಔಟ್, ಕೇಂಬ್ರಿಡ್ಜ್ ಲೇಔಟ್, ಗ್ರೀನ್ ಗಾರ್ಡನ್ ಲೇಔಟ್, ಜೆ.ಕೆ. ಹಳ್ಳಿ, ಆನಂದಪುರ ಸುತ್ತಮುತ್ತಲ ಪ್ರದೇಶ-ಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಇಪಿಐಪಿ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆದರ್ಶ್ ಟೆಕ್ ಪಾರ್ಕ್, ವಿ.ಕೆ. ಟೆಕ್ ಪಾರ್ಕ್, ರಾಮಗೊಂಡನಹಳ್ಳಿ, ನೇತ್ರಾ ಟೆಕ್ ಪಾರ್ಕ್, ಶೈಲೇಂದ್ರ ಟೆಕ್ ಪಾರ್ಕ್, ಕೈಗಾರಿಕಾ ಪ್ರದೇಶಗಳ ಸುತ್ತಮುತ್ತ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಲಿದೆ.

ಜಯದೇವ ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಐಎಎಸ್ ಕಾಲೊನಿ, ಕೆಎಎಸ್ ಕಾಲೊನಿ, ಎನ್.ಎಸ್ ಪಾಳ್ಯ ಇಂಡಸ್ಟ್ರಿಯರ್ ಏರಿಯಾ, ಅನಂತ ಲೇಔಟ್, ಬಿಳೆಕಹಳ್ಳಿ ಮುಖ್ಯರಸ್ತೆ, ಜಯನಗರ, ಎಸ್‌ಆರ್‌ಕೆ ಗಾರ್ಡನ್, ಎನ್.ಎಲ್. ಲೇಔಟ್, ತಿಲಕ್ ನಗರ, ಶಾಂತಿ ನಗರ, ಜಯದೇವ ಆಸ್ಪತ್ರೆ, ರಂಕ ಕಾಲೊನಿ, ಬನ್ನೇರುಘಟ್ಟ ಮುಖ್ಯರಸ್ತೆ, ಕೆ.ಇ.ಬಿ. ಕಾಲೊನಿ, ಗುರಪ್ಪನ ಪಾಳ್ಯ, ಬಿಟಿಎಮ್ ಮೊದಲನೇ ಹಂತ ಸುತ್ತಮುತ್ತ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಆರಂಭದ ಸಂಬಂಧ ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು

ಅಮೆರಿಕ ಕಾನ್ಸುಲೇಟ್ ಕಾರ್ಯಾರಂಭ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ಕಾನ್ಸುಲೇಟ್ ಕಚೇರಿಯ ಬೆಂಗಳೂರು ಶಾಖೆಯು ಶುಕ್ರವಾರ ಕಾರ್ಯಾರಂಭ ಮಾಡಲಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್, ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗ್ಯಾರ್‌ಸೆಟಿ ಅವರು ನೂತನ ಕಚೇರಿಗೆ ಚಾಲನೆ ನೀಡಲಿದ್ದಾರೆ.

ನಗರದ ವಿಠ್ಠಲ್ ಮಲ್ಯ ರಸ್ತೆಯಲ್ಲಿರುವ ಜೆಡಬ್ಲ್ಯು ಮ್ಯಾರಿಯೆಟ್ ಹೋಟೆಲ್‌ನಲ್ಲಿ ಅಮೆರಿಕದ ವಿದೇಶಾಂಗ ವಾಣಿಜ್ಯ ವ್ಯವಹಾರಗಳ ಸೇವಾ ಕಚೇರಿ ಇದ್ದು, ಅದಕ್ಕೆ ಹೊಂದಿಕೊಂಡಂತೆಯೇ ನೂತನ ಕಾನ್ಸುಲೇಟ್ ಆರಂಭಿಸಲಾಗು-ತ್ತಿದೆ. ಇದು ತಾತ್ಕಾಲಿಕ ಕಚೇರಿಯಾಗಿದ್ದು, ಮುಂದಿನ ದಿನಗಳಲ್ಲಿ ಪ್ರತ್ಯೇಕ ಕಚೇರಿಗೆ ಕಾನ್ಸುಲೇಟ್ ಸ್ಥಳಾಂತರವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಆರಂಭಿಸಬೇಕು ಎಂದು ಹಲವು ಬಾರಿ ಅಮೆರಿಕ ರಾಯಭಾರ ಕಚೇರಿಗೆ ಮನವಿ ಸಲ್ಲಿಸಲಾಗಿತ್ತು. ಈ ಕಚೇರಿಯು ಆರಂಭದಲ್ಲಿ ಅಮೆರಿಕ ಪ್ರಜೆಗಳ ಸಹಾಯ ಮತ್ತು ಇತರ ಸೇವೆಗಳ ಕೇಂದ್ರವಾಗಿ ಕೆಲಸ ಮಾಡಲಿದೆ. ನಂತರದ ದಿನಗಳಲ್ಲಿ ವೀಸಾ ಸೇವೆಯನ್ನೂ ಆರಂಭಿಸಲಿದೆ ಎಂದು ಮೂಲಗಳು ಹೇಳಿವೆ.

ಕಚೇರಿ ಆರಂಭವಾಗುತ್ತಿರುವ ಕುರಿತು ಬಿಜೆಪಿ ಸಂಸದ ತೇಜಸ್ವಿ ಸೂರ್ಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, ಎಸ್. ಜೈಶಂಕರ್ ಅವರಿಗೆ ಅಭಿನಂದನೆ ಹೇಳಿದ್ದರು. ಅದರ ಬೆನ್ನಲ್ಲೇ ರಾಜ್ಯ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, 'ಬೆಂಗಳೂರಿನ ಬ್ರ್ಯಾಂಡ್ ಹೆಸರು ಮತ್ತು ನಗರದ ಸಾಮರ್ಥ್ಯದ ಕಾರಣಕ್ಕೆ ಕಾನ್ಸುಲ್ ಕಚೇರಿ ಆರಂಭವಾಗುತ್ತಿದೆ. ಯಾರೊ ಒಬ್ಬರ ಕಾರಣಕ್ಕೆ ಇದು ನಡೆದಿಲ್ಲ' ಎಂದು 'ಎಕ್ಸ್'ನಲ್ಲೇ ಪ್ರತಿಕ್ರಿಯೆ ನೀಡಿದ್ದರು.

ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ, 'ನಾನು ಹಿಂದೆ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ಈ ಕುರಿತು ಮನವಿ ಸಲ್ಲಿಸಿದ್ದೆ. ಬೆಂಗಳೂರಿನಲ್ಲಿ ಅಮೆರಿಕ ಕಾನ್ಸುಲೇಟ್ ಆರಂಭವಾಗುವುದರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಒತ್ತಾಸೆ ಇದೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಸಹಕಾರವೂ ಇದೆ' ಎಂದು 'ಎಕ್ಸ್'ನಲ್ಲಿಪೋಸ್ಟ್‌ಮಾಡಿದ್ದಾರೆ.

ಒಳ ಮೀಸಲಾತಿ: ಪ್ರತಿಭಟನಾ ಸಮಾವೇಶ ಫೆಬ್ರುವರಿ 19ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿರುವ ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟ, ಫೆ.19ಕ್ಕೆ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಸಮಾವೇಶ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, 'ವೈಜ್ಞಾನಿಕ ದತ್ತಾಂಶ ಹೊಂದಿರುವ ಆಯೋಗದ ವರದಿಯನ್ನು ಸರ್ಕಾರವು ಅಪ್ರಸ್ತುತಗೊಳಿಸದೆ, ಸಚಿವ ಸಂಪುಟ ಅಥವಾ ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕರಿಸಬೇಕು. ಯಾವುದೇ ಒತ್ತಡಕ್ಕೆ ಮಣಿಯಬಾರದು' ಎಂದು ಆಗ್ರಹಿಸಿದರು. 'ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಸರ್ಕಾರದ ಗಮನ ಸೆಳೆಯಲು ಇದೇ 29ರಂದು ರಾಜ್ಯದ ಎಲ್ಲ ಶಾಸಕರು ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ' ಎಂದರು.

20ಕ್ಕೆ ಅಮಿತ್ ಶಾ ವಿರುದ್ಧ ಪ್ರತಿಭಟನೆ

ಬೆಂಗಳೂರು: ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ವಿರೋಧಿಸಿ ಇದೇ 20ರಂದು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹಿಂದ ಸಂಘಟನೆ- ಕರ್ನಾಟಕವು ಪ್ರತಿಭಟನೆ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಹಿಂದ ರಾಜ್ಯ ರೈತ ಘಟಕದ ಅಧಕ್ಷ ಎ.ಎಂ ಲಿಂಗರಾಜು, 'ಸಂಸತ್ ಅಧಿವೇಶನದ ಸಂದರ್ಭದಲ್ಲಿ ಅಮಿತ್ ಶಾ ಅವರು ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡಿದ್ದರು. ಈ ಮೂಲಕ ಅವರನ್ನು ಅವಮಾನಿಸಿದ್ದರು. ಅಂಬೇಡ್ಕರ್ ಮತ್ತು ಅವರು ರಚಿಸಿದ ಭಾರತ ಸಂವಿಧಾನವನ್ನ ಹೀಯಾಳಿಸಿ ಅಪಮಾನಿಸುವುದರ ಹಿಂದೆ ದಲಿತ ಸಮುದಾಯಕ್ಕೆ ನೋವು ನೀಡಿ, ಸ್ವಾಭಿಮಾನ ಕೆಣಕುವ ಉದ್ದೇಶವನ್ನು ಬಿಜೆಪಿಗರು ಇಟ್ಟುಕೊಂಡಿರುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಅಂಬೇಡ್ಕರ್ ಅವರ ಬಗ್ಗೆ ಸಂಸತ್‌ನಲ್ಲಿ ಲಘುವಾಗಿ ಮಾತನಾಡಿರುವ ಅಮಿತ್ ಶಾ ಅವರು ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಅಭ್ಯರ್ಥಿಗಳ ಪ್ರತಿಭಟನೆ

ಭಾಷಾಂತರ ಲೋಪ: ಮರು ಪರೀಕ್ಷೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಷಾಂತರ ಲೋಪವಾಗಿದ್ದು, ಮರು ಪರೀಕ್ಷೆ ನಡೆಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದರು.

ಮರು ಪರೀಕ್ಷೆ ನಡೆಸದಿದ್ದರೆ ಪೂರ್ವಭಾವಿ ಪರೀಕ್ಷೆ ಎದುರಿಸಿದ ಎಲ್ಲ ಅಭ್ಯರ್ಥಿಗಳಿಗೂ ಮುಖ್ಯ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆಸುವ ಪರೀಕ್ಷೆಯಲ್ಲಿ ಪದೇ ಪದೇ ತಪ್ಪು ಎಸಗುತ್ತಿರುವ ಆಯೋಗದ ಪರೀಕ್ಷಾ ನಿಯಂತ್ರಕ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಹಾಗೂ ಸಿಬ್ಬಂದಿಯನ್ನು ಅಮಾನತು ಮಾಡಬೇಕು. ಮುಂದಿನ ಎಲ್ಲ ನೇಮಕಾತಿಗಳ ಪ್ರಕ್ರಿಯೆಗಳನ್ನು ಅಧಿಸೂಚನೆ ಹೊರಡಿಸಿದ ಒಂದು ವರ್ಷದ ಒಳಗೆ ಪೂರ್ಣಗೊಳಿಸಿ ಅಂತಿಮ ಆಯ್ಕೆಪಟ್ಟಿ ಬಿಡುಗಡೆ ಮಾಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಆಯೋಗವು ನಡೆಸುವ ಎಲ್ಲ ಪರೀಕ್ಷೆಗಳಲ್ಲಿಯೂ ಕನ್ನಡದಲ್ಲಿ ಮೊದಲು ಪ್ರಶ್ನೆ ಪತ್ರಿಕೆ ಸಿದ್ಧಗೊಳಿಸಬೇಕು. ನಂತರ, ಇಂಗ್ಲಿಷ್‌ಗೆ ಭಾಷಾಂತರ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಭೇಟಿ ನೀಡಿ ಪ್ರತಿಭಟನಕಾರರ ಮನವಿ ಸ್ವೀಕರಿಸಿದರು. ರೈತ ಸಂಘಟನೆಗಳ ಮುಖಂಡರು ಭಾಗವಹಿಸುವ ಮೂಲಕ ಬೆಂಬಲ ನೀಡಿದರು.

ನಂತರ ಮಾತನಾಡಿದ ವಿಜಯೇಂದ್ರ, 'ಕೆಪಿಎಸ್‌ಸಿ ಪರೀಕ್ಷೆ ವಿಚಾರದಲ್ಲಿ ಅಭ್ಯರ್ಥಿಗಳ ಭವಿಷ್ಯದ ಜತೆಗೆ ಚೆಲ್ಲಾಟ ನಡೆಸಬಾರದು. ರಾಜ್ಯ ಸರ್ಕಾರಕ್ಕೆ ಬುದ್ಧಿ ಹೇಳುವ ಉದ್ದೇಶದಿಂದ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ನೀಡಿದ್ದೇವೆ' ಎಂದರು.

'ಪದೇ ಪದೇ ಪರೀಕ್ಷೆ ಮುಂದೂಡುವುದು, ಪ್ರಶ್ನೆ ಪತ್ರಿಕೆಗಳ ಸೋರಿಕೆ, ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡುವಾಗ ಆಗುತ್ತಿರುವ ಸಮಸ್ಯೆಗಳ ವಿರುದ್ಧ ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದಾರೆ. ಅಭ್ಯರ್ಥಿಗಳ ಸಮಸ್ಯೆಯನ್ನು ಸರ್ಕಾರ ಆಲಿಸಿ ಪರಿಹಾರ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಕಾರರಿಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮನವಿ ಸ್ವೀಕರಿಸಿದರು

ಸತೀಶ್ ಜಾರಕಿಹೊಳಿ ಅಧ್ಯಕ್ಷರಾದರೆ ಸಂತಸ– ಸಚಿವ ರಾಜಣ್ಣ

ಗೊಂದಲಕ್ಕೆ ಹೈಕಮಾಂಡ್ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಹುದ್ದೆಯ ವಿಚಾರದಲ್ಲಿ ಗೊಂದಲ ಉಂಟಾಗಲು ಹೈಕಮಾಂಡ್ ಕಾರಣ. ಹೀಗಾಗಿ, ಈ ಗೊಂದಲವನ್ನು ಹೈಕಮಾಂಡ್ ನವರೇ ನಿವಾರಿಸಲಿ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಕೆ.ಎನ್. ರಾಜಣ್ಣ

'ಮುಖ್ಯಮಂತ್ರಿ, ಒಂದು ಉಪ ಮುಖ್ಯಮಂತ್ರಿ ಹುದ್ದೆ, ಜೊತೆಗೆ ಲೋಕ ಸಭೆ ಚುನಾವಣೆವರೆಗೂ ಅಧ್ಯಕ್ಷ ಸ್ಥಾನದಲ್ಲಿ ಡಿ.ಕೆ. ಶಿವಕುಮಾರ್ ಇರುತ್ತಾರೆ ಎಂದು ಹೈಕಮಾಂಡ್ ಹೇಳಿತ್ತು. ಲೋಕಸಭೆ ಚುನಾವಣೆ ಕಳೆದು ಆರು ತಿಂಗಳು ಆಗಿದೆ. ಅಧ್ಯಕ್ಷರ ಬಗ್ಗೆ ಹೈಕಮಾಂಡ್‌ಹೇಳಬೇಕು.ಮುಂದಿನವಿಧಾನ ಸಭೆ ಚುನಾವಣೆವರೆಗೂ ಶಿವಕುಮಾರ್ ಅವರೇ ಮುಂದುವರೆಯುತ್ತಾರೆ ಎಂದಾದರೂ ಹೇಳಲಿ' ಎಂದರು.

'ಅಧ್ಯಕ್ಷ ಹುದ್ದೆ ವಿಚಾರದಲ್ಲಿ ಅವಶ್ಯ ಇದ್ದರೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತೇನೆ. ಈಗ ಜನಾಭಿಪ್ರಾಯ 2023ರ ರೀತಿ ಪಕ್ಷದ ಪರ ಇಲ್ಲ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಪರಿಸ್ಥಿತಿ ತಿಳಿಸುವ ಪ್ರಯತ್ನ ಮಾಡುತ್ತೇನೆ' ಎಂದರು.

'ಸತೀಶ ಜಾರಕಿಹೊಳಿ ಅಧ್ಯಕ್ಷರಾದರೆ ಸಂತೋಷ ಪಡುವವರಲ್ಲಿ ನಾನು ಮೊದಲಿಗ. ಅವರು ಜನಪರ ಕೆಲಸ ಮಾಡಿದ್ದಾರೆ. ಎಲ್ಲರಿಗೂ ಸಿಗುತ್ತಾರೆ. ಎಲ್ಲರಿಗೂ ಗೌರವ ಕೊಡುತ್ತಾರೆ' ಎಂದೂ ಹೇಳಿದರು.

'ಯಾರೂ ಕುರ್ಚಿಗೆ ಅಂಟಿಕೊಂಡು ಕುಳಿತಿಲ್ಲ'

'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಯಾರೂ ಕುರ್ಚಿಗೆ ಅಂಟಿಕೊಂಡು ಕುಳಿತಿಲ್ಲ. ಹೈಕಮಾಂಡ್ ಆದೇಶವನ್ನು ಎಲ್ಲರೂ ಪಾಲಿಸುತ್ತಾರೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಿಯಾಂಕ್ ಖರ್ಗೆ

'ಶಿವಕುಮಾರ್ ಅವರಂಥ ಶಿಸ್ತಿನ ಶಿಪಾಯಿ ಪಕ್ಷದಲ್ಲಿ ಯಾರೂ ಇಲ್ಲ. ಪಕ್ಷ ಸಕ್ರಿಯವಾಗಿ ಇಲ್ಲದೇ ಇರುತ್ತಿದ್ದರೆ ಉಪ ಚುನಾವಣೆ ನಡೆದ ಮೂರೂ ಕ್ಷೇತ್ರಗಳನ್ನು ಪಕ್ಷ ಗೆಲ್ಲಲು ಸಾಧ್ಯ ಆಗುತ್ತಿತ್ತೇ' ಎಂದು ಪ್ರಶ್ನಿಸಿದ ಅವರು, 'ನಮ್ಮ ಬೇಡಿಕೆಗಳನ್ನು ಎಲ್ಲಿ ಹೇಳಬೇಕೊ ಅಲ್ಲಿ ಹೇಳಬೇಕು' ಎಂದು ಹೇಳಿದರು.

'ಉಪ ಮುಖ್ಯಮಂತ್ರಿಯವರಿಗೂ ಒತ್ತಡ ಇದೆ. ನಾನು ಒತ್ತಡದಲ್ಲಿ ಇದ್ದೇನೆ ಎಂದು ಅವರೇ ಹೇಳಿದ್ದಾರೆ. ಹೈಕಮಾಂಡ್ ಹೇಳಿದಂತೆ ಅವರೂ ನಡೆದುಕೊಳ್ಳುತ್ತಾರೆ. ಪೂರ್ಣಕಾಲಿಕ ಅಧ್ಯಕ್ಷ ಇದ್ದರೆ ಪಕ್ಷ ಸಂಘಟನೆಗೆ ಅನುಕೂಲ ಆಗುತ್ತದೆ ಎನ್ನುವುದು ಕೆಲವರ ಅಭಿಪ್ರಾಯ ಇರಬಹುದು' ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಕುರಿತು ಯಾರೂ ಬಹಿರಂಗ ಹೇಳಿಕೆ ಕೊಡಬಾರದು. ಅಧ್ಯಕ್ಷರು ಯಾರೆಂದು ಹೈಕಮಾಂಡ್ ನಿರ್ಧರಿಸುತ್ತದೆ

ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಏನೇ ಇದ್ದರೂ ನಾಲ್ಕು ಗೋಡೆಗಳ ಮಧ್ಯೆ ಹೇಳಬೇಕು, ಪಕ್ಷದ ಉಸ್ತುವಾರಿ ಸುರ್ಜೇವಾಲಾ ಸೂಚನೆ ನೀಡಿದ ನಂತರವೂ ಮಾತನಾಡಿದರೆ ಏನು ಮಾಡಲು ಆಗುತ್ತದೆ

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಸಚಿವ ಸತೀಶ ಜಾರಕಿಹೊಳಿ ಅವರ ಹೇಳಿಕೆ ವೈಯಕ್ತಿಕ. ಅದು ಸರಿ ಅಥವಾ ತಪ್ಪು ಎಂಬುದನ್ನು ವಿಶ್ಲೇಷಿಸಲ್ಲ

ಸಂತೋಷ್ ಲಾಡ್, ಕಾರ್ಮಿಕ ಸಚಿವ

'ಖರ್ಗೆ, ರಾಹುಲ್ ಬರುವುದು ಖಾತ್ರಿ'

ಬೆಳಗಾವಿಯಲ್ಲಿ 21ರಂದು ಗಾಂಧಿ ಭಾರತ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗಾಂಧಿ ಭಾರತ ಕಾರ್ಯಕ್ರಮದ ಪ್ರಯುಕ್ತ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಶೀರ್ಷಿಕೆಯಡಿ ನಗರದಲ್ಲಿ ಜನವರಿ 21ರಂದು ನಡೆಯುವ ಕಾಂಗ್ರೆಸ್ ಅಧಿವೇಶನದಲ್ಲಿ 2 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸುವರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾಗವಹಿಸುವುದು ಖಾತ್ರಿಯಾಗಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸತೀಶ ಜಾರಕಿಹೊಳಿ

'ಈ ಕಾರ್ಯಕ್ರಮ ಮೊದಲೇ ನಿಗದಿಯಾಗಿತ್ತು. ಆದರೆ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನದ ಕಾರಣ ಮುಂದೂಡಲಾಗಿತ್ತು. ಅಂದು ಬೆಳಿಗ್ಗೆ ಸುವರ್ಣ ವಿಧಾನಸೌಧದ ಆವರಣದಲ್ಲಿ ಗಾಂಧಿ ಪ್ರತಿಮೆ ಅನಾವರಣಗೊಳಿಸುತ್ತೇವೆ. ಇದು ಸರ್ಕಾರಿ ಕಾರ್ಯಕ್ರಮವಾಗಿದ್ದು, ಪಕ್ಷಾತೀತವಾಗಿ ಎಲ್ಲ ನಾಯಕರೂ ಭಾಗವಹಿಸುವರು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಶುಕ್ರವಾರ (ಜನವರಿ 17) ಜಿಲ್ಲೆಗೆ ಬರಲಿದ್ದು, ಬೆಳಗಾವಿ ಮತ್ತು ಚಿಕ್ಕೋಡಿಯಲ್ಲಿ ಸಭೆ ನಡೆಸುವರು. ಗಾಂಧಿ ಭಾರತ್ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸುವರು. ಶನಿವಾರ ಬೇರೆ ಜಿಲ್ಲೆಗಳಿಗೆ ತೆರಳುವರು' ಎಂದು ತಿಳಿಸಿದರು.

ಅಧ್ಯಕ್ಷರ ಬದಲಾವಣೆ ಪ್ರಸ್ತಾಪವಿಲ್ಲ: 'ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ನಾವು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಈ ಬಗ್ಗೆ ಪಕ್ಷದ ಹೈಕಮಾಂಡ್ ಯಾವುದೇ ನಿರ್ಧಾರ ತೆಗೆದುಕೊಳ್ಳುತ್ತದೆ. ಇದರಲ್ಲಿ ನಮಗೇನೂ ಅಧಿಕಾರವಿಲ್ಲ. ಸಾರ್ವಜನಿಕ ವೇದಿಕೆಯಲ್ಲಿ ಪಕ್ಷದ ವಿಷಯಗಳ ಬಗ್ಗೆ ಮಾತನಾಡದಂತೆ ನಮಗೆ ಯಾವುದೇ ನೋಟಿಸು ನೀಡಿಲ್ಲ. ನಮ್ಮ ಯಾವುದೇ ಹೇಳಿಕೆಯಿಂದ ಪಕ್ಷಕ್ಕೆ ಮುಜುಗರವಾಗದಂತೆ ನಾವು ಸಹ ನೋಡಿಕೊಳ್ಳುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸೌಮ್ಯವಾಗಿದ್ದಷ್ಟೂ ಒಳ್ಳೆಯದು'

'ಜಿಲ್ಲೆಯ ರಾಜಕಾರಣದಲ್ಲಿ ಸತೀಶ ಈಗಲೇ ಎಚ್ಚೆತ್ತುಕೊಳ್ಳಬೇಕು. ಉಗ್ರರೂಪ ತಾಳದಿದ್ದರೆ, ಅವರಿಗೆ ಉಳಿಗಾಲವಿಲ್ಲ' ಎಂಬ ರಮೇಶ ಜಾರಕಿಹೊಳಿ ಎಚ್ಚರಿಕೆಗೆ ಪ್ರತಿಕ್ರಿಯಿಸಿದ ಸತೀಶ, 'ನಾವು ಎಷ್ಟು ಸೌಮ್ಯವಾಗಿ ಇರುತ್ತೇವೆಯೋ, ಅಷ್ಟು ಒಳ್ಳೆಯದು. ಉಗ್ರರೂಪ ತಾಳುವುದು ಒಳ್ಳೆಯದಲ್ಲ' ಎಂದು ಹೇಳಿದರು.

'ಸಾಮರ್ಥ್ಯ ನೋಡಿ ಯಾರಿಗಾದರೂ ಸ್ಥಾನಮಾನ ಕೊಡುತ್ತಾರೆ' ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ, 'ಅದು ನಿಜ. ಸಾಮರ್ಥ್ಯ ನೋಡಿಯೇ ಯಾರಿಗಾದರೂ ಸ್ಥಾನಮಾನ ಕೊಡಲಾಗುತ್ತದೆ' ಎಂದರು.

ಗೂಳಿಯ ಬಾಲ ಕತ್ತರಿಸಿದ ಪುಂಡರು

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು ಜಿಲ್ಲೆ): ಇಲ್ಲಿನ ಹಳ್ಳದಕೇರಿ ಬಡಾವಣೆಯಲ್ಲಿ ಶ್ರೀಕಂಠೇಶ್ವರ ದೇವಾಲಯದ ಹರಕೆ ಗೂಳಿಯ ಬಾಲವನ್ನು ದುಷ್ಕರ್ಮಿಗಳು ಮಚ್ಚಿನಲ್ಲಿ ಕತ್ತರಿಸಿದ್ದು, ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

'ಭಕ್ತರೊಬ್ಬರು ಗೂಳಿಯನ್ನು ದೇವಾಲಯಕ್ಕೆ ಹರಕೆಯಾಗಿ ನೀಡಿದ್ದರು. ಅದು ಹಳ್ಳದಕೇರಿ ಬಡಾವಣೆಗೆ ಬಂದಾಗ ಅದರ ಬಾಲ ಕತ್ತರಿಸಲಾಗಿದೆ. ಗುರುವಾರ ಬೆಳಿಗ್ಗೆ ಗೂಳಿಯನ್ನು ಗಮನಿಸಿದ ಸಾರ್ವಜನಿಕರು ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಆರೋಪಿಯನ್ನು ತಕ್ಷಣ ಬಂಧಿಸುವಂತೆ ಭಕ್ತರು, ಸ್ಥಳಕ್ಕೆ ಭೇಟಿ ನೀಡಿದ್ದ ಎಸ್ಪಿ ಎನ್.ವಿಷ್ಣುವರ್ಧನ್ ಅವರನ್ನು ಆಗ್ರಹಿಸಿದರು.

ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ/514/ಯುಬಿವಿ/2023 ದಿನಾಂಕ: 10.01.2025

ಸಾರ್ವಜನಿಕ ಪ್ರಕಟಣೆ

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ

ಈ ಹಿಂದೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 514 ಯುಬಿವಿ 2023, ದಿನಾಂಕ: 14.06.2024 ರಂದು ಮುದ್ರಣಾ ಮಾಧ್ಯಮಗಳಲ್ಲಿ ಪ್ರಕಟಿಸಲಾದ ಅಧಿಸೂಚನೆಯನ್ನು ಮುಂದುವರೆಸುತ್ತಾ **ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ** ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ಅಧಿನಿಯಮ 2018ರ ಪ್ರಕರಣ 13(4)(i) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಮತ್ತೊಮ್ಮೆ ಅರ್ಜಿ ಆಹ್ವಾನಿಸಲಾಗಿದೆ. ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 20 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ **https://hed.karnataka.gov.in** ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/4334/2024–25

ಮೈಸೂರು: ಸಂಗೀತ ವಿಶ್ವವಿದ್ಯಾಲಯ ಘಟಿಕೋತ್ಸವ ನಾಳೆ

9 ಸಾಧಕರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಗಿರಿಜಾ ಲೋಕೇಶ್

ಎಂ.ಆರ್. ಸತ್ಯನಾರಾಯಣ

ಸಾಧುಕೋಕಿಲ

ಬಸವಲಿಂಗಯ್ಯ

ಮೈಸೂರು: ಇಲ್ಲಿನ ಲಕ್ಷ್ಮೀಪುರಂನಲ್ಲಿರುವ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 7, 8 ಹಾಗೂ 9ನೇ ವಾರ್ಷಿಕ ಘಟಿಕೋತ್ಸವ ಜ.18ರಂದು ನಡೆಯಲಿದ್ದು, ಗಿರಿಜಾ ಲೋಕೇಶ್, ಸಾಧುಕೋಕಿಲ ಸೇರಿ 9 ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು.

'ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಿ ಪದವಿ ಪ್ರದಾನ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಪಾಲ್ಗೊಳ್ಳುವರು. ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ' ಎಂದು ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

'2021–22ನೇ ಸಾಲಿನಲ್ಲಿ ಭರತನಾಟ್ಯ ಕಲಾವಿದ ಸತ್ಯನಾರಾಯಣ ರಾಜು, ವಿದ್ವಾನ್ ಸಿ. ಚೆಲುವರಾಜು, ನಟಿ ಗಿರಿಜಾ ಲೋಕೇಶ್, 2022–23ನೇ ಸಾಲಿನಲ್ಲಿ ಭರತನಾಟ್ಯ ಕಲಾವಿದೆ ಸಂಧ್ಯಾ ಪುರೇಚ, ಗಮಕ ವಿದ್ವಾನ್ ಎಂ.ಆರ್. ಸತ್ಯನಾರಾಯಣ, ನಟ, ಸಂಗೀತ ನಿರ್ದೇಶಕ ಸಾಧುಕೋಕಿಲ, 2023–24ನೇ ಸಾಲಿನಲ್ಲಿ ವಿದುಷಿ ವೀಣಾಮೂರ್ತಿ ವಿಜಯ್, ವಿದುಷಿ ಪುಷ್ಪಾ ಶ್ರೀನಿವಾಸನ್ ಹಾಗೂ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರಿಗೆ ಗೌರವ ಡಾಕ್ಟರೇಟ್ ನೀಡಲಗುವುದು' ಎಂದು ಮಾಹಿತಿ ನೀಡಿದರು.

'ವಿ.ವಿಯು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿ 15 ವರ್ಷ ತುಂಬುತ್ತಿದ್ದು, ಮೂರು ಘಟಿಕೋತ್ಸವಗಳನ್ನು ಒಟ್ಟಿಗೇ ನಡೆಸಲಾಗುತ್ತಿದೆ. ರಾಜ್ಯದಾದ್ಯಂತ 70 ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಸ್ನಾತಕ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'14 ಮಂದಿಗೆ ಡಿ.ಲಿಟ್ ಸೇರಿ 540 ಮಂದಿಗೆ ಪದವಿ ಪ್ರದಾನ ಮಾಡಲಾಗುವುದು. 27 ವಿದ್ಯಾರ್ಥಿಗಳು 69 ಚಿನ್ನದ ಪದಕಗಳನ್ನು ಗಳಿಸಿದ್ದಾರೆ. 2021–22ರ ಎಂಪಿವಿ ಕೋರ್ಸ್‌ನಲ್ಲಿ ಮೈಸೂರಿನ ವಿ.ವಿಜಯಶ್ರೀ ಅತಿ ಹೆಚ್ಚು, 9 ಚಿನ್ನದ ಪದಕ ಪಡೆದಿದ್ದಾರೆ. 2022–23ರಲ್ಲಿ ಎಲ್.ಬಿ. ಬಿಂದು 6, ಟಿ.ಎ. ಕೀರ್ತನಾ 5, 2023–24ನೇ ಸಾಲಿನಲ್ಲಿ ಕೆ.ಆರ್. ಅಶ್ವಿನಿ ಹಾಗೂ ಬಿ.ಆರ್. ಮನೋಜ ತಲಾ 6 ಚಿನ್ನದ ಪದಕ ಪಡೆದಿದ್ದಾರೆ. ಸಿದ್ದಿ ಸಮಾಜದ ರೇಣುಕಾ ಸಿದ್ದಿ ನಾಟಕ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿರುವುದು ವಿಶೇಷ' ಎಂದು ಹೇಳಿದರು.

'ಬಿಪಿಎ ವಿಭಾಗದಲ್ಲಿ 2021–22ರಲ್ಲಿ ಡಿ.ಎಸ್. ಕಾವೇರಿ 3 ಹಾಗೂ ಎಸ್.ಎ. ಅಶ್ವಿನಿ 2, 2022–23ರಲ್ಲಿ ಆರ್. ರಂಜಿನಿಶ್ರೀ 6, ಡಿ.ಎನ್. ಇಂದ್ರ ಕುಮಾರ್ 2, 2023–24ರಲ್ಲಿ ಪಿ.ಆರ್. ರೂಪಾ 5 ಮತ್ತು ಬಿ.ಆರ್. ಶ್ರೀಹರಿ ಭಟ್ 2 ಚಿನ್ನದ ಪದಕ ಗಳಿಸಿದ್ದಾರೆ' ಎಂದರು. ಕುಲಸಚಿವ ಪ್ರೊ.ಎಂ.ಜಿ. ಮಂಜುನಾಥ್ ಪಾಲ್ಗೊಂಡಿದ್ದರು.

ಮೈಸೂರು ತಾಲ್ಲೂಕಿನ ನಾಡನಹಳ್ಳಿಯಲ್ಲಿ ಐದೂವರೆ ಎಕರೆ ದೊರೆತಿದ್ದು, ಸ್ವಂತ ಕ್ಯಾಂಪಸ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ

ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕುಲಪತಿ, ಸಂಗೀತ ವಿಶ್ವವಿದ್ಯಾಲಯ

ಭಾರತೀಯ ಸ್ಟೇಟ್ ಬ್ಯಾಂಕ್

ಪ್ರಾದೇಶಿಕ ವ್ಯವಹಾರ ಕಚೇರಿ – 2 ಬನಶಂಕರಿ ಆಡಳಿತ ಕಚೇರಿ – 1
ಮೂರನೇ ಮಹಡಿ, ಎಸ್‌ಬಿಐ ಕೆ.ಜಿ. ರಸ್ತೆ ಸಂಕೀರ್ಣ, ಬೆಂಗಳೂರು 560 009

ಭೋಗ್ಯಕ್ಕೆ ಆವರಣ ಬೇಕಾಗಿದೆ

ಭಾರತೀಯ ಸ್ಟೇಟ್ ಬ್ಯಾಂಕ್ ತಮ್ಮ ಎಸ್‌ಬಿಐ ಬನಶಂಕರಿ 6ನೇ ಹಂತ, ತುರಹಳ್ಳಿ 100 ಅಡಿ ರಸ್ತೆ ಶಾಖೆಗಾಗಿ ಭೋಗ್ಯದ ಆಧಾರದ ಮೇಲೆ ಮಾಲೀಕರು/ಮುಖ್ತ್ಯಾರುನಾಮೆ ಧಾರಕರಿಂದ (POA Holders) ವಾಣಿಜ್ಯ / ಕಚೇರಿ ಉಪಯೋಗಕ್ಕಾಗಿ ಆವರಣದ ಪ್ರಸಾವಗಳನ್ನು ಸ್ವಾಗತಿಸುತದೆ. ಕಟ್ಟಿರುವ ವಿಸ್ತೀರ್ಣ ಸುಮಾರು **232 ಚದರ ಮೀಟರ್ (2500 ಚದರ ಅಡಿ +/– 25%)** ಇದ್ದು, ನೆಲ ಅಂತಸ್ತಿನಲ್ಲಿ ಇದ್ದರೆ ಆದ್ಯತೆ ನೀಡಲಾಗುವುದು.

ವಿವರವಾದ ನಿಯತಾಂಕಗಳು, ನಿಬಂಧನೆಗಳು ಮತ್ತು ಷರತುಗಳು ಮತ್ತು ಬಿಡ್ ಬೆಲೆಗಳನ್ನು ಒಳಗೊಂಡ ತಾಂತ್ರಿಕ ಬಿಡ್ ಅನ್ನು ಸಲ್ಲಿಸಲು ನಮೂನೆಯನ್ನು **17.01.2025** ರಿಂದ **23.01.2025** ರ ವರೆಗೆ ಎಸ್‌ಬಿಐ ವೆಬ್ ಸೈಟ್ **https://bank.sbi/web/sbi-in-the-news/procurement-news** ಇಂದ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **23.01.2025 ರಂದು ಮಧ್ಯಾಹ್ನ 3.00** ಗಂಟೆಗೆ ಅಥವಾ ಅದಕ್ಕಿಂತ ಮುಂಚಿತವಾಗಿ ಸಲ್ಲಿಸಬೇಕು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು,ಪ್ರದೇಶ–2,ಆಡಳಿತ ಕಚೇರಿ–1

ಷಣ್ಮುಗಂ ಸೇರಿ ಮೂವರಿಗೆ ಮೈಸೂರು ವಿ.ವಿ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ 105ನೇ ವಾರ್ಷಿಕ ಘಟಿಕೋತ್ಸವವನ್ನು ಜ.18ರಂದು ಬೆಳಿಗ್ಗೆ 11ಕ್ಕೆ ಕ್ರಾಫರ್ಡ್ ಭವನದಲ್ಲಿ ಆಯೋಜಿಸಲಾಗಿದೆ.

'ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸುವರು. ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಟಿ.ಪಿ. ಸಿಂಗ್ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಪಾಲ್ಗೊಳ್ಳುವರು' ಎಂದು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮಾಜಿ ಸಂಸದ ಹಾಗೂ ಬೆಂಗಳೂರಿನ ರಾಜರಾಜೇಶ್ವರಿ ವಿದ್ಯಾ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಎ.ಸಿ. ಷಣ್ಮುಗಂ, ಸಾರಿಗೆ ಎಂಜಿನಿಯರ್ ಬಾಬು ಕೆ. ವೀರೇಗೌಡ ಹಾಗೂ ಸಮಿ-ಸಬಿನ್ಸಾ ಗ್ರೂಪ್‌ನ ಗ್ಲೋಬಲ್ ಸಿಇಒ ಮತ್ತು ವ್ಯವಸ್ಥಾಪಕ ಟ್ರಸ್ಟಿ ಶಾಹೀನ್ ಮಜೀದ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು' ಎಂದರು.

'2020ರಲ್ಲಿ ನಡೆದಿದ್ದ 100ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ಗೆ ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರನ್ನು ಆಯ್ಕೆ ಮಾಡಲಾಗಿತ್ತು. ಆಗ ಅವರು ಸ್ವೀಕರಿಸಿರಲಿಲ್ಲ. ಈ ಬಾರಿ ಒಪ್ಪಿದ್ದಾರೆ' ಎಂದು ತಿಳಿಸಿದರು.

ಉಮಾಗೆ 'ಭೈರಪ್ಪ ಪ್ರತಿಷ್ಠಾನ ಪ್ರಶಸ್ತಿ'

ಮೈಸೂರು: ಮರಾಠಿ ಅನುವಾದಕಿ, ಲೇಖಕಿ ಮಹಾರಾಷ್ಟ್ರದ ಪುಣೆಯ ಉಮಾ ಕುಲಕರ್ಣಿ ಅವರನ್ನು 2025ನೇ ಸಾಲಿನ 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ'ಗೆ ಆಯ್ಕೆ ಮಾಡಲಗಿದೆ.

ಇಲ್ಲಿನ ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನದಿಂದ ನೀಡುವ ಈ ಪ್ರಶಸ್ತಿಯನ್ನು ಜ. 19ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಪ್ರದಾನ ಮಾಡಲಿದ್ದಾರೆ. ಉಮಾ ಕುಲಕರ್ಣಿ ಅವರ ಸಾಹಿತ್ಯ ಕೊಡುಗೆಗಳ ಕುರಿತು ಸಹನಾ ವಿಜಯಕುಮಾರ್, ಉಮಾ ರಾಮರಾವ್ ಹಾಗೂ ಅಂಜಲಿ ಜೋಶಿ ಮಾತನಾಡಲಿದ್ದಾರೆ.

ಪ್ರಶಸ್ತಿಯು ₹1 ಲಕ್ಷ ಚೆಕ್ ಮತ್ತು ಭೈರಪ್ಪ ಅವರ ಸಹಿಯುಳ್ಳ ಪ್ರಶಸ್ತಿಪತ್ರ ಹೊಂದಿದೆ. ಭೈರಪ್ಪನವರ ಕನ್ನಡದ ಕೃತಿಗಳನ್ನು ಉಮಾ ಅವರು ಮರಾಠಿಗೆ ಅನುವಾದಿಸಿದ್ದಾರೆ. ಬೆಳಗಾವಿಯಲ್ಲಿ ಜನಿಸಿದ ಅವರು, ವಿವಾಹದ ನಂತರ ಪುಣೆಯಲ್ಲಿ ವಾಸವಾಗಿದ್ದಾರೆ. 55 ಕೃತಿಗಳನ್ನು ಭಾಷಾಂತರಿಸಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಪ್ರೊ.ಜಿ.ಎಲ್. ಶೇಖರ್ ತಿಳಿಸಿದ್ದಾರೆ.

ನಿಧನ ವಾರ್ತೆ

ಮಾಜಿ ಸಂಸದ ಎಂ.ಶ್ರೀನಿವಾಸ್

ಎಂ.ಶ್ರೀನಿವಾಸ್

ರಾಜರಾಜೇಶ್ವರಿ ನಗರ: ಹಿಂದೆ ಅಸ್ತಿತ್ವದಲ್ಲಿದ್ದ ಕನಕಪುರ ಲೋಕಸಭಾ ಕ್ಷೇತ್ರದ ಮಾಜಿ ಸಂಸದ, ಉತ್ತರಹಳ್ಳಿ ಮತ್ತು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಗಳ ಮಾಜಿ ಶಾಸಕ ಎಂ.ಶ್ರೀನಿವಾಸ್ (82) ವಯೋಸಹಜ ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ ರತ್ನಮ್ಮ, ಪುತ್ರ, ಬಿಬಿಎಂಪಿ ಮಾಜಿ ಸದಸ್ಯ ಎಸ್. ವೆಂಕಟೇಶ್ ಬಾಬು, ಇಬ್ಬರು ಪುತ್ರಿಯರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಸೋದರ ಎಂ.ಕೃಷ್ಣಪ್ಪ ಇದ್ದಾರೆ.

ಕನಕಪುರದ ಶ್ರೀನಿವಾಸ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಮೃತರ ಅಂತ್ಯಕ್ರಿಯೆ ಜ.17ರಂದು (ಶುಕ್ರವಾರ) ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗೆ 88848 55475, 99802 66868.

ಪರಿಷತ್ ಮಾಜಿ ಸದಸ್ಯ ಪಟೇಲ್ ಶಿವರಾಂ

ಪಟೇಲ್ ಶಿವರಾಂ

ಹಾಸನ: ವಿಧಾನ ಪರಿಷತ್ ಮಾಜಿ ಸದಸ್ಯ, ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಟೇಲ್ ಶಿವರಾಂ (75) ಗುರುವಾರ ಇಲ್ಲಿನ ಹೌಸಿಂಗ್ ಬೋರ್ಡ್ ಕಾಲೊನಿಯ ನಿವಾಸದಲ್ಲಿ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಒಡನಾಡಿಯಾಗಿದ್ದ ಪಟೇಲ್ ಶಿವರಾಂ, ಜಿಲ್ಲೆಯಲ್ಲಿ ಪಕ್ಷದ ಪ್ರಭಾವಿ ಮುಖಂಡರಾಗಿದ್ದರು. 2010 ರಿಂದ 2016 ರವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. ಎಚ್‌ಡಿಸಿಸಿ ಬ್ಯಾಂಕ್ ಹಾಗೂ ಹಾಸನ ಜಿಲ್ಲಾ ಪರಿಷತ್ ಅಧ್ಯಕ್ಷರಾಗಿ, ಹಾಸನ ಹಾಲು ಒಕ್ಕೂಟದ ನಿರ್ದೇಶಕರಾಗಿದ್ದರು.

ಎಚ್. ಡಿ.ದೇವೇಗೌಡ, ಸಂಸದ ಶ್ರೇಯಸ್ ಪಟೇಲ್ ಸೇರಿದಂತೆ ಹಲವರು ಅಂತಿಮ ನಮನ ಸಲ್ಲಿಸಿದರು. ತಾಲ್ಲೂಕಿನ ದೊಡ್ಡಗೇಣಗೆರೆ ಗ್ರಾಮದಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಯಿತು.

ರಾಘವೇಂದ್ರ ಎನ್.ಕುಲಕರ್ಣಿ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಕೆ.ಎಚ್.ಬಿ.ಕಾಲೊನಿಯ ನಿವಾಸಿ, ಇನ್ಫೊಸಿಸ್ ಸಂಸ್ಥೆ ಮುಖ್ಯಸ್ಥೆ ಸುಧಾಮೂರ್ತಿ ಅವರ ಸಹೋದರ ಸಾವಳಗಿ ಗ್ರಾಮದ ಕೃಷಿಕ ರಾಘವೇಂದ್ರ ಎನ್.ಕುಲಕರ್ಣಿ (79) ಈಚೆಗೆ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ.

ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ ಮನವಿ

'ಒಳಮೀಸಲಿಗೆ ಅಲೆಮಾರಿಗಳ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗಳಲ್ಲಿನ ಒಳಮೀಸಲಾತಿ ಸಂಬಂಧ ಸರ್ಕಾರಕ್ಕೆ ಸಲಹೆ ನೀಡುವಾಗ ರಾಜ್ಯದಲ್ಲಿನ 49 ಅಲೆಮಾರಿ ಸಮುದಾಯಗಳನ್ನೂ ಪರಿಗಣಿಸಬೇಕು' ಎಂದು ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾವು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗಕ್ಕೆ ಮನವಿ ಸಲ್ಲಿಸಿದೆ.

ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ ನೇತೃತ್ವದಲ್ಲಿ 49 ಅಲೆಮಾರಿ ಬುಡಕಟ್ಟು ಸಮುದಾಯಗಳ ಪ್ರತಿನಿಧಿಗಳು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು

ಮಹಾಸಭಾದ ರಾಜ್ಯಾಧ್ಯಕ್ಷ ಬಿ.ಎಲ್. ಹನುಮಂತಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ನಾಗರಾಜ್ ಎಚ್.ಸಿ ನೇತೃತ್ವದಲ್ಲಿ 49 ಅಲೆಮಾರಿ ಸಮುದಾಯಗಳ ಪ್ರತಿನಿಧಿಗಳು ನಾಗಮೋಹನ್ ದಾಸ್ ಅವರನ್ನು ಗುರುವಾರ ಭೇಟಿ ಮಾಡಿ, ಮನವಿ ಪತ್ರ ಸಲ್ಲಿಸಿದರು.

'ಪರಿಶಿಷ್ಟ ಜಾತಿಯಲ್ಲಿನ 101 ಸಮುದಾಯಗಳಲ್ಲಿ ಒಳಮೀಸಲಾತಿ ಕಲ್ಪಿಸುವ ಸಂಬಂಧ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ 'ಜಾತಿವಾರು ಸಮೀಕ್ಷೆ'ಯ ವರದಿಗಳನ್ನು ಸರ್ಕಾರ ಪ್ರಕಟಿಸಿಲ್ಲ. ಅಲೆಮಾರಿ ಸಮುದಾಯಗಳಿಗೆ ಸಂಬಂಧಿಸಿದ ದತ್ತಾಂಶಗಳು ಲಭ್ಯವಿಲ್ಲ' ಎಂದು ಮನವಿಯಲ್ಲಿ ವಿವರಿಸಿದೆ.

'ರಾಜ್ಯದಲ್ಲಿ ಎಲ್ಲಾ ಹಂತ ಮತ್ತು ಕ್ಷೇತ್ರದಲ್ಲೂ ಅತ್ಯಂತ ಹಿಂದುಳಿದವರು ಅಲೆಮಾರಿ ಸಮುದಾಯದವರೇ ಆಗಿದ್ದಾರೆ. ನೀವು ಈ ಸಮುದಾಯಗಳ ಸಮೀಕ್ಷೆ ನಡೆಸಿ, ಆ ದತ್ತಾಂಶದ ಆಧಾರದ ಮೇಲೆ ಸರ್ಕಾರಕ್ಕೆ ಸಲಹೆ ನೀಡಬೇಕು. ಒಳಮೀಸಲಾತಿಗೆ ಶಿಫಾರಸು ಮಾಡುವಾಗ ಅಲೆಮಾರಿ ಸಮುದಾಯಗಳನ್ನೂ ಪರಿಗಣಿಸಬೇಕು' ಎಂದು ಕೋರಿದೆ.

'ಅಲೆಮಾರಿ ಸಮುದಾಯಗಳ ಅಧ್ಯಯನಕ್ಕೆ ಎಂದು 2008ರಲ್ಲಿ ಕೇಂದ್ರ ಸರ್ಕಾರ ರಚಿಸಿದ್ದ ಬಾಲಕೃಷ್ಣ ರೇಣುಕೆ ರಾಷ್ಟ್ರೀಯ ಆಯೋಗ ಮತ್ತು 2015ರ ಬಿಕ್ಕುರಾಮ್ ಜೀ ಇದಾತೆ ಆಯೋಗದ ವರದಿಗಳ ಪ್ರಕಾರ, ಈ ಸಮುದಾಯಗಳ ಜನಸಂಖ್ಯಾ ಪ್ರಮಾಣ ಶೇ 10ರಷ್ಟಿದೆ. ಇದರ ಆಧಾರದಲ್ಲಿ ಶೇ 7ರಷ್ಟು ಮೀಸಲಾತಿ ಕೇಳಿ ಸರ್ಕಾರಕ್ಕೂ ಪತ್ರ ಬರೆಯಲಾಗಿದೆ. ಸರ್ಕಾರಕ್ಕೆ ಶಿಫಾರಸು ಮಾಡುವಲ್ಲಿ ಈ ದತ್ತಾಂಶಗಳನ್ನು ಬಳಸಿಕೊಳ್ಳಬಹುದು ಎಂದು ಪತ್ರದಲ್ಲಿ ವಿವರಿಸಲಾಗಿದೆ' ಎಂದು ಮಹಾಸಭಾದ ಗೌರವಾಧ್ಯಕ್ಷ ಸಿ.ಎಸ್.ದ್ವಾರಕನಾಥ್ ತಿಳಿಸಿದರು.

Infosys Navigate your next

Infosys Limited

Regd. office: Electronics City, Hosur Road, Bengaluru 560 100, India.

CIN: L85110KA1981PLC013115
Website: www.infosys.com
Email: investors@infosys.com
Telephone: 91 80 2852 0261
Fax: 91 80 2852 0362

Q3 FY 25 Financial Results

Extract of the consolidated audited financial results of Infosys Limited and its subsidiaries for the quarter and nine months ended December 31, 2024 prepared in compliance with the Indian Accounting Standards (Ind-AS)

(in ₹ crore, except per equity share data)

Particulars	Quarter ended December 31, 2024	Nine months ended December 31, 2024	Quarter ended December 31, 2023
Revenue from operations	**41,764**	**1,22,064**	**38,821**
Profit before tax	9,670	27,945	8,619
Profit for the period	6,822	19,712	6,113
Total comprehensive income for the period (comprising profit for the period after tax and other comprehensive income after tax)	6,345	19,896	6,617
Profit attributable to:			
Owners of the Company	6,806	19,680	6,106
Non-controlling interests	16	32	7
	6,822	**19,712**	**6,113**
Total comprehensive income attributable to:			
Owners of the Company	6,336	19,863	6,605
Non-controlling interest	9	33	12
	6,345	**19,896**	**6,617**
Paid-up share capital (par value ₹5/- each fully paid)	2,072	2,072	2,070
Other equity *#	86,045	86,045	73,338
Earnings per share (par value ₹5/- each)**			
Basic (in ₹ per share)	16.43	47.52	14.76
Diluted (in ₹ per share)	16.39	47.40	14.74

* Balances for the quarter and nine months ended December 31, 2024 represent balances as per the audited Balance Sheet as at March 31, 2024 and balances for the quarter ended December 31, 2023 represent balances as per the audited Balance Sheet as at March 31, 2023 as required by the SEBI (Listing Obligations and Disclosure Requirements) Regulations, 2015.

** EPS is not annualized for the quarter and nine months ended December 31, 2024 and quarter ended December 31, 2023

Excludes non-controlling interest

1. Notes pertaining to the current quarter

a) The audited interim condensed consolidated financial statements for the quarter and nine months ended December 31, 2024 have been taken on record by the Board of Directors at its meeting held on January 16, 2025. **The statutory auditors, Deloitte Haskins & Sells LLP, have expressed an unmodified audit opinion**. The information presented above is extracted from the audited interim condensed consolidated financial statements. Those interim condensed consolidated financial statements are prepared in accordance with the Indian Accounting Standards (Ind-AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and relevant amendment rules thereafter.

b) Update on stock grants

The Board, on January 16, 2025, based on the recommendations of the Nomination and Remuneration Committee, approved the annual time-based stock incentives in the form of Restricted Stock Units (RSUs) to Salil Parekh, CEO & MD having a market value of ₹3 crore as on the date of grant under the 2015 Stock Incentive Compensation Plan (2015 Plan) in accordance with the terms of his employment agreement. The RSUs will vest in line with the employment agreement. The RSUs will be granted w.e.f February 1, 2025 and the number of RSUs will be calculated based on the market price at the close of trading on a date immediately preceding the grant date. The exercise price of RSUs will be equal to the par value of the share.

2. Information on dividends for the quarter and nine months ended December 31, 2024

The Board of Directors (in the meeting held on October 17, 2024) declared an interim dividend of ₹21/- per equity share. The record date for the payment was October 29, 2024, and the same was paid on November 8, 2024. The interim dividend declared in the previous year was ₹18/- per equity share.

(in ₹)

Particulars	Quarter ended December 31, 2024	Nine months ended December 31, 2024	Quarter ended December 31, 2023
Dividend per share (par value ₹5/- each)			
Interim dividend	–	21.00	–

3. Audited financial results of Infosys Limited (Standalone information)

(in ₹ crore)

Particulars	Quarter ended December 31, 2024	Nine months ended December 31, 2024	Quarter ended December 31, 2023
Revenue from operations	34,915	1,02,455	32,491
Profit before tax	8,844	26,379	8,876
Profit for the period	6,358	18,939	6,552

The above is an extract of the detailed format of Quarterly audited financial results filed with Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Audited Financial Results are available on the Stock Exchange websites, www.nseindia.com and www.bseindia.com, and on the Company's website (URL:www.infosys.com/investors). The same can be accessed by scanning the QR code provided below.

By order of the Board
for Infosys Limited
Sd/-
Salil Parekh
Chief Executive Officer and Managing Director

Bengaluru, India
January 16, 2025

Certain statements in this release concerning our future growth prospects, our future financial or operating performance, the McCamish cybersecurity incident and the related review and notification process are forward-looking statements intended to qualify for the 'safe harbor' under the Private Securities Litigation Reform Act of 1995, which involve a number of risks and uncertainties that could cause actual results or outcomes to differ materially from those in such forward-looking statements. The risks and uncertainties relating to these statements include, but are not limited to, risks and uncertainties regarding the execution of our business strategy, increased competition for talent, our ability to attract and retain personnel, increase in wages, investments to reskill our employees, our ability to effectively implement a hybrid working model, economic uncertainties and geo-political situations, technological disruptions and innovations such as Generative AI, the complex and evolving regulatory landscape including immigration regulation changes, our ESG vision, our capital allocation policy and expectations concerning our market position, future operations, margins, profitability, liquidity, capital resources, our corporate actions including acquisitions, the amount of any additional costs, including indemnities or damages or claims, resulting directly or indirectly from the McCamish cybersecurity incident and the outcome and effect of pending litigation. Important factors that may cause actual results or outcomes to differ from those implied by the forward-looking statements are discussed in more detail in our US Securities and Exchange Commission filings including our Annual Report on Form 20-F for the fiscal year ended March 31, 2024. These filings are available at www.sec.gov. Infosys may, from time to time, make additional written and oral forward-looking statements, including statements contained in the Company's filings with the Securities and Exchange Commission and our reports to shareholders. The Company does not undertake to update any forward-looking statements that may be made from time to time by or on behalf of the Company unless it is required by law.

ನಟೇಶ್ ಅರ್ಜಿ ವಿಚಾರಣೆ ಮುಕ್ತಾಯ

ಮುಡಾ ಪ್ರಕರಣ : ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ನನ್ನ ಮನೆಯಲ್ಲಿ ನಡೆಸಿರುವ ಶೋಧ ಕಾರ್ಯ ಹಾಗೂ ಇದಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿಕೊಂಡಿರುವ ನನ್ನ ಹೇಳಿಕೆ ಕಾನೂನು ಬಾಹಿರ ಎಂದು ಆದೇಶಿಸಬೇಕು' ಎಂದು ಕೋರಿ ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಪೂರ್ಣಗೊಳಿಸಿದೆ.

ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶ ಕಾಯ್ದಿರಿಸಿರುವುದಾಗಿ ಪ್ರಕಟಿಸಿದೆ.

ಆಕ್ಷೇಪ ಏನು?: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ 14 ನಿವೇಶನಗಳನ್ನು ಹಂಚಿಕೆ ಮಾಡಲಾದ ಪ್ರಕ್ರಿಯೆ ಆರ್ಥಿಕ ಅಪರಾಧದ ಹಿನ್ನೆಲೆ ಒಳಗೊಂಡಿದೆ ಎಂದು ಆರೋಪಿಸಿ ಇ.ಡಿ ತನಿಖೆ ನಡೆಸಲು ಯತ್ನಿಸುತ್ತಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ' ಎಂದು ಅರ್ಜಿದಾರ ನಟೇಶ್ ಆಕ್ಷೇಪಿಸಿದ್ದಾರೆ.

'ಈ ಪ್ರಕರಣದಲ್ಲಿ ಶೋಧ ಮತ್ತು ಜಪ್ತಿ ನಡೆಸಲು ಜಂಟಿ ನಿರ್ದೇಶಕರು ಸಹಾಯಕ ನಿರ್ದೇಶಕರಿಗೆ ತನಿಖೆಗೆ ಅನುಮತಿ ನೀಡಿದ್ದಾರೆ. ಇದಕ್ಕೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್ಎ) ಕಲಂ 17(1)ರಲ್ಲಿ ಅವಕಾಶವಿಲ್ಲ' ಎಂದು ದೂರಿದ್ದಾರೆ.

ಪ್ರತಿಪಾದನೆ: 'ನಟೇಶ್ ಅವರಿಗೆ ಅಕ್ರಮದ ಮಾಹಿತಿ ಇತ್ತು. ಈ ನೆಲೆಯಲ್ಲಿ ಸಾಕ್ಷಿ ದಾಖಲಿಸಿಕೊಳ್ಳಲು ಅವರಿಗೆ ಸಮನ್ಸ್ ಜಾರಿ ಮಾಡಲಾಗಿದೆ. ಸದ್ಯ ನಟೇಶ್ ಅವರನ್ನು ಆರೋಪಿ ಎಂದು ಘೋಷಿಸಲಾಗಿಲ್ಲ. ಅವರ ಹೇಳಿಕೆಯನ್ನಷ್ಟೇ ದಾಖಲಿಸಿಕೊಳ್ಳಲಾಗಿದೆ. ಪಿಎಂಎಲ್ ಕಾಯ್ದೆಯ ಕಲಂ 50ರ ಅಡಿ ಸಾಕ್ಷಿ ಹೇಳಿಕೆ ದಾಖಲಿಸಿಕೊಳ್ಳಲು ಸಮನ್ಸ್ ನೀಡಲು ಅಥವಾ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲು ಇ.ಡಿಗೆ ಕಾನೂನುಬದ್ಧ ಅಧಿಕಾರವಿದೆ' ಎಂದು ಇ.ಡಿ ಪ್ರತಿಪಾದಿಸಿದೆ.

ಆಂಬುಲೆನ್ಸ್ ಪಾಳಿ ಹೆಚ್ಚಳಕ್ಕೆ ಆಕ್ಷೇಪ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಆರೋಗ್ಯ ಕವಚ 108ರ ಆಂಬುಲೆನ್ಸ್‌ಗಳ ಕಾರ್ಯಾಚರಣೆಯನ್ನು ಎರಡರ ಬದಲು ಮೂರು ಪಾಳಿಗೆ ಹೆಚ್ಚಿಸಿರುವುದನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಆರೋಗ್ಯ ಕವಚ-108 ನೌಕರರ ಪರವಾಗಿ, 'ಅಖಿಲ ಕರ್ನಾಟಕ 108 ಆ್ಯಂಬುಲೆನ್ಸ್ ನೌಕರರ ಹಿತರಕ್ಷಣಾ ಸಂಘ', 'ಕರ್ನಾಟಕ ರಾಜ್ಯ ಆರೋಗ್ಯ ಕವಚ (108) ಆ್ಯಂಬುಲೆನ್ಸ್ ನೌಕರರ ಸಂಘ', 'ಸುವರ್ಣ ಕರ್ನಾಟಕ ಆರೋಗ್ಯ ಕವಚ (108) ಆ್ಯಂಬುಲೆನ್ಸ್ ನೌಕರರ ಸಂಘ' ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಎರಡರ ಬದಲು ಮೂರು ಪಾಳಿ ನಿಗದಿಪಡಿಸಿ 2024ರ ಡಿಸೆಂಬರ್ 31ರಂದು ಹೊರಡಿಸಲಾದ ಜ್ಞಾಪನಾ ಪತ್ರವನ್ನು (ಮೆಮೊ) ರದ್ದುಪಡಿಸಬೇಕು. ಅರ್ಜಿ ಇತ್ಯರ್ಥ ಆಗುವ ತನಕ ಈ ಜ್ಞಾಪನಾ ಪತ್ರಕ್ಕೆ ತಡೆ ನೀಡಬೇಕು' ಎಂದು ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಎಸ್.ಸುಶೀಲಾ ಕೋರಿದರು.

ಇದನ್ನು ಆಲಿಸಿದ ನ್ಯಾಯಪೀಠ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಂತೆಯೇ, 108 ಆಂಬುಲೆನ್ಸ್ ಸೇವೆ ಒದಗಿಸುವ ಖಾಸಗಿ ಸಂಸ್ಥೆ ಜಿವಿಕೆ-ಇಎಂಆರ್ಐ ಕಂಪನಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಫೆ. 6ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಆರೋಗ್ಯ ಕವಚ-108 ಆಂಬುಲೆನ್ಸ್ ಸೇವೆಯ 2008ರ ಮೂಲ ಒಡಂಬಡಿಕೆ ಪ್ರಕಾರ ದಿನಕ್ಕೆ 2 ಪಾಳಿ ಇತ್ತು. ಈಗ ಮೂರು ಪಾಳಿ ನಿಗದಿಪಡಿಸಿ 2024ರ ಡಿಸೆಂಬರ್ 31ಕ್ಕೆ ಆರೋಗ್ಯ ಇಲಾಖೆ ಮೆಮೊ ಹೊರಡಿಸಿದೆ. ಈ ಸಮಯ ಅವೈಜ್ಞಾನಿಕವಾಗಿದೆ. ಬದಲಾಗಿರುವ ಪಾಳಿ ಸಮಯ ಅನುಕೂಲಕರವಾಗಿಲ್ಲ. ಅಲ್ಲದೇ ಕಾರ್ಯನಿರ್ವಹಣೆಗೆ ವಲಯವಾರು ವರ್ಗೀಕರಣ ಮಾಡಿರುವುದು ಸರಿಯಲ್ಲ' ಎಂದು ಅರ್ಜಿಯಲ್ಲಿ ದೂರಲಾಗಿದೆ.

ಜಾತಿ ನಿಂದನೆ ಆರೋಪ: ತಕರಾರು ಸಲ್ಲಿಕೆಗೆ ಜನಪ್ರತಿನಿಧಿಗಳ ಸೆಷನ್ಸ್ ಕೋರ್ಟ್ ಆದೇಶ

ಪ್ರಕರಣ ಕೈಬಿಡಲು ಕೋರಿ ಮುನಿರತ್ನ ಅರ್ಜಿ

ಪ್ರಜಾವಾಣಿ ವಾರ್ತೆ



ಮುನಿರತ್ನ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ–ಎಸ್‌ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ನಾನು ನಿರ್ದೋಷಿ. ಆದ್ದರಿಂದ, ಆರೋಪಿ ಸ್ಥಾನದಿಂದ ಬಿಡುಗಡೆ ನೀಡಬೇಕು' ಎಂದು ಕೋರಿ ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ತಕರಾರು ಸಲ್ಲಿಸಲು ದೂರುದಾರ ವೇಲು ನಾಯ್ಕರ್‌ಗೆ ಜನಪ್ರತಿನಿಧಿಗಳ ಸೆಷನ್ಸ್ ಕೋರ್ಟ್ ಆದೇಶಿಸಿದೆ.

ಈ ಕುರಿತು ಮುನಿರತ್ನ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರಕರಣದ ದೂರುದಾರ ವೇಲು ನಾಯ್ಕರ್‌ಗೆ ಈ ಮೊದಲು ನೋಟಿಸ್ ಜಾರಿಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ವೇಲು ನಾಯ್ಕರ್ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಗುರುವಾರ ಖುದ್ದು ಹಾಜರಾಗಿ ವಕಾಲತ್ತು ಸಲ್ಲಿಸಿದರು.

ವಕಾಲತ್ತು ಸ್ವೀಕರಿಸಿದ ನ್ಯಾಯಾಧೀಶರು, 'ಪ್ರಕರಣದಿಂದ ನನ್ನನ್ನು ಕೈಬಿಡಬೇಕು ಎಂದು ಕೋರಿ ಆರೋಪಿ ಮುನಿರತ್ನ, ಅಪರಾಧ ದಂಡ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 227ರ ಅಡಿಯಲ್ಲಿ ಸಲ್ಲಿಸಿರುವ ಈ ಅರ್ಜಿಗೆ ಸಂಬಂಧಿಸಿದಂತೆ ದೂರುದಾರರು ತಕರಾರು ಸಲ್ಲಿಸಬೇಕು' ಎಂದು ಆದೇಶಿಸಿ ವಿಚಾರಣೆ ಮುಂದೂಡಿದರು. ವಿಚಾರಣೆ ವೇಳೆ ಆರೋಪಿ ಮುನಿರತ್ನ ಖುದ್ದು ಹಾಜರಿದ್ದರು.

ಪ್ರಕರಣವೇನು?: 'ಘನತ್ಯಾಜ್ಯ ಸಂಗ್ರಹದ ಕಸ ವಿಲೇವಾರಿ ಮಾಡುವ ಗುತ್ತಿಗೆದಾರನಾಗಿ ಕಾರ್ಯ ನಿರ್ವಹಿಸುವ ಪರಿಶಿಷ್ಟ ಜಾತಿಗೆ ಸೇರಿದ ನನ್ನನ್ನು ಮುನಿರತ್ನ ಅವರು ವೈಯಾಲಿ ಕಾವಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ 2024ರ ಮೇ 18ರಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ' ಎಂದು ಆರೋಪಿಸಿ ವೇಲು ನಾಯ್ಕರ್ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಮುನಿರತ್ನ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲಾಗಿದೆ.

ತನಿಖೆ ನಡೆಸಿರುವ, ವಿಶೇಷ ತನಿಖಾ ತಂಡ (ಎಸ್‌ಐಟಿ) ಆರೋಪಿ ಮುನಿರತ್ನ ವಿರುದ್ಧ, ಎಸ್‌ಸಿ–ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ–1989ರ ಕಲಂ 3(1)(ಆರ್), 3(1)(ಎಸ್), 31(ಯು), 3(2)(ವಿಎ), ಭಾರತೀಯ ದಂಡ ಸಂಹಿತೆ–1860ರ ಕಲಂ 153 ಎ(1)(ಎ)(ಬಿ), 504 ಮತ್ತು 506ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಏತನ್ಮಧ್ಯೆ, ದೋಷಾರೋಪ ಪೂರ್ವದಲ್ಲಿ ತಾನು ನಿರ್ದೋಷಿ ಎಂದು ವಾದಿಸಲು ಮುನಿರತ್ನ ಈ ಅರ್ಜಿ ಸಲ್ಲಿಸಿದ್ದಾರೆ.

ಮಚ್ಚಿನಿಂದ ಹಲ್ಲೆ: ಜಾಮೀನು ನಿರಾಕರಣೆ

ಬೆಂಗಳೂರು: ರಸ್ತೆಯಲ್ಲಿ ಮಚ್ಚು ಹಿಡಿದು ಸಾರ್ವಜನಿಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾಗ ಪ್ರಶ್ನಿಸಿದವರ ಮೇಲೆ ಗಂಭೀರ ಹಲ್ಲೆ ನಡೆಸಿದ ಆರೋಪಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಜಾಮೀನು ಕೋರಿ ಪ್ರಕರಣದ ಆರೋಪಿಯಾದ ಡಿ.ಜೆ.ಹಳ್ಳಿ ಚಿಕ್ಕಣ್ಣ ಬ್ಲಾಕ್‌ನ ಅರ್ಬಾಜ್ ಖಾನ್ (26) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈತನಿಗೆ ಜಾಮೀನು ನೀಡಿದರೆ ಇಂತಹುದೇ ಮಾದರಿಯ ಕೃತ್ಯವನ್ನು ಪುನಃ ಎಸಗುವ ಸಾಧ್ಯತೆ ಇದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಆಸ್ಮಾ ಕೌಸರ್, 'ಆರೋಪಿ ಒಬ್ಬ ರೌಡಿ ಶೀಟರ್. ಈತ ಹಲವು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯೊಂದರಲ್ಲೇ ಒಟ್ಟು 10 ಕ್ರಿಮಿನಲ್ ಪ್ರಕರಣ ಬಾಕಿ ಇವೆ. ಒಂದು ವೇಳೆ ಜಾಮೀನು ನೀಡಿದರೆ ಈತ ಪುನಃ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ಸಾಧ್ಯತೆ ಇದೆ. ಅಂತೆಯೇ, ಕಾನೂನಿನ ಕುಣಿಕೆಯಿಂದಲೂ ನುಣಿಚಿಕೊಳ್ಳುವ ಶಂಕೆಯೂ ಇದೆ. ಹಾಗಾಗಿ, ಜಾಮೀನು ಮಂಜೂರು ಮಾಡಬಾರದು' ಎಂದು ಮನವಿ ಮಾಡಿದ್ದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಜಾಮೀನು ನಿರಾಕರಿಸಿದೆ.

ಪ್ರಕರಣವೇನು?: ಆರೋಪಿ ಅರ್ಬಾಜ್ ಖಾನ್ 2024ರ ಮೇ 28ರಂದು ಸಂಜೆ 5.30ರ ಸಮಯದಲ್ಲಿ ಟ್ಯಾನರಿ ರಸ್ತೆಯಲ್ಲಿರುವ ಶಾದಾಬ್ ಈದ್ಗಾ ಮಸೀದಿ ಬಳಿ ಕೈಯಲ್ಲಿ ಮಚ್ಚು ಹಿಡಿದುಕೊಂಡು, ರಸ್ತೆಯಲ್ಲಿ ಸಂಚರಿಸುತ್ತಿದ್ದ ಸಾರ್ವಜನಿಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ. ಈ ಸಂದರ್ಭದಲ್ಲಿ ನಮಾಜ್‌ಗೆ ತೆರಳುತ್ತಿದ್ದ ಸಯ್ಯದ್ ರಿಜ್ವಾನ್ ಪಾಷಾ ಅವರು ಅರ್ಬಾಜ್ ಖಾನ್ ಬಳಿ ಹೋಗಿ 'ಏಕೆ ನಿಂದಿಸುತ್ತಿರುವೆ' ಎಂದು ಪ್ರಶ್ನಿಸಿದ್ದರು.

ಇದಕ್ಕೆ ಪ್ರತಿಯಾಗಿ ಅರ್ಬಾಜ್ ಖಾನ್, 'ನೀನ್ಯಾರು ನನ್ನ ಕೇಳೋಕೆ? ನನ್ನ ತಂಟೆಗೆ ಬಂದರೆ ನಿನ್ನನ್ನು ಇವತ್ತು ಜೀವ ಸಹಿತ ಬಿಡೋದಿಲ್ಲ' ಎಂದು ಅಬ್ಬರಿಸಿ ನಂತರ ಮಚ್ಚಿನಿಂದ ಪಾಷಾ ಅವರ ತಲೆಗೆ ಹೊಡೆದು ತೀವ್ರವಾಗಿ ಗಾಯಗೊಳಿಸಿದ್ದ. ಈ ಕುರಿತು ಪಾಷಾ ಡಿ.ಜೆ.ಹಳ್ಳಿ ಠಾಣೆ ಪೊಲೀಸರಿಗೆ ದೂರು ನೀಡಿದ್ದರು. ಪೊಲೀಸರು ಎಫ್ಐಆರ್ ದಾಖಲಿಸಿ ಆರೋಪಿಯನ್ನು ಬಂಧಿಸಿದ್ದರು. ಈತನಿಗೆ 13ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ನಿರಾಕರಿಸಿತ್ತು.

ವೈಟ್ ಟಾಪಿಂಗ್ ಎಷ್ಟು ಸೂಕ್ತ: ಹೈಕೋರ್ಟ್

ಬೆಂಗಳೂರು: 'ವೈಟ್ ಟಾಪಿಂಗ್ ರಸ್ತೆಗಳು ವೈಜ್ಞಾನಿಕವಾಗಿ ಇರುತ್ತವೆಯೊ, ಇಲ್ಲವೋ ಎಂಬ ಬಗ್ಗೆ ಸೂಕ್ತ ವಿವರಣೆ ನೀಡಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ನಿರ್ದೇಶಿಸಿದೆ.

ಬೆಂಗಳೂರು ಮಹಾನಗರದ ರಸ್ತೆಗಳ ದುಃಸ್ಥಿತಿ ಕುರಿತಂತೆ ಕೋರಮಂಗಲದ ವಿಜಯ್ ಮೆನನ್ ಸೇರಿ ಒಟ್ಟು ನಾಲ್ವರು, 2015ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದನ್ನು ಗಮನಿಸಿದ ನ್ಯಾಯಪೀಠ, 'ರಸ್ತೆ ಗುಂಡಿ ಮುಚ್ಚುವ ದುರಸ್ತಿ ಕಾರ್ಯವನ್ನು ಆಗಾಗ್ಗೆ ಕೈಗೊಳ್ಳುತ್ತಾ ಇರುತ್ತೀರೋ ಅಥವಾ ಮುಂಗಾರು ಮಳೆ ಬಂದಾಗ ಮಾತ್ರವೇ ನಡೆಸುತ್ತೀರೋ, ಇಲ್ಲವೇ ಪಿಐಎಲ್ ದಾಖಲಾದಾಗ ಅಷ್ಟೇ ಮಾಡುತ್ತೀರೋ' ಎಂದು ಬಿಬಿಎಂಪಿ ಪರ ವಕೀಲರನ್ನು ಪ್ರಶ್ನಿಸಿತು.

ಅಂತೆಯೇ, 'ವೈಟ್ ಟಾಪಿಂಗ್ ರಸ್ತೆಗಳು ಸೂಕ್ತವಲ್ಲ ಎಂಬ ಹಲವು ವರದಿಗಳಿವೆ. ಸಾಮಾನ್ಯವಾಗಿ ಡಾಂಬರು ರಸ್ತೆ ಮೇಲೆ ಮಳೆ ನೀರು ಬಿದ್ದರೆ ಅದು ಮಣ್ಣಿನಲ್ಲಿ ಇಂಗಿ ಹೋಗುತ್ತದೆ. ಆದರೆ, ವೈಟ್ ಟಾಪಿಂಗ್ ರಸ್ತೆಯಲ್ಲಿ ಹಾಗಾಗುವುದಿಲ್ಲ. ಆದ್ದರಿಂದ, ವೈಟ್ ಟಾಪಿಂಗ್ ರಸ್ತೆ ವೈಜ್ಞಾನಿಕವಾಗಿ ಸರಿಯೇ, ತಪ್ಪೇ ಎಂಬುದನ್ನು ನ್ಯಾಯಾಲಯಕ್ಕೆ ತಿಳಿಸಿ' ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಫೆ. 20ಕ್ಕೆ ಮುಂದೂಡಿತು.

₹3 ಲಕ್ಷ ಮೌಲ್ಯದ ವಾಚ್ ಕದ್ದು ಬ್ರೆಜಿಲ್‌ಗೆ ಪರಾರಿ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನದ ಟರ್ಮಿನಲ್ -2 ರಲ್ಲಿರುವ 'ಡ್ಯೂಟಿ ಫ್ರೀ' ಮಳಿಗೆಗೆ ಭೇಟಿ ನೀಡಿದ ಭಾರತೀಯ ಪ್ರಯಾಣಿಕರೊಬ್ಬರು ₹3.32 ಲಕ್ಷ ಮೌಲ್ಯದ ಎರಡು ಕೈಗಡಿಯಾರ ಕದ್ದು ಬ್ರೆಜಿಲ್‌ಗೆ ಹಾರಿದ್ದಾರೆ.

ಜ.4ರಂದು ಕಳ್ಳತನ ನಡೆದಿದೆ. ಅದಾದ ಎರಡು ದಿನದ ನಂತರ ಸಿಸಿಟಿವಿ ದೃಶ್ಯಗಳ ಪರಿಶೀಲನೆ ವೇಳೆ ಕಳ್ಳತನ ನಡೆದಿರುವುದು ಗೊತ್ತಾಗಿದೆ. ವಾಚ್ ಕದ್ದ ಆರೋಪಿ ರವಿ ಗಾಮಾ ಡೇಸಾ ವಿರುದ್ಧ ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ಜ.14ರಂದು ದೂರು ದಾಖಲಾಗಿದೆ. ವಿಮಾನ ಹೊರಡುವ ಮುನ್ನ ವಾಚ್ ಖರೀದಿಸಲು 'ಡ್ಯೂಟಿ ಫ್ರೀ' ಮಳಿಗೆಗಳ ಸಾಲಿನಲ್ಲಿರುವ ಇಥೋಸ್ ಕೈಗಡಿಯಾರ ಅಂಗಡಿಗೆ ಭೇಟಿ ನೀಡಿದ ಆರೋಪಿ ಮೊದಲು ಟ್ಯಾಗ್ ಹೈಯರ್ ವಾಚ್ ಖರೀದಿಸಿ ಬಿಲ್ ಮಾಡಿಸಿದ.

ಅದಾದ ನಂತರ ಮತ್ತೆ ಮೂರು ವಾಚ್ ಖರೀದಿಸಿದರು. ನಂತರ ಇನ್ನಷ್ಟು ದುಬಾರಿ ವಾಚ್ ತೋರಿಸುವಂತೆ ಸಿಬ್ಬಂದಿಗೆ ತಿಳಿಸಿದ್ದಾನೆ. ಈ ನಡುವೆ ₹94,500 ಸಾವಿರ ಮೌಲ್ಯದ ಫ್ರೆಡೆರಿಕ್ ಕಾನ್‌ಸ್ಟಂಟ್ ವಾಚ್ ಅನ್ನು ಜೇಬಿನಲ್ಲಿಟ್ಟುಕೊಂಡಿದ್ದಾನೆ. ಬಿಲ್ಲಿಂಗ್ ಸಮಯದಲ್ಲಿ ₹2.37 ಲಕ್ಷದ ಮತ್ತೊಂದು ಫ್ರೆಡೆರಿಕ್ ಕಾನ್‌ಸ್ಟಂಟ್ ವಾಚ್ ಅನ್ನು ಬ್ಯಾಗ್‌ನಲ್ಲಿಟ್ಟುಕೊಂಡು ವಿಮಾನ ಹೊರಡುವ ಸಮಯವಾಗಿದೆ ಎಂದು ಅವಸರದಲ್ಲಿ ಕಾಲ್ಕಿತ್ತಿದ್ದಾನೆ.

ಪರಿಶೀಲನೆ ವೇಳೆ ಎರಡು ವಾಚ್ ಮಾಯವಾಗಿರುವ ಬಗ್ಗೆ ತಿಳಿದು ಸಿಸಿಟಿವಿ ದೃಶ್ಯ ಪರಿಶೀಲಿಸಿದಾಗ ಆರೋಪಿಯ ಕೈಚಳಕ ಗಮನಕ್ಕೆ ಬಂದಿದೆ. ಮಳಿಗೆಯ ವ್ಯವಸ್ಥಾಪಕರು ಪ್ರಯಾಣಿಕನ ವಿರುದ್ಧ ದೂರು ನೀಡಿದ್ದಾರೆ. ಆರೋಪಿ ಭಾರತಕ್ಕೆ ಬಂದರೆ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಫ್ಲ್ಯಾಟ್ ಮಾರಾಟ ಹಣ ಪಡೆದು ವಂಚನೆ: ಎಫ್ಐಆರ್ ದಾಖಲು

ಬೆಂಗಳೂರು: 'ಹಣ ಪಡೆದು ಫ್ಲ್ಯಾಟ್‌ಗಳನ್ನು ನೋಂದಣಿ ಮಾಡಿಕೊಟ್ಟು ನಂತರ ದ್ರೋಹ ಎಸಗಿದ್ದಾರೆ' ಎಂದು ಆರೋಪಿಸಿ ನೀಡಿರುವ ದೂರು ಮೇರೆಗೆ ಆರ್‌ಆರ್‌ಬಿಸಿ ಪ್ರಥಮ್ ಅಪಾರ್ಟ್‌ಮೆಂಟ್ ಬಿಲ್ಡರ್ಸ್‌ನ ಮೂವರ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಪನಿ ನಿರ್ದೇಶಕರಾದ ರಂಜಿತ್ ಸಾಹ, ಹರೀಶ್ ಸಾಹ, ಮಿಥೇಶ್ ಸಾಹ ವಿರುದ್ಧ ಪ್ರಕರಣ ದಾಖಲಾಗಿದೆ. ವಿದ್ಯಾಸಾಗರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಬನಶಂಕರಿ ಎರಡನೇ ಹಂತದಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಲು ಜಂಟಿ ಕರಾರು ಪತ್ರ ಮಾಡಿಕೊಂಡಿದ್ದ ಆರ್‌ಆರ್‌ಬಿಸಿ ಪ್ರಥಮ್ ಸಂಸ್ಥೆ, ನೆಲ ಮತ್ತು ಮೂರು ಅಂತಸ್ತಿನ ಕಟ್ಟಡ ನಿರ್ಮಾಣ ಮಾಡಿತ್ತು. ಕಟ್ಟಡದಲ್ಲಿ ಬಿಲ್ಡರ್ಸ್ ಪಾಲಿಗೆ ಬಂದ ಫ್ಲ್ಯಾಟ್‌ಗಳ ಪೈಕಿ 102ನೇ ನಂಬರಿನ ಫ್ಲ್ಯಾಟ್ ಅನ್ನು ದೂರುದಾರರ ಹೆಸರಿಗೆ ನೋಂದಣಿ ಮಾಡಿಕೊಟ್ಟಿತ್ತು. ಮಾರಾಟ ಮಾಡುವ ಸಂದರ್ಭದಲ್ಲಿ ಫ್ಲ್ಯಾಟ್‌ಗಳ ಮೇಲೆ ಯಾವುದೇ ವಹಿವಾಟು ನಡೆದಿಲ್ಲ ಎಂದು ದಾಖಲೆ ತೋರಿಸಿದ್ದರು. ಆದರೆ, ಬಿಲ್ಡರ್ಸ್ ಪಾಲಿನ ಹತ್ತು ಫ್ಲ್ಯಾಟ್‌ಗಳನ್ನು 2021ರ ಸೆ.7ರಂದು ಸತ್ಯಚಂದನ್ ಎಂಬವರ ಜತೆಗೆ ಮಾರಾಟ ಕರಾರು ಮಾಡಿಕೊಂಡಿರುವುದು ಗೊತ್ತಾಗಿದೆ' ಎಂದು ದೂರು ನೀಡಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಅಇಂ.ವಿ/ಪ್ರ(ನಿ)/ಬೆಂ.ಮ.ಕ್ಷೇ.ವ(ದ)/ಕಾನಿಇಂ(ಕ)/ಸಕಾನಿಇಂ–4/ಇಪಿಆರ್–25/2024–25/7951–53 ದಿ:15.01.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯ, ವಿಚಾರಣೆಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ದ)/ಕಾನಿಇಂ(ಕ)/ಸಕಾಇಂ–1&4/2024–25/ಇಪಿಆರ್–65 ರಿಂದ 70 ಮತ್ತು 72 ರಿಂದ 80 **ದಿನಾಂಕ:07.01.2025ರ ಮೂಲಕ ಸಂಪೂರ್ಣ ಟರ್ನ್‌ಕೀ ಟೆಂಡರ್ ಆಧಾರದ ಮೇಲೆ** ಬೆಂಗಳೂರು ಮಹಾನಗರ ಕ್ಷೇತ್ರ ವಲಯ ದಕ್ಷಿಣ ಪ್ರಸರಣ (ನಿರ್ವಹಣೆ) ವೃತ್ತದಲ್ಲಿ ಸೋಮನಹಳ್ಳಿ ಮತ್ತು ಹೂಡಿ ಟಿಎಲ್‌ಎಮ್ ಉಪವಿಭಾಗದ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗಳಿಗೆ ಸ್ಥಾಪಿಸಲು ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ	ಕಾಮಗಾರಿಯ ಹೆಸರು
1	ಟಿಎಲ್‌ಎಮ್ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 220ಕೆವಿ ಹೂಡಿ–ಬೇಗೂರ್ (ಬಯಾಲ್) ವಿದ್ಯುತ್ ಮಾರ್ಗದ ವೈಟ್‌ಸಿಟಿಯಲ್ಲಿರುವ ಪ್ರಸರಣ ವಿದ್ಯುತ್ ಗೋಪುರ ಸಂಖ್ಯೆ: 13 ಮತ್ತು 16ರ ನಡುವೆ 220 ಕೆವಿ ಡಿಬಿ/ಡಿಇ+3 ಎನ್‌ಬಿಟಿ ಎನ್‌ಆರ್‌ಎಸ್–ಲಗ್ಗೆರೆ ವಿನ್ಯಾಸ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
2	ಟಿಎಲ್‌ಎಮ್ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಹೂಡಿ–ಬಿಡಬ್ಲ್ಯೂಟಿಸಿ–1&2 (ಹೆಚ್‌ಎಎಲ್–ಕೆ.ಬಿ.ಹಳ್ಳಿ & ಹೆಚ್‌ಎಎಲ್–ಜಿಟಿಆರ್‌ಇ) ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಜಗದೀಶನಗರದಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ:5 ಮತ್ತು 6ರ ನಡುವೆ 66ಕೆವಿ ಡಿಡಿ+0 ಎನ್‌ಬಿಟಿ ಕೆಪಿಟಿಸಿಎಲ್ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
3	ಟಿಎಲ್‌ಎಮ್ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಹೂಡಿ–ಬಿಡಬ್ಲ್ಯೂಟಿಸಿ–1&2 (ಹೆಚ್‌ಎಎಲ್–ಕೆ.ಬಿ.ಹಳ್ಳಿ & ಹೆಚ್‌ಎಎಲ್–ಜಿಟಿಆರ್‌ಇ) ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಗರುಡಾಚಾರಪಾಳ್ಯದಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 9 ಮತ್ತು 10ರ ನಡುವೆ 110 ಕೆವಿ ಡಿಡಿ+3 ಎನ್‌ಬಿಟಿ ಕೆಪಿಟಿಸಿಎಲ್ ವಿನ್ಯಾಸದ & 110 ಕೆವಿ ಡಿಡಿ+0 ಎನ್‌ಬಿಟಿ ಕೆಪಿಟಿಸಿಎಲ್ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
4	ಟಿಎಲ್‌ಎಮ್ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಐಟಿಐ–ಹೆಬ್ಬಾಳ–1&2 (ಐಟಿಐ–ಬಾಣಸವಾಡಿ & ಐಟಿಐ–ಪಾಟರಿ ರೋಡ್) ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ರಾಮಮೂರ್ತಿನಗರದಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 9 ಮತ್ತು 11ರ ನಡುವೆ 2 ಸಂಖ್ಯೆಯ 66ಕೆವಿ ಡಿಡಿ+3 (9 ಆರ್) ಎನ್‌ಬಿಟಿ ಕೆಪಿಟಿಸಿಎಲ್ ವಿನ್ಯಾಸದ & 66ಕೆವಿ ಡಿಡಿ+3 ಎನ್‌ಬಿಟಿ ಕೆಪಿಟಿಸಿಎಲ್ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
5	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 230ಕೆವಿ ಯರಂಡನಹಳ್ಳಿ–ಹೊಸೂರು ಪ್ರಸರಣ ವಿದ್ಯುತ್ ಮಾರ್ಗದ ರಾಘವೇಂದ್ರ ಕಾಲೋನಿ, ಬನಹಳ್ಳಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 9 ಮತ್ತು 10ರ ನಡುವೆ ಡಿಡಿ+0 ಗದಗ–ಬಾಗಲಕೋಟೆ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
6	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 230ಕೆವಿ ಯರಂಡನಹಳ್ಳಿ–ಹೊಸೂರು ಪ್ರಸರಣ ವಿದ್ಯುತ್ ಮಾರ್ಗದ ಟಿವಿಎಸ್ ಮುಖ್ಯ ರಸ್ತೆ ದಾಸನಪುರದಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 46 ಮತ್ತು 47ರ ನಡುವೆ ಡಿಡಿ+0 ಗದಗ–ಬಾಗಲಕೋಟೆ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
7	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 220ಕೆವಿ ಸೋಮನಹಳ್ಳಿ–ಕೋಡೇಸ್ ಪ್ರಸರಣ ವಿದ್ಯುತ್ ಮಾರ್ಗದ ಬಿಎಮ್‌ಟಿಸಿ ಬಸ್ ನಿಲ್ದಾಣ ಜಂಬೂಸವಾರಿ ದಿಣ್ಣೆಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 1 ಮತ್ತು 3ರ ನಡುವೆ 220ಕೆವಿ ಎಮ್‌ಡಿ+6 ಮೈಲಸಂದ್ರ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
8	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಸೋಮನಹಳ್ಳಿ–ಜಿಗಣಿ–2 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಕಲ್ಕರೆ ಅರಣ್ಯ ವ್ಯಾಪ್ತಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 96, 97 ಮತ್ತು 98ರ ನಡುವೆ ಒಂದು ಸಂಖ್ಯೆಯ 110ಕೆವಿ ಡಿಡಿ+0 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ 110ಕೆವಿ ಡಿಡಿ+6 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ವಿದ್ಯುತ್ ಗೋಪುರಗಳನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
9	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 230ಕೆವಿ ಯರಂಡನಹಳ್ಳಿ–ಹೊಸೂರು ಪ್ರಸರಣ ವಿದ್ಯುತ್ ಮಾರ್ಗದ ಮಾಚೇನಹಳ್ಳಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 34 ಮತ್ತು 35ರ ನಡುವೆ ಡಿಡಿ+0 ಗದಗ–ಬಾಗಲಕೋಟೆ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
10	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಸುಬ್ರಮಣ್ಯಪುರ–ರೇಮ್ಕೋ–2 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಗ್ಯಾಸ್ ಗೋಡೌನ್ ರಸ್ತೆಯ ಅರೆಹಳ್ಳಿ ವ್ಯಾಪ್ತಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 7 ಮತ್ತು 8ರ ನಡುವೆ ಒಂದು ಸಂಖ್ಯೆಯ 66ಕೆವಿ ಡಿಡಿ+3 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
11	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಸುಬ್ರಮಣ್ಯಪುರ–ರೇಮ್ಕೋ–2 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಗ್ಯಾಸ್ ಗೋಡೌನ್ ರಸ್ತೆಯ ಅರೆಹಳ್ಳಿ ವ್ಯಾಪ್ತಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 10 ಮತ್ತು 11ರ ನಡುವೆ ಒಂದು ಸಂಖ್ಯೆಯ 66ಕೆವಿ ಡಿಡಿ+6 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
12	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66ಕೆವಿ ಸೋಮನಹಳ್ಳಿ–ಸುಬ್ರಮಣ್ಯಪುರ–1 ಪ್ರಸರಣ ವಿದ್ಯುತ್ ಮಾರ್ಗದ ಬಾಲಾಜಿ ಲೇಔಟ್ ಪಾರ್ಕ್, ರಘುವನಹಳ್ಳಿ ಮತ್ತು ಬಲಮುರಿ ಗಣೇಶ ದೇವಸ್ಥಾನದ ಹತ್ತಿರ, ಮಂಜುನಾಥನಗರ ವ್ಯಾಪ್ತಿಯಲ್ಲಿರುವ 66ಕೆವಿ ಡಿಡಿ+3 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
13	ಟಿಎಲ್‌ಎಮ್ ಸೋಮನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 220ಕೆವಿ ಸೋಮನಹಳ್ಳಿ–ಶೋಭಾ ಡ್ರೀಮ್ಸ್ ಮತ್ತು ಸೋಮನಹಳ್ಳಿ–ಮೈಲಸಂದ್ರ–1 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಪಿಲ್ಲಗನಹಳ್ಳಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ 34 & 35 ನಡುವೆ 66ಕೆವಿ ಡಿಬಿ/ಡಿಇ+6 220ಕೆವಿ ಎನ್‌ಬಿಟಿ, ಕೆಪಿಟಿಸಿಎಲ್ ಎನ್‌ಆರ್‌ಎಸ್–ಲಗ್ಗೆರೆ ವಿನ್ಯಾಸದ ವಿದ್ಯುತ್ ಗೋಪುರ ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.
14	ಟಿಎಲ್‌ಎಮ್ ಹೂಡಿ ಉಪ ವಿಭಾಗ ವ್ಯಾಪ್ತಿಯ ಹಾಲಿ ಇರುವ 66 ಕೆವಿ ಹೂಡಿ–ಪಾಟ್ಟರಿ ರಸ್ತೆ (ಹೊಸಕೋಟೆ–1), ಹೂಡಿ–ಹೊಸಕೋಟೆ (ಹೊಸಕೋಟೆ–2) ಜೋಡಿ ಪ್ರಸರಣ ವಿದ್ಯುತ್ ಮಾರ್ಗದಅವಲಹಳ್ಳಿ ಮತ್ತು ಮೇಡಹಳ್ಳಿಯಲ್ಲಿರುವ (ಎಲ್ಲಮ್ಮ ಕೆರೆ) ವಿದ್ಯುತ್ ಗೋಪುರ ಸಂಖ್ಯೆ 14 ರಿಂದ 18 ನಡುವಿನ ವಿದ್ಯುತ್ ಗೋಪುರಗಳನ್ನು ಸ್ಥಳಾಂತರಿಸುವುದು.
15	ಟಿಎಲ್‌ಎಮ್ ಸೋಮನಹಳ್ಳಿ ಹೂಡಿ ವಿಭಾಗ ವ್ಯಾಪ್ತಿಯ ಹಾಲಿ ಇರುವ 220 ಕೆವಿ ಹೂಡಿ–ಮಾಲೂರು ಪ್ರಸರಣ ವಿದ್ಯುತ್ ಮಾರ್ಗದ ಅನುಗ್ರಹ ಲೇಔಟ್‌ನಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ 16 & 22 ನಡುವೆ 3 ಸಂಖ್ಯೆಯ ಹೊಸ 220ಕೆವಿ ಡಿಬಿ/ಡಿಇ+6 220ಕೆವಿ ಎನ್‌ಬಿಟಿ ಎನ್‌ಆರ್‌ಎಸ್–ಲಗ್ಗೆರೆ ವಿನ್ಯಾಸ ಮತ್ತು 220ಕೆವಿ ಡಿಬಿ/ಡಿಇ+0 ಎನ್‌ಬಿಟಿ ಎನ್‌ಆರ್‌ಎಸ್–ಲಗ್ಗೆರೆ ವಿನ್ಯಾಸದ ವಿದ್ಯುತ್ ಗೋಪುರ ಅಳವಡಿಸಿ ಲಂಬಾಂತರವನ್ನು ಹೆಚ್ಚಿಸುವುದು.

KPPP ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in.** ಹೈಪರ್ ಲಿಂಕ್ **"E Procurement KPTCL"** ಅಥವಾ **https://kppp.karnataka.gov.in** ರಿಂದ ದಿನಾಂಕ: **17.01.2025 ರಂದು ಅಥವಾ ನಂತರ** ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿರ್ವಹಣೆ),
ಬಿಎಂಎಜೆಡ್ ದಕ್ಷಿಣ ವೃತ್ತ, ಕವಿಪ್ರನಿನಿ, ಬೆಂಗಳೂರು–560 009

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

General

Nightingales Medical Trust

EXECUTIVE DIRECTOR

Nightingales Medical Trust, a pioneering NGO dedicated to the wellbeing of the elderly and persons with dementia, is looking for an **Executive Director** to spearhead the organization through impactful initiatives that transform senior care in India.

Why Join NMT?
- Lead a dynamic team of 260+professionals.
- Shape and scale innovative elder care programs
- Create sustainable, impactful partnerships
- Redefine dementia and eldercare in India

We are looking for a candidate with:
- Proven leadership in healthcare, NGOs or social work
- Expertise in fund raising and strategic vision
- Genuine passion for elder and dementia care.

More information at: www.nightingaleseldercare.com
Job Location: Kasturinagar, Bangalore-560043.
Apply to: secretary@nightingaleseldercare.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

FOR SALE
About 22000 Sq.Ft. Industrial Plot
at Hebbal Industrial Area, H.P. Gas Main Road, Mysore.
Only genuine buyers need Contact :
9916930069

REAL ESTATE SELLING

Commerical

Basavanagudi

PRIME COMMERCIAL Lease 65 years Suits trauma hospital, luxury mall etc. Due diligence done. Yearly rent potential Rs 3 cr+ No brokers / idle enquiries. Builders or Investors with funds ready only may message on whatsapp: 99029-15651

Industrial & Factory

General

SALE/ RENT, Peenya 5000, 10000, 20000 1 to 5 acres. (2) Dabaspet KIADB Land/ Devanahalli 1- 10 acres available. NAIDU 9902030789

BUSINESS

Business to Business

Business

AVAILABLE IN BULK and retailImported Olive wood planks suitable for Live edge/ Epoxy resin furniture. contact Mobl.9900229980.

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

PERSONAL

Change of Name

I, NUTHANKUMAR KALLUR YOGAMURTHI CHAR S/O Yogamurthachar K N Residing at Kerebandipalya, Kallur, Gubbi Taluk, Tumakuru-572220 Have Changed my Name as NUTHANKUMAR KALLUR YOGAMURTHACHAR vide affidavit Dated:16.01.2025 before Notary K.V.MANI, Bengaluru

I, Preethi Shankar D/O, Mohan Babu B R/o #2, Sri Ranga, 3-A Cross, Svg Nagar, Mudalapalya, Bangalore -560072 have changed my name to Preethi M for all purposes.

CHANGE OF NAME
I, **Indira,** residing at No 949, Sathyavarna, 6th Cross, 10th Main, Banashankari, 1st Stage, 2nd Block, Bengaluru-560050, have changed my name to **INDIRA VITTAL KOPPAD** Vide affidavit dated 16.01.2025 sworn before Notary R. Basavaraja, Bengaluru. Henceforth I shall be called as **INDIRA VITTAL KOPPAD** only

I, PRAMEELA GANGADHARACHARI W/O Yogamurthachar K N Residing at Kallur,Tumakuru-572220 Have Changed my Name as PRAMILA GANGADHARACHARI vide affidavit Dated:16.01.2025 before Notary K.V.MANI,Bengaluru

CHANGE OF NAME
I, **Prananjali,** residing at No 949, Sathyavarna, 6th Cross, 10th Main, Banashankari, 1st Stage, 2nd Block, Bengaluru-560050, have changed my name to **PRANANJALI VITTAL KOPPAD** Vide affidavit dated 16.01.2025 sworn before Notary R. Basavaraja, Bengaluru. Henceforth I shall be called as **PRANANJALI VITTAL KOPPAD** only

I, BAREGUNDE Krupa Yadiyal R/o 'Durga Krupa', Kandavara, Udupi, Karnataka- 576217 have changed my daughter's name from GOWRI NERAMBALLY to GOWRI NERAMBALLI Vide affidavit dated 7/1/2025 before Notary Puttaramaiah, Bengaluru

PRAKASH C. #168, Ward-2, 2nd Cross, Kashi Eshwara Temple Road, Agara, Bengaluru-102, have changed my name to PRAKSH T.C. Vide affidavit dated- 16/01/2025

CHANGE OF NAME
I, Venkataravanappa Munichowdappa S/o Munichowdappa Residing at Harapanayakanahalli, H.Gollahalli, Mulbagal, Kolar, Karnataka-563131, Declare that my name is mentioned incorrectly in passport. My Given Name is **Venkataravanappa** and Surname is **Munichowdappa.** Declare that **M Venkataravanappa, Venkataravanappa M** and **Venkataravanappa Munichowdappa** all names refers to one and the same person, i.e. myself only. My spouse's full name is **Sokkamma Thammannagowda Munisonnappa** vide affidavit dated 15.01.2025. Sworn before Notary P.M. Sadhashivaiah, Mulabagal Taluk, Kolar Dist. and same should be considered for all future purposes.

PUBLIC NOTICE

PUBLIC NOTICE

My client **Mrs. Jayanthi Madhukar,** Aged 55 years, W/o late Madhukar Rajagopal, Residing at Flat No C-1202, Vaswani Pinnacle Apartments, Whitefield Main Road, Whitefield, Bangalore-560066 intends to sell the following Schedule property purchased under the Sale Deed dated 15/02/2007, executed by M/s Usha Martin Power Company Limited, Represented by its duly authorized Constituted Attorney Mr. Bharat Suwalal Desadla, Along with M/s Rohan Builders Represented by its Partner Mr. Sanjay Khushalchand Lunkad, Registered as Document No-BAS-1-27311-2006-07 of Book I and stored in CD No-BASD305, in the Office of the Senior Sub-Registrar, Bangalore South Taluk.

SCHEDULE

Residential Flat bearing No-A-1105, Eleventh Floor, Block 1 Building No-A called "ABOLI" in the project known as "ROHAN VASANTHA" situated at Marathahalli, Munnekolalu Village, Varthur Hobli, Bangalore South Taluk, The Said Original Sale Deed dated 15/02/2007 is reported to have been Lost on 06/11/2012 and the Complaint was also filed with the Jurisdictional HAL Police Station, Bangalore, for tracing the same, Any one finding the afore said property document is hereby requested to hand over the same to the undersigned in person at the address mentioned hereunder within 15 days from the date of publication of this Notification.

Sd/-
VEENA J, B.A, LLB., Advocate
No-247, AKG Colony, Channasandra, Kadugodi post, Bengaluru-560 067.
Mob-9980174366.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752
+91 9886213331
+91 9731810277 | +91 9900428036
080-45557163/164
*Conditions apply

ಟೆಕಿ ಆತ್ಮಹತ್ಯೆ ಪ್ರಕರಣ ಸೋದರ ಮಾವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್‌ವೊಂದರ ಕೊಠಡಿಯಲ್ಲಿ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಟೆಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣದಲ್ಲಿ ಮೃತ ಯುವತಿಯ ಸೋದರ ಮಾವನನ್ನು ಎಚ್‌ಎಎಲ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕೆ.ಆರ್. ಪುರದ ಅಪಾರ್ಟ್‌ಮೆಂಟ್‌ವೊಂದರ ನಿವಾಸಿ, ವಿಮಾ ಏಜೆಂಟ್ ಪ್ರವೀಣ್ ಸಿಂಗ್ (42) ಬಂಧಿತ ಆರೋಪಿ. ಈತ ಆತ್ಮಹತ್ಯೆ ಮಾಡಿಕೊಂಡ ಯುವತಿಯ ತಂದೆಯ ತಂಗಿಯ ಗಂಡ.

ಆರೋಪಿಯ ಪತ್ನಿ ಸಂಧ್ಯಾ ಸಿಂಗ್ ವಿರುದ್ಧವೂ ಪ್ರಕರಣ ದಾಖಲಾಗಿದ್ದು, ಆಕೆಯನ್ನೂ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ 24 ವರ್ಷದ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಯುವತಿಯ ನಗ್ನ ಫೋಟೊ ಹಾಗೂ ವಿಡಿಯೊಗಳನ್ನು ಆರೋಪಿ ತನ್ನ ಮೊಬೈಲ್‌ನಲ್ಲಿ ಇಟ್ಟುಕೊಂಡು ಲೈಂಗಿಕ ಸಂಪರ್ಕ ಹೊಂದುವಂತೆ ಬಲವಂತ ಮಾಡುತ್ತಿದ್ದ. ಆರೋಪಿ ನೀಡುತ್ತಿದ್ದ ಕಿರುಕುಳದಿಂದ ನೊಂದಿದ್ದ ಪುತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆರೋಪಿಸಿ ಯುವತಿ ತಾಯಿ ನೀಡಿರುವ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಆತ್ಮಹತ್ಯೆ ಮಾಡಿಕೊಂಡ ಯುವತಿಗೆ ಆರೋಪಿ ಪ್ರವೀಣ್ ಸಿಂಗ್ ಸೋದರ ಮಾವ ಆಗಬೇಕು. ಕಂಪನಿಗೆ ರಜೆಯಿದ್ದ ದಿನಗಳಲ್ಲಿ ಯುವತಿ ಮಾವನ ಮನೆಯಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದರು. ಪ್ರವೀಣ್ ಸಿಂಗ್, ಸಂಧ್ಯಾ ಸಿಂಗ್ ಅವರೊಂದಿಗೆ ಯುವತಿ ಪ್ರವಾಸಕ್ಕೂ ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಆರೋಪಿ ಫೋಟೊ ತೆಗೆದುಕೊಳ್ಳುತ್ತಿದ್ದ’ ಎಂದು ಪೊಲೀಸರು ಹೇಳಿದರು.

ಪ್ರವೀಣ್ ಸಿಂಗ್

‘ಆರೋಪಿಯ ಕಿರುಕುಳದಿಂದ ನೊಂದಿದ್ದ ಯುವತಿ ಹೋಟೆಲ್‌ನ ಕೊಠಡಿಯಲ್ಲಿ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದರಿಂದ ಸುಟ್ಟ ಗಾಯವಾಗಿತ್ತು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಯುವತಿ ಮೃತಪಟ್ಟಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಪೆನ್‌ಡ್ರೈವ್‌ನಲ್ಲಿ ನಗ್ನ ಫೋಟೊ ಹಾಗೂ ವಿಡಿಯೊಗಳನ್ನು ಇಟ್ಟುಕೊಂಡು ಪ್ರವೀಣ್ ಸಿಂಗ್ ಕಿರುಕುಳ ನೀಡುತ್ತಿದ್ದ ವಿಚಾರವನ್ನು ತನ್ನ ಸ್ನೇಹಿತನ ಬಳಿ ಯುವತಿ ಹೇಳಿಕೊಂಡಿದ್ದರು. ಯುವತಿ ಮೃತಪಟ್ಟ ಬಳಿಕ ಅವರ ತಾಯಿಯನ್ನು ಭೇಟಿಮಾಡಿದ್ದ ಸ್ನೇಹಿತ ಈ ವಿಚಾರವನ್ನು ತಿಳಿಸಿದ್ದರು’ ಎಂದು ಮೂಲಗಳು ಹೇಳಿವೆ.

‘ಆರೋಪಿಯ ಮೊಬೈಲ್ ಹಾಗೂ ಪೆನ್‌ಡ್ರೈವ್ ಜಪ್ತಿ ಮಾಡಿಕೊಂಡು ಪರಿಶೀಲನೆ ನಡೆಸಲಾಗಿದೆ. ಸದ್ಯದ ತನಿಖೆಯಲ್ಲಿ ಯಾವುದೇ ವಿಡಿಯೊ ಹಾಗೂ ಫೋಟೊಗಳು ಪತ್ತೆಯಾಗಿಲ್ಲ. ಹೆಚ್ಚಿನ ತನಿಖೆಗಾಗಿ ಎರಡನ್ನೂ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಬಂದೂಕು ಪರವಾನಗಿ ರದ್ದು ಬೇಡ: ದರ್ಶನ್ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂದೂಕು ಪರವಾನಗಿ ರದ್ದತಿಗೆ ಸಂಬಂಧಿಸಿದಂತೆ ಪೊಲೀಸರು ನೀಡಿದ್ದ ನೋಟಿಸ್‌ಗೆ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರು ಉತ್ತರಿಸಿದ್ದಾರೆ. ಪರವಾನಗಿ ರದ್ದು ಮಾಡದಂತೆ ಮನವಿ ಮಾಡಿದ್ದಾರೆ.

ಬೆಂಗಳೂರು ಪೊಲೀಸ್ ಕಮಿಷನರೇಟ್‌ನ ಆಡಳಿತ ವಿಭಾಗದ ಡಿಸಿಪಿ ಪದ್ಮಿನಿ ಸಾಹು ಅವರು ಜ.7ರಂದು ಬಂದೂಕು ಪರವಾನಗಿ ರದ್ದುಗೊಳಿಸುವ ಸಂಬಂಧ ನೋಟಿಸ್ ಜಾರಿ ಮಾಡಿದ್ದರು. ಈ ನೋಟಿಸ್‌ಗೆ ದರ್ಶನ್ ಉತ್ತರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದರ್ಶನ್

‘ನನಗೆ ಬಂದೂಕು ಪರವಾನಗಿ ಬೇಕು. ನಾನು ಸೆಲೆಬ್ರಿಟಿ ಆಗಿದ್ದು, ಹೋದ ಕಡೆ ಹೆಚ್ಚಿನ ಜನರು ಸೇರುತ್ತಾರೆ. ಈ ವೇಳೆ ನನ್ನ ಆತ್ಮರಕ್ಷಣೆ ಬಹಳ ಮುಖ್ಯವಾಗಿದೆ. ಖಾಸಗಿ ಭದ್ರತಾ ಸಿಬ್ಬಂದಿ ನೇಮಿಸಿಕೊಂಡಿದ್ದರೂ ವೈಯಕ್ತಿಕ ರಕ್ಷಣೆಗಾಗಿ ಬಂದೂಕು ಪರವಾನಗಿ ಅವಶ್ಯಕತೆಯಿದೆ. ಬಂದೂಕು ಪರವಾನಗಿ ರದ್ದು ಮಾಡಬೇಡಿ’ ಎಂದು ದರ್ಶನ್ ಮನವಿ ಮಾಡಿಕೊಂಡಿದ್ದಾರೆ.

‘ನನ್ನ ವಿರುದ್ಧ ದಾಖಲಾದ ಪ್ರಕರಣದ ಸಾಕ್ಷಿಗಳಿಗೆ ಯಾವುದೇ ಬೆದರಿಕೆ ಹಾಕಿಲ್ಲ. ಒಂದು ವೇಳೆ ಅಂತಹ ಘಟನೆಗಳು ನಡೆದರೆ ಕಾನೂನು ಕ್ರಮ ಜರುಗಿಸಬಹುದು. ಅಂತಹ ತಪ್ಪು ಕೂಡ ನಾನು ಮಾಡುವುದಿಲ್ಲ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಪ್ರಕರಣದ ಸಾಕ್ಷಿದಾರರನ್ನು ಬೆದರಿಸುವ ಸಾಧ್ಯತೆಗಳಿದ್ದು, ಬಂದೂಕು ಪರವಾನಗಿ ರದ್ದತಿಗಾಗಿ ನೋಟಿಸ್ ಜಾರಿ ಮಾಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ದರ್ಶನ್ ಅವರು ನ್ಯಾಯಾಲಯದಿಂದ ಜಾಮೀನು ಪಡೆದು ಬಿಡುಗಡೆ ಆಗಿದ್ದಾರೆ.

ಅಪಾರ್ಟ್‌ಮೆಂಟ್‌ನಲ್ಲಿ ಕೊಲೆ

ಬೆಂಗಳೂರು: ಹಣ ಕೊಡುವುದಾಗಿ ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡು ರೌಡಿಯನ್ನು ಕೊಲೆ ಮಾಡಿರುವ ಘಟನೆ ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮೃತದೇಹ ತಮಿಳುನಾಡಿನಲ್ಲಿ ಪತ್ತೆಯಾಗಿದೆ. ಕೊತ್ತನೂರು ನಿವಾಸಿ ಗುಣ(30) ಕೊಲೆಯಾದ ರೌಡಿಶೀಟರ್. ಕೃತ್ಯ ಎಸಗಿದ ಬ್ರಿಜೇಶ್ ಸೇರಿ ಇಬ್ಬರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ.

ಆರೋಪಿಗಳು ಜ.10ರಂದು ಗುಣನನ್ನು ಅಪಾರ್ಟ್‌ಮೆಂಟ್‌ಗೆ ಕರೆಸಿ ಕೊಂಡು ಗುಂಡಿಕ್ಕಿ ಕೊಲೆ ಮಾಡಿದ್ದರು. ಗುಣ ಅವರ ಪತ್ನಿ ಜೋಸ್ಪಿನ್ ದೂರು ನೀಡಿದ್ದರು. ಕೊಲೆಯಾದ ಗುಣ ಕೊತ್ತನೂರು ಠಾಣೆಯ ರೌಡಿಶೀಟರ್ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಪ್ರಕರಣ ದಾಖಲಿಸಿಕೊಂಡ ಬಾಗಲೂರು ಠಾಣೆ ಪೊಲೀಸರು ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಮೃತದೇಹ ಸಾಗಣೆ ಮಾಡುತ್ತಿರುವುದು ಪತ್ತೆಯಾಗಿತ್ತು.

ಬಂಧಿತರಿಂದ ವಶಕ್ಕೆ ಪಡೆಯಲಾದ ಗಾಂಜಾ

₹23 ಕೋಟಿ ಮೌಲ್ಯದ 23 ಕೆ.ಜಿ ಹೈಡ್ರೋಫೋನಿಕ್ ಗಾಂಜಾ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಕಳ್ಳಸಾಗಣೆ ಮಾಡುತ್ತಿದ್ದ 23 ಕೆ.ಜಿ ಹೈಡ್ರೋಫೋನಿಕ್ ಗಾಂಜಾವನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ವಿಚಕ್ಷಣಾ ದಳದ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ವಶಪಡಿಸಿಕೊಳ್ಳಲಾದ ಗಾಂಜಾದ ಒಟ್ಟು ಮೌಲ್ಯ ₹23 ಕೋಟಿ ಎಂದು ಅಂದಾಜಿಸಲಾಗಿದೆ. ನೀರಿನ ಮೇಲೆ ಬೆಳೆಯುವ ಹೈಡ್ರೋಫೋನಿಕ್ ಗಾಂಜಾ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೆ.ಜಿಗೆ ಒಂದು ಕೋಟಿ ರೂಪಾಯಿ ಬೆಲೆಬಾಳುತ್ತದೆ.

ಕಳೆದ ಗುರುವಾರ (ಜ.9) ತಡರಾತ್ರಿ ಬ್ಯಾಂಕಾಕ್‌ನಿಂದ ಬಂದಿಳಿದ ಮೂವರು ಥಾಯ್ಲೆಂಡ್ ಪ್ರಯಾಣಿಕರನ್ನು ತಪಾಸಣೆ ನಡೆಸಿದಾಗ ಗಾಂಜಾ ಸೇರಿದಂತೆ ವಿವಿಧ ಬಗೆಯ ಮಾದಕ ವಸ್ತುಗಳು ಪತ್ತೆಯಾಗಿವೆ.

ಹೈಡ್ರೋಫೋನಿಕ್ ಗಾಂಜಾ ಬೀಜ ಮತ್ತು ಮೈರವಾನ್ ಗಾಂಜಾ ಹೂವು ಸೇರಿದಂತೆ ವಿವಿಧ ಬಗೆಯ ಗಾಂಜಾವನ್ನು ಲಗೇಜ್ ಬ್ಯಾಗ್‌ಗಳಲ್ಲಿ ಬಚ್ಚಿಟ್ಟು ತರಲಾಗಿತ್ತು. ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಗಾಂಜಾ ಕಳ್ಳಸಾಗಣೆ ಕುರಿತು ಕಸ್ಟಮ್ಸ್ ವಿಚಕ್ಷಣಾ ದಳದ ಸಿಬ್ಬಂದಿಗೆ ಖಚಿತ ಸುಳಿವು ದೊರೆತಿತ್ತು.ಮೂವರೂ ಥಾಯ್ಲೆಂಡ್‌ಪ್ರಜೆಗಳಾಗಿದ್ದು, ಅವರನ್ನು ಬಂಧಿಸಿ ಮಾದಕ ವಸ್ತುಗಳ ನಿಯಂತ್ರಣ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಕಸ್ಟಮ್ಸ್ ವಿಚಕ್ಷಣ ದಳದ ಸಿಬ್ಬಂದಿ ಆರೋಪಿಗಳನ್ನು ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

12 ದ್ವಿಚಕ್ರ ವಾಹನ ಕದ್ದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪಿಯನ್ನು ಕಾಮಾಕ್ಷಿ ಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಭರತ್‌ಕುಮಾರ್ (29) ಅವರನ್ನು ಬಂಧಿಸಿ, ₹ 5 .10 ಲಕ್ಷ ಬೆಲೆ ಬಾಳುವ 11 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕಾಮಾಕ್ಷಿಪಾಳ್ಯ ನಿವಾಸಿ ರಾಮು ಅವರು ತಮ್ಮ ಮನೆ ಮುಂದೆ ನಿಲ್ಲಿಸಿದ್ದ ವಾಹನ ಕಳುವಾಗಿತ್ತು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರು. ತನಿಖೆ ಕೈಗೊಂಡ ಪೊಲೀಸರು ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ಹಾಗೂ ಬಾತ್ಮಿದಾರರ ಮಾಹಿತಿ ಆಧರಿಸಿ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು.

‘ಕಾಮಾಕ್ಷಿಪಾಳ್ಯ, ಬಸವೇಶ್ವರ ನಗರ, ಕುಂಬಳಗೋಡು, ಹಲಸೂರು, ಗಿರಿನಗರ, ಇಂದಿರಾನಗರ, ಮಾದನಾಯಕನ ಹಳ್ಳಿ, ಕುಣಿಗಲ್, ಬಾಗಲಗುಂಟೆ, ನಂದಿನಿ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಐಫೋನ್ ಮೊಬೈಲ್ ಖರೀದಿ ವಿದ್ಯಾರ್ಥಿಗೆ ₹1 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಎಲ್‌ಎಕ್ಸ್ ಜಾಲತಾಣದಲ್ಲಿ ಐಫೋನ್ ಮೊಬೈಲ್ ಮಾರಾಟ ಜಾಹೀರಾತು ನೋಡಿ ಕಡಿಮೆ ದರಕ್ಕೆ ಖರೀದಿಸಲು ಹೋದ ವಿದ್ಯಾರ್ಥಿಗೆ ₹1.05 ಲಕ್ಷ ವಂಚಿಸಿರುವ ಘಟನೆ ನಗರದಲ್ಲಿ ನಡೆದಿದೆ.

ಹಣ ಕಳೆದುಕೊಂಡಿರುವ ಆರ್.ಟಿ. ನಗರದ ನಿವಾಸಿ, ರಾಯನ್ ಹುಸೇನ್ ಅಹಮದ್ ಅವರ ದೂರಿನ ಮೇರೆಗೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

‘ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ರಾಯನ್, ಕಡಿಮೆ ದರಕ್ಕೆ ಐಫೋನ್ ಖರೀದಿಸುವ ಸಲುವಾಗಿ ಒಎಲ್ ಎಕ್ಸ್ ಜಾಲತಾಣದಲ್ಲಿ ಹುಡುಕಾಡುತ್ತಿದ್ದ. ಐಫೋನ್ ಅನ್ನು ಮಾರಾಟ ಮಾಡುವುದಾಗಿ ಕಿರಣ್ ಎಂಬಾತ ವೆಬ್ ಸೈಟ್ ನಲ್ಲಿ ಪೋಸ್ಟ್ ಹಂಚಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೊಬೈಲ್ ಮಾರಾಟದ ಬಗ್ಗೆ ಕಿರಣ್ ಹಾಗೂ ರಾಯನ್ ವಾಟ್ಸ್‌ಆ್ಯಪ್‌ನಲ್ಲಿ ಚರ್ಚಿಸಿದ್ದಾರೆ. ₹1.05 ಲಕ್ಷಕ್ಕೆ ವ್ಯಾಪಾರ ಕುದುರಿಸಿಕೊಂಡಿದ್ದು, ಹಣವನ್ನು ಕಿರಣ್ ಖಾತೆಗೆ ವರ್ಗಾವಣೆ ಮಾಡಲಾಯಿತು.

ಸಂಕ್ರಾಂತಿ ಹಬ್ಬದ ಕಾರಣ ಆಂಧ್ರಪ್ರದೇಶಕ್ಕೆ ಬಂದಿದ್ದು, ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ಚಾಯಾಸ್ ಕೆಫೆ ಬಳಿ ಹೋಗಿ ತನ್ನ ಸ್ನೇಹಿತ ಸಲ್ಮಾನ್ ಬಳಿ ಮೊಬೈಲ್ ತೆಗೆದುಕೊಳ್ಳುವಂತೆ ಆರೋಪಿ ಕಿರಣ್ ಸೂಚಿಸಿದ್ದಾನೆ’ ಎಂದರು.

‘ಆರೋಪಿಯ ಸೂಚನೆಯಂತೆ ಜನವರಿ 12 ರಂದು ಚಾಯಾಸ್ ಕೆಫೆಗೆ ತೆರಳಿ ಸಲ್ಮಾನ್‌ನನ್ನು ಭೇಟಿಯಾಗಿ ಮೊಬೈಲ್ ನೀಡುವಂತೆ ಕೇಳಿದಾಗ, ಹಣ ಕೊಡುವಂತೆ ಕೇಳಿದ್ದಾನೆ. ಆಗ ರಾಯನ್ ಕಿರಣ್‌ಗೆ ನೀಡಿರುವುದಾಗಿ ತಿಳಿಸಿದ್ದಾನೆ. ಹಣ ನೀಡದಿದ್ದರೆ ಮೊಬೈಲ್ ಕೊಡುವುದಿಲ್ಲ ಎಂದು ಸಲ್ಮಾನ್ ಹೇಳಿ ಹೊರಟು ಹೋಗಿದ್ದಾನೆ. ಕಿರಣ್‌ಗೆ ಕರೆ ಮಾಡಿದಾಗ ಮೊಬೈಲ್ ಸ್ವಿಚ್‌ಆಫ್ ಆಗಿತ್ತು’ ಎಂದು ಹೇಳಿದ್ದಾರೆ.

ವೈಜ್ಞಾನಿಕ ಮತ್ತು ಕೈಗಾರಿಕೆ ಸಂಶೋಧನಾ ಪರಿಷತ್ (ಸಿಎಸ್‌ಐಆರ್)

ಅನುಸಂಧಾನ ಭವನ, 2, ರಫಿ ಮಾರ್ಗ, ನವದೆಹಲಿ–110001

ಜಾಹೀರಾತು ಸಂಖ್ಯೆ. 01/2025

ಸಿಎಸ್‌ಐಆರ್ ಇವರು, ಸಿಎಸ್‌ಐಆರ್–ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕಮ್ಯುನಿಕೇಶನ್ ಅಂಡ್ ಪಾಲಿಸಿ ರಿಸರ್ಚ್ (ಸಿಎಸ್‌ಐಆರ್–ಎನ್‌ಐಎಸ್‌ಸಿಪಿಆರ್), ನವದೆಹಲಿ, ಇಲ್ಲಿರುವ ವೇತನ ಶ್ರೇಣಿ ಹಂತ 15 ರಲ್ಲಿನ (ರೂ. 1,82,200–2,24,100) + ಸಿಎಸ್‌ಐಆರ್‌ನಲ್ಲಿ ಅನ್ವಯಿಕ ಭತ್ಯೆಗಳ ಆಧಾರದಲ್ಲಿನ ನಿರ್ದೇಶಕ ಹುದ್ದೆಗಾಗಿ ಅರ್ಜಿಗಳನ್ನು/ನಾಮನಿರ್ದೇಶನಗಳನ್ನು ಆಹ್ವಾನಿಸಿದ್ದಾರೆ.

ಅರ್ಹತಾ ಮಾನದಂಡಗಳು ಮತ್ತು ಇನ್ನಿತರ ಷರತ್ತುಗಳಿಗಾಗಿ ದಯವಿಟ್ಟು ಸಿಎಸ್‌ಐಆರ್‌ನ www.csir.res.in ವೆಬ್‌ಸೈಟ್‌ನಲ್ಲಿರುವ ವಿವರವಾದ ಸಂಪೂರ್ಣ ಜಾಹೀರಾತು ಸಂ. **01/2025** ಪರಿಶೀಲಿಸಿರಿ. ಪರಿಪೂರ್ಣ ಬಯೋಡೇಟಾ ಹಾಗೂ ಪ್ರಕಟಣೆಗಳು/ಪೇಟೆಂಟ್‌ಗಳು ಮುಂತಾದವುಗಳ ಪಟ್ಟಿ ಸಮೇತ ಅರ್ಜಿಗಳನ್ನು/ನಾಮನಿರ್ದೇಶನಗಳನ್ನು drc@csir.res.in ಇಮೇಲ್ ವಿಳಾಸಕ್ಕೆ ಅಥವಾ ನಿರ್ದೇಶಕರು, ನೇಮಕಾತಿ ಕೋಶ, ವೈಜ್ಞಾನಿಕ ಮತ್ತು ಕೈಗಾರಿಕೆ ಸಂಶೋಧನಾ ಪರಿಷತ್ (ಸಿಎಸ್‌ಐಆರ್), ಅನುಸಂಧಾನ ಭವನ, 2, ರಫಿ ಮಾರ್ಗ, ನವದೆಹಲಿ 110001 ವಿಳಾಸಕ್ಕೆ **10/02/2025** ರೊಳಗೆ ತಲುಪುವಂತೆ ರವಾನಿಸಬೇಕು.

CBC 36202/12/0024/2425

ಸಾರ್ವಜನಿಕ ಪ್ರಕಟಣೆ

BUDC-MAG0MAG2(ENT)/25/2024-MAG-BUR-DC OFFICE

I/320675/2025

ಕರ್ನಾಟಕ ಸರ್ಕಾರ

No. MAG(2)/ENT/05/2024-25

ಅಧೀನ ಕಮಿಷನರ್ ಮತ್ತು ಜಿಲ್ಲಾಧಿಕಾರಿ ಕಚೇರಿ, ಬೆಂಗಳೂರು ಜಿಲ್ಲೆ, ಬೆಂಗಳೂರು

ದಿನಾಂಕ: 08–01–2025

ನಮೂನೆ ಸಿ

(ನಿಯಮ 25 (1) ಮತ್ತು 117 ನೋಡಿ)

ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು

2014 ರ ಅಡಿಯಲ್ಲಿ ಪರವಾನಿ ಪ್ರಾಧಿಕಾರದಿಂದ ನೋಟಿಸ್

ಅಬ್ರಹಾಮ್ ಕೋಶಿ, ದಿವಂಗತ ಜಾರ್ಜ್ ಕೋಶಿ ಅವರ ಮಗ, ನಿಯೋಜಿತ ಪಾಲುದಾರ, ವಿನ್ಯಾಸ ನಿರ್ವಹಣೆ ಮತ್ತು ಅಧಿಕೃತ ಸಹಿದಾರರು, ಮೆಸರ್ಸ್ ಬ್ರಿಗೇಡ್ ಟೆಟ್ರಾಕ್ ಪ್ರೈವೇಟ್ ಲಿಮಿಟೆಡ್, 29ನೇ ಮತ್ತು 30ನೇ ಮಹಡಿ, ವರ್ಲ್ಡ್ ಟ್ರೇಡ್ ಸೆಂಟರ್, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಮ್–ರಾಜಾಜಿನಗರ, ಬೆಂಗಳೂರು – 560 055, ಇವರು ಮೆಸರ್ಸ್ ಬ್ರಿಗೇಡ್ ಟೆಟ್ರಾರ್ಕ್ ಪ್ರೈವೇಟ್ ಲಿಮಿಟೆಡ್‌ಗೆ ಸಂಬಂಧಿಸಿದ ಭೂಮಿಯಲ್ಲಿ ಮತ್ತು ಪ್ಲಾಟ್ ಸಂ. ಆರ್–8 ಮತ್ತು ಆರ್–5, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, ಹಾರ್ಡ್‌ವೇರ್ ಸೆಕ್ಟರ್ ಇಂಡಸ್ಟ್ರಿಯಲ್ ಏರಿಯಾ, ಜಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು ಇಲ್ಲಿ ಶಾಶ್ವತ ಮಲ್ಟಿಪ್ಲೆಕ್ಸ್ ಸಿನಿಮಾ (4 ಸ್ಕ್ರೀನ್‌ಗಳು) ಮಲ್ಟಿಪ್ಲೆಕ್ಸ್ ಅನ್ನು ನಿರ್ಮಿಸಲು ನಿರಾಕ್ಷೇಪಣೆ ಪತ್ರವನ್ನು ಮಂಜೂರು ಮಾಡಲು ಅರ್ಜಿ ಸಲ್ಲಿಸಿದ್ದು, ಇದರ ಸ್ಥಳವು 2,02,344.00 ಚದರ ಮೀಟರ್ ಆಗಿದೆ ಮತ್ತು ಗಡಿಗಳು ಈ ಕೆಳಗಿನಂತಿವೆ:

ಪೂರ್ವಕ್ಕೆ : 32 ಮೀಟರ್ ಅಗಲದ ಕೆಐಎಡಿಬಿ ರಸ್ತೆ
ಪಶ್ಚಿಮಕ್ಕೆ : ಪಾರ್ಕ್
ಉತ್ತರಕ್ಕೆ : 32 ಮೀಟರ್ ಅಗಲದ ಕೆಐಎಡಿಬಿ ರಸ್ತೆ
ದಕ್ಷಿಣಕ್ಕೆ : ಕಮ್ಯುನಿಟಿ ಕಟ್ಟಡ

ಈ ಮೇಲೆ ಉಲ್ಲೇಖಿಸಿದಂತೆ ನಿರಾಕ್ಷೇಪಣಾ ಪತ್ರವನ್ನು ಮಂಜೂರು ಮಾಡಲು ಯಾವುದೇ ಆಕ್ಷೇಪಣೆಯನ್ನು ಯಾವುದೇ ವ್ಯಕ್ತಿ ಹೊಂದಿದ್ದರೆ, 10–2–2025 ರ ಒಳಗೆ ಲಿಖಿತವಾಗಿ ಈ ಕೆಳಗೆ ಸಹಿ ಮಾಡಿದವರಿಗೆ ತಲುಪಿಸಬೇಕು. ಈ ದಿನಾಂಕದ ನಂತರ ಸ್ವೀಕರಿಸಿದ ಯಾವುದೇ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ.

2025 ಜನವರಿ 8 ರಂದು ನನಗೆ ಲಿಖಿತವಾಗಿ ನೀಡಲಾಗಿದೆ.

ಜಗದೀಶ ಜಿ
08–01–2025
ಜಿಲ್ಲಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಯುತ ಡಾ|| ಎಂ.ಶ್ರೀನಿವಾಸ್

ಮಾಜಿ ಸಂಸದರು, ಕನಕಪುರ ಲೋಕಸಭಾ ಕ್ಷೇತ್ರ,
ಮಾಜಿ ಶಾಸಕರು ಉತ್ತರಹಳ್ಳಿ ಹಾಗೂ ಆರ್.ಆರ್.ನಗರ ವಿಧಾನಸಭಾ ಕ್ಷೇತ್ರ

ಶ್ರೀಯುತ ಡಾ|| ಎಂ.ಶ್ರೀನಿವಾಸ್ ರವರು **ದಿನಾಂಕ: 16-1-2025**ರ ಬೆಳಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ **ಅಂತಿಮ ದರ್ಶನವನ್ನು** 17-1-2025 ರ **ಬೆಳಗ್ಗೆ 6.30 ರಿಂದ 10.30 ರವರೆಗೆ** ಜಯನಗರದ 7ನೇ ಬ್ಲಾಕ್‌ನಲ್ಲಿರುವ ಅವರ ನಿವಾಸದಲ್ಲಿ ಹಾಗೂ ಬೆಳಗ್ಗೆ 10.30 ರಿಂದ 1.00 ಗಂಟೆಯವರೆಗೆ ಉತ್ತರಹಳ್ಳಿ ಸರ್ಕಲ್ ನಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಕಲ್ಪಿಸಲಾಗಿದೆ. **ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17-01-2025ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಆರ್.ಎಂ.ಎಸ್ ಸ್ಕೂಲ್** ಹಿಂಭಾಗ, **ಶ್ರೀನಿವಾಸ್ ಇಂಡಸ್ಟ್ರಿಯಲ್ ಎಸ್ಟೇಟ್,** ಕನಕಪುರ ರಸ್ತೆ ಇಲ್ಲಿ ನೆರವೇರಿಸಲಾಗುವುದು.ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಇಂತಿ ದು:ಖ ತಪ್ತರು

ಆರ್.ಎಂ.ಎಸ್ ಎಜುಕೇಷನ್ ಇನ್ಸ್ಟಿಟ್ಯೂಟ್ - **ಶ್ರೀಮತಿ ರತ್ನಮ್ಮ ಎಂ.ಶ್ರೀನಿವಾಸ್**
ಎಂ.ಕೃಷ್ಣಪ್ಪ ಮತ್ತು ಕುಟುಂಬಸ್ಥರು - ಶಾಸಕರು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ,
ಶ್ರೀಮತಿ ಸಂಧ್ಯಾ ಎಸ್.ವೆಂಕಟೇಶ್ ಬಾಬು - ಬಿಬಿಎಂಪಿ ಮಾಜಿ ಸದಸ್ಯರು
ಶ್ರೀಮತಿ ಚಂದ್ರಿಕಾ ಅನಿಲ್ ಕುಮಾರ್ - ಯು.ಎಸ್.ಎ
ಶ್ರೀಮತಿ ಸುಷ್ಮಾ ಡಾ.ಲೋಕೇಶ್ ಗೌಡ - ಯು.ಎಸ್.ಎ
ಮಕ್ಕಳು, ಮೊಮ್ಮಕ್ಕಳು, ಕುಟುಂಬಸ್ಥರು ಮತ್ತು ಉತ್ತರಹಳ್ಳಿ ಕ್ಷೇತ್ರದ ಅಭಿಮಾನಿಗಳ ಬಳಗ.

‘ಸೀಟ್ ಬ್ಲಾಕಿಂಗ್’ಗೆ ಕಡಿವಾಣ: ಒಂದು ಅರ್ಜಿಗೆ ಒಂದೇ ಮೊಬೈಲ್ ಸಂಖ್ಯೆ

ಏಪ್ರಿಲ್ 16,17ಕ್ಕೆ ಸಿಇಟಿ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ಪಶು ವೈದ್ಯಕೀಯ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ 2025–26ನೇ ಸಾಲಿನ ಪ್ರವೇಶಕ್ಕಾಗಿ ಏಪ್ರಿಲ್ 16 ಮತ್ತು 17ರಂದು ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ನಡೆಯಲಿದೆ.

‘ಸೀಟ್ ಬ್ಲಾಕಿಂಗ್’ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ಮುಂದಾಗಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಒಂದು ಅರ್ಜಿಗೆ ಒಂದು ಮೊಬೈಲ್ ಸಂಖ್ಯೆ ಕಡ್ಡಾಯಗೊಳಿಸಿದೆ. ಅದೇ ಸಂಖ್ಯೆಗೆ ಬರುವ ಒಟಿಪಿ ದೃಢೀಕರಿಸಿದ ನಂತರವೇ ಅರ್ಜಿ ಭರ್ತಿ ಮಾಡಲು ಸಾಧ್ಯವಾಗುತ್ತದೆ. ಅಲ್ಲದೇ, ಪರೀಕ್ಷಾ ದಿನಾಂಕ, ಸೂಚನೆಗಳು, ಸೀಟು ಹಂಚಿಕೆ, ಪ್ರವೇಶ ಸೇರಿದಂತೆ ಎಲ್ಲ ಮಾಹಿತಿಗಳೂ ನಮೂದಿತ ಮೊಬೈಲ್ ಸಂಖ್ಯೆಗೆ ರವಾನೆಯಾಗಲಿವೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ ಜ.23ರಿಂದ ಫೆ.21ರವರೆಗೆ ಅವಕಾಶ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಮಾಹಿತಿ ನೀಡಿದ್ದಾರೆ.

ಹಲವು ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ. ಯಾರದ್ದೊ ಅರ್ಜಿಯನ್ನು, ಇನ್ಯಾರೊ ಭರ್ತಿ ಮಾಡಲು ಅಸಾಧ್ಯ. ಪ್ರತಿ ಹಂತದಲ್ಲೂ ಪ್ರಮಾಣೀಕರಿಸಿ, ಮುಂದಿನ ಪ್ರಕ್ರಿಯೆ ನಡೆಸಲಾಗುತ್ತದೆ

ಎಚ್. ಪ್ರಸನ್ನ, ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಏ.16ರಂದು ಬೆಳಿಗ್ಗೆ 10.30ರಿಂದ ಭೌತವಿಜ್ಞಾನ ಮತ್ತು ಮಧ್ಯಾಹ್ನ 2.30ರಿಂದ ರಸಾಯನ ವಿಜ್ಞಾನ ಹಾಗೂ ಏ.17ರಂದು ಬೆಳಿಗ್ಗೆ ಗಣಿತ ಮತ್ತು ಮಧ್ಯಾಹ್ನ ಜೀವವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿವೆ. ಏ.18ರಂದು ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

ಯೋಗ ಮತ್ತು ನ್ಯಾಚುರೋಪತಿ, ಬಿ-ಫಾರ್ಮಾ ಮತ್ತು ಫಾರ್ಮಾ-ಡಿ, ಕೃಷಿ ವಿಜ್ಞಾನ ಕೋರ್ಸ್ ಮತ್ತು ಬಿಎಸ್‌ಸಿ (ನರ್ಸಿಂಗ್) ಕೋರ್ಸ್‌ಗಳ ಪ್ರವೇಶಕ್ಕೂ ಇದೇ ಪರೀಕ್ಷೆಯ ಅಂಕಗಳನ್ನು ಪರಿಗಣಿಸಲಾಗುತ್ತದೆ.

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಪ್ರವೇಶಕ್ಕೂ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಿಕೊಂಡು ಅರ್ಜಿ ಶುಲ್ಕ ಪಾವತಿಸಬೇಕು. ಆರ್ಕಿಟೆಕ್ಚರ್, ಬಿಪಿಟಿ, ಬಿಪಿಒ, ಬಿಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳ ಪ್ರವೇಶಕ್ಕೆ ಇದೇ ಅರ್ಜಿ ಅನ್ವಯವಾಗಲಿದೆ.

ಈ ಬಾರಿಯ ವಿಶೇಷ ಏನು?

- ಅರ್ಜಿ ಭರ್ತಿಗೆ ಒಟಿಪಿ ಕಡ್ಡಾಯ
- ಒಂದು ಅರ್ಜಿಗೆ ಒಂದೇ ಮೊಬೈಲ್ ನಂಬರ್
- ಪ್ರವೇಶ ಪ್ರಕ್ರಿಯೆವರೆಗೂ ಮೊಬೈಲ್ ಸಂಖ್ಯೆ ಬದಲಾವಣೆಗೆ ಅವಕಾಶ ಇಲ್ಲ
- ಈ ಬಾರಿ ವಿದ್ಯಾರ್ಥಿಗಳು ಯಾವುದೇ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪಲೋಡ್ ಮಾಡುವ ಅಗತ್ಯವಿಲ್ಲ
- ವಿವಿಧ ಕೋಟಾಕ್ಕಾಗಿ ಸಲ್ಲಿಸಿದ ದಾಖಲೆಯಲ್ಲಿ ಯಶಸ್ವಿ ಪರಿಶೀಲನೆ ನಮೂದಾದರೆ ಅಂತಹ ಅಭ್ಯರ್ಥಿಗಳು ದಾಖಲೆ ಪರಿಶೀಲನೆಗೆ ಕಚೇರಿ, ಕಾಲೇಜಿಗೆ ಹೋಗುವಂತಿಲ್ಲ.
- ರಾಜ್ಯದ ಪಿಯು ಕಾಲೇಜುಗಳಿಗೆ ಲಾಗಿನ್ ನೀಡಿ,. ಅಭ್ಯರ್ಥಿಗಳಿಂದ ಭರ್ತಿ ಮಾಡಿದ ಅರ್ಜಿಗಳನ್ನು ಪರಿಶೀಲಿಸಲು ಸೂಚಿಸಲಾಗಿದೆ. ಅದಕ್ಕಾಗಿ ತಂತ್ರಾಂಶ ಸಿದ್ಧಪಡಿಸಲಾಗಿದೆ
- ಅಭ್ಯರ್ಥಿಗಳು ಪರಿಶೀಲನೆಗಾಗಿ ಬಿಇಒ ಕಚೇರಿಗೆ ಹೋಗುವ ಅಗತ್ಯವಿಲ್ಲ
- ಯಶಸ್ವಿ ಪರಿಶೀಲನೆ ಆಗದಿದ್ದರೆ ಪಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರಿಂದ ಒಂದು ಸೆಟ್ ದೃಢೀಕರಿಸಿದ ಪ್ರತಿ ಸಲ್ಲಿಸಬೇಕು
- ಎನ್‌ಸಿಸಿ, ಕ್ರೀಡೆ, ಸೈನಿಕ, ಮಾಜಿ ಸೈನಿಕ, ಸಿಎಪಿಎಫ್, ಮಾಜಿ ಸಿಎಪಿಎಫ್, ಸ್ಕೌಟ್ಸ್ ಮತ್ತು ಗೈಡ್ಸ್ ಆಂಗ್ಲೊ ಇಂಡಿಯನ್ಸ್ ಕೋಟದ ಅಡಿಯಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಪ್ರಮಾಣಪತ್ರಗಳನ್ನು ಕೆಇಎಗೆ ಸಲ್ಲಿಸಲು ಪ್ರತ್ಯೇಕ ದಿನಾಂಕ ನೀಡಲಾಗುತ್ತದೆ

ಪರೀಕ್ಷೆಗಳ ದಿನಾಂಕ

ಡಿಸಿಇಟಿ: ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ ಅಥವಾ 3ನೇ ಸೆಮಿಸ್ಟರ್‌ಗೆ ಸೇರಲು ಡಿಪ್ಲೊಮಾ ಸಿಇಟಿ. ಪರೀಕ್ಷೆ ಮೇ 31, ಅರ್ಜಿ ಸಲ್ಲಿಕೆ ಏಪ್ರಿಲ್ 24ರಿಂದ ಮೇ 10ರವರೆಗೆ

ಪಿಜಿಸಿಇಟಿ (ಎಂಇ, ಎಂಟೆಕ್, ಎಂ.ಆರ್ಕಿಟೆಕ್ಚರ್) ಕೋರ್ಸ್‌ಗಳ ಪ್ರವೇಶ. ಪರೀಕ್ಷೆ ಮೇ 31. ಅರ್ಜಿ ಸಲ್ಲಿಕೆ ಏಪ್ರಿಲ್ 24ರಿಂದ ಮೇ 10ರವರೆಗೆ

ಎಂಸಿಎ, ಎಂಬಿಎ: ಎಂಸಿಎ, ಎಂಬಿಎ ಹಾಗೂ ಎಂ.ಫಾರ್ಮಾ, ಫಾರ್ಮಾ-ಡಿ ಕೋರ್ಸ್‌ಗಳ ಪ್ರವೇಶಕ್ಕೆ 22ರಂದೇ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆ ಜೂನ್ 22, ಅರ್ಜಿ ಸಲ್ಲಿಕೆ ಏಪ್ರಿಲ್ 24ರಿಂದ ಜೂನ್ 10ರವರೆಗೆ

‘ಮುಂಬೈ ಅತ್ಯಂತ ಸುರಕ್ಷಿತ ನಗರ’

ಪ್ರಜಾವಾಣಿ ವಾರ್ತೆ

ಮುಂಬೈ: ನಟ ಸೈಫ್ ಅಲಿ ಖಾನ್ ಅವರು ಚಾಕು ಇರಿತದಿಂದ ಗಾಯಗೊಂಡ ಘಟನೆಯ ಬೆನ್ನಲ್ಲೇ ವಿರೋಧ ಪಕ್ಷಗಳ ಮೈತ್ರಿಕೂಟವು ಮಹಾ ವಿಕಾಸ ಆಘಾಡಿ (ಎಂವಿಎ) ‘ಮಹಾರಾಷ್ಟ್ರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ’ ಎಂದು ಆರೋಪಿಸಿ ದೇವೇಂದ್ರ ಫಡಣವೀಸ್ ನೇತೃತ್ವದ ‘ಮಹಾಯುತಿ’ ಸರ್ಕಾರದ ವಿರುದ್ಧ ಹರಿಹಾಯ್ದಿದೆ.

ವಿಪಕ್ಷಗಳ ಹಲವು ನಾಯಕರು ಗೃಹ ಸಚಿವರೂ ಆಗಿರುವ ಫಡಣವೀಸ್ ಅವರನ್ನು ಟೀಕಿಸಿದ್ದಾರೆ. ಇದಕ್ಕೆ, ‘ಭಾರತದ ಮೆಟ್ರೊ ನಗರಗಳಲ್ಲೇ ಮುಂಬೈ ಅತ್ಯಂತ ಸುರಕ್ಷಿತವಾದುದು’ ಎನ್ನುವ ಮೂಲಕ ಫಡಣವೀಸ್ ಅವರು ತಿರುಗೇಟು ನೀಡಿದ್ದಾರೆ.

‘ಈಗ ನಡೆದಿರುವ ಘಟನೆಯು ಗಂಭೀರವಾದುದು. ಆದರೆ, ಅದಕ್ಕಾಗಿ ಮುಂಬೈ ನಗರಕ್ಕೆ ‘ಅಸುರಕ್ಷಿತ’ ಎಂಬ ಹಣೆಪಟ್ಟಿ ಕಟ್ಟುವುದು ತಪ್ಪು. ಇಂತಹ ಘಟನೆಗಳು ಕೆಲವೊಮ್ಮೆ ನಡೆಯುತ್ತವೆ ಮತ್ತು ನಾವು ಅವುಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ದೇವೇಂದ್ರ ಫಡಣವೀಸ್

‘ಮುಂಬೈನಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ ಎಂಬುದಕ್ಕೆ ಈ ಘಟನೆ ಹೊಸ ಉದಾಹರಣೆ. ಅದೇ ಪ್ರದೇಶದಲ್ಲಿ ಈಚೆಗೆ ಕೊಲೆ ಪ್ರಕರಣ ನಡೆದಿತ್ತು. ಮುಖ್ಯಮಂತ್ರಿ ಅವರು ಇತ್ತ ಗಮನಹರಿಸಬೇಕು’ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಟೀಕಿಸಿದ್ದಾರೆ.

‘ಮಹಾರಾಷ್ಟ್ರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ. ಸೈಫ್ ಅವರು ಈಚೆಗೆ ತಮ್ಮ ಕುಟುಂಬದ ಜತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದರು. ಅವರ ಜತೆ ಸುಮಾರು ಒಂದು ಗಂಟೆ ಮಾತುಕತೆ ನಡೆಸಿದ್ದರು. ಆದರೆ, ಬುಧವಾರ ಪ್ರಧಾನಿ ಅವರು ಮುಂಬೈನಲ್ಲಿದ್ದರು. ಇದೇ ಸಮಯದಲ್ಲಿ ಸೈಫ್ ಮೇಲೆ ದಾಳಿ ನಡೆದಿದೆ’ ಎಂದು ಶಿವಸೇನಾ (ಯುಬಿಟಿ) ವಕ್ತಾರ ಸಂಜಯ್ ರಾವುತ್ ಹೇಳಿದ್ದಾರೆ.

ಸೈಫ್ ಅಲಿ ಖಾನ್ ಅವರಂತಹ ನಟರ ಮೇಲೆಯೇ ದಾಳಿ ನಡೆದರೆ, ಜನಸಾಮಾನ್ಯರು ಇಲ್ಲಿ ಎಷ್ಟರ ಮಟ್ಟಿಗೆ ಸುರಕ್ಷಿತರಾಗಿದ್ದಾರೆ?

ಸಂಜಯ್ ರಾವುತ್, ಶಿವಸೇನಾ (ಯುಬಿಟಿ) ಮುಖಂಡ

‘ಬಾಂದ್ರಾದಲ್ಲಿ ಒಬ್ಬ ರಾಜಕಾರಣಿಯನ್ನು (ಬಾಬಾ ಸಿದ್ದಿಕಿ) ಗುಂಡಿಟ್ಟು ಕೊಲ್ಲಲಾಯಿತು. ಒಬ್ಬ ನಟನ (ಸಲ್ಮಾನ್ ಖಾನ್) ಮನೆಯತ್ತ ಗುಂಡು ಹಾರಿಸಲಾಯಿತು. ಈಗ ಸೈಫ್ ಅವರ ಮೇಲೆ ದಾಳಿ ನಡೆದಿದೆ. ಈ ಎಲ್ಲ ದಾಳಿಗಳು ಅವರ ಮನೆ ಅಥವಾ ಕಚೇರಿಯ ಬಳಿಯೇ ನಡೆದಿವೆ. ಅಂತಹ ಖ್ಯಾತನಾಮರು ತಮ್ಮ ಮನೆ ಮತ್ತು ಕಚೇರಿಗಳಲ್ಲೇ ಸುರಕ್ಷಿತವಾಗಿಲ್ಲದಿದ್ದರೆ, ಸಾಮಾನ್ಯ ಜನರು ಸುರಕ್ಷಿತವಾಗಿರುವುದು ಹೇಗೆ’ ಎಂದು ಕಾಂಗ್ರೆಸ್ ನಾಯಕಿ, ಮುಂಬೈ ನಾರ್ತ್ ಸೆಂಟ್ರಲ್ ಕ್ಷೇತ್ರದ ಸಂಸದೆ ವರ್ಷಾ ಗಾಯಕ್ವಾಡ್ ಪ್ರಶ್ನಿಸಿದ್ದಾರೆ.

405 ಅಡಿ ಎತ್ತರದ ಸುಮೇರು ಪರ್ವತ ಲೋಕಾರ್ಪಣೆ ಮಾಡಿದ ಉಪರಾಷ್ಟ್ರಪತಿ ಧನಕರ್

‘ಅಣುಶಕ್ತಿಗಿಂತ ಅಧ್ಯಾತ್ಮ ಬಲಶಾಲಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಿರಂತರ ದಾಳಿಗಳ ನಡುವೆಯೂ ನಮ್ಮ ದೇಶದ ಆಧ್ಯಾತ್ಮಿಕ ಶಕ್ತಿಯನ್ನು ಸಾವಿರಾರು ವರ್ಷಗಳಿಂದ ಕಾಪಾಡಲಾಗುತ್ತಿದೆ. ಇದು ಅಣು (ನ್ಯೂಕ್ಲಿಯರ್) ಶಕ್ತಿಗಿಂತ ಹೆಚ್ಚು ಬಲಶಾಲಿ’ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದರು.

ಇಲ್ಲಿಗೆ ಸಮೀಪದ ವರೂರು ನವಗ್ರಹ ಕ್ಷೇತ್ರದಲ್ಲಿ ಗುರುವಾರ ನಡೆದ 405 ಅಡಿ ಎತ್ತರದ ಸುಮೇರು ಪರ್ವತ ಜಿನ ಬಿಂಬಗಳ ಪಂಚ ಕಲ್ಯಾಣಕ ಪ್ರತಿಷ್ಠಾ ಮಹಾಮಹೋತ್ಸವದಲ್ಲಿ ಅವರು ಮಾತನಾಡಿದರು.

‘ಶತ್ರು ರಾಷ್ಟ್ರಗಳಿಂದ ನಮ್ಮ ದೇಶದ ಸಂಸ್ಕೃತಿ, ಪರಂಪರೆಗೆ ಸವಾಲು ಎದುರಾಗಿವೆ. ಇವುಗಳನ್ನು ಮೆಟ್ಟಿ ನಿಂತು ಸಂಸ್ಕೃತಿ ಮತ್ತು ಸಂಪತ್ತು ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ದೇಶದ ಶಾಂತಿ ಕದಡುವ ರಾಷ್ಟ್ರ ವಿರೋಧಿ ಶಕ್ತಿಗಳಿಗೆ ಆಸ್ಪದ ಕೊಡಬಾರದು. ಇಂತಹ ಶಕ್ತಿಗಳನ್ನು ದಮನ ಮಾಡಬೇಕು. ನಮ್ಮ ಧರ್ಮ ಇದನ್ನು ಹೇಳಿಕೊಟ್ಟಿದೆ’ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ವರೂರು ಗ್ರಾಮದ 40 ಎಕರೆ ಜಾಗದಲ್ಲಿ ಗುಣಧರ ನಂದಿ ಮಹಾರಾಜರು ನವಗ್ರಹ ತೀರ್ಥ ಕ್ಷೇತ್ರ ನಿರ್ಮಿಸಿದ್ದು, ಸುಮೇರು ಪರ್ವತದ ಲೋಕಾರ್ಪಣೆಯು ಧರ್ಮ ಹಾಗೂ ಆಧ್ಯಾತ್ಮಿಕ ಪ್ರಚಾರದಲ್ಲಿ ಮಹತ್ವದ ಪಾತ್ರ ವಹಿಸಲಿದೆ’ ಎಂದರು.

ನವಗ್ರಹ ತೀರ್ಥ ಕ್ಷೇತ್ರದ ಆಚಾರ್ಯ ಗುಣಧರ ನಂದಿ ಮಹಾರಾಜರು ಮಾತನಾಡಿ, ‘ಸುಮೇರು ಪರ್ವತ ಲೋಕಾರ್ಪಣೆ ಮೂಲಕ ನನ್ನ ಕನಸು ಸಾಕಾರಗೊಂಡಿದೆ’ ಎಂದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿದರು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಸ್ವಾಗತಿಸಿದರು. ಜಿತೇಂದ್ರ ಕೊಠಾರಿ, ಕುಂತು ಸಾಗರ ಮಹಾರಾಜ್, ಎಸ್.ಡಿ.ಎಂ ಜೈನಮಠ ಟ್ರಸ್ಟ್ ಅಧ್ಯಕ್ಷ ಧರ್ಮಸೇನ ಭಟ್ಟಾರಕ ಸ್ವಾಮೀಜಿ ಉಪಸ್ಥಿತರಿದ್ದರು.

ಹುಬ್ಬಳ್ಳಿ ಸಮೀಪದ ವರೂರು ನವಗ್ರಹ ತೀರ್ಥಕ್ಷೇತ್ರದಲ್ಲಿ ಗುರುವಾರ ಸುಮೇರು ಪರ್ವತ ಗೋಪುರದಲ್ಲಿನ ಮೂರ್ತಿಗೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಪುಷ್ಪ ಅರ್ಪಿಸಿದರು. ಅವರ ಪತ್ನಿ ಸುದೇಶ ಧನಕರ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಧರ್ಮಸೇನ ಭಟ್ಟಾರಕ ಸ್ವಾಮೀಜಿ ಉಪಸ್ಥಿತರಿದ್ದರು.



ಸುಮೇರು ಪರ್ವತ ಗೋಪುರವನ್ನು ಜನರು ಕಣ್ತುಂಬಿಕೊಂಡರು

ನಟ ಸೈಫ್‌ಗೆ ಚಾಕು ಇರಿತ

ಒಂದನೇ ಪುಟದಿಂದ...

‘ಅವರ ಆರೋಗ್ಯ ಸ್ಥಿರವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶುಕ್ರವಾರ ಬೆಳಿಗ್ಗೆ ಐಸಿಯುವಿನಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗುವುದು’ ಎಂದು ಮಾಹಿತಿ ನೀಡಿದ್ದಾರೆ. ಚಾಕುವಿನ 2.5 ಇಂಚು ಉದ್ದದ ತುಂಡು ಬೆನ್ನುಮೂಳೆಯ ಬಳಿ ಸಿಲುಕಿದ್ದು, ಅದನ್ನು ಹೊರತೆಗೆಯಲಾಗಿದೆ.

‘ಸೈಫ್ ಅವರನ್ನು ಬೆಳಗಿನ ಜಾವ 3.30ರ ಸುಮಾರಿಗೆ ಆಸ್ಪತ್ರೆಗೆ ಕರೆತಂದಿದ್ದಾರೆ. ನಟನ ದೇಹದಲ್ಲಿ ಆರು ಕಡೆ ಗಾಯಗಳಾಗಿವೆ. ಎರಡು ಕಡೆ ಆಳವಾದ ಗಾಯಗಳಾಗಿದ್ದು, ಅದರಲ್ಲಿ ಒಂದು ಬೆನ್ನುಮೂಳೆಯ ಹತ್ತಿರದಲ್ಲಿದೆ. ಎಡಗೈ ಮತ್ತು ಕುತ್ತಿಗೆಯ ಬಳಿಯೂ ಗಾಯಗಳು ಆಗಿವೆ’ ಎಂದು ಲೀಲಾವತಿ ಆಸ್ಪತ್ರೆಯ ಸಿಒಒ ಡಾ.ನೀರಜ್ ಉತ್ತಮನಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ದರೋಡೆ ಯತ್ನ’ದ ವೇಳೆ ಈ ಘಟನೆ ನಡೆದಿದೆ ಎಂದು ಸೈಫ್ ಅವರ ಸಾರ್ವಜನಿಕ ಸಂಪರ್ಕ ತಂಡದ ಪ್ರತಿನಿಧಿಯೊಬ್ಬರು ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆಯ ಕಲಂ 311 (ಕೊಲೆ ಅಥವಾ ಗಂಭೀರ ಗಾಯ ಉಂಟುಮಾಡುವ ಪ್ರಯತ್ನದೊಂದಿಗೆ ದರೋಡೆ) ಮತ್ತು 331(4) (ರಾತ್ರಿಯಲ್ಲಿ ಮನೆಗೆ ಅಕ್ರಮ ಪ್ರವೇಶ) ಅಡಿ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಘಟನೆಯ ವೇಳೆ ಸೈಫ್ ಅವರ ಪತ್ನಿ, ನಟಿ ಕರೀನಾ ಕಪೂರ್ ಖಾನ್ (44), ಪುತ್ರರಾದ ತೈಮೂರ್ ಅಲಿ ಖಾನ್ (8) ಮತ್ತು ಜೆಹಾಂಗೀರ್ ಅಲಿ ಖಾನ್ (4) ಮನೆಯಲ್ಲಿದ್ದರು.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ದಿವಂಗತ ಮನ್ಸೂರ್ ಅಲಿ ಖಾನ್ ಪಟೌಡಿ ಮತ್ತು ನಟ ಶರ್ಮಿಳಾ ಟ್ಯಾಗೋರ್ ಅವರ ಪುತ್ರ ಸೈಫ್ ಅವರು ‘ಓಂಕಾರ’, ‘ದಿಲ್ ಚಾಹ್ತಾ ಹೈ’ ಮತ್ತು ‘ಕಲ್ ಹೊ ನಾ ಹೊ’ ಚಲನಚಿತ್ರಗಳಲ್ಲಿನ ತಮ್ಮ ನಟನೆಯ ಮೂಲಕ ಜನಪ್ರಿಯರಾಗಿದ್ದಾರೆ.

‘ಬಲವಂತವಾಗಿ ಪ್ರವೇಶಿಸಿಲ್ಲ’

ಒಂದನೇ ಪುಟದಿಂದ...

ಆರೋಪಿಯು ತುರ್ತು ನಿರ್ಗಮನಕ್ಕಿರುವ ಮೆಟ್ಟಿಲುಗಳ ಮೂಲಕ ಪರಾರಿಯಾದ ದೃಶ್ಯ ಅಪಾರ್ಟ್‌ಮೆಂಟ್‌ನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ದುಷ್ಕರ್ಮಿಯ ಪತ್ತೆಗೆ 10 ತಂಡಗಳನ್ನು ರಚಿಸಲಾಗಿದೆ. ಇದೊಂದು ದರೋಡೆ ಯತ್ನ ಎಂಬುದನ್ನು ಪ್ರಾಥಮಿಕ ತನಿಖೆಯಿಂದ ಕಂಡುಕೊಂಡಿದ್ದೇವೆ. ಆರೋಪಿಯ ಗುರುತು ಪತ್ತೆ ಹಚ್ಚಲಾಗಿದ್ದು, ಆತನ ಬಂಧನದ ಬಳಿಕ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ’ ಎಂದು ಡಿಸಿಪಿ ದೀಕ್ಷಿತ್ ಗೆಡಾಮ್ ತಿಳಿಸಿದ್ದಾರೆ.

ಆಟೊದಲ್ಲಿ ಆಸ್ಪತ್ರೆಗೆ ದಾಖಲು

ಸೈಫ್ ಪತ್ನಿ ಕರೀನಾ ಅವರು ಈ ಘಟನೆಗೆ ಅಲ್ಪ ಸಮಯದ ಮುನ್ನ ಮನೆಗೆ ತಲುಪಿದ್ದರು. ಅವರು ತಕ್ಷಣವೇ ಸೈಫ್ ಪುತ್ರ ಇಬ್ರಾಹಿಂ ಅಲಿ ಖಾನ್‌ಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಆಟೊದಲ್ಲಿ ಸೈಫ್ ಮನೆಗೆ ಬಂದ ಇಬ್ರಾಹಿಂ, ಮನೆಗೆಲಸದ ಸಿಬ್ಬಂದಿಯ ನೆರವಿನಿಂದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ಸೈಫ್ ಮನೆಗೆಲಸದಾಕೆ ಎಲಿಯಾಮಾ ಫಿಲಿಪ್ಸ್ ಅವರು ಮೊದಲು ದುಷ್ಕರ್ಮಿಯನ್ನು ನೋಡಿದ್ದು, ಚೀರುತ್ತಾ ನಟನನ್ನು ಎಚ್ಚರಿಸಿದ್ದಾರೆ. ಅದರ ಬೆನ್ನಲ್ಲೇ ಸೈಫ್ ಮತ್ತು ದುಷ್ಕರ್ಮಿ ಮಧ್ಯೆ ಹೊಡೆದಾಟ ನಡೆದಿದೆ. ಈ ವೇಳೆ ಆತ ಚಾಕುವಿನಿಂದ ಆರು ಬಾರಿ ಇರಿದಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸೈಫ್ ರಕ್ಷಣೆಗೆ ಧಾವಿಸಿದ ಎಲಿಯಾಮಾ ಮತ್ತು ಗೀತಾ ಎಂಬ ಇನ್ನೊಬ್ಬ ಸಿಬ್ಬಂದಿಗೆ ಸಣ್ಣ ಗಾಯವಾಗಿದೆ.

₹1 ಕೋಟಿಗೆ ಬೇಡಿಕೆ: ದುಷ್ಕರ್ಮಿಯು ಮೊದಲು ಸೈಫ್ ಪುತ್ರ ಜೆಹಾಂಗೀರ್ ಮಲಗಿದ್ದ ಕೊಠಡಿಗೆ ಬಂದಿದ್ದಾನೆ. ಅಲ್ಲೇ ಮಲಗಿದ್ದ ಎಲಿಯಾಮಾ ಅವರಿಗೆ ಈ ವೇಳೆ ಎಚ್ಚರವಾಗಿದೆ. ‘₹1 ಕೋಟಿ ನೀಡುವಂತೆ ಬೆದರಿಸಿ ಆತ ದಾಳಿ ನಡೆಸಿದ್ದಾನೆ’ ಎಂದು ಎಲಿಯಾಮಾ ಅವರು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದಾರೆ.

ಗಿರೀಶ ಕಾಸರವಳ್ಳಿ ಸೇರಿ 10 ಮಂದಿ ಸಂದೇಶ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ಸಂದೇಶ ಸಂಸ್ಕೃತಿ ಮತ್ತು ಶಿಕ್ಷಣ ಪ್ರತಿಷ್ಠಾನ ನೀಡುವ 2025ನೇ ಸಾಲಿನ ಸಂದೇಶ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಸಂದೇಶ ಸಾಹಿತ್ಯ ಪ್ರಶಸ್ತಿಗೆ ಬಿ.ಆರ್. ಲಕ್ಷ್ಮಣ ರಾವ್ (ಕನ್ನಡ), ಐರಿನ್ ಪಿಂಟೊ (ಕೊಂಕಣಿ) ಹಾಗೂ ಗಣೇಶ್ ಅಮೀನ್ ಸಂಕಮಾರ್ (ತುಳು) ಆಯ್ಕೆಯಾಗಿದ್ದಾರೆ. ಸಂದೇಶ ಕಲಾ ಪ್ರಶಸ್ತಿಗೆ ಚಿತ್ರ ನಿರ್ದೇಶಕ ಗಿರೀಶ ಕಾಸರವಳ್ಳಿ, ಸಂದೇಶ ಮಾಧ್ಯಮ ಪ್ರಶಸ್ತಿಗೆ ಡಿ.ವಿ. ರಾಜಶೇಖರ್, ಸಂದೇಶ ಕೊಂಕಣಿ ಸಂಗೀತ ಪ್ರಶಸ್ತಿಗೆ ರೋಶನ್ ಡಿಸೋಜ, ಸಂದೇಶ ಶಿಕ್ಷಣ ಪ್ರಶಸ್ತಿಗೆ ಯೆನೆಪೊಯ ಅಬ್ದುಲ್ಲ ಕುಞ್ಞಿ ಹಾಗೂ ಸಂದೇಶ ವಿಶೇಷ ಪ್ರಶಸ್ತಿಗೆ ಕೆ.ವಿ. ರಾವ್ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಬಾರಿ ವಿಶೇಷವಾಗಿ ಸಂದೇಶ ಗೌರವ ಪ್ರಶಸ್ತಿ ಹಾಗೂ ಸಂದೇಶ ಯುವ ಪ್ರತಿಭಾ ಪ್ರಶಸ್ತಿಯನ್ನು ಘೋಷಿಸಲಾಗಿದ್ದು, ಗೌರವ ಪ್ರಶಸ್ತಿಗೆ ಸಮಾಜ ಸೇವಕ ಮೈಕಲ್ ಡಿಸೋಜ ಹಾಗೂ ಸಂದೇಶ ವಿಶೇಷ ಯುವ ಪ್ರತಿಭಾ ಪ್ರಶಸ್ತಿಗೆ ರೆಮೋನ ಇವೆಟ್ ಪಿರೇರಾ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂದೇಶ ಸಂಸ್ಕೃತಿ ಮತ್ತು ಶಿಕ್ಷಣ ಪ್ರತಿಷ್ಠಾನದ ನಿರ್ದೇಶಕ ಫಾ. ಸುದೀಪ್ ಪಾಲ್ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಶಸ್ತಿಯು ತಲಾ ₹25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಫೆ. 10ರಂದು ಸಂಜೆ 5.30ಕ್ಕೆ ಸಂದೇಶ ಸಂಸ್ಥೆಯ ಆವರಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದರು.

ಆಯ್ಕೆ ಸಮಿತಿ ಸದಸ್ಯರಾದ ನಾ. ದಾಮೋದರ ಶೆಟ್ಟಿ, ಬಿ.ಎ. ಮೊಹಮ್ಮದ್ ಹನೀಫ್, ರೂಪಕಲಾ ಆಳ್ವ, ಸೈಮನ್ ಕೊಹೆಲೊ ಸುದ್ದಿಗೋಷ್ಠಿಯಲ್ಲಿದ್ದರು.

ಬಿ.ಆರ್.ಲಕ್ಷ್ಮಣ್ ರಾವ್

ಗಿರೀಶ ಕಾಸರವಳ್ಳಿ

ಡಿ.ವಿ. ರಾಜಶೇಖರ್

ಐರಿನ್ ಪಿಂಟೊ

ಮೈಕಲ್ ಡಿಸೋಜ

ಗಣೇಶ್ ಅಮೀನ್ ಸಂಕಮಾರ್

ಕೆ.ವಿ. ರಾವ್

ರೆಮೋನ ಇವೆಟ್ ಪಿರೇರ



ಎನೆಪೋಯ ಅಬ್ದುಲ್ಲ ಕುಞ್ಞಿ

ರೋಶನ್ ಡಿಸೋಜ

ಪೋಕ್ಸೊ ಆರೋಪಿ ಕಾಲಿಗೆ ಗುಂಡು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ತೋರಣಗಲ್‌ನಲ್ಲಿ ಇತ್ತೀಚೆಗೆ ನಡೆದ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದ ಪಂಚನಾಮೆ ವೇಳೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ ಮಂಜುನಾಥ (26) ಎಂಬ ಆರೋಪಿಯ ಕಾಲಿಗೆ ಪೊಲೀಸರು ಗುಂಡು ಹೊಡೆದಿದ್ದಾರೆ.

ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಮಂಜುನಾಥನನ್ನು ಬಂಧಿಸಲಾಗಿದ್ದು, ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿಯು ಕೃತ್ಯವೆಸಗಿ, ತಲೆಮರೆಸಿಕೊಂಡಿದ್ದ. ಬುಧವಾರ ರಾತ್ರಿ ಆತನನ್ನು ಹುಲಿಗಿ ಎಂಬಲ್ಲಿ ಬಂಧಿಸಿ ತೋರಣಗಲ್ಲಿಗೆ ಕರೆತರಲಾಗಿತ್ತು. ಗುರುವಾರ ಬೆಳಿಗ್ಗೆ ಪಂಚನಾಮೆಗೆಂದು ದರೋಜಿಯ ಮಾವಿನ ತೋಪಿಗೆ ಕರೆದೊಯ್ದಾಗ ಆತ ಪೊಲೀಸ್ ಸಿಬ್ಬಂದಿ ರಘುಪತಿ ಎಂಬುವರ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, 560001
ದೂರವಾಣಿ : +91–80–22942324, ಇ–ಮೇಲ್: spwireless@ksp.gov.in
ಟೆಂಡರ್ ಸಂಖ್ಯೆ: KSP/2024-25/IND0263 ದಿನಾಂಕ: 13.01.2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ ಬೆಂಗಳೂರು ರವರಿಂದ, National Cyber Crime Helpline-1930 ಸಹಾಯವಾಣಿಗೆ ಅವಶ್ಯವಿರುವ Software Applications ಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 43.45 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 21.01.2025 ಸಮಯ ಬೆಳಿಗ್ಗೆ 12.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 28.01.2025, ಸಂಜೆ 5 ಗಂಟೆಗಳು.** ಇತರೆ ಮಾಹಿತಿಯನ್ನು **https://eproc.karnataka.gov.in** ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು
ವಾಸಾಸಂಇ/ವಾ.ಪ್ರ./4357/2024–25

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560023.
Tel: 080-2955 7021 E-mail: pdksaps@gmail.com
ಸಂಖ್ಯೆ: ಕೆಎಸ್‌ಎಪಿಎಸ್/ಪಿಆರ್‌ಸಿ/16/2024–25 ದಿನಾಂಕ: 15–01–2025
ಇ–ಸಂಗ್ರಹಣಾ ವೇದಿಕೆ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ) ಆಹ್ವಾನ ಪ್ರಕಟಣೆ
ಹೋಲ್ ಬ್ಲಡ್ ಫಿಂಗರ್ ಪ್ರಿಕ್ (ಡಬ್ಲ್ಯೂಬಿಎಫ್‌ಪಿ) ಹೆಚ್‌ಐವಿ ಟೆಸ್ಟ್ ಕಿಟ್ ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 31–01–2025. ಸಮಯ: ಸಂಜೆ 5:30 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್: **https://kppp.karnataka.gov.in**
ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು.
ವಾಸಾಸಂಇ/ವಾ.ಪ್ರ/4350/ಎಂಎಎ/2024–25

ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560001.
ಸಂಖ್ಯೆ:ಎಸ್.ಎಸ್.ಕೆ/ಕ್ಯೂ.ಎಂ.ಟಿ/ಓದು ಕರ್ನಾಟಕ ಟೆಂಡರ್/2024–25 ದಿನಾಂಕ:15.01.2025
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
2024–25ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಓದು ಕರ್ನಾಟಕ ಕಿಟ್‌ಗಳನ್ನು ಮುದ್ರಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸರಬರಾಜು ಮಾಡಲು ರಾಜ್ಯದ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: **28.01.2025ರ ಸಂಜೆ 05:00 ಗಂಟೆಯವರೆಗೆ.**
ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ –ಕರ್ನಾಟಕ
ವಾಸಾಸಂಇ/ವಾಪ್ರ/ಜಿಎ/4370/2024–25

ಕರ್ನಾಟಕ ಸರಕಾರ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 08372–297213,
ಇ–ಮೇಲ್ : gimsgadag@gmail.com
ಸಂ. ಗವೈವಿಸಂ/ಟೆಂಡರ/ಸಿ.ಸಿ ಟಿ.ವ್ಹಿ /2024–25 ದಿನಾಂಕ : 16.01.2025
ಮರು ಇ–ಟೆಂಡರ ಪ್ರಕಟಣೆ
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇಲ್ಲಿಗೆ ಅಂದಾಜು ರೂ. 20 ಲಕ್ಷ ಮೊತ್ತದ ಐ.ಟಿ ಫೆರಿಫೇರಲ್ಸ್, ಇತರೆ ಮತ್ತು ಯು.ಪಿ.ಎಸ್ ಸರ್ವಿಸ್ ಮಾಡಲು ಟೆಂಡರ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ದಿನಾಂಕ : **17.01.2025** ರಿಂದ **31.01.2025** ರ ಸಾಯಂಕಾಲ 4:00 ಗಂಟೆವರೆಗೆ ಇ–ಪೋರ್ಟಾಲ್ ಸಂಖ್ಯೆ : **DME/2024-25/IND1018/CALL-2 (https://kppp.karnataka.gov.in/kppp)**ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ.
ವಾಸಾಸಂಇ/ಗದಗ/ಕೆ.ಎಸ್‌ಎಂ.ಸಿ.ಎ/540/2024–25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ.ಹೆಚ್.ರಸ್ತೆ, ಬೆಂಗಳೂರು–560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ–ಮೇಲ್ : ctmc@mybmtc.com
ಸಂ:ಬೆಂಮಸಾಸಂ/ಕೇಕ/ಸಂ/ವಾ1615/ 4111 /2024–25 ದಿನಾಂಕ: 15.01.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 29/2024–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟ 10,000 ಚದರ ಅಡಿಗಳಿಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಯಲಹಂಕ ಓಲ್ಡ್ ಟೌನ್, ವಿಜಯನಗರ ಟಿಟಿಎಂಸಿ, ಮಲ್ಲಸಂದ್ರ ಬಸ್ ನಿಲ್ದಾಣ ಮತ್ತು ಯಶವಂತಪುರ ಟಿಟಿಎಂಸಿಗಳಲ್ಲಿನ ವಾಣಿಜ್ಯ ಕಛೇರಿ ಸ್ಥಳಗಳಿಗೆ ಪರವಾನಗಿ ನೀಡಲು ಆಸಕ್ತ ಏಜೆನ್ಸಿಗಳಿಂದ ಗುತ್ತಿಗೆದಾರರ ಆಯ್ಕೆಗಾಗಿ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	21.01.2025 ರಂದು 11:30 ಗಂಟೆಗೆ	ಸ್ಥಳ: ಮಿನಿ ಮೀಟಿಂಗ್ ಹಾಲ್, 4ನೇ ಮಹಡಿ, ಕೇಂದ್ರ ಕಛೇರಿ
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	31.01.2025 ರಂದು 17:00 ಗಂಟೆಯ ವರೆಗೆ	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	03.02.2025 ರಂದು 11:30 ಗಂಟೆ	
ಆರ್ಥಿಕ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು.	

ಇ.ಎಂ.ಡಿ ಮೊತ್ತ, ವಿಸ್ತೀರ್ಣ, ಇನ್ನಿತರ ಎಲ್ಲಾ ಮಾಹಿತಿ ಹಾಗೂ ಆಯ್ಕೆ ವಿಧಾನ ಇತ್ಯಾದಿಗಳಿಗಾಗಿ **www.kppp.karnataka.gov.in** ಗೆ ಲಾಗಿನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–46010000; 080–68948777; 080–22483777 ಅಥವಾ 7760997519, 776099122 & 7760991026 ಇ–ಮೇಲ್:**ctmc@mybmtc.com** ಗೆ ಸಂಪರ್ಕಿಸಬಹುದು.
ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

KMF ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ–580004
☎:-0836-2467603, 2468380 E-mail : dharwarnin@gmail.com
IFT No. KMF/2024-25/IND1220 Date:-16-01-2025
ಇ–ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., ಧಾರವಾಡವು (ಧಾಮುಲ್) ಈ ಕೆಳಕಂಡ ಅಳತೆಯುಳ್ಳ ರಚನಾತ್ಮಕ ಫ್ರೇಮ್ ಕೆಲಸದ ವಿನ್ಯಾಸ, ಪೂರೈಕೆ, ಫ್ಯಾಬ್ರಿಕೇಶನ್ ಮತ್ತು ನಿರ್ಮಾಣ ಸೇರಿದಂತೆ ಮಾಡ್ಯುಲರ್ ನಂದಿನಿ ಮಿಲ್ಕ ಪಾರ್ಲರ್‌ಗಳನ್ನು ಧಾರವಾಡ, ಗದಗ & ಉತ್ತರಕನ್ನಡದ ಮೂರು ಜಿಲ್ಲೆಗಳಲ್ಲಿ ವಿವಿಧ ಸ್ಥಳಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಸ್ಥಳಗಳು ಆಯ್ಕೆಯಾಗಿ ಅಂತಿಮಗೊಂಡ ಮೇಲೆ ಟೆಂಡರ ದಾಖಲಾತಿಗಳಲ್ಲಿ ನಮೂದಿಸಲಾದ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ನಿರ್ವಹಿಸಿ ಕ್ರಮವಿಡಲು ಅರ್ಹ ಟೆಂಡರುದಾರರಿಂದ ಇ–ಟೆಂಡರ ಆಹ್ವಾನಿಸಲಾಗಿರುತ್ತದೆ.

ಕ್ರ ಸಂ.	ವಿವರ	ಪ್ರಮಾಣ	ಇಎಂಡಿ ಮೊತ್ತ (ರೂ.ಗಳಲ್ಲಿ)
1)	Modular Nandini Milk Parlor 8' x 8' x 8.5' (L x B x H)	09 Nos.	90,000-00

ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ನಲ್ಲಿ ಲಾಗ್‌ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ ಸಂಖ್ಯೆ:- **080–46010000 / 68948777,** ಇ–ಮೇಲ್:-**support@eprochelpdsk.com** ರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಪೋರ್ಟಲ್ ಜಾಲತಾಣದಿಂದ ಟೆಂಡರ ದಾಖಲಾತಿ ಲಭ್ಯವಾಗುವ ದಿನಾಂಕ	ದಿ:–17.01.2025 ರಿಂದ ದಿ:–17.02.2025 ರ ಸಂಜೆ 4 ಗಂಟೆಗಿಂತ ಮೊದಲು
2	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	17.02.2025, ಸಂಜೆ 04.00 ರವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	18.02.2025, ಸಂಜೆ 04.30 ರ ನಂತರ
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	21.02.2025, ಬೆಳಿಗ್ಗೆ 11.00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)
ಇ–ಮೇಲ್: midhly@yahoo.co.in ಫೋ.ನಂ: 08284–220113
ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/2702/4702/2024–25/1434 ದಿನಾಂಕ: 09.01.2025
ಅಲ್ಪಾವಧಿ ಟೆಂಡರ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ–1,2&3
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ **KW-1, 2 & 3** (ದ್ವಿ–ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.
(1) ಇಂಟೆಂಡ್ ನಂ: 3457 (2) ಇಂಟೆಂಡ್ ನಂ: 3454 (3) ಇಂಟೆಂಡ್ ನಂ: 3734 (4) ಇಂಟೆಂಡ್ ನಂ: 3732 (5) ಇಂಟೆಂಡ್ ನಂ: 1855 4ನೇ ಕರೆ (6) ಇಂಟೆಂಡ್ ನಂ: 3458 (7) ಇಂಟೆಂಡ್ ನಂ: 3459
ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬ್‌ಸೈಟ್ ವಿಳಾಸ: **"https://kppp.karnataka.gov.in"** ದಲ್ಲಿ ದಿನಾಂಕ: **17–01–2025** ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: **23–01–2025** ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: **24–01–2025** ರ ಸಾಯಂಕಾಲ **05.15** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **27–01–2025** ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು.
ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು, ಕೆ.ಡಬ್ಲ್ಯೂ–1, 2 & 3 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ. ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– (ಎಂ. ನಾಗರಾಜ)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
DIPR/ADK/KSMCA/751/ 24-25 Dt.16.01.2025

ಕರ್ನಾಟಕ ಸರಕಾರ
[ಜಿಲ್ಲಾ ಪಂಚಾಯತ ಕಲಬುರಗಿ]
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲಬುರಗಿ
ತಾರಫೈಲ್ 8ನೇ ಕ್ರಾಸ್, ಡಂಕಿನ ಭಾವಿ ಹತ್ತಿರ, ಜೆಡಿಎ ಲೇಔಟ್, ಅಂಬಿಕಾನಗರ ಹಿಂದುಗಡೆ, ಡಿ.ದೇವರಾಜ ಅರಸು ಭವನ ಕಲಬುರಗಿ–585102 Email:dobcmgulbarga@gmail.com, ದೂ.: 9148489157
ಟೆಂಡರ್ ಪ್ರಕಟಣೆ ಸಂ:ಹಿಂವಕಇಕ: ಸಿಬ್ಬಂದಿ:ಸಿಆರ್:01:2024–25 ದಿನಾಂಕ: 16.01.2025
:: ಅಲ್ಪಾವಧಿ ಟೆಂಡರ್ ಪ್ರಕಟಣೆ ::
ಕಲಬುರಗಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಮೊರಾರ್ಜಿ ದೇಸಾಯಿ ಶಾಲೆಗಳು ಹಾಗೂ ವಸತಿ ನಿಲಯಗಳಲ್ಲಿ ಮತ್ತು ಆಶ್ರಮ ಶಾಲೆಗಳಲ್ಲಿ ಖಾಲಿ ಇರುವ 274 ಗ್ರೂಪ್ "ಡಿ" ಮತ್ತು ಕಂಪ್ಯೂಟರ್ ಆಪ್‌ರೇಟರ್ಸ್ ಹುದ್ದೆಗಳ ಸ್ಥಳಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಗಳ ಸೇವೆ ಅವಶ್ಯವಿದ್ದು ಖಾಯಂ ಸಿಬ್ಬಂದಿ ನೇಮಕವಾಗುವವರೆಗೆ, ತಾತ್ಕಾಲಿಕವಾಗಿ 2024–25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲ ಸಂಸ್ಥೆಯವರ ಮೂಲಕ ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಮೂಲಕ **(www.kppp.karnataka.gov.in.)** ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ.
1) ಇ–ಟೆಂಡರ್‌ನ ಒಟ್ಟು ಮೊತ್ತ: **ರೂ. 478.93 ಲಕ್ಷ,** 2) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : ರೂ: 9.58ಲಕ್ಷ, 3) ಇ–ಟೆಂಡರ್ ಫಾರಂ ಬೆಲೆ: ಇ–ಪ್ರೊಕ್ಯೂರ್‌ಮೆಂಟ್‌ನಂತೆ, 4) ಇ–ಟೆಂಡರ್ ಅರ್ಜಿ ಹಾಕುವ ದಿನಾಂಕ: **16–01–2025 ರಿಂದ 27–01–2025 ರವರೆಗೆ,** 5) ಇ–ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: ದಿನಾಂಕ: **27–01–2025 ರಂದು ಸಾ: 5.30 ಗಂಟೆವರೆಗೆ,** 6) ಪ್ರೀ–ಬಿಡ್ ಮೀಟಿಂಗ್ ದಿನಾಂಕ: **20–01–2025 ರಂದು ಬೆಳಿಗ್ಗೆ 11–00 ಗಂಟೆಗೆ** ಸ್ಥಳ : ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕಲಬುರಗಿ, 7) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ ಮತ್ತು ದಿನಾಂಕ: ಸ್ಥಳ :– ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕಲಬುರಗಿ ದಿನಾಂಕ: **28–01–2025 ರಂದು ಬೆ: 11–00 ಗಂಟೆಗೆ** 8) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ: ಸ್ಥಳ : **ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕಲಬುರಗಿ** ದಿನಾಂಕ: **30–01–2025 ರಂದು ಬೆ: 11–00 ಗಂಟೆಗೆ,** 9) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲಬುರಗಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಟೆಂಡರ್ ಸಮಿತಿ ಕಲಬುರಗಿ, ದೂರವಾಣಿ ಸಂಖ್ಯೆ : 9148489157
ಸಹಿ/– ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/850/ಕೆ.ಎಸ್.ಎಂ.ಸಿ.&ಎ/2024–25

ಸಿಐಡಿ ಎದುರು ಹೇಳಿಕೆ ದಾಖಲಿಸಿದ ಪರಿಷತ್ ಸದಸ್ಯರಾದ ಉಮಾಶ್ರೀ, ನಾಗರಾಜ್ ಯಾದವ್

‘ಸಿ.ಟಿ.ರವಿ ಅಶ್ಲೀಲ ಪದ ಬಳಸಿದ್ದು ನಿಜ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಅವಾಚ್ಯ ಪದದಿಂದ ನಿಂದಿಸಿದ್ದಾರೆ ಎನ್ನಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ, ಗುರುವಾರ ಇಬ್ಬರನ್ನು ವಿಚಾರಣೆಗೆ ಒಳಪಡಿಸಿ, ಹೇಳಿಕೆ ದಾಖಲಿಸಿಕೊಂಡಿತು.

ಉಮಾಶ್ರೀ

ನಾಗರಾಜ್ ಯಾದವ್

ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯರಾದ ಉಮಾಶ್ರೀ ಮತ್ತು ನಾಗರಾಜ್ ಯಾದವ್ ಅವರು ತನಿಖಾಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿ, ಘಟನೆ ಕುರಿತು ಮಾಹಿತಿ ನೀಡಿದರು. ವಿಚಾರಣೆಗೆ ಹಾಜರಾಗುವಂತೆ ಸಿಐಡಿ ನೋಟಿಸ್ ಜಾರಿ ಮಾಡಿತ್ತು.

‘ಕಲಾಪದ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅಶ್ಲೀಲ ಪದ ಬಳಸಿದ್ದು ನಿಜ. ರವಿ ಅವರು ಬಳಸಿದ್ದ ಪದವನ್ನು ನಾವು ಸ್ಪಷ್ಟವಾಗಿ ಕೇಳಿಸಿಕೊಂಡಿದ್ದೇವೆ. ಸಚಿವರೂ ಸ್ಥಳದಲ್ಲೇ ಆಕ್ಷೇಪ ವ್ಯಕ್ತಪಡಿಸಿದ್ದರು. ಜತೆಗೆ ಸ್ಥಳದಲ್ಲಿದ್ದ ನಾವೂ ಸಹ ರವಿ ವಿರುದ್ಧ ಪ್ರತಿಭಟನೆ ನಡೆಸಿದ್ದೆವು ಎಂಬುದಾಗಿ ಇಬ್ಬರೂ ಹೇಳಿಕೆ ನೀಡಿದ್ದು, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ಉಮಾಶ್ರೀ ಅವರನ್ನು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 12.30ರ ತನಕ, ನಾಗರಾಜ್ ಯಾದವ್ ಅವರನ್ನು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರ ತನಕ ವಿಚಾರಣೆ ನಡೆಸಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಲಿಖಿತ ಮತ್ತು ಮೌಖಿಕ ರೂಪದಲ್ಲಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಜತೆಗೆ ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಯತೀಂದ್ರ ವಿಚಾರಣೆ ಸಾಧ್ಯತೆ

‘ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರಿಗೂ ಶೀಘ್ರದಲ್ಲೇ ನೋಟಿಸ್ ಜಾರಿ ಮಾಡಿ ಅವರ ಹೇಳಿಕೆಯನ್ನೂ ದಾಖಲು ಮಾಡಿಕೊಳ್ಳಲಾವುದು’ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ವಿಚಾರಣೆ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ನಾಗರಾಜ್ ಯಾದವ್ ಅವರು, ‘ಪರಿಷತ್ ಕಲಾಪದಲ್ಲಿ ನಡೆದ ಘಟನೆಯನ್ನು ತನಿಖಾಧಿಕಾರಿಗಳ ಎದುರು ವಿವರಿಸಿದ್ದೇನೆ. ಯಾವ ಮಹಿಳೆಗೂ ಆ ರೀತಿಯ ಅಶ್ಲೀಲ ಪದ ಬಳಸಬಾರದು. ಸಿ.ಟಿ.ರವಿ ಅವರು ಮೊಂಡುತನ ಬಿಟ್ಟು ಕ್ಷಮೆ ಕೇಳಬೇಕು’ ಎಂದು ಅವರು ಹೇಳಿದರು.

ಜಂಟಿ ಸರ್ವೆ ಅಂತ್ಯ; ಅರಣ್ಯ–ಕಂದಾಯ ಭಿನ್ನರಾಗ

ಶ್ರೀನಿವಾಸಪುರ (ಕೋಲಾರ): ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ತಾಲ್ಲೂಕಿನ ಹೊಸಹುಡ್ಯ ಗ್ರಾಮದ ಜಮೀನು ಜಂಟಿ ಸಮೀಕ್ಷೆ ಕಾರ್ಯ ಬಿಗಿ ಪೊಲೀಸ್ ಬಂದೋಬಸ್ತ್ ನಡುವೆ ಗುರುವಾರ ಮುಕ್ತಾಯಗೊಂಡಿದೆ.

ಹೈಕೋರ್ಟ್ ಸೂಚನೆ ಮೇರೆಗೆ ಎರಡು ದಿನ ನಡೆದ ಜಂಟಿ ಸಮಿಕ್ಷೆ ವೇಳೆ ಹಾಜರಿದ್ದ ರಮೇಶ್ ಕುಮಾರ್ ಅರಣ್ಯ ಇಲಾಖೆಯ ಸರ್ವೆ ವಿಧಾನಕ್ಕೆ(ಗಂಟರ್ ಚೈನ್ ಬಳಕೆ) ತಕರಾರು ತೆಗೆದಿದ್ದಾರೆ.

‘ನಾನು ಜಮೀನಿನ ಖರೀದಿದಾರ; ಒತ್ತುವರಿದಾರ ಅಲ್ಲ. ಜಂಟಿ ಸರ್ವೆ ನಡೆಸುವಂತೆ ನಾನೇ ಹಿಂದೆ ಕೋರಿದ್ದೆ. ಸರ್ಕಾರಿ ದಾಖಲೆಗಳಲ್ಲಿ ಗೋಮಾಳ ಎಂದಿದೆ’ ಎಂದು ರಮೇಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಭೂ ದಾಖಲೆಗಳ ವಿಚಾರವಾಗಿ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ನಡುವೆ ಭಿನ್ನ ಅಭಿಪ್ರಾಯ ವ್ಯಕ್ತವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಅಶ್ಲೀಲತೆಯ ಎಲ್ಲ ಎಲ್ಲೆಗಳನ್ನೂ ಮೀರಿದ ದುಷ್ಕೃತ್ಯ– ಹೈಕೋರ್ಟ್ ಆಘಾತ

‘ಪ್ರಜ್ವಲ್ ರೇವಣ್ಣಗೆ ಬೇರೆ ಕಾನೂನಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಎಂದ ಮಾತ್ರಕ್ಕೆ ಕಾನೂನು ಬದಲಿಸಲಾಗದು’ ಎಂದು ಚಾಟಿ ಬೀಸಿರುವ ಹೈಕೋರ್ಟ್, ‘ಮಹಿಳೆಯರ ಮೇಲಿನ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣನವರ ಅಶ್ಲೀಲತೆ ಎಲ್ಲ ಎಲ್ಲೆಗಳನ್ನೂ ಮೀರಿದ ದುಷ್ಕೃತ್ಯ’ ಎಂದು ಆಘಾತ ವ್ಯಕ್ತಪಡಿಸಿದೆ.

‘ನನ್ನ ಕಾರು ಚಾಲಕನ ಸ್ಯಾಮ್‌ಸಂಗ್ ಫೋನ್‌ನಿಂದ ಪಡೆದುಕೊಂಡಿರುವ ಫೋಟೊ ಮತ್ತು ಎಲ್ಲಾ ವಿಡಿಯೊಗಳನ್ನು ಒದಗಿಸಲು ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಬೇಕು’ ಎಂದು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರ ಪ್ರಜ್ವಲ್ ಪರ ವಕೀಲ ಜಿ.ಅರುಣ್, ‘2024ರ ಏಪ್ರಿಲ್ 30ರಂದು ಮಹಜರು ನಡೆಸಿದ ಸಂದರ್ಭದಲ್ಲಿ ಮಾಜಿ ಕಾರು ಚಾಲಕನ ಫೋನ್ ಮತ್ತು ಸಿಮ್ ಕಾರ್ಡ್ ಜಪ್ತಿ ಮಾಡಲಾಗಿದೆ. ಆದರೆ, ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ನೀಡಿರುವ ವರದಿಯಲ್ಲಿ ಎಷ್ಟು ಅಶ್ಲೀಲ ಚಿತ್ರಗಳಿವೆ ಎಂಬುದನ್ನು ಪ್ರಾಸಿಕ್ಯೂಷನ್ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ’ ಎಂದು ಆಕ್ಷೇಪಿಸಿದರು.

ಕಾನೂನು ಪರಿಧಿಯಲ್ಲಿನ ಸೀಮಿತ ಅವಕಾಶವನ್ನು ಮಾತ್ರವೇ ಪುರಸ್ಕರಿಸಲಾಗುವುದು. ಇದನ್ನು ಹೊರತುಪಡಿಸಿ ಬೇರೆ ಮಹಿಳೆಯರ ಖಾಸಗಿತನಕ್ಕೆ ಧಕ್ಕೆಯಾಗುವ ವಿಡಿಯೊ ಅಥವಾ ಚಿತ್ರಗಳನ್ನು ನೀಡಲಾಗದು

ಎಂ.ನಾಗಪ್ರಸನ್ನ ನ್ಯಾಯಮೂರ್ತಿ

ಇದಕ್ಕೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ವಿಲಂಬಿಸಲು ಅರ್ಜಿದಾರರು ಈ ಅರ್ಜಿ ಸಲ್ಲಿಸಿದ್ದಾರೆ. ಒಂದು ವೇಳೆ ನ್ಯಾಯಪೀಠ ನಿರ್ದೇಶನ ನೀಡಿದರೆ ಕ್ಲೋನ್ ಮಾಡಿರುವ ಎಲ್ಲಾ ದಾಖಲೆಗಳನ್ನೂ ಅರ್ಜಿದಾರರಿಗೆ ಒದಗಿಸಲಾಗುವುದು. ಆದರೆ, ಇದರಿಂದ ಕಾರು ಚಾಲಕನ ಫೋನ್‌ನಲ್ಲಿ ಸಂಗ್ರಹಗೊಂಡಿರುವ ಬೇರೆ ಮಹಿಳೆಯರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, ‘ಗೋಪಾಲಕೃಷ್ಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ಹಾಲಿ ಪ್ರಕರಣಕ್ಕೆ ಅಗತ್ಯವಾದ ವಿಡಿಯೊ ಮತ್ತು ಫೋಟೊಗಳನ್ನು ಮಾತ್ರವೇ ಪ್ರಾಸಿಕ್ಯೂಷನ್ ಒದಗಿಸಲಿದೆ’ ಎಂದು ಸ್ಪಷ್ಟವಾಗಿ ತಿಳಿಸಿದರು.

ಅನ್ಯರ ಖಾಸಗಿತನ ಉಲ್ಲಂಘನೆಯ ಚಿತ್ರವೇಕೆ?

‘ನೀವು, ನಿಮ್ಮ ಅರ್ಜಿದಾರರ ರಕ್ಷಣೆಗೆ ಏನನ್ನೋ ಮಾಡಬೇಕು ಎಂದುಕೊಂಡಿರುವುದಕ್ಕೆ ಬೇರೊಬ್ಬ ಮಹಿಳೆಯ ಖಾಸಗಿತನದ ಉಲ್ಲಂಘನೆಯಾಗುವುದು ಸಲ್ಲ. ಇಂತಹುದಕ್ಕೆ ನ್ಯಾಯಾಲಯ ಅವಕಾಶವನ್ನೂ ನೀಡುವುದಿಲ್ಲ. ಬೇರೆಯವರ ಖಾಸಗಿತನ ಉಲ್ಲಂಘಿಸುವ ಚಿತ್ರಗಳು ನಿಮಗೇಕೆ’ ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅವರು ಪ್ರಜ್ವಲ್ ಪರ ವಕೀಲರನ್ನು ಕಟುವಾಗಿ ಪ್ರಶ್ನಿಸಿದರು.

‘ಈ ಪ್ರಕರಣದಲ್ಲಿ ಅರ್ಜಿದಾರರು ಕೋರುತ್ತಿರುವ ದಾಖಲೆಗಳನ್ನು ಪ್ರಾಸಿಕ್ಯೂಷನ್ ಆಧರಿಸುತ್ತಿಲ್ಲ. ಸಂತ್ರಸ್ತೆಯ ಚಿತ್ರಗಳು ಮತ್ತು ಹೇಳಿಕೆ ಹೊರತುಪಡಿಸಿ ಬೇರೆ ಯಾವುದನ್ನೂ ಪ್ರಾಸಿಕ್ಯೂಷನ್ ಅವಲಂಬಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಅಂತಿಮವಾಗಿ ಪ್ರಜ್ವಲ್ ಮನವಿಯನ್ನು ಸಾರಾಸಗಟಾಗಿ ನಿರಾಕರಿಸಿ ಅರ್ಜಿ ವಿಲೇವಾರಿ ಮಾಡಿದರು.

ಗಾಳಿಪಟ ಉತ್ಸವ....

ಕಲಬುರಗಿಯ ನೂತನ ವಿದ್ಯಾಲಯದ ಮೈದಾನದಲ್ಲಿ ಗುರುವಾರ ನಡೆದ ಗಾಳಿಪಟ ಉತ್ಸವದಲ್ಲಿ ವಿದ್ಯಾರ್ಥಿನಿಯರು ಗಾಳಿಪಟ ಹಾರಿಸಿ ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕೆಪಿಎಸ್‌ಸಿ ಗೊಂದಲ: ಸಿಎಸ್‌ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ನೇಮಕಾತಿಗೆ ಕೆಪಿಎಸ್‌ಸಿ ಡಿ. 29ರಂದು ನಡೆಸಿದ ಪೂರ್ವಭಾವಿ ಮರು ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಲೋಪದೋಷಗಳು ಕಂಡುಬಂದಿರುವ ಬಗ್ಗೆ ಪರಿಶೀಲಿಸಿ, ಚರ್ಚಿಸಬೇಕು ಎಂದು ಮುಖ್ಯ ಕಾರ್ಯದರ್ಶಿ (ಸಿ.ಎಸ್) ಶಾಲಿನಿ ರಜನೀಶ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

ಆ ಬೆನ್ನಲ್ಲೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ಈ ಬಗ್ಗೆ ಸೂಚನೆ ನೀಡಿರುವ ಮುಖ್ಯ ಕಾರ್ಯದರ್ಶಿ, ಕೆಪಿಎಸ್‌ಸಿ ಕಾರ್ಯದರ್ಶಿಯಿಂದ ತಕ್ಷಣ ವರದಿ ಪಡೆದು ಚರ್ಚೆ ನಡೆಸಬೇಕು ಎಂದು ಸೂಚನೆ ನೀಡಿದ್ದಾರೆ.

‘ಈ ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಯ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿನ ಅನೇಕ ಲೋಪದೋಷಗಳ ಬಗೆಗೆ ವ್ಯಕ್ತವಾದ ವಿರೋಧ ಹಾಗೂ ಪರೀಕ್ಷಾರ್ಥಿಗಳ ಒತ್ತಾಯಕ್ಕೆ ಮಣಿದು ಆಯೋಗವು ಡಿಸೆಂಬರ್ 29ರಂದು ನಡೆಸಿದ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲೂ ಲೋಪ– ದೋಷಗಳು ಮರುಕಳಿಸಿವೆ. ಹೀಗಾಗಿ ಮತ್ತೆ ಪರೀಕ್ಷೆ ನಡೆಸುವಂತೆ ಆದೇಶ ನೀಡಬೇಕು’ ಎಂದು ಒತ್ತಾಯಿಸಿ ಸಾಹಿತಿ ಗೊ.ರು. ಚನ್ನಬಸಪ್ಪ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು.

ಅಲ್ಲದೆ, ಮುಖ್ಯ ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದ ರಾಜ್ಯ ದಲಿತ ಪದವೀಧರರ ಸಂಘದ ಅಧ್ಯಕ್ಷ ವಿ. ಲೋಕೇಶ್, ಮರು ಪರೀಕ್ಷೆ ನಡೆಸಬೇಕು ಅಥವಾ ಪೂರ್ವಭಾವಿ ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳಿಗೆ ಮುಖ್ಯ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದರು.

ಈ ಗೊಂದಲಗಳ ಬೆನ್ನಲ್ಲೇ, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಡಿಪಿಎಆರ್ ಕಾರ್ಯದರ್ಶಿ, ಕನ್ನಡ ಮತ್ತು ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮತ್ತು ನಿರ್ದೇಶಕರ ಜೊತೆ ಇದೇ 18ರಂದು ಸಭೆ ನಡೆಸಲು ಮುಖ್ಯ ಕಾರ್ಯದರ್ಶಿ ನಿರ್ಧರಿಸಿದ್ದಾರೆ.

₹17,311 ಕೋಟಿ ಆಸ್ತಿ: ‘ಸುಪ್ರೀಂ’ಗೆ ಮೊರೆ

ಒಂದನೇ ಪುಟದಿಂದ...

2015ರಲ್ಲಿ ಅಂದಿನ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯ ಹಲವು ಸಭೆಗಳಲ್ಲಿ ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿಯ ಕುರಿತು ಚರ್ಚೆ ನಡೆಸಲಾಗಿತ್ತು. 2018ರ ಜುಲೈ 17ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಯಲ್ಲಿ, ‘ಇನ್ನೂ ಹಸಿರು ಹೊದಿಕೆಯನ್ನು ಹೊಂದಿದ ಅರಣ್ಯ ಭೂಮಿಯನ್ನು ಎಚ್‌ಎಂಟಿ ಸಂಸ್ಥೆ ಮಾರಾಟ ಮತ್ತು ಹರಾಜು ಮಾಡುತ್ತಿದ್ದು, ಇದು ಬೆಂಗಳೂರಿನ ಶ್ವಾಸಕೋಶದಂತಹ ಸ್ಥಳವಾಗಿದೆ. ಅಲ್ಲಿ ಹಸಿರು ಉಳಿಸುವುದು ಅಗತ್ಯ’ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಅವರು ಹೇಳಿದರು.

2020ರ ಜುಲೈ 15ರಂದು ನಡೆದ ಸಭೆಯಲ್ಲಿ ಡಿನೋಟಿಫಿಕೇಶನ್‌ಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸಚಿವ ಸಂಪುಟ ಸಭೆಗೆ ಸಲ್ಲಿಸಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸೂಚಿಸಿದ್ದರು. ಆದರೆ, ಅಧಿಕಾರಿಗಳು ಸಚಿವ ಸಂಪುಟ ಸಭೆಗೆ ತರದೇ, ತಮ್ಮಷ್ಟಕ್ಕೇ ತಾವೇ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ಕಾಯ್ದಿರಿಸಿದ ಅರಣ್ಯ ಭೂಮಿ ಡಿನೋಟಿಫೈ ಮಾಡಲು ಮಧ್ಯಂತರ ಅರ್ಜಿ ಸಲ್ಲಿಸಿರುವುದು ಕರ್ತವ್ಯ ಲೋಪ ಎಂದು ಪಾಟೀಲ ಹೇಳಿದರು.

ಎಚ್‌ಎಂಟಿ ಸಂಸ್ಥೆಯು ಈ ಎಲ್ಲಾ ಭೂಮಿಯನ್ನು ಇತರೆ ಸಂಸ್ಥೆಗಳಿಗೆ ಮಾರಾಟ ಮಾಡುತ್ತಿರುವುದರಿಂದ ರಾಜ್ಯಕ್ಕೆ ಭಾರಿ ಆರ್ಥಿಕ ನಷ್ಟ ಉಂಟಾಗುತ್ತದೆ ಮತ್ತು ಬೆಂಗಳೂರಿಗರು ಅಮೂಲ್ಯ ಹಸಿರು ಪ್ರದೇಶವನ್ನು ಕಳೆದುಕೊಂಡಂತೆ ಆಗುತ್ತದೆ ಎಂದು ಕಾನೂನು ಇಲಾಖೆ ಅಭಿಪ್ರಾಯ ನೀಡಿದೆ ಎಂದು ಅವರು ತಿಳಿಸಿದರು.

ಅರಮನೆ ಮಾಲೀಕತ್ವ : ಇತ್ಯರ್ಥಪಡಿಸಲು ‘ಸುಪ್ರೀಂ’ಗೆ ಮನವಿ

ಒಂದನೇ ಪುಟದಿಂದ...

ಕರ್ನಾಟಕ ರಾಜ್ಯವು ಬೆಂಗಳೂರು ಅರಮನೆ (ಭೂಸ್ವಾಧೀನ ಮತ್ತು ವರ್ಗಾವಣೆ) ಅಧಿನಿಯಮ, 1996ರ ಕಾಯ್ದೆಯನ್ನು 1996ರ ನವೆಂಬರ್ 21ರಂದು ಜಾರಿ ಮಾಡಲಾಗಿತ್ತು. ಅದರ ಪ್ರಕಾರ, ಬೆಂಗಳೂರು ಅರಮನೆಗೆ ಸೇರಿದ ಎಲ್ಲಾ ಸ್ಥಿರ– ಚರ ಸ್ವತ್ತುಗಳ ಎಲ್ಲಾ ವಿಧವಾದ ಹಕ್ಕುಗಳು ರಾಜ್ಯ ಸರ್ಕಾರದ ಅಧೀನಕ್ಕೆ ಒಳಪಡುತ್ತದೆ.

ರಾಜವಂಶಸ್ಥರು ಈ ಕಾಯ್ದೆಯನ್ನು ಪ್ರಶ್ನಿಸಿ 1997ರಲ್ಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಈ ಕಾಯ್ದೆಯನ್ನು ಎತ್ತಿ ಹಿಡಿದಿತ್ತು. ಅದನ್ನು ಪ್ರಶ್ನಿಸಿ ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂ ಕೋರ್ಟ್ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶ ನೀಡಿತ್ತು. ಇದೀಗ ಪ್ರಕರಣವನ್ನು ತುರ್ತಾಗಿ ಇತ್ಯರ್ಥಗೊಳಿಸಲು ಮನವಿ ಮಾಡಲಾಗುವುದು. ಮಾಲೀಕತ್ವದ ಪ್ರಶ್ನೆಯು ಇತ್ಯರ್ಥವಾಗುವವರೆಗೆ ಟಿಡಿಆರ್ ಪ್ರಕರಣವನ್ನು ಕಾನೂನು ಪ್ರಕಾರ ನಿರ್ವಹಿಸಲು ಸಚಿವ ಸಂಪುಟ ನಿರ್ದೇಶನ ನೀಡಲಾಗಿದೆ ಎಂದರು.

ರಾಜ್ಯದಾದ್ಯಂತ ‘ಆಶಾ ಕಿರಣ’ ವಿಸ್ತರಣೆ

ಬಿಪಿಎಲ್ ಕಾರ್ಡ್‌ದಾರರಿಗೆ ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಸೇವೆ ಉಚಿತ

ಪ್ರಜಾವಾಣಿ ವಾರ್ತೆ



ಎಚ್‌.ಕೆ.ಪಾಟೀಲ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಉಚಿತವಾಗಿ ಕಣ್ಣಿನ ತಪಾಸಣೆ, ಕಣ್ಣಿನ ಶಸ್ತ್ರ ಚಿಕಿತ್ಸೆ ಮತ್ತು ಕನ್ನಡಕಗಳನ್ನು ವಿತರಿಸುವ ‘ಆಶಾ ಕಿರಣ’ ಯೋಜನೆಯನ್ನು ₹13.30 ಕೋಟಿ ಅನುದಾನದಲ್ಲಿ ಜಾರಿಗೊಳಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಈಗಾಗಲೇ ಚಿಕ್ಕಬಳ್ಳಾಪುರ, ಕಲಬುರಗಿ, ಹಾವೇರಿ, ಚಾಮರಾಜನಗರ, ಚಿತ್ರದುರ್ಗ, ರಾಯಚೂರು, ಉತ್ತರಕನ್ನಡ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಜಾರಿ ಆಗಿದೆ. ಉಳಿದ 22 ಜಿಲ್ಲೆಗಳಲ್ಲಿ ಯೋಜನೆ ಆರಂಭಿಸಲಾಗುವುದು ಎಂದರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಹೊರಗುತ್ತಿಗೆ ಆಧಾರದ ಮೇಲೆ 2 ವರ್ಷಗಳ ಅವಧಿಗೆ ಆರೋಗ್ಯ ಮಿತ್ರರು ಮತ್ತು ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ₹53.18 ಕೋಟಿ ಅನುದಾನ ಒದಗಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದಕ್ಕಾಗಿ ಹೊಸ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅಲ್ಲದೇ, ಈಗಾಗಲೇ ಅಸ್ತಿತ್ವದಲ್ಲಿರುವ ಅಂಗ ಕಸಿ (ಜೀವ ಸಾರ್ಥಕತೆ) ಯೋಜನೆಗೆ ಶ್ವಾಸಕೋಶ, ಹೃದಯ ಮತ್ತು ಮೂಳೆ ಮಜ್ಜೆಯ ಕಸಿಯನ್ನೂ ಸೇರ್ಪಡೆಗೊಳಿಸಿ ಯೋಜನೆಯನ್ನು ವಿಸ್ತರಿಸಲು ತೀರ್ಮಾನಿಸಲಾಗಿದೆ ಎಂದರು.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ 450 ಹಾಸಿಗೆ ಸಾಮರ್ಥ್ಯದ ನೂತನ ಆಸ್ಪತ್ರೆ ಕಟ್ಟಡದ ಎರಡನೇ ಹಂತದ ಕಾಮಗಾರಿಯ ₹78.10 ಕೋಟಿ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಪಾಟೀಲ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಒದಗಿಸಲಾಗುತ್ತಿರುವ ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಸೇವೆಯನ್ನು ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಉಚಿತವಾಗಿ ಮತ್ತು ಉಳಿದವರಿಗೆ ಶೇ 70ರಷ್ಟು ಶುಲ್ಕ ಭರಿಸುವ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ ಎಂದರು.

ಸಂಪುಟದ ಪ್ರಮುಖ ತೀರ್ಮಾನಗಳು

- ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಫಾರ್ಮ್‌ನಲ್ಲಿ ನೂತನವಾಗಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಒಪ್ಪಿಗೆ. ಯೋಜನಾ ವೆಚ್ಚ ₹285.89 ಕೋಟಿ.
- 5ನೇ ಹಣಕಾಸು ಆಯೋಗದ ಅವಧಿಯನ್ನು 2025ರ ಆಗಸ್ಟ್ 31 ರವರೆಗೆ ವಿಸ್ತರಿಸಲು ಒಪ್ಪಿಗೆ
- ಅಬಕಾರಿ ಇಲಾಖೆ ನೌಕರರ ವರ್ಗಾವಣೆಗೆ ಕೌನ್ಸೆಲಿಂಗ್ ಪದ್ಧತಿ ಜಾರಿ ತರಲು ಕರಡು ನಿಯಮಗಳನ್ನು ಹೊರಡಿಸಲು ಅನುಮೋದನೆ
- ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಹಾಗೂ ಹೆಚ್ಚು ಮರಣದ ಪ್ರಮಾಣ ಇರುವ ರಾಜ್ಯದ 10 ಮಹಾನಗರ ಪಾಲಿಕೆಗಳನ್ನು ಮತ್ತು ಆಯ್ದ 24 ನಗರಸಭೆಗಳಲ್ಲಿ ತಲಾ ಒಂದರಂತೆ 34 ಆಧುನಿಕ ವಿದ್ಯುತ್ ಅಥವಾ ಅನಿಲ ಚಿತಾಗಾರಗಳನ್ನು ನಿರ್ಮಿಸಲು ಒಪ್ಪಿಗೆ. ಪ್ರತಿ ಚಿತಾಗಾರಕ್ಕೆ ತಲಾ ₹4 ಕೋಟಿ ನೀಡಲಾಗುವುದು
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ 10 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ಒಪ್ಪಿಗೆ. ಇದಕ್ಕಾಗಿ ಹಿಂದುಳಿದ ಇಲಾಖೆಯಿಂದ ₹211 ಕೋಟಿ ಅನುದಾನ.
- ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಇಲಾಖೆ ವ್ಯಾಪ್ತಿಯಲ್ಲಿ ಬರುವ 19 ಖಾಸಗಿ ಅನುದಾನಿತ ಕಾನೂನು ಕಾಲೇಜುಗಳ ಬೋಧಕ ಸಿಬ್ಬಂದಿಗೆ ಯುಜಿಸಿಯ 6ನೇ ವೇತನ ಹಾಗೂ ಪರಿಷ್ಕೃತ 7ನೇ ವೇತನ ಶ್ರೇಣಿಗಳ ಮೂಲ ವೇತನದ ವ್ಯತ್ಯಾಸ ಹಿಂಬಾಕಿ ₹2.61 ಕೋಟಿ ಪಾವತಿಸಲು ಒಪ್ಪಿಗೆ
- ಗ್ರಾಮ ಆಡಳಿತ ಅಧಿಕಾರಿಗಳಿಗೆ ಮತ್ತು ಕಂದಾಯ ನಿರೀಕ್ಷಕರಿಗೆ ಕ್ರೋಮ್ ಬುಕ್ ಅಥವಾ ಲ್ಯಾಪ್‌ಟಾಪ್ ಒದಗಿಸಲು ಇಲಾಖೆಯ ನಿರ್ಣಯಕ್ಕೆ ಅವಕಾಶ ನೀಡಲು ಒಪ್ಪಿಗೆ

ನರೇಗಾ ನೌಕರರಿಗೆ ವೈದ್ಯಕೀಯ ವಿಮೆ

ನರೇಗಾ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ 3,352 ನೌಕರರಿಗೆ ವೈದ್ಯಕೀಯ ವಿಮಾ ಸೌಲಭ್ಯವನ್ನು ಕಲ್ಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕಾಗಿ ವಾರ್ಷಿಕ ₹8.34 ಕೋಟಿ ವೆಚ್ಚವಾಗಲಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ಯೋಜನೆ ಜಾರಿಗೊಳಿಸಲು ₹25.14 ಕೋಟಿ ವೆಚ್ಚವಾಗಲಿದೆ.

ಈ ಯೋಜನೆಯಡಿ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಅನುಷ್ಠಾನ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಇಎಸ್ಐ ಸೌಲಭ್ಯ ಹೊಂದಿರುವ ಸಿಬ್ಬಂದಿ ಹೊರತುಪಡಿಸಿ ಉಳಿದ ಸಿಬ್ಬಂದಿಗೆ ಸಾಮೂಹಿಕ ವೈದ್ಯಕೀಯ ವಿಮೆ ಸೌಲಭ್ಯ ಒದಗಿಸಲಾಗುವುದು.

ಲಕ್ಷ್ಮೀ ಆರೋಗ್ಯ ವಿಚಾರಿಸಿದ ಸತೀಶ

ಬೆಳಗಾವಿ: ವಾಹನ ಅಪಘಾತಕ್ಕೀಡಾಗಿ ಇಲ್ಲಿನ ವಿಜಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಗುರುವಾರ ರಾತ್ರಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ನಂತರ ಮಾತನಾಡಿದ ಅವರು, ‘ಲಕ್ಷ್ಮೀ ಅವರು ಆರೋಗ್ಯವಾಗಿದ್ದಾರೆ. ವಿಶ್ರಾಂತಿಗೆ ಸಲಹೆ ನೀಡಿದ್ದೇನೆ’ ಎಂದರು.

ಸುಧಾ, ಮಯೂರ ಓದಿರಿ

ಗುಂಡಿನ ದಾಳಿ: ಒಬ್ಬನ ಸಾವು

ಎಸ್‌ಬಿಐ ಸಿಬ್ಬಂದಿ ಮೇಲೆ ಗುಂಡಿನ ದಾಳಿ ನಡೆಸಿ, ನೋಟಿನ ಕಂತೆಗಳಿರುವ ಟ್ರಂಕ್ ಅನ್ನು ಬೈಕ್ ಮೇಲೆ ಇಟ್ಟುಕೊಂಡ ಅಪರಿಚಿತರು

ಒಂದನೇ ಪುಟದಿಂದ...

ಗಿರಿ ವೆಂಕಟೇಶ

‘ಗಿರಿ ವೆಂಕಟೇಶ ಹಾಗೂ ಶಿವಕುಮಾರ ಅವರು ನಗರದ ಎಸ್‌ಬಿಐ ಮುಖ್ಯ ಕಚೇರಿಗೆ ಬಂದು, ನೋಟಿನ ಕಂತೆಗಳಿರುವ ಟ್ರಂಕ್ ಅನ್ನು ಜೀಪಿನಲ್ಲಿ ಇರಿಸುತ್ತಿದ್ದರು. ಈ ವೇಳೆ ಇಬ್ಬರು ಅಪರಿಚಿತರು ಬಂದು, ಅವರ ಮೇಲೆ ಹಲ್ಲೆ ನಡೆಸಿ, ಟ್ರಂಕ್ ಕಸಿದುಕೊಳ್ಳಲು ಯತ್ನಿಸಿದ್ದಾರೆ. ಬಳಿಕ ಕಣ್ಣಿಗೆ ಕಾರದ ಪುಡಿ ಎರಚಿ, ಗಿರಿ ವೆಂಕಟೇಶ ಹಾಗೂ ಶಿವಕುಮಾರ ಮೇಲೆ ಗುಂಡಿನ ದಾಳಿ ನಡೆಸಿ, ಟ್ರಂಕ್‌ನೊಂದಿಗೆ ಬೈಕ್‌ನಲ್ಲಿ ಪರಾರಿಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡೇಟಿನಿಂದ ತೀವ್ರ ರಕ್ತಸ್ರಾವವಾಗಿದ್ದ ಗಿರಿ ವೆಂಕಟೇಶ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಿವಕುಮಾರ ಅವರನ್ನು ತಕ್ಷಣವೇ ಬ್ರಿಮ್ಸ್‌ಗೆ ಕೊಂಡೊಯ್ದು, ಪ್ರಾಥಮಿಕ ಚಿಕಿತ್ಸೆ ನೀಡಿ, ನಂತರ ಹೈದರಾಬಾದ್‌ಗೆ ಕೊಂಡೊಯ್ಯಲಾಗಿದೆ. ಹಣದೊಂದಿಗೆ ಪರಾರಿಯಾಗುತ್ತಿದ್ದ ಅಪರಿಚಿತರ ಮೇಲೆ ಸ್ಥಳದಲ್ಲಿದ್ದ ಕೆಲವರು ಕಲ್ಲು ತೂರಿ ತಡೆಯಲು ಯತ್ನಿಸಿದ್ದಾರೆ. ಆದರೆ, ಅವರು ಗಾಳಿಯಲ್ಲಿ ಗುಂಡು ಹಾರಿಸಿ, ಹೆದರಿಸಿ ಓಡಿ ಹೋಗಿದ್ದಾರೆ.

ಎಟಿಎಂಗಳಿಗೆ ಹಣ ಕೊಂಡೊಯ್ಯುವಾಗ ಸಿಎಂಎಸ್ ಕಂಪನಿ ಗನ್‌ಮ್ಯಾನ್ ಕೂಡ ಜೊತೆಗಿರುತ್ತಿದ್ದರು. ಆದರೆ, ಗುರುವಾರ ಅವರು ರಜೆ ಮೇಲಿದ್ದರು ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಶ್ವಾನದಳ, ವಿಧಿ ವಿಜ್ಞಾನ ಪ್ರಯೋಗಾಲಯ ಹಾಗೂ ಬೆರಳಚ್ಚು ತಜ್ಞರು ಬಂದು ಪರಿಶೀಲಿಸಿ, ಸಾಕ್ಷ್ಯ ಸಂಗ್ರಹಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಹಾಗೂ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮಧ್ಯಭಾಗದಲ್ಲಿರುವ ಸದಾ ಜನದಟ್ಟಣೆಯ ಎಸ್‌ಬಿಐ ಕಚೇರಿ ಎದುರು ಈ ದರೋಡೆ ನಡೆದಿದೆ. ವಿಷಯ ತಿಳಿಯುತ್ತಿದ್ದಂತೆ ನೂರಾರು ಜನ ಸ್ಥಳಕ್ಕೆ ದೌಡಾಯಿಸಿದ್ದರು. ಜನರನ್ನು ನಿಯಂತ್ರಿಸಲು ಪೊಲೀಸರು ಎರಡು–ಮೂರು ಬಾರಿ ಲಾಠಿ ಬೀಸಿದರು. ಇಡೀ ದಿನ ಮುಖ್ಯರಸ್ತೆಯನ್ನು ಪೊಲೀಸರು ಬಂದ್ ಮಾಡಿದ್ದರು.

ಆಸ್ಪತ್ರೆ ಎದುರು ಕುಟುಂಬದವರ ಧರಣಿ: ಘಟನೆಗೆ ಕಾರಣರಾದವರನ್ನು ಬಂಧಿಸುವವರೆಗೆ ಮರಣೋತ್ತರ ಪರೀಕ್ಷೆಗೆ ಅವಕಾಶ ಕೊಡುವುದಿಲ್ಲ ಎಂದು ಪಟ್ಟು ಹಿಡಿದು ಮೃತ ಗಿರಿ ವೆಂಕಟೇಶ ಅವರ ಕುಟುಂಬ ಸದಸ್ಯರು ಬೀದರ್‌ನ ಬ್ರಿಮ್ಸ್ ಎದುರು ಧರಣಿ ನಡೆಸಿದರು. ಹಿರಿಯ ಪೊಲೀಸ್ ಅಧಿಕಾರಿಗಳು ನಡೆಸಿದ ಮನವೊಲಿಕೆ ಯತ್ನ ವಿಫಲವಾಯಿತು.

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು–560002.
ಇ–ಮೇಲ್: nrlmkarnataka@gmail.com

ಸಂಖ್ಯೆ: KSRLPS/PROC/GEN/30/2024-PRCT-KSRLPS ದಿನಾಂಕ: 15–01–2025

ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಜೀವನೋಪಾಯ ಅಭಿಯಾನದ (ರಾಜೀಅ) 2024–25ನೇ ಸಾಲಿನಲ್ಲಿ ಬೆಂಗಳೂರು ಸಂತೆ (ಗ್ರಾಮೀಣ ಮಹಿಳಾ ನೇತೃತ್ವದ ಸ್ವ–ಸಹಾಯ ಗುಂಪು ಮಾರ್ಟ್) ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು Marketing Agency ಯ ಸೇವೆಗಾಗಿ ಅರ್ಹ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 15.01.2025 ರಂದು ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಗಳು/ಬಿಡ್ಡುದಾರರು http://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರನ್ನು ದಿನಾಂಕ: 27.01.2025ರ ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ.

ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No:KSRLPS/2024-25/SE0032 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/4368/ಆಕಾರ್/2024–25

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು–560002.
ಇ–ಮೇಲ್: nrlmkarnataka@gmail.com

ಸಂಖ್ಯೆ: KSRLPS/DDUG/GEN/29/2024-DDUGKY/CALL-2 ದಿನಾಂಕ: 15–01–2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು Expression of Interest to Partner with DDU-GKY as Captive Employer assignment in Karnataka ವಿಷಯಕ್ಕೆ ಸಂಬಂಧಿಸಿದಂತೆ Pre-qualification Tenderನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ದಿನಾಂಕ: 15.01.2025 ರಂದು ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಗಳು/ಬಿಡ್ಡುದಾರರು http://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರನ್ನು ದಿನಾಂಕ: 14.02.2025 ರ ಸಂಜೆ: 5.00 ಗಂಟೆಯೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No:KSRLPS/ 2024-25/PREQUAL_TENDER_NUMBER_1/CALL-2 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/4367/ಆಕಾರ್/2024–25

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi P.O. Bengaluru-560 072. www.isec.ac.in
Advertisement No. A/2/2025 Date: 17.01.2025
APPLICATIONS ARE INVITED FROM THE ELIGIBLE CANDIDATES FOR THE FOLLOWING FACULTY POSTS

Sl. No.	Designation	Pay and Academic Level	No.of Posts	Centre
1	Professor	Rs. 1,44,200/- (Academic Level 14)	1	Population Research Centre
2	Associate Professor	Rs. 1,31,400/- (Academic Level 13A)	2	Centre for Economic Studies & Policy; Agriculture Development & Rural Transformation Centre

The detailed Advertisement and procedure for applying for the above posts is available at our Website: www. isec.ac.in.
Last date for receipt of applications: 17th February 2025.
ISEC-24520 Sd/- Registrar I/c

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ – 590018, ಕರ್ನಾಟಕ, ಭಾರತ
ಸಂಖ್ಯೆ: VTU/BGM/SAP/CW1/T-681,685/2024-25/5358 ದಿನಾಂಕ: 16-01-2025

ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.)	ಮುಂಗಡ ಠೇವಣಿ (ರೂ.)
1	T-681: Tender for Setup of Interdisciplinary of Center of Excellence (CoE) in Flight Simulator which includes Software Licenses, Computers and Accessories at Dept. of Aero Space Engineering, VTU CPGS, Muddenahalli - 2nd Call.	92.04.000/-	1.84.100/-
2	T-685: Tender for Procurement of Equipment for ATAL IDEA LAB at VTU PG Centre, Muddenahalli Under AICTE Grants.	63,73,000/-	1,27,500/-

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30–01–2025 ರಂದು ಮಧ್ಯಾಹ್ನ 2.30 ಘಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: 31–01–2025 ರಂದು ಸಂಜೆ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.vtu.ac.in ಮತ್ತು www.kppp.karnataka.gov.in ನೋಡಬಹುದು.

ಸಹಿ/–
ಕುಲಸಚಿವರು
ವಾಸಾಸಂಇ/ಬೆಳಗಾವಿ/1480/ಅಡ್ವರ್ಟೋರ್/2024–25

ಫಾರಂ ಜಿ

ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (SSPL) ಮತ್ತು ಇದರ ಸಂಪೂರ್ಣ ಸ್ವಾಮ್ಯ ಹೊಂದಿರುವ ಅಂಗಸಂಸ್ಥೆಯಾದ ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ (SFPL) ಕಂಪನಿಗಾಗಿ ಆಸಕ್ತಿಯ ಅಭಿವ್ಯಕ್ತಿಗೆ (EOI) ಆಹ್ವಾನ

(ಭಾರತೀಯ ದಿವಾಳಿತನ ಮತ್ತು ದಿವಾಳಿತನ ಘೋಷಣಾ ಮಂಡಳಿ (ಕಾರ್ಪೊರೇಟ್ ವ್ಯಕ್ತಿಗಳಿಗಾಗಿ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಬಂಧನೆಗಳು, 2016 ರ ನಿಬಂಧನೆ 36 (ಎ) (1) ಅಡಿಯಲ್ಲಿ)

ಸಂಬಂಧಪಟ್ಟ ವಿವರಗಳು

1	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು ಮತ್ತು CIN	ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (CIN: U74110KA2020PTC134121) ಮತ್ತು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ (CIN: U51909KA2022PTC159010)
2	ಸಾಲಗಾರ ಸಂಸ್ಥೆಯ ನೋಂದಾಯಿತ ಕಚೇರಿಯ ವಿಳಾಸ	#1207/343, 9ನೇ ಮೈನ್, 7ನೇ ಹಂತ, ಎಚ್ ಎಸ್ ಆರ್ ಲೇಔಟ್, ಬೆಂಗಳೂರು-560102
3	ವೆಬ್ ಸೈಟ್ ನ ಯು ಆರ್ ಎಲ್	ಅನ್ವಯಿಸುವುದಿಲ್ಲ
4	ಬಹುಪಾಲು ಸ್ಥಿರಾಸ್ತಿಯನ್ನು ಹೊಂದಿರುವ ಸ್ಥಳದ ವಿವರಗಳು	ಅನ್ವಯಿಸುವುದಿಲ್ಲ
5	ಮುಖ್ಯ ಉತ್ಪನ್ನಗಳ ಸ್ಥಾಪಿತ ಸಾಮರ್ಥ್ಯ (Installed Capacity) (ವಾರ್ಷಿಕ ಉತ್ಪಾದನೆ ಮೆಟ್ರಿಕ್ ಟನ್ ಗಳಲ್ಲಿ)	ನೈಸರ್ಗಿಕ ನಾರುಗಳಿಗೆ ಸಂಬಂಧಿಸಿದ ಸರಕುಗಳ ಪೂರೈಕೆ ಸರಣಿ ವ್ಯಾಪಾರದ ವ್ಯವಹಾರದಲ್ಲಿ SSPL ತೊಡಗಿತ್ತು. ರೇಷ್ಮೆ ಗೂಡುಗಳಂತಹ ಎಲ್ಲಾ ಕೃಷಿ ಸಂಬಂಧಿತ ಉತ್ಪನ್ನಗಳು, ರಸಗೊಬ್ಬರಗಳು ಇತ್ಯಾದಿಗಳ ಖರೀದಿ, ಮಾರಾಟ, ಸಗಟು ವ್ಯಾಪಾರ, ಮತ್ತು ಚಿಲ್ಲರೆ ವ್ಯಾಪಾರದಂತಹ ವ್ಯವಹಾರದಲ್ಲಿ SFPL ತೊಡಗಿಸಿಕೊಂಡಿತ್ತು.
6	ಕಳೆದ ಹಣಕಾಸು ವರ್ಷದಲ್ಲಿ ಮಾರಾಟ ಮಾಡಿದ ಉತ್ಪನ್ನಗಳ / ಸೇವೆಗಳ ಪ್ರಮಾಣ ಮತ್ತು ಮೌಲ್ಯ	SSPL: FY 2023-24 ರ ವಹಿವಾಟು 430 ಕೋಟಿ ರೂಪಾಯಿ SFPL: FY 2023-24 ರ ವಹಿವಾಟು 106 ಕೋಟಿ ರೂಪಾಯಿ
7	ಉದ್ಯೋಗಿಗಳು / ಕಾರ್ಮಿಕರು ಸಂಖ್ಯೆ	SSPL ಮತ್ತು SFPL ನಲ್ಲಿ CIRP ಪ್ರಾರಂಭವಾದ ದಿನಾಂಕದ ಮಾಹಿತಿ ಪ್ರಕಾರ ಉದ್ಯೋಗಿಗಳು / ಕಾರ್ಮಿಕರು ಯಾರೂ ಇರುವುದಿಲ್ಲ
8	ಲಭ್ಯವಿರುವ ಇತ್ತೀಚಿಗಿನ ಹಣಕಾಸು ಪಟ್ಟಿಗಳು, ಸಾಲಗಾರ ಪಟ್ಟಿಗಳು, ಪ್ರಕ್ರಿಯೆಯ ನಂತರದ ಘಟನೆಗಳಿಗೆ ಸಂಬಂಧಿಸಿದ ದಿನಾಂಕಗಳು ಒಳಗೊಂಡಂತೆ ಹೆಚ್ಚಿನ ವಿವರಗಳು ಇಲ್ಲಿ ಲಭ್ಯವಿದೆ:	ಪರಿಹಾರ ವೃತ್ತಿಪರರಿಗೆ ಈ ಕೆಳಗಿನ ವಿಳಾಸದಲ್ಲಿ ಕ್ರಮವಾಗಿ ಇಮೇಲ್ ಕಳುಹಿಸುವ ಮೂಲಕ ನಿಮ್ಮ ವಿನಂತಿಯನ್ನು ಕೋರಬಹುದು. cirp.shapos.services@beleyur.com ಮತ್ತು cirp.shapos.farms@beleyur.com
9	ಸಂಹಿತೆಯ ಕಾಲಂ (25)(2)(ಎಚ್) ಅಡಿಯಲ್ಲಿ ರೆಸಲ್ಯೂಷನ್ ಅಪ್ಲಿಕೆಂಟ್ಸ್ ಆಗಲು ಇರುವ ಅರ್ಹತೆಗಳನ್ನು ಪಡೆದುಕೊಳ್ಳಲು	ಪರಿಹಾರ ವೃತ್ತಿಪರರಿಗೆ ಈ ಕೆಳಗಿನ ವಿಳಾಸದಲ್ಲಿ ಕ್ರಮವಾಗಿ ಇಮೇಲ್ ಕಳುಹಿಸುವ ಮೂಲಕ ನಿಮ್ಮ ವಿನಂತಿಯನ್ನು ಕೋರಬಹುದು. cirp.shapos.services@beleyur.com ಮತ್ತು cirp.shapos.farms@beleyur.com
10	ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಸ್ವೀಕರಿಸಲು ಕೊನೆಯ ದಿನಾಂಕ	1ನೇ ಫೆಬ್ರವರಿ 2025
11	ಸಂಭಾವ್ಯ ಪರಿಹಾರದ ಯೋಜನೆಯ ಅಭ್ಯರ್ಥಿಗಳ ಹಂಗಾಮಿ ಪಟ್ಟಿಯನ್ನು ಪ್ರಕಟಿಸುವ ದಿನಾಂಕ	3ನೇ ಫೆಬ್ರವರಿ 2025
12	ಸಂಭಾವ್ಯ ಪಟ್ಟಿಗೆ ಆಕ್ಷೇಪಗಳನ್ನು ಸಲ್ಲಿಸಲು ಕೊನೆಯ ದಿನಾಂಕ	8ನೇ ಫೆಬ್ರವರಿ 2025
13	ಅಭಿವ್ಯಕ್ತಿಯ ಆಸಕ್ತಿಯನ್ನು (EOI) ಕಳುಹಿಸಬೇಕಾದ ಇ-ಮೇಲ್ ವಿಳಾಸ	ಕ್ರಮವಾಗಿ SSPL: cirp.shapos.services@beleyur.com SFPL: cirp.shapos.farms@beleyur.com

ಸಹಿ/-
ಪರಿಹಾರ ವೃತ್ತಿಪರರಾಗಿ ಕಾರ್ಯನಿರ್ವಹಿಸುತ್ತಿರುವ ಮಧ್ಯಂತರ ಪರಿಹಾರ ವೃತ್ತಿಪರರು
ಶಾಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
ಮತ್ತು
ಪರಿಹಾರ ವೃತ್ತಿಪರರು ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್
ವಿಳಾಸ : ಬೆಲೆಯೂರ್ ರೆಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ‘ಶ್ರೀವತ್ಸ’, #428, 19 ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560011
ಸ್ಥಿರ ದೂರವಾಣಿ : 080-41324113
ಮೊಬೈಲ್ : +91-9448146963
ಇಮೇಲ್ : ravi@beleyur.com

ದಿನಾಂಕ : 16ನೇ ಜನವರಿ 2025
ಸ್ಥಳ : ಬೆಂಗಳೂರು

ಸುಭಾಷಿತ

ಜನ ಆದರ್ಶವಾದಿಗಳನ್ನು ಪೂಜಿಸುವುದರಲ್ಲಿ ತೃಪ್ತರು. ಅನುಸರಿಸುವುದರಲ್ಲಿ ಯಾವಾಗಲೂ ಹಿಂದೆಯೇ.

—ಶಿವರಾಮ ಕಾರಂತ

ಉಪಗ್ರಹ ಜೋಡಣೆ ಯಶಸ್ವಿ: ಬಾಹ್ಯಾಕಾಶ ಸಂಶೋಧನೆಯಲ್ಲಿ ಮಹತ್ವದ ಮೈಲಿಗಲ್ಲು

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಮೆಚ್ಚುಗೆಗೆ ಅರ್ಹವಾದ ಮತ್ತೊಂದು ಸಾಧನೆಯನ್ನು ಮಾಡಿದೆ. ಸ್ಪೇಡೆಕ್ಸ್ ಯೋಜನೆಯ ಭಾಗವಾಗಿ ಬಾಹ್ಯಾಕಾಶದಲ್ಲಿ ಉಪಗ್ರಹಗಳೆರಡನ್ನು ಜೋಡಿಸುವಲ್ಲಿ ಯಶಸ್ವಿಯಾಗಿದೆ. ಇದೊಂದು ಐತಿಹಾಸಿಕ ಕ್ಷಣ ಎಂದು ಇಸ್ರೊ ಬಣ್ಣಿಸಿದೆ. ಅದು ನಿಜವೂ ಹೌದು. ದೇಶವು ಭವಿಷ್ಯದಲ್ಲಿ ಕೈಗೊಳ್ಳುವ ಬಾಹ್ಯಾಕಾಶ ಸಂಶೋಧನೆಗಳಿಗೆ ಉಪಗ್ರಹ ಜೋಡಣೆ ತಂತ್ರಜ್ಞಾನವು ನೆರವಾಗಲಿದೆ. ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿರುವ ಕೆಲವೇ ಕೆಲವು ದೇಶಗಳ ಸಾಲಿಗೆ ಈಗ ಭಾರತವೂ ಸೇರಿದೆ. ಅಮೆರಿಕ, ರಷ್ಯಾ ಮತ್ತು ಚೀನಾ ಮಾತ್ರ ಈ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿವೆ. 'ಚೇಸರ್' ಮತ್ತು 'ಟಾರ್ಗೆಟ್' ಎಂಬ ಎರಡು ಉಪಗ್ರಹಗಳನ್ನು ಪಿಎಸ್‌ಎಲ್‌ವಿ ರಾಕೆಟ್ ಮೂಲಕ ಭೂಮಿಯ ಕೆಳಹಂತದ ಕಕ್ಷೆಗೆ ಸೇರಿಸಲಾಗಿತ್ತು. ಈ ಎರಡು ಉಪಗ್ರಹಗಳನ್ನು ಗುರುವಾರ ಜೋಡಣೆ ಮಾಡಲಾಗಿದೆ. ಜೋಡಣೆ ಕಾರ್ಯಾಚರಣೆಯು ಯೋಜನೆಯಂತೆಯೇ ನಡೆದಿದೆ. 2024ರ ಡಿಸೆಂಬರ್ 30ರಂದು ಈ ಕಾರ್ಯಾಚರಣೆಗೆ ಚಾಲನೆ ನೀಡಲಾಗಿತ್ತು. ತಾಂತ್ರಿಕ ಕಾರಣಗಳಿಂದಾಗಿ ಜೋಡಣೆ ಕಾರ್ಯಾಚರಣೆಯನ್ನು ಎರಡು ಬಾರಿ ಮುಂದೂಡಲಾಗಿತ್ತು. ತಾಂತ್ರಿಕ ಸಮಸ್ಯೆಗಳು ಏನು ಎಂಬುದನ್ನು ಸರಿಯಾಗಿ ಗುರುತಿಸಿ, ಸರಿಪಡಿಸಲಾಗಿದೆ ಎಂಬುದನ್ನು ಈಗಿನ ಯಶಸ್ವಿ ಜೋಡಣೆಯು ತೋರಿಸುತ್ತದೆ. ಜೋಡಣೆಯ ಬಳಿಕ ಈ ಎರಡು ಬಾಹ್ಯಾಕಾಶ ನೌಕೆಗಳು ವಿದ್ಯುತ್ ಅನ್ನು ಪರಸ್ಪರ ಹಂಚಿಕೊಳ್ಳಲಿವೆ. ಬಳಿಕ ಇವುಗಳನ್ನು ಪ್ರತ್ಯೇಕಿಸಲಾಗುವುದು. ಎರಡೂ ಉಪಗ್ರಹಗಳು ಅವುಗಳಲ್ಲಿ ಅಳವಡಿಸಿರುವ ಉಪಕರಣಗಳ ಮೂಲಕ ಪ್ರತ್ಯೇಕವಾಗಿಯೇ ಸುಮಾರು ಎರಡು ವರ್ಷ ಕೆಲಸ ಮಾಡಲಿವೆ.

ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿರುವ ಕೆಲವೇ ಕೆಲವು ದೇಶಗಳ ಸಾಲಿಗೆ ಸೇರಿದ ಹೆಮ್ಮೆ ಈಗ ಭಾರತದ್ದಾಗಿದೆ

ಭಾರತೀಯ ಅಂತರಿಕ್ಷ ನಿಲ್ದಾಣವನ್ನು 2035ರ ಹೊತ್ತಿಗೆ ಸ್ಥಾಪಿಸುವ ಗುರಿಯನ್ನು ಭಾರತ ಹಾಕಿಕೊಂಡಿದೆ. ಈ ಗುರಿ ಸಾಧನೆಗೆ ಉಪಗ್ರಹ ಜೋಡಣೆ ತಂತ್ರಜ್ಞಾನ ಅತ್ಯಗತ್ಯ. ಬಾಹ್ಯಾಕಾಶ ನಡಿಗೆ, ಅತ್ಯಲ್ಪ ಗುರುತ್ವಬಲದ ಪ್ರಯೋಗಗಳು ಮತ್ತು ಇತರ ಬಾಹ್ಯಾಕಾಶ ಸಂಶೋಧನೆಗಳನ್ನು ನಡೆಸಲು ಬಾಹ್ಯಾಕಾಶ ನಿಲ್ದಾಣವನ್ನು ಹೊಂದಿರಬೇಕಾಗುತ್ತದೆ. 2027ರಲ್ಲಿ ನಡೆಸಲು ಉದ್ದೇಶಿಸಲಾಗಿರುವ ಚಂದ್ರಯಾನ-4 ಯೋಜನೆಗೂ ಉಪಗ್ರಹ ಜೋಡಣೆ ತಂತ್ರಜ್ಞಾನದ ಅಗತ್ಯ ಇದೆ. ಚಂದ್ರನ ಮೇಲ್ಮೈ ಮಣ್ಣಿನ ಮಾದರಿಯನ್ನು ಭೂಮಿಗೆ ತರುವುದು ಚಂದ್ರಯಾನ-4 ಯೋಜನೆಯ ಉದ್ದೇಶವಾಗಿದೆ. ಚಂದ್ರನ ಮೇಲೆ ಮನುಷ್ಯನನ್ನು ಇಳಿಸುವುದು ಮತ್ತು ಇತರ ಗ್ರಹಗಳಲ್ಲಿ ನಡೆಸಲಾಗುವ ಪ್ರಯೋಗಗಳಿಗೂ ಉಪಗ್ರಹ ಜೋಡಣೆ ತಂತ್ರಜ್ಞಾನವು ಬೇಕಾಗಿದೆ. ನವೋದ್ಯಮಗಳು ಮತ್ತು ಇತರ ಸಂಸ್ಥೆಗಳು ಕೈಗೊಳ್ಳಲು ಉದ್ದೇಶಿಸಿರುವ ಪ್ರಯೋಗಗಳಿಗೂ ಈ ತಂತ್ರಜ್ಞಾನವು ನೆರವಾಗಲಿದೆ. ಅತ್ಯಲ್ಪ ಗುರುತ್ವಬಲ ಪರಿಸ್ಥಿತಿಯಲ್ಲಿ ಗಿಡವೊಂದರ ಬೆಳವಣಿಗೆ ಹೇಗೆ ಎಂಬ ಪ್ರಯೋಗವೂ ಇದರಲ್ಲಿ ಸೇರಿದೆ. ಪಿಎಸ್‌ಎಲ್‌ವಿ-ಸಿ60 ಪಿಒಇಎಂ-4 ರಾಕೆಟ್ ಮೂಲಕ ಬಾಹ್ಯಾಕಾಶಕ್ಕೆ ಕಳುಹಿಸಿದ್ದ ಗೋವಿನಜೋಳದ ಬೀಜಗಳು ನಾಲ್ಕು ದಿನಗಳಲ್ಲಿ ಮೊಳಕೆಯೊಡೆದಿವೆ ಎಂದು ಇಸ್ರೊ ಘೋಷಿಸಿದೆ. ಸ್ಪೇಡೆಕ್ಸ್ ಯೋಜನೆಯ ಭಾಗವಾಗಿ ಬಾಹ್ಯಾಕಾಶದಲ್ಲಿ ರೋಬೊ ಮೂಲಕ ಕಾರ್ಯಾಚರಣೆ ನಡೆಸುವಲ್ಲಿಯೂ ಇಸ್ರೊ ಯಶಸ್ವಿಯಾಗಿದೆ. ಇತರ ದೇಶಗಳ ಉಪಗ್ರಹಗಳ ಜೋಡಣೆ ಮತ್ತು ದುರಸ್ತಿಗೆ ಜೋಡಣೆ ತಂತ್ರಜ್ಞಾನವು ಬಳಕೆಯಾಗುತ್ತದೆ. ಹಾಗಾಗಿ, ವಾಣಿಜ್ಯ ರೀತಿಯಲ್ಲಿಯೂ ಇದನ್ನು ಲಾಭದಾಯಕವಾಗಿ ಬಳಸಿಕೊಳ್ಳಬಹುದು.

ಇಸ್ರೊ ಕಾರ್ಯಾಚರಣೆಗಳು ಕಳೆದ ಕೆಲವು ವರ್ಷಗಳಲ್ಲಿ ವಿಸ್ತರಣೆಗೊಂಡಿವೆ ಮತ್ತು ವೈವಿಧ್ಯವನ್ನು ಮೈಗೂಡಿಸಿಕೊಂಡಿವೆ. ಕಳೆದ ಐದು ದಶಕಗಳಲ್ಲಿ ಇಸ್ರೊದ ಬೆಳವಣಿಗೆ ಶ್ಲಾಘನೀಯ. ಹವಾಮಾನ ಮುನ್ಸೂಚನೆ ನೀಡುವ ಮತ್ತು ಸಂವಹನಕ್ಕೆ ಬಳಸಬಹುದಾದ ಮೂಲಭೂತ ಉಪಗ್ರಹ ಉಡ್ಡಯನದಿಂದ ಅಂತರಗ್ರಹ ಪರಿಶೋಧನೆ ಮತ್ತು ಬಾಹ್ಯಾಕಾಶ ಸಂಶೋಧನೆಯನ್ನು ನಡೆಸುವಂತಹ ಮಹತ್ವದ ವೈಜ್ಞಾನಿಕ ಸಂಸ್ಥೆಯಾಗಿ ರೂಪುಗೊಂಡಿದೆ. ಈ ಸಂಸ್ಥೆಯು ದೇಶದ ವರ್ಚಸ್ಸು ಹೆಚ್ಚಿಸಿದೆ. ಬಾಹ್ಯಾಕಾಶ ಸಂಶೋಧನೆಯಲ್ಲಿ ಪ್ರಮುಖ ದೇಶವಾಗಿ ಭಾರತ ಹೊಮ್ಮುವಂತೆ ಮಾಡಿದೆ. ಮಾನವನ ಪ್ರಗತಿಯು ಮುಂದಿನ ದಶಕಗಳಲ್ಲಿ ಬಾಹ್ಯಾಕಾಶ ವಿಜ್ಞಾನದ ಪರಿಣತಿಯೊಂದಿಗೆ ತಳಕು ಹಾಕಿಕೊಂಡಿದೆ. ಈ ಕ್ಷೇತ್ರದಲ್ಲಿ ಇಸ್ರೊ ಮಹತ್ವದ ಸಂಸ್ಥೆಯಾಗಿ ಉಳಿಯಲಿದೆ.

ದಿನದ ಟ್ವೀಟ್

ಮಾನವೀಯ ಮೌಲ್ಯ ಮರೆಯುವವರು

ಪೌರಕಾರ್ಮಿಕರೊಂದಿಗೆ ಅನಗತ್ಯವಾಗಿ ಸಂಘರ್ಷಕ್ಕೆ ಇಳಿಯುವವರು ಮಾನವೀಯ ಮೌಲ್ಯ ಅರಿಯದವರು... ಕಸ ಗುಡಿಸುವುದನ್ನು ಅವರು ನಿಲ್ಲಿಸಿದರೆ ನಮ್ಮ ನಗರವು ಒಂದೇ ವಾರದಲ್ಲಿ ಕಸದ ನಗರ ಆಗುತ್ತದೆ. ದುರದೃಷ್ಟವಶಾತ್, ಬಹುತೇಕ ಮಂದಿ ಈ ಮೂಲಭೂತ ವಿಷಯವನ್ನೇ ಅರ್ಥ ಮಾಡಿಕೊಳ್ಳುವುದಿಲ್ಲ.

ನಾಗೇಂದ್ರ

ಕಿಡಿನುಡಿ



ರಾಜ್ಯದಲ್ಲಿ ಆಡಳಿತ ನಡೆಸುವವರು ಕುರ್ಚಿಗಾಗಿ ಕಿತ್ತಾಟದಲ್ಲಿ ನಿರತರಾಗಿದ್ದು, ಪೊಲೀಸರ ಮೇಲೆ ನಿಯಂತ್ರಣ ಇಲ್ಲದಂತಾಗಿದೆ. ಅಪರಾಧ ಮಾಡುವವರಿಗೆ ಯಾರ ಭಯವೂ ಇಲ್ಲದಂತಾಗಿದೆ. ಕರ್ನಾಟಕ ಜಂಗಲ್ ರಾಜ್ಯ ಆಗಿದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 17-1-2000

- **ಕಾಶ್ಮೀರ: ಎನ್‌ಸಿ ನಾಯಕ ಸೇರಿ ಹತ್ತು ಮಂದಿ ಹತ್ಯೆ**

ಶ್ರೀನಗರ, ಜ. 16 (ಪಿಟಿಐ): ಕಳೆದ 24 ಗಂಟೆಗಳಲ್ಲಿ ಕಾಶ್ಮೀರ ಕಣಿವೆಯಲ್ಲಿ ನಡೆದ ವಿವಿಧ ವಿಧ್ವಂಸಕ ಕೃತ್ಯಗಳಲ್ಲಿ ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಗುಲಾಂ ಖಾದಿರ್ ಭಟ್ ಅಲಿಯಾಸ್ ಖಾದಿರ್ ಹಿಂದುಸ್ತಾನಿ ಸೇರಿದಂತೆ 10 ಮಂದಿ ಬಲಿಯಾಗಿದ್ದಾರೆ.

ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಬಡ್ಗಾಂ ಜಿಲ್ಲೆಯ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಒಂದನ್ನು ಸ್ಫೋಟಿಸಲಾಗಿದ್ದು, ಇಡೀ ಕಾಶ್ಮೀರ ಕಣಿವೆ ಕತ್ತಲಿನಲ್ಲಿ ಮುಳುಗಿದೆ.

- **ದಳ (ಯು) ಮೈತ್ರಿಗೆ ಬರಲಿ ಇಲ್ಲವೇ ಸರ್ಕಾರ ತ್ಯಜಿಸಲಿ: ತಂಗಾ**

ಬೀದರ್, ಜ. 16– ರಾಜ್ಯದಲ್ಲಿ ಜನತಾದಳ (ಸಂಯುಕ್ತ) ಮತ್ತು ಬಿಜೆಪಿ ಮೈತ್ರಿ ಮುಂದುವರಿಯಬೇಕು ಇಲ್ಲವೇ ಜನತಾದಳ (ಯು) ಕೇಂದ್ರ ಸರ್ಕಾರಕ್ಕೆ ನೀಡಿರುವ ಬೆಂಬಲ ಹಿಂದಕ್ಕೆ ಪಡೆದು ಸರ್ಕಾರದಿಂದ ಹೊರಬರಬೇಕು ಎಂದು ಬಿಜೆಪಿ ಹಿರಿಯ ಮುಖಂಡ ಹಾಗೂ ವಿಧಾನಪರಿಷತ್ ಸದಸ್ಯ ಡಾ. ಎಂ.ಆರ್.ತಂಗಾ ಇಂದು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ನೇರ ಸವಾಲು ಹಾಕಿದರು.

ದ್ವಂದ್ವ ತ್ಯಜಿಸಲು ಸಲಹೆ: ಬಳ್ಳಾರಿ ಲೋಕಸಭಾ ಉಪಚುನಾವಣೆಯಲ್ಲಿ ಬಿಜೆಪಿ- ಜನತಾದಳ (ಯು) ಮೈತ್ರಿ ಮುಂದುವರಿಯುವುದು. ನಂತರ ನಡೆಯುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ದಳ (ಯು) ನಾಯಕರು ನೀಡಿರುವ ಹೇಳಿಕೆಗಳ ಬಗೆಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅವರು, ಕೇಂದ್ರದಲ್ಲಿ ಮೈತ್ರಿ ಬೇಕು, ರಾಜ್ಯದಲ್ಲಿ ಮೈತ್ರಿ ಬೇಡ ಎನ್ನುವ ದ್ವಂದ್ವ ನೀತಿಯನ್ನು ಜನತಾದಳದ ನಾಯಕರು ಕೈಬಿಡಬೇಕು ಎಂದು ಸಲಹೆ ನೀಡಿದರು.

50 ವರ್ಷಗಳ ಹಿಂದೆ

ಶುಕ್ರವಾರ, 17-1-1975

- **ಶವಗಳಿಗೂ ಅಭಾವ**

ಕೊಚ್ಚಿ, ಜ. 16– ವೈದ್ಯ ಶಿಕ್ಷಣಕ್ಕೆ ಹೆಣಗಳು ಅತ್ಯಗತ್ಯ. ಆದರೆ ಕೇರಳದಲ್ಲಿ ಈಗ ಹೆಣಗಳಿಗೆ ಅಭಾವ.

ಕೊಯ್ದು, ಬಿಚ್ಚಿ ನೋಡಲು ವೈದ್ಯ ವಿದ್ಯಾರ್ಥಿಗಳಿಗೆ ಬೇಕಾಗುವ ಹೆಣಗಳನ್ನು ಯಾರೂ ಒದಗಿಸುವುದಿಲ್ಲ. 'ಬೇವರ್ಸಿ' ಹೆಣಗಳು ಮಾತ್ರ ಇವರ ಜ್ಞಾನಾರ್ಜನೆಗೆ ಸಾಧನವಾಗುತ್ತವೆ. ಈಗ ದಿಕ್ಕಿಲ್ಲದ ಪರದೇಶಿಗಳು ಸತ್ತಾಗ ಆ ಹೆಣಗಳನ್ನು ವಶಕ್ಕೆ ತೆಗೆದುಕೊಂಡು ಅಂತ್ಯಕ್ರಿಯೆ ನಡೆಸುವ ಧರ್ಮಸಂಸ್ಥೆಗಳು ಚುರುಕಾಗಿರುವುದರಿಂದ ಪ್ರಯೋಗಗಳಿಗೆ ಹೆಣಗಳೇ ಸಿಕ್ಕುತ್ತಿಲ್ಲ.

ಹೆಣಗಳನ್ನು ಒದಗಿಸುವುದರಲ್ಲಿ ಕಾಲೇಜು ವಿಫಲವಾಗಿರುವುದನ್ನು ಪ್ರತಿಭಟಿಸಿ, ಕೇರಳದ ಅತ್ಯಂತ ಹಳೆಯದಾದ ರಾಯಲ್ ಹೋಮಿಯೋಪಥಿ ಕಾಲೇಜಿನ 250 ವಿದ್ಯಾರ್ಥಿಗಳು ಮಂಗಳವಾರ ಮುಷ್ಕರ ಹೂಡಿದ್ದರು. ಈಗ ಕಾಲೇಜಿನವರು ಶವಗಳಿಗಾಗಿ ಕೇರಳದಾದ್ಯಂತ ಬೇಟೆ ನಡೆಸಿದ್ದಾರೆ.

- **ಹಾವನೂರರ ಸಸ್ಪೆನ್ಷನ್: ಸಂಸ್ಥೆ ನಿಯಮದಂತೆ ಕೈಗೊಂಡ ಕ್ರಮ**

ಬೆಂಗಳೂರು, ಜ. 16– ಕಾಂಗ್ರೆಸ್ ನಿಯಮಾವಳಿ ಪ್ರಕಾರ ಹಾವನೂರು ಅವರ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಕ್ರಮ ತೆಗೆದುಕೊಂಡಿದ್ದಾರೆಯೇ ವಿನಾ ಅದಕ್ಕೆ ಬೇರೆ ಅರ್ಥ ಕಲ್ಪಿಸಬೇಕಾಗಿಲ್ಲ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ಪಾಟೀಲ್ ಅವರು ಇಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಹೇಳಿದರು.

ಬಹಿರಂಗವಾಗಿ ಕಾರ್ಯ ಸಮಿತಿಯ ಸದಸ್ಯರನ್ನು ಟೀಕಿಸಲು ನಿಯಮಾವಳಿಗಳಲ್ಲಿ ಅವಕಾಶ ಇಲ್ಲ, ಅದರಲ್ಲೂ ಅಧ್ಯಕ್ಷರ ಬಗ್ಗೆಯೇ ಟೀಕೆ ಮಾಡಿದ್ದರಿಂದ ಸಸ್ಪೆಂಡ್ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಸರ್ಕಾರಿ ಸಂಸ್ಥೆಗಳು ಹೆಚ್ಚು ಸಶಕ್ತವೂ ಸ್ವಾಯತ್ತವೂ ಆಗಬೇಕು

ಆರ್ಥಿಕ ಸ್ಥಿತಿ: ಹೊಸ ಸವಾಲು

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ನಾವು ಹೊಸ ವರ್ಷಕ್ಕೆ ಕಾಲಿಟ್ಟು ಎರಡು ವಾರಗಳು ಸಂದಿವೆ. ಭಾರತದ ಆರ್ಥಿಕ ಪರಿಸ್ಥಿತಿ ಹೆಚ್ಚೆಚ್ಚು ಸಂಕೀರ್ಣವಾಗುತ್ತಿದೆ. ಜಿಡಿಪಿಯ ಅಂದಾಜನ್ನು ಇತ್ತೀಚೆಗೆ ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಪ್ರಕಟಿಸಿದೆ. ಜಿಡಿಪಿ ಅಂದರೆ ದೇಶದೊಳಗೆ ತಯಾರಾದ ಒಟ್ಟು ಸರಕು ಹಾಗೂ ಸೇವೆಗಳ ಮಾರುಕಟ್ಟೆ ಮೌಲ್ಯ. ಜಿಡಿಪಿಯು 2024-25ರಲ್ಲಿ ಶೇಕಡ 6.4ರಷ್ಟು ದಾಖಲಾಗುತ್ತದೆ ಎನ್ನುವ ಮೂಲಕ ಅದು ತನ್ನ ನಿರೀಕ್ಷೆಯನ್ನು ತಗ್ಗಿಸಿಕೊಂಡಿದೆ.

ವಾಸ್ತವವಾಗಿ ಹಿಂದಿನ ವರ್ಷಗಳಲ್ಲೂ ಜಿಡಿಪಿ ಕಡಿಮೆಯೇ ಇತ್ತು. ಆದರೆ 2020- 21ರಲ್ಲಿ ಕೋವಿಡ್‌ನಿಂದ ಆರ್ಥಿಕತೆಯಲ್ಲಿ ತೀವ್ರ ಕುಸಿತವಾಗಿತ್ತು. ಅದಕ್ಕೆ ಹೋಲಿಸಿದಾಗ ನಂತರದ ವರ್ಷಗಳಲ್ಲಿ ಜಿಡಿಪಿ ತೀವ್ರವಾಗಿ ಏರುತ್ತಿರುವಂತೆ ತೋರುತ್ತಿತ್ತು. 2019ರಿಂದ ಲೆಕ್ಕಹಾಕಿದರೆ, ಸರಾಸರಿ ಜಿಡಿಪಿ ದರ ಶೇ 5 ದಾಟುವುದಿಲ್ಲ. ಭಾರತದ ಜಿಡಿಪಿ ಬರುವ ದಿನಗಳಲ್ಲಿ ಹೆಚ್ಚೆಂದರೆ ಶೇ 6.5ರ ಆಸುಪಾಸಿನಲ್ಲಿ ಇರುತ್ತದೆ ಅನ್ನುವುದು ಹೆಚ್ಚಿನವರ ಅಭಿಪ್ರಾಯ. ಅಂದರೆ ನಿರೀಕ್ಷಿತ ಶೇ 9ರಷ್ಟು ಬೆಳವಣಿಗೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಜಿಡಿಪಿಯ ಹೆಚ್ಚಳವು ದೇಶದ ಸಮಸ್ಯೆಗಳಿಗೆ ಪರಿಹಾರವಾಗುವುದಿಲ್ಲ ಎಂದು ಅಮರ್ತ್ಯ ಸೇನ್ ಅಂತಹವರು ವಾದಿಸುತ್ತಲೇ ಬಂದಿದ್ದಾರೆ. ಆದರೂ ನಾವು ಇನ್ನೂ ಆರ್ಥಿಕತೆಯ ಸ್ಥಿತಿಯನ್ನು ತಿಳಿಯುವುದಕ್ಕೆ ಜಿಡಿಪಿಗೇ ಜೋತು ಬಿದ್ದಿದ್ದೇವೆ. ಜಿಡಿಪಿಯ ಹೆಚ್ಚಳದಿಂದ ಹೂಡಿಕೆ, ಉದ್ಯೋಗ, ಉತ್ಪಾದನೆ ಇವೆಲ್ಲಾ ಹೆಚ್ಚುತ್ತವೆ ಎಂದು ನಂಬಿಕೊಂಡಿದ್ದೇವೆ.

ಜಿಡಿಪಿಯ ಗಾತ್ರವನ್ನು 5 ಲಕ್ಷ ಕೋಟಿ ಡಾಲರ್‌ಗೆ ಹೆಚ್ಚಿಸುವ ಕನಸು ಇಟ್ಟುಕೊಂಡಿರುವ ಸರ್ಕಾರಕ್ಕೆ ಜಿಡಿಪಿ ಕುಸಿತ ನಿಜವಾಗಿ ಆತಂಕದ ವಿಷಯ. ಜಿಡಿಪಿಯ ಲೆಕ್ಕಾಚಾರವನ್ನು ಗಮನಿಸಿದರೆ, ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಕೆಲವು ಸಮಸ್ಯೆಗಳು ಪ್ರಮುಖವಾಗಿ ಕಾಣುತ್ತವೆ. ಮುಖ್ಯವಾಗಿ, ಜನರ ಕೊಳ್ಳುವ ಪ್ರಮಾಣದಲ್ಲಿ ತೀವ್ರ ಕುಸಿತ ಕಾಣಿಸಿಕೊಂಡಿದೆ. ಹಾಗೆಯೇ ಹೂಡಿಕೆಯಲ್ಲಿ ತೀವ್ರ ಇಳಿಕೆಯಾಗಿದೆ. ಸರ್ಕಾರದ ವೆಚ್ಚವೂ ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಇವೆಲ್ಲಾ ಪರಸ್ಪರ ತೆಕ್ಕೆ ಹಾಕಿಕೊಂಡಿರುವ ಸಂಗತಿಗಳು. ಜನರ ಕೊಳ್ಳುವ ಪ್ರಮಾಣ ಕಡಿಮೆಯಾಗಿರುವುದಕ್ಕೆ ಅವರ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದು ಕಾರಣ. ಹಣದುಬ್ಬರದ ಏರಿಕೆಗೆ ಅನುಗುಣವಾಗಿ ಕೂಲಿಯಲ್ಲಿ ಏರಿಕೆಯಾಗದೇ ಇರುವುದರಿಂದ ಸ್ವಾಭಾವಿಕವಾಗಿಯೇ ಜನರ ಕೊಳ್ಳುವ ಪ್ರಮಾಣ ಕಡಿಮೆಯಾಗಿದೆ. ಖರ್ಚನ್ನು ಸರಿದೂಗಿಸಿಕೊಳ್ಳುವುದಕ್ಕೆ ಹೆಚ್ಚೆಚ್ಚು ಸಾಲವನ್ನು ಮಾಡಿಕೊಳ್ಳುತ್ತಿದ್ದಾರೆ. ಆರ್‌ಬಿಐ ವರದಿ ಕೂಡ ಕೌಟುಂಬಿಕ ಸಾಲದ ಪ್ರಮಾಣ ಹೆಚ್ಚುತ್ತಿರುವುದನ್ನು ಸ್ಪಷ್ಟವಾಗಿ ದಾಖಲಿಸಿದೆ. ಸಾಲದ ಮರುಪಾವತಿ, ಬಡ್ಡಿಯ ಹೊರೆ ಇವೆಲ್ಲಾ ಸೇರಿಕೊಂಡು ಕೊಳ್ಳುವ ಶಕ್ತಿಯನ್ನು ಇನ್ನಷ್ಟು ತಗ್ಗಿಸಿವೆ. ಸರಕು ಹಾಗೂ ಸೇವೆಗಳಿಗೆ ಬೇಡಿಕೆ ಮತ್ತೂ ಕಡಿಮೆಯಾಗಿದೆ. ಬೇಡಿಕೆ ತಗ್ಗಿದರೆ ಉದ್ದಿಮೆದಾರರು ಬಂಡವಾಳ ಹೂಡಲು ಹಿಂಜರಿಯುತ್ತಾರೆ. ವಿದೇಶಿ ಹೂಡಿಕೆದಾರರು ಹೂಡಿಕೆಯನ್ನು ಹಿಂತೆಗೆದುಕೊಳ್ಳುತ್ತಾರೆ.

ಭಾರತದಲ್ಲಿ ಇಂದು ವಿದೇಶಿ ಬಂಡವಾಳದ ಒಳಹರಿವಿನ ಪ್ರಮಾಣ ಹೆಚ್ಚಿದೆ ಅನ್ನುವುದು ನಿಜ. ಆದರೆ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೊರಗೆ ಹೋಗುತ್ತಿದೆ. ಹಾಗಾಗಿ, ನಿವ್ವಳ ವಿದೇಶಿ ಬಂಡವಾಳದ ಹೂಡಿಕೆಯಲ್ಲಿ ತೀವ್ರ ಇಳಿಕೆಯನ್ನು ಕಾಣುತ್ತಿದ್ದೇವೆ. 2021ರಲ್ಲಿ ನಿವ್ವಳ ವಿದೇಶಿ ಬಂಡವಾಳ ಹೂಡಿಕೆಯು 34 ಶತಕೋಟಿ ಡಾಲರ್ ಇತ್ತು. ಈಗ ಅದು 14.5 ಶತಕೋಟಿ ಡಾಲರ್‌ಗೆ ಇಳಿದಿದೆ. ಅದನ್ನೇ ಜಿಡಿಪಿಗೆ ಹೋಲಿಸಿ ಹೇಳಿದರೆ, ವಿದೇಶಿ ಬಂಡವಾಳದ ಹೂಡಿಕೆಯು 2008ರಲ್ಲಿ ಜಿಡಿಪಿಯ ಶೇ 3.4ರಷ್ಟು ಇತ್ತು. 2023ರಲ್ಲಿ ಅದು ಶೇ 0.84ರಷ್ಟು ಇತ್ತು. ಭಾರತೀಯ ಉದ್ದಿಮೆದಾರರೂ ಭಾರತಕ್ಕಿಂತ ವಿದೇಶಗಳಲ್ಲಿ ಹೆಚ್ಚೆಚ್ಚು ಬಂಡವಾಳವನ್ನು ಹೂಡತೊಡಗಿದ್ದಾರೆ. ಇದು ನಿಜವಾಗಿ ಆತಂಕದ ವಿಷಯ.

ಕಾರ್ಪೊರೇಟ್ ಸಂಸ್ಥೆಗಳ ಹೂಡಿಕೆಯು ಲಾಭದ ನಿರೀಕ್ಷೆಯನ್ನು ಆಧರಿಸಿರುತ್ತದೆ. ಅವರ ಗಮನವೆಲ್ಲಾ ಸದ್ಯದ ಲಾಭಕ್ಕಿಂತ ಭವಿಷ್ಯದ ಲಾಭದ ಕಡೆಗಿರುತ್ತದೆ. ಖಾಸಗಿ ಹೂಡಿಕೆ ಕಡಿಮೆಯಿದ್ದಾಗ ಸರ್ಕಾರ ಹೆಚ್ಚು ಹೂಡಿಕೆಯನ್ನು ಮಾಡಿ, ಆರ್ಥಿಕತೆಯಲ್ಲಿ ಹೂಡಿಕೆಯ ಮಟ್ಟವನ್ನು ಕಾಪಾಡಿಕೊಳ್ಳಬೇಕು. ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯದಂತಹ ಸಾರ್ವಜನಿಕ ಸೇವೆಯನ್ನು ಒದಗಿಸುವುದಕ್ಕೆ, ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೂ ಸರ್ಕಾರ ಬಂಡವಾಳ ತೊಡಗಿಸಬೇಕಾಗುತ್ತದೆ. ಇದಕ್ಕೆ ತಾಗಿಕೊಂಡಂತೆ ಇನ್ನೊಂದು ಸಮಸ್ಯೆ ಅಂದರೆ, ಕೆಲವೇ ಉದ್ದಿಮೆಗಳು ಬೆಳೆಯುತ್ತಿವೆ ಹಾಗೂ ಹೆಚ್ಚೆಚ್ಚು ಕೇಂದ್ರೀಕರಣಗೊಳ್ಳುತ್ತಿವೆ. ಸ್ಪರ್ಧೆ ಇಲ್ಲದಿರುವುದರಿಂದ ಅವುಗಳ ಲಾಭ ಹಾಗೂ ಸಂಪತ್ತು ತೀವ್ರವಾಗಿ ಏರುತ್ತಿದೆ. ಹಾಗೆಯೇ ಮಧ್ಯಮ ಹಾಗೂ ಕೆಳವರ್ಗದವರ ಸಂಪತ್ತು ಕುಸಿಯುತ್ತಿದೆ. ಇದನ್ನು ಥಾಮಸ್ ಪಿಕೆಟ್ಟಿಯವರ ಅಧ್ಯಯನ ತೋರಿಸಿದೆ. ಹಾಗಾಗಿಯೇ ದುಬಾರಿ ಕಾರಿನಂತಹ ಐಷಾರಾಮಿ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತಿದೆ, ದ್ವಿಚಕ್ರವಾಹನದಂತಹ ವಸ್ತುಗಳಿಗೆ ಬೇಡಿಕೆ ತಗ್ಗುತ್ತಿದೆ.

ಖಾಸಗಿ ಹೂಡಿಕೆಯನ್ನು ಉತ್ತೇಜಿಸುವುದಕ್ಕೆ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಿದೆ. ಹಲವು ಸಬ್ಸಿಡಿಗಳನ್ನು ನೀಡಿದೆ. ಉತ್ಪಾದನೆ ಆಧರಿತ ಉತ್ತೇಜನದಂತಹ (ಪಿಎಲ್‌ಐ) ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಇವ್ಯಾವುವೂ ಖಾಸಗಿ ಹೂಡಿಕೆಯ ಪ್ರಮಾಣವನ್ನು ಹೆಚ್ಚಿಸುತ್ತಿಲ್ಲ. ಅಂದುಕೊಂಡಂತೆ ಹೆಚ್ಚಿನ ಉದ್ಯೋಗವೂ ಸೃಷ್ಟಿಯಾಗುತ್ತಿಲ್ಲ. ಹಾಗಾಗಿ, ಸರ್ಕಾರ ತನ್ನ ಕಾರ್ಪೊರೇಟ್ ನೀತಿಯ ಬಗ್ಗೆ ಮರುಚಿಂತನೆ ಮಾಡಬೇಕಾಗಿದೆ.

ನಮ್ಮಲ್ಲಿ ವ್ಯಾಪಾರ ಮಾಡುವುದಕ್ಕೆ ಪೂರಕವಾದ ವಾತಾವರಣ ರೂಪುಗೊಂಡಿದೆ ಎಂದು ಹೇಳಲಾಗುತ್ತಿದೆ. ಸಮರ್ಥನೆಗೆ ವ್ಯಾಪಾರಸ್ನೇಹಿ ಸೂಚಿಯನ್ನು ಉಲ್ಲೇಖಿಸಲಾಗುತ್ತಿದೆ. 2014ರಲ್ಲಿ ವ್ಯಾಪಾರಸ್ನೇಹಿ ಸೂಚಿಯಲ್ಲಿ 142ನೇ ಸ್ಥಾನದಲ್ಲಿದ್ದ ಭಾರತ ಈಗ 63ನೇ ಸ್ಥಾನದಲ್ಲಿದೆ. ನಿಜ, ಆದರೆ ನಮಗೆ ಸ್ಪರ್ಧೆಯನ್ನು ಒಡ್ಡುತ್ತಿರುವ ವಿಯೆಟ್ನಾಂ, ಇಸ್ರೇಲ್‌ನಂತಹ ದೇಶಗಳು ನಮಗಿಂತ ಹೆಚ್ಚು ಅನುಕೂಲಕರ ಸ್ಥಿತಿಯಲ್ಲಿವೆ. ಚೀನಾವನ್ನು ಹೊರಗಿಡುವ ಅಮೆರಿಕದ ನೀತಿಯಿಂದ ನಮಗಿಂತ ಆ ದೇಶಗಳಿಗೆ ಲಾಭವಾಗಬಹುದು. ಜೊತೆಗೆ ಜಾಗತಿಕವಾಗಿಯೂ ಆರ್ಥಿಕ ಬೆಳವಣಿಗೆ ದರ ಮಂದಗತಿಯಲ್ಲಿ ಇದೆ.

ಐರೋಪ್ಯ ದೇಶಗಳು ಸಂಕಟದಲ್ಲಿವೆ. ಹಾಗಾಗಿ, ಬಹುತೇಕ ದೇಶಗಳು ತಮ್ಮ ವ್ಯಾಪಾರದ ಕೊರತೆಯನ್ನು ಸರಿದೂಗಿಸಿಕೊಳ್ಳಲು ಆಮದಿನಲ್ಲಿ ಕಡಿತ ಮಾಡಿಕೊಳ್ಳುವ ಚಿಂತನೆಯಲ್ಲಿವೆ. ಅಮೆರಿಕ ಎಲ್ಲಾ ದೇಶಗಳ ಮೇಲೆ ಸುಂಕವನ್ನು ವಿಧಿಸಲು ಯೋಚಿಸುತ್ತಿದೆ. ಈ ನಡೆಗಳು ನಮ್ಮ ರಫ್ತನ್ನು ಕುಗ್ಗಿಸಬಹುದು. ಜೊತೆಗೆ ನಾವು ಎಲೆಕ್ಟ್ರಾನಿಕ್, ಆಟೊಮೊಬೈಲ್‌ನಂತಹವುಗಳ ಬಿಡಿಭಾಗಗಳಿಗೆ, ಔಷಧಿಗಳಿಗೆ ಚೀನಾವನ್ನು ನೆಚ್ಚಿಕೊಂಡಿದ್ದೇವೆ. ಹಾಗಾಗಿ, ಬದಲಾಗುತ್ತಿರುವ ಜಾಗತಿಕ ರಾಜಕೀಯ ವಾತಾವರಣದಲ್ಲಿ ನಾವು ತೀರಾ ಎಚ್ಚರದಿಂದ ಇರಬೇಕಾಗುತ್ತದೆ.

ಬೇಡಿಕೆಯನ್ನು ತಗ್ಗಿಸುವಲ್ಲಿ ಹಣದುಬ್ಬರದ ಪಾತ್ರವೂ ಇದೆ. ಭಾರತದಲ್ಲಿನ ಸದ್ಯದ ಹಣದುಬ್ಬರಕ್ಕೆ ಆಹಾರ ಪದಾರ್ಥಗಳ ಬೆಲೆ ಏರಿಕೆ ಬಹುಮಟ್ಟಿಗೆ ಕಾರಣ. ಹೀಗಾಗಿ, ಬೇರೆ ವಸ್ತುಗಳನ್ನು ಕೊಳ್ಳುವುದಕ್ಕೆ ಜನರಿಗೆ ಕಷ್ಟವಾಗುತ್ತದೆ. ಆಹಾರ ಪದಾರ್ಥಗಳ ಬೆಲೆಯನ್ನು ರಿಸರ್ವ್ ಬ್ಯಾಂಕಿನ ಹಣಕಾಸು ನೀತಿಯಿಂದ ನಿಯಂತ್ರಿಸುವುದಕ್ಕೆ ಸಾಧ್ಯವಿಲ್ಲ. ಕೃಷಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಬೇಕಾಗುತ್ತದೆ. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ನಮ್ಮ ನೀತಿ-ನಿಲುವುಗಳು ಮರುಚಿಂತನೆಗೆ ಒಳಗಾಗಬೇಕು. ಕೃಷಿಯ ಮೇಲೆ ತುಂಬಾ ಒತ್ತಡವಿದೆ. ಉದ್ಯೋಗಕ್ಕೂ ಹೆಚ್ಚೆಚ್ಚು ಜನ ಕೃಷಿಯನ್ನು ಆಧರಿಸುತ್ತಿದ್ದಾರೆ. ಪಿಎಲ್‌ಐನಂತಹ ಯೋಜನೆಗಳಿಂದ ಕೃಷಿಗೆ ಅನುಕೂಲವಾಗಬಹುದೇನೊ.

ನಮ್ಮ ಮುಂದಿರುವ ಸವಾಲು ಬರೀ ಆರ್ಥಿಕತೆಯನ್ನು ಬೆಳೆಸುವುದಲ್ಲ, ಅದರ ಫಲವನ್ನು ಕಟ್ಟಕಡೆಯ ಮನುಷ್ಯನಿಗೂ ತಲುಪಿಸುವುದು. ಶಿಕ್ಷಣ, ಆರೋಗ್ಯದಂತಹ ಜನಕಲ್ಯಾಣ ಕಾರ್ಯಕ್ರಮಗಳಿಗಾಗಿ ಹಣ ತೊಡಗಿಸುವುದು ಮುಖ್ಯ. ಆದರೆ, ಅನುದಾನ ಒದಗಿಸಿದರಷ್ಟೇ ಸಾಲದು, ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚಿದರೆ ಸಾಲುವುದಿಲ್ಲ, ಅವರ ಕಲಿಕೆಯ ಗುಣಮಟ್ಟವೂ ಹೆಚ್ಚಬೇಕು. ಆದರೆ ಐದನೇ ತರಗತಿ ಓದಿದ ಶೇ 50ರಷ್ಟು ಮಕ್ಕಳಿಗೆ ಓದುವ ಸಾಮರ್ಥ್ಯದಕ್ಕಿಲ್ಲ. ಆರೋಗ್ಯ, ಕಾನೂನು ಸೇರಿದಂತೆ ಬಹುತೇಕ ವಿಷಯಗಳಿಗೂ ಇದು ಅನ್ವಯವಾಗುತ್ತದೆ.

ಇವೆಲ್ಲಾ ಸಾಧ್ಯವಾಗಬೇಕಾದರೆ ಸರ್ಕಾರಿ ಸಂಸ್ಥೆಗಳು ಹೆಚ್ಚು ಸಶಕ್ತವೂ ಸ್ವಾಯತ್ತವೂ ಆಗಬೇಕು. ಆರೋಗ್ಯ ಸೇವೆ, ಶಿಕ್ಷಣ ಇವೆಲ್ಲಾ ಪರಿಣಾಮಕಾರಿಯಾದರೆ ಜನರ ಕೌಶಲ ಹೆಚ್ಚುತ್ತದೆ, ಉದ್ಯೋಗಾವಕಾಶಗಳು ಹೆಚ್ಚುತ್ತವೆ, ಆರ್ಥಿಕತೆಯೂ ಸುಧಾರಿಸುತ್ತದೆ, ಜನರ ಬದುಕೂ ಉತ್ತಮಗೊಳ್ಳುತ್ತದೆ.

ಚುರುಮುರಿ

ಹುಲಿ– ಚಿರತೆ!

• ಬಿ.ಎನ್.ಮಲ್ಲೇಶ್

ಸಂಸದ ಕಾಗೇರಿಯವರ ಮನೆ ಸುತ್ತಮುತ್ತ ಕಾಣಿಸಿಕೊಂಡಿದ್ದ ಚಿರತೆ, ಇದ್ದಕ್ಕಿದ್ದ ಹಾಗೆ ತೆಪರೇಸಿ ಮನೆ ಬಳಿ ಪ್ರತ್ಯಕ್ಷವಾದಾಗ ತೆಪರೇಸಿ, 'ಏನು, ರಾಜಕಾರಣಿಗಳ ಮನೆ ಸುತ್ತಮುತ್ತ ಓಡಾಡ್ತಿದೀಯಲ್ಲ, ಏನ್ಸಮಾಚಾರ?' ಎಂದು ಕೇಳಿದ.

'ರಾಜಕೀಯಕ್ಕೆ ಬರಬೇಕು ಅಂತಿದೀನಿ' ಎಂದಿತು ಚಿರತೆ.

'ರಾಜಕೀಯದಲ್ಲಿ ಹುಲಿಗಳಿಗಷ್ಟೇ ಅವಕಾಶ, ಚಿರತೆಗಳಿಗಿಲ್ಲ. ರಾಜಾಹುಲಿ, ವಿಜಯಪುರದ ಹುಲಿ, ಹೊನ್ನಾಳಿ ಹುಲಿ... ಇದೆಲ್ಲ ಕೇಳಿಲ್ವಾ?'

'ಅಂದ್ರೆ ಚಿರತೆಗಳು ರಾಜಕೀಯಕ್ಕೆ ಬರಬಾರ್ದಾ? ಬದಲಾವಣೆ ಜಗದ ನಿಯಮ ಕಣಯ್ಯ'.

'ನೀನು ಯಾವ ಬದಲಾವಣೆ ಬಗ್ಗೆ ಮಾತಾಡ್ತಿದ್ದೀ? ಕೆಪಿಸಿಸಿ ಅಧ್ಯಕ್ಷ ಸ್ಥಾನ ಅಥವಾ ಸಿಎಂ ಕುರ್ಚಿ?'

'ಒಟ್ಟಾರೆ ರಾಜಕಾರಣದ ಬಗ್ಗೆ'.

'ರಾಜಕಾರಣ ಅಂದ್ರೆ ನಿಂಗೇನ್ ಗೊತ್ತು? ಕರ್ನಾಟಕದಲ್ಲಿ ಎಷ್ಟು ಕಾಂಗ್ರೆಸ್, ಎಷ್ಟು ಬಿಜೆಪಿ ಅದಾವೆ ಗೊತ್ತಾ?'

'ಗೊತ್ತು, ಕಾಂಗ್ರೆಸ್ಸಲ್ಲಿ ಡಿಕೆಶಿ ಕಾಂಗ್ರೆಸ್, ಸಿದ್ರಾಮಯ್ಯ ಕಾಂಗ್ರೆಸ್, ಪರಮೇಶ್ವರ ಕಾಂಗ್ರೆಸ್ ಅಂತ ಅದಾವೆ. ಬಿಜೆಪೀಲಿ ಯಡ್ಯೂರಪ್ಪ ಬಿಜೆಪಿ, ಯತ್ನಾಳ್ ಬಿಜೆಪಿ ಅಂತ ಎರಡು ಎದ್ದು ಕಾಣ್ತದಾವೆ...'

'ಕರೆಕ್ಟ್... ನಿಂಗೆ ಡಿನ್ನರ್ ಮೀಟಿಂಗ್ ಗೊತ್ತಾ?'

'ಡಿನ್ನರ್ ಮೀಟಿಂಗೂ ಗೊತ್ತು, ಚಾ ಕುಡಿಯಾಕೆ ಡೆಲ್ಲಿಗೆ ಹೋಗೋದೂ ಗೊತ್ತು'.

'ಪರ್ವಾಗಿಲ್ಲ ಕಣಯ್ಯ, ಬಾಳ ತಿಳ್ಕಂಡಿದಿ, ಪ್ರತ್ಯಂಗಿರ ಹೋಮ ಅಂದ್ರೇನು ಗೊತ್ತಾ?'

'ಶತ್ರು ನಾಶಕ್ಕೆ ದೇವರಿಗೇ ಸುಪಾರಿ ಕೊಡೋದು'.

'ಕರೆಕ್ಟ್, ಸದ್ಯದ ರಾಜಕಾರಣದಲ್ಲಿ ಪದೇ ಪದೇ ಕೇಳಿ ಬರ್ತಿರೋ ಡೈಲಾಗ್ ಯಾವುದು?'

'ಕುರ್ಚಿ ಖಾಲಿ ಇಲ್ಲ!'

'ಎಲ್ಲ ಕರೆಕ್ಟಾಗಿ ಹೇಳಿದೆ. ಈಗ ಹುಲೀನ ಹೇಗೆ ಬಗ್ಗಿಸಬಹುದು ಅಂತ ಹೇಳ್ತೀಯ?'

'ಯಾವ ಹುಲಿ? ರಾಜಕೀಯದ್ದೋ ನಿಮ್ಮನೇಲಿರೋ ಹೆಣ್ಣು ಹುಲೀನೊ?'

ತೆಪರೇಸಿ ಪಿಟಿಕ್ಕನ್ನಲಿಲ್ಲ.

ಸಂಗತ

'ಅತಿಥಿ ಸತ್ಕಾರ'ಕ್ಕೆ ಬೇಕು ಇಚ್ಛಾಶಕ್ತಿ

ಅತಿಥಿ ಉಪನ್ಯಾಸಕರ ನೇಮಕಾತಿಯು ಔದಾರ್ಯವಲ್ಲ, ಸರ್ಕಾರದ ಕರ್ತವ್ಯ

• ಸಿ.ಎನ್.ರಾಮಚಂದ್ರನ್

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎರಡು ದಶಕಗಳಿಂದ ಅತ್ಯಂತ ಕಡಿಮೆ ಗೌರವಧನಕ್ಕೆ ಕೆಲಸ ಮಾಡುತ್ತಾ ಬಂದಿದ್ದ ಐದು ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬ ವರದಿಯನ್ನು (ಪ್ರ.ವಾ., ಜ. 12) ಓದಿ ಗಾಢ ವಿಷಾದ ಕವಿಯಿತು. ಈ ಅವ್ಯವಸ್ಥೆ ಎಂದಿಗೂ ಮುಗಿಯದ ಕಥೆ ಎನಿಸಿತು. ಒಂದೆಡೆ, ಕಡಿಮೆ ವೇತನ ಪಡೆದು, 15- 20 ವರ್ಷ ಕಾಲೇಜುಗಳಲ್ಲಿ ಬೋಧನೆ ಮಾಡಿ, ಇದ್ದಕ್ಕಿದ್ದಂತೆ ಕೆಲಸ ಕಳೆದುಕೊಳ್ಳುವ ಸ್ಥಿತಿಯಲ್ಲಿ ಅತಿಥಿ ಉಪನ್ಯಾಸಕರು; ಮತ್ತೊಂದೆಡೆ, ಯುಜಿಸಿ ಕಾಲಕಾಲಕ್ಕೆ ನಿರ್ಧರಿಸುವ ಶೈಕ್ಷಣಿಕ ಅರ್ಹತೆ ಹಾಗೂ ಹೈಕೋರ್ಟ್ ತೀರ್ಪು. ಈ ಅಡಕತ್ತರಿಯಲ್ಲಿ ಸರ್ಕಾರ ಸಿಲುಕಿಕೊಂಡಿದ್ದು ಹೇಗೆ? ಇಂತಹ ಪರಿಸ್ಥಿತಿಗೆ ಯಾರು ಜವಾಬ್ದಾರರು? ಉತ್ತರ: ಹಿಂದಿನ 40 ವರ್ಷಗಳಿಂದ ಶಿಕ್ಷಣಕ್ಕೆ ಯಾವ ಆದ್ಯತೆಯನ್ನೂ ಕೊಡದ ಸರ್ಕಾರಗಳ ಅಸಂಬದ್ಧ ಶಿಕ್ಷಣ ನೀತಿ.

ಕೇಂದ್ರ ಸರ್ಕಾರದ ಆರ್ಥಿಕ ಮಿತವ್ಯಯ ನೀತಿ ಪ್ರಾರಂಭವಾದುದು, ನನಗೆ ನೆನಪಿರುವಂತೆ 1980ರಲ್ಲಿ. ಅಂದಿನಿಂದ ಎಲ್ಲ ಸರ್ಕಾರಗಳಿಗೂ ಇದೊಂದು ಸುಲಭವಾದ ಮಂತ್ರದಂಡವಾಯಿತು. ಅದನ್ನು ಕೈಯಲ್ಲಿ ಹಿಡಿದು, ಮೊದಲು ಬಡಿದುದು ಶಿಕ್ಷಣ ವ್ಯವಸ್ಥೆಗೆ. ಶಿಕ್ಷಕರ ನಿವೃತ್ತಿ ಮತ್ತು ಸ್ವಯಂ ನಿವೃತ್ತಿಯ ಕಾರಣದಿಂದ ವಿಶ್ವವಿದ್ಯಾಲಯ- ಕಾಲೇಜುಗಳಲ್ಲಿ ಶಿಕ್ಷಕರ ಹುದ್ದೆಗಳು ಖಾಲಿಯಾದಾಗ ಅವುಗಳನ್ನು ತುಂಬಲು ಸಮಯ ಬೇಕಾಗುತ್ತದೆ ಎಂಬ ನೆಪದಿಂದ ಆ ಸ್ಥಾನಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಲು ಸರ್ಕಾರಗಳು ಪ್ರಾರಂಭಿಸಿದವು. ಆದರೆ, ಎಲ್ಲ ಪಕ್ಷಗಳ ನೇತೃತ್ವದ ಎಲ್ಲ ಸರ್ಕಾರಗಳೂ ಹೊಸ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳನ್ನು ಸ್ಥಾಪಿಸಲು ತುಂಬಾ ಉತ್ಸಾಹ ತೋರಿದವು. ಈ ಕಾರಣದಿಂದ, 15-20 ವರ್ಷಗಳಲ್ಲಿ ಪ್ರತಿ ವಿಭಾಗದಲ್ಲಿಯೂ ಅತಿಥಿ ಉಪನ್ಯಾಸಕರ ಸಂಖ್ಯೆಯೇ ಹೆಚ್ಚಾಯಿತು.

ಇಂದು, ಎಲ್ಲ ಸರ್ಕಾರಿ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳ ಪ್ರತಿ ವಿಭಾಗದಲ್ಲಿಯೂ ಅತಿಥಿ ಉಪನ್ಯಾಸಕರಿದ್ದರೆ, ಕೆಲವು ವಿಭಾಗಗಳಲ್ಲಿ ಪೂರ್ಣಾವಧಿ ಉಪನ್ಯಾಸಕರು ಇಲ್ಲವೇ ಇಲ್ಲ ಎಂಬಂತಾಗಿದೆ. ಬೋಧಕನಾಗಿ ನಾನು ಕಾರ್ಯ ನಿರ್ವಹಿಸಿದ ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಒಬ್ಬರು ಪೂರ್ಣಾವಧಿ ಪ್ರಾಧ್ಯಾಪಕರಿದ್ದರೆ, ಮೂವರು ಅತಿಥಿ ಉಪನ್ಯಾಸಕರಿದ್ದಾರೆ. ಇನ್ನೆರಡು ವರ್ಷಗಳಲ್ಲಿ ಆ ಪ್ರಾಧ್ಯಾಪಕರು ನಿವೃತ್ತರಾದರೆ, ಇಂಗ್ಲಿಷ್ ವಿಭಾಗದಲ್ಲಿ ಯಾರೂ ಪೂರ್ಣಾವಧಿ ಅಧ್ಯಾಪಕರಿರುವುದಿಲ್ಲ. ಪರಿಣಾಮವಾಗಿ, ಆ ವಿಭಾಗದ ನೇಮಕಾತಿ ಮಂಡಳಿ, ಅಧ್ಯಯನ ಮಂಡಳಿಯಲ್ಲಿ ವಿಭಾಗದವರು ಯಾರೂ ಇಲ್ಲದೆ, ಎಲ್ಲವನ್ನೂ ಡೀನ್ ನಿರ್ವಹಿಸಬೇಕಾಗುತ್ತದೆ. ಇನ್ನು, ಆ ವಿಭಾಗದವರು ಅಕಡೆಮಿಕ್ ಕೌನ್ಸಿಲ್, ಸಿಂಡಿಕೇಟ್‌ನಂತಹ ನೀತಿ ನಿರೂಪಕ ಅಂಗಗಳಲ್ಲಿ ಇರಲಾಗುವುದಿಲ್ಲ. ಎಲ್ಲ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಈ ಪರಿಸ್ಥಿತಿಯಿದೆ.

ಕರ್ನಾಟಕದ ಹೆಮ್ಮೆಯ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಿಲ್ಲದೆ ಎರಡು ವಿಭಾಗಗಳನ್ನು ಮುಚ್ಚಬೇಕಾಗಿದೆ ಎಂಬ ಮಾತುಗಳು ಕೇಳಿ ಬಂದಿವೆ. ಹಾಗೆಯೇ, ಮೈಸೂರಿನ ಒಂದು ಪ್ರಸಿದ್ಧ ಕಾಲೇಜಿನಲ್ಲಿ ಪ್ರಾಂಶುಪಾಲರ ನೇಮಕವೇ ಆಗದೆ, ಅಲ್ಲಿರುವ ಯಾವ ಶಿಕ್ಷಕರಲ್ಲಿ ಯಾರು ಬೇಕಾದರೂ ಇಚ್ಛೆಸಿದರೆ 'ಪ್ರಿನ್ಸಿಪಾಲ್' ಆಗಬಹುದು. ಅಂತಹ ಪ್ರಿನ್ಸಿಪಾಲರಿಗೆ ಹಣಕಾಸಿನ ಯಾವ ಅಧಿಕಾರವೂ ಇಲ್ಲ ಹಾಗೂ ಅವರ ಸಂಬಳವೇನೂ ಹೆಚ್ಚಾಗುವುದಿಲ್ಲ. ಕುಳಿತುಕೊಳ್ಳುವುದಕ್ಕೆ ಪ್ರಿನ್ಸಿಪಾಲರ ಕುರ್ಚಿ ಮಾತ್ರ ಇರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ನಷ್ಟವಾಗುವುದು ವಿದ್ಯಾರ್ಥಿಗಳಿಗೆ, ಶೋಷಣೆಗೆ ಒಳಗಾಗುತ್ತಿರುವುದು ಅತಿಥಿ ಉಪನ್ಯಾಸಕರು. ಪೂರ್ಣಾವಧಿ ಉಪನ್ಯಾಸಕರಿಗೆ ದೊರಕುವ ಸಂಬಳದ ಅರ್ಧದಷ್ಟು ಸಂಬಳವನ್ನು ಮಾತ್ರ ಅತಿಥಿ ಉಪನ್ಯಾಸಕರಿಗೆ ಕೊಡಲಾಗುತ್ತದೆ. ಅಷ್ಟೇ ಅಲ್ಲದೆ, ಅವರಿಗೆ ಬೇಸಿಗೆ ರಜಾಕಾಲದಲ್ಲಿ ಎರಡು ತಿಂಗಳು ಸಂಬಳವಿಲ್ಲ. ಇನ್ನು ಹೌಸಿಂಗ್ ಅಲೋಯನ್ಸ್, ಡಿ.ಎ., ನಿವೃತ್ತಿ ವೇತನದಂತಹ ಯಾವ ಸೌಲಭ್ಯವೂ ಇಲ್ಲ. ಅರ್ಥಾತ್ ಅತಿಥಿ ಉಪನ್ಯಾಸಕರ ನೇಮಕಾತಿಯಿಂದ ಸರ್ಕಾರಕ್ಕೆ ಪ್ರತಿವರ್ಷವೂ ಲಕ್ಷಾಂತರ ಹಣ ಉಳಿಯುತ್ತದೆ.



ಇಲ್ಲೊಂದು ಪ್ರಶ್ನೆ ಏಳಬಹುದು. ಇಲ್ಲಿಯವರೆಗೆ, ಎಚ್ಚರಿಕೆಯನ್ನು ಕೊಟ್ಟರೂ ಹೆಚ್ಚಿನ ಅತಿಥಿ ಉಪನ್ಯಾಸಕರು ಯುಜಿಸಿ ನಿಗದಿಪಡಿಸಿರುವ ಪಿಎಚ್.ಡಿ ಹಾಗೂ ಎನ್‌ಇಟಿ ಅರ್ಹತೆಗಳನ್ನು ಪಡೆದಿಲ್ಲ, ಆದ್ದರಿಂದ ಯುಜಿಸಿ ನಿಯಮಗಳ ಪ್ರಕಾರ ಅವರು ಪೂರ್ಣಾವಧಿ ಬೋಧಕರಾಗಲು ಹೇಗೆ ಸಾಧ್ಯ? ಆದರೆ, ಇಲ್ಲಿ ಗಮನಿಸಬೇಕಾದುದು, ಈ ಉಪನ್ಯಾಸಕರಿಗೆ ಪಿಎಚ್.ಡಿ. ಮಾಡಲು ಅಥವಾ ಎನ್‌ಇಟಿ ಪಡೆಯಲು ಯಾವ ಬಗೆಯ ಉತ್ತೇಜನವಿದೆ? ಈಗಾಗಲೇ ಈ ಪದವಿಗಳನ್ನು ಪಡೆದವರೂ ಅತಿಥಿ ಉಪನ್ಯಾಸಕರೇ ಆಗಿ ಉಳಿದಿದ್ದಾರೆ. ಹಾಗಿರುವಾಗ, ನಡು ವಯಸ್ಸಿನಲ್ಲಿ ಹಣ ಹಾಗೂ ಸಮಯವನ್ನು ಬೇಡುವ ಪಿಎಚ್.ಡಿ. ಮಾಡಲು ಯಾರಿಗೆ ಉತ್ಸಾಹವಿರುತ್ತದೆ?

ಸರ್ಕಾರಗಳ ಬಳಿ ಯುಜಿಸಿ ನಿರ್ಧರಿಸಿರುವಷ್ಟು ಸಂಬಳವನ್ನು ಕೊಡಲು ಹಣವಿಲ್ಲದಿದ್ದರೆ, ಜಿಲ್ಲೆಗೊಂದು ವಿಶ್ವವಿದ್ಯಾಲಯ ಮತ್ತು ತಾಲ್ಲೂಕಿಗೊಂದು ಕಾಲೇಜು ಸ್ಥಾಪಿಸುವುದು ಎಷ್ಟು ಸರಿ? ಹಾಗೆಯೇ ಒಂದೆರಡು ವರ್ಷ ಸಮ್ಮೇಳನಗಳು, ಜಯಂತಿಗಳು, ಉತ್ಸವದಂತಹವುಗಳಿಗೆ ಅನುದಾನವನ್ನು ನಿಲ್ಲಿಸಬಹುದು. ಈ ವರ್ಷ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರ ನೀಡಿದ ಅನುದಾನ ₹ 25 ಕೋಟಿ. ಆ ಹಣವು ಒಂದು ಕಾಲೇಜಿನ ಎಲ್ಲಾ ಉಪನ್ಯಾಸಕರ ಒಂದು ವರ್ಷದ ಸಂಬಳವಾಗುತ್ತದೆ. ಆದರೆ ಜನಪ್ರಿಯವಲ್ಲದ ಇಂತಹ ಮಿತವ್ಯಯದ ಕ್ರಮಗಳಿಗೆ ಯಾವ ಸರ್ಕಾರ ಮುಂದಾಗುತ್ತದೆ?

ವಾಚಕರ ವಾಣಿ

ಅಪಘಾತ: ನಗದುರಹಿತ ಚಿಕಿತ್ಸೆ ಸ್ವಾಗತಾರ್ಹ

ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ನಗದುರಹಿತ ಚಿಕಿತ್ಸೆ ನೀಡಲು ಕೇಂದ್ರ ಸರ್ಕಾರ ಹೊಸ ಯೋಜನೆಯನ್ನು ಜಾರಿಗೆ ತಂದಿರುವುದು ಸ್ವಾಗತಾರ್ಹ. ಇತ್ತೀಚಿನ ವರ್ಷಗಳಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದು, ಗಾಯಾಳುಗಳು ಚಿಕಿತ್ಸೆಗಾಗಿ ಅಲೆದಾಡುವಂತಹ ನಿದರ್ಶನಗಳಿಗೆ ಕೊರತೆ ಇಲ್ಲ. ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆತರೆ ಅಪಘಾತಗಳಲ್ಲಿ ಪ್ರಾಣಹಾನಿ ಪ್ರಮಾಣವನ್ನು ಖಂಡಿತವಾಗಿ ತಗ್ಗಿಸಬಹುದು. ಎಷ್ಟೋ ಬಾರಿ ಸೂಕ್ತ ಆಸ್ಪತ್ರೆ ಸಿಗದೆ ಪಡುವ ಪಡಿಪಾಟಲು ಅಷ್ಟಿಷ್ಟಲ್ಲ. ಆಸ್ಪತ್ರೆ ಸಿಕ್ಕರೂ ಗಾಯಾಳುವನ್ನು ದಾಖಲು ಮಾಡಿಕೊಳ್ಳಲು ನಿರಾಕರಿಸುವ, ಇಲ್ಲವೇ ಮತ್ತೊಂದು ಆಸ್ಪತ್ರೆಗೆ ಶಿಫಾರಸು ಮಾಡುವಂತಹ ಬೆಳವಣಿಗೆಗಳಿಗೂ ಕಡಿವಾಣ ಬೀಳಬೇಕಿದೆ.

ಇದರ ಜೊತೆಗೆ, ಅಪಘಾತಕ್ಕೆ ಈಡಾದವರಿಗೆ ಸಹಾಯ ಮಾಡುವವರಿಗೆ ಬಹುಮಾನ ನೀಡುವ ಯೋಜನೆಯೂ ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ. ಏಕೆಂದರೆ, ತಮ್ಮ ಕಣ್ಣೆದುರೇ ರಸ್ತೆ ಅಪಘಾತವಾದರೂ ಅನೇಕರು ಸಹಾಯ ಮಾಡಲು ಹಿಂದೇಟು ಹಾಕುವುದೇ ಹೆಚ್ಚು. ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದರೆ ತಮ್ಮನ್ನೇ ಪ್ರಕರಣದಲ್ಲಿ ಸಿಲುಕಿಸಬಹುದೆಂಬ ಆತಂಕ ಹಲವರಲ್ಲಿದೆ. ಈ ಭಯವನ್ನು ಹೋಗಲಾಡಿಸಿ, ಸಂಕಷ್ಟದಲ್ಲಿರುವವರ ಜೀವ ರಕ್ಷಣೆಗೆ ಜನರನ್ನು ಉತ್ತೇಜಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇಷ್ಟಕ್ಕೂ ಅಪಘಾತಗಳನ್ನು ತಗ್ಗಿಸಲು ಸಾಮೂಹಿಕ ಪ್ರಯತ್ನಗಳು ಸಹ ಆಗಬೇಕಿದೆ. ಇದರ ಜೊತೆಗೆ ಜನ ಕೂಡ ಸುರಕ್ಷಾ ಕ್ರಮಗಳನ್ನು ಅನುಸರಿಸಬೇಕು, ಸಂಚಾರಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಡಿನ್ನರ್ ರಾಜಕಾರಣ

ಎಲ್ಲ ಬಣಗಳದ್ದೂ
ಡಿನ್ನರ್ ರಾಜಕಾರಣ,
ಒಬ್ಬರ ಕಾಲನ್ನೊಬ್ಬರು
ಎಳೆಯಲು ಪಣ,
ಯಾರಿಗೂ ಕಾಣದು
ತಮ್ಮ ತಟ್ಟೆಯ ನೊಣ!

ಎಲ್.ಎನ್.ಪ್ರಸಾದ್, ತುರುವೇಕೆರೆ

ಅನ್ನದ ಅಪವ್ಯಯ ತಪ್ಪಿಸೋಣ

'ಒಂದು ಅಗುಳು ಅನ್ನದ ಹಿಂದೆ ಕೂಡ ಹಲವರ ಪರಿಶ್ರಮ ಇರುತ್ತದೆ. ಆದ್ದರಿಂದ ಆಹಾರ ಸೇವಿಸುವಾಗ ವ್ಯರ್ಥ ಮಾಡುವುದು ಶ್ರೇಯಸ್ಕರವಲ್ಲ' ಎಂದಿದ್ದಾರೆ ಶಿವಕುಮಾರ ಸ್ವಾಮೀಜಿ (ಸುಭಾಷಿತ, ಜ. 14). ಅನ್ನಕ್ಕಾಗಿ ಪರಿತಪಿಸಿದವರ ಸ್ಥಿತಿಯನ್ನು ಕಂಡಿದ್ದ ಸ್ವಾಮೀಜಿಗೆ ಅನ್ನದ ಬೆಲೆ ಚೆನ್ನಾಗಿ ತಿಳಿದಿತ್ತು. ಮೊನ್ನೆ ನಮ್ಮ ಪರಿಚಿತರೊಬ್ಬರಿಗೆ, 'ನಮ್ಮಲ್ಲಿ ಶರಣತತ್ವ, ಇತರ ಚಿಂತನಗೋಷ್ಠಿಗಳಿವೆ ಬನ್ನಿ. ಎಷ್ಟು ಜನ ಬರುತ್ತೀರಿ ಎಂದು ತಿಳಿಸಿದರೆ ವ್ಯವಸ್ಥೆ ಮಾಡುತ್ತೇವೆ' ಎಂದಾಗ, 'ಕೇಳಿ ಹೇಳುತ್ತೇನೆ' ಎಂದರು. ನಂತರ ಫೋನ್ ಮಾಡಿದ ಅವರು 'ಎಲ್ಲರಿಗೂ ಹೇಳಿದ್ದೆ, ಒಬ್ಬೊಬ್ಬರು ಒಂದೊಂದು ಕಾರಣ ಕೊಡುತ್ತಿದ್ದಾರೆ. ನಮ್ಮ ಕುಟುಂಬದ ಕಡೆಯಿಂದ ನಾವೇ ಬರುತ್ತೇವೆ' ಎಂದರು. ಅವರು ಮತ್ತೊಂದು ವಿಷಯ ಹೇಳಿದ್ದೆಂದರೆ, 'ಜನ ಈಗ ಮರುಳು ಮಾಡುವ ವಿಷಯಗಳ ಕಡೆಗೆ ವಾಲಿದ್ದಾರೆ. ವಿಚಾರಪ್ರಧಾನ ವಿಷಯಗಳು ಅವರಿಗೆ ಅಷ್ಟಾಗಿ ರುಚಿಸುತ್ತಿಲ್ಲ' ಎಂದರು.

ಮುಂದುವರಿದ ಅವರು, 'ನಮ್ಮಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಸಾಮಾಜಿಕ ಕಾರ್ಯಕ್ರಮವೊಂದರಲ್ಲಿ 30 ಸಾವಿರದಿಂದ 40 ಸಾವಿರ ಜನ ಬರಬಹುದೆಂಬ ನಿರೀಕ್ಷೆಯಿಂದ ಅಡುಗೆ ವ್ಯವಸ್ಥೆ ಮಾಡಲಾಗಿತ್ತು. ಬಂದದ್ದು ಹತ್ತನ್ನೆರಡು ಸಾವಿರ ಜನ ಮಾತ್ರ. ಉಳಿದ ಆಹಾರ ಪದಾರ್ಥವನ್ನು ನಂತರ ಜೆಸಿಬಿ ಯಂತ್ರದಿಂದ ಗುಂಡಿ ತೆಗೆದು ಮುಚ್ಚಲಾಯಿತು' ಎಂದರು. ಇದು ಬಹಳ ಬೇಸರದ ಸಂಗತಿ. ಮದುವೆಯಂತಹ ಸಮಾರಂಭಗಳಲ್ಲೂ ಅನ್ನದ ಅಪವ್ಯಯ ಹೆಚ್ಚಾಗಿ ಆಗುತ್ತಿದೆ. ಅವಸರವಸರವಾಗಿ ಬಡಿಸುತ್ತಾ ಹೋಗುವುದೂ ಇದಕ್ಕೆ ಕಾರಣ ಆಗಬಹುದು. ಬೇಕಾದಷ್ಟನ್ನು ಮಾತ್ರ ಕೇಳಿ ಬಡಿಸಿಕೊಳ್ಳುವುದು, ಕೇಳಿದಷ್ಟನ್ನು ಮಾತ್ರ ಬಡಿಸುವುದು ರೂಢಿಯಾದರೆ ಅನ್ನ ಮಣ್ಣುಪಾಲಾಗುವುದನ್ನು ತಡೆಯಬಹುದು.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಅಭಿವೃದ್ಧಿಗಾಗಿ, ಎಲ್ಲ ಅಭಿವೃದ್ಧಿಗಾಗಿ...

ರಾಜ್ಯ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಏರಿಕೆಗೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ 'ಮಹಿಳೆಯರಿಗೆ ಫ್ರೀ, ಗಂಡಸರಿಗೆ ಬರೆ' ಎಂದು ಟೀಕಿಸಿದ್ದಾರೆ. ಇರಲಿ ಬಿಡಿ, ತಾಳಿಕೊಳ್ಳೋಣ. ಯಾಕೆಂದರೆ, ಕೇಂದ್ರ ಸರ್ಕಾರ ಬೆಲೆ ಏರಿಸಿದಾಗ, ಅದರಿಂದ ದೇಶದ ಅಭಿವೃದ್ಧಿ ಆಗುತ್ತದೆ ಎಂದು ಕೆಲವರು ವಾದಿಸಿದ್ದುಂಟು. ಹಾಗಿದ್ದರೆ, ರಾಜ್ಯ ಸರ್ಕಾರ ಬಸ್ ಪ್ರಯಾಣ ದರ ಏರಿಸುವುದರಿಂದ ರಾಜ್ಯದ ಅಭಿವೃದ್ಧಿ ಆಗುತ್ತದೆ, ಅಲ್ಲವೇ? ಒಟ್ಟಿನಲ್ಲಿ, ಬೆಲೆ ಏರಿಕೆಯಿಂದ ಕಷ್ಟ ಅನುಭವಿಸುವುದು ಮಾತ್ರ ನಮ್ಮ ಹಣೆಬರಹ.

ವೀರಭದ್ರ ಸಿಂಪಿ, ಕಲಬುರಗಿ

ಬುಕ್‌ಪೋಸ್ಟ್ ದರ ಹೆಚ್ಚಳ ಖಂಡನೀಯ

ವಿಮರ್ಶಕರು, ಸಾಹಿತಿಗಳಿಗೆ 'ಗೌರವಾರ್ಥ ಕೃತಿ'ಗಳನ್ನು ಕಳಿಸಲು ನಾನು 2012ರಿಂದ ಅಂಚೆ ಇಲಾಖೆಯ ಬುಕ್‌ಪೋಸ್ಟ್ ಉಪಯೋಗಿಸುತ್ತಿದ್ದೆ. ಇದು ನಿಖರವಾಗಿ ವಿಳಾಸದಾರರಿಗೆ ತಲುಪುತ್ತಿತ್ತು. ನೂರು ಪುಟಗಳ ಕೃತಿ ಕಳಿಸಲು ಎರಡು ರೂಪಾಯಿ ವ್ಯಯವಾಗುತ್ತಿತ್ತು ಮತ್ತು 500 ಗ್ರಾಂ ತೂಕ ಮೀರಿದರೆ ಪ್ರತಿ ನೂರು ಗ್ರಾಂಗೆ ಒಂದು ರೂಪಾಯಿ ಹೆಚ್ಚಿಗೆ, ಅಂದರೆ 600 ಗ್ರಾಂ ಪುಸ್ತಕಗಳ ಕಟ್ಟಿಗೆ ಆರು ರೂಪಾಯಿ ಮತ್ತು ಅದೇ ಪುಸ್ತಕದ ಕಟ್ಟನ್ನು ರಿಜಿಸ್ಟರ್ಡ್ ಬುಕ್‌ಪೋಸ್ಟ್ ಮೂಲಕ ಕಳಿಸಲು ₹ 23 ಶುಲ್ಕ ತಗಲುತ್ತಿತ್ತು. ಇತ್ತೀಚೆಗೆ ದಿಢೀರ್ ಬೆಲೆ ಹೆಚ್ಚಳದಿಂದ, ಸಾಮಾನ್ಯ ಬುಕ್‌ಪೋಸ್ಟಿಗೆ ₹ 20, ರಿಜಿಸ್ಟರ್ಡ್ ಬುಕ್‌ಪೋಸ್ಟ್‌ಗೆ ₹ 42 ಮತ್ತು 600 ಗ್ರಾಂ ರಿಜಿಸ್ಟರ್ಡ್ ಪುಸ್ತಕದ ಕಟ್ಟಿಗೆ ₹ 64 ತೆರಬೇಕು. ಲೇಖಕರಿಗೆ ಇದರಿಂದ ಭಾರಿ ಹೊರೆಯಾಗಿದ್ದು, ಈಗಾಗಲೇ ಅವನತಿಯತ್ತ ಸಾಗುತ್ತಿರುವ ಪುಸ್ತಕಓದಿಗೆ ಮಾರಕವಾಗಲಿದೆ. ಆದ್ದರಿಂದ ಅಲ್ಪ ಸ್ವಲ್ಪ ಬೆಲೆ ಏರಿಸಿ ಪುಸ್ತಕ ರವಾನೆಗೆ ಅನುವು ಮಾಡಿಕೊಡಬೇಕು.

ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿಸೇರಿಯನ್ ಹೆಚ್ಚಳ ತಂದ ಕಳವಳ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸುವುದು ಹೆಚ್ಚಾಗುತ್ತಿದ್ದು, ಇದು ಮಹಿಳೆಯರ ಆರೋಗ್ಯದ ಮೇಲೆ ದೀರ್ಘಕಾಲೀನ ಪರಿಣಾಮಗಳನ್ನು ಬೀರುತ್ತಿದೆ ಎಂದು ಹಲವು ಅಧ್ಯಯನ ವರದಿಗಳು ಹೇಳುತ್ತಿವೆ. ನಾಲ್ಕು ಮತ್ತು ಐದನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶ ಆಧರಿಸಿ ಅಧ್ಯಯನಗಳನ್ನು ಮಾಡಲಾಗಿದ್ದು, ರಾಜ್ಯಗಳಲ್ಲಿನ ಸಿಸೇರಿಯನ್ ಹೆರಿಗೆ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಗಳ (ಎನ್‌ಎಫ್‌ಎಚ್‌ಎಸ್) ಪ್ರಕಾರ, ದೇಶದಲ್ಲಿ 2005–06ರಲ್ಲಿ ಸಿಸೇರಿಯನ್ ಹೆರಿಗೆಗಳ ಪ್ರಮಾಣವು ಶೇ 8.5ರಷ್ಟಿತ್ತು. 2015–16ರ ಹೊತ್ತಿಗೆ ಶೇ 17.2ಕ್ಕೆ ಏರಿದ್ದ ಈ ಪ್ರಮಾಣವು 2019–21ರ ಹೊತ್ತಿಗೆ ಶೇ 21.5ಕ್ಕೆ ಹೆಚ್ಚಳವಾಗಿದೆ.

ಭಾರತದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗಳು ಹೆಚ್ಚು ನಡೆಯುತ್ತಿವೆ. 30–40 ವರ್ಷ ವಯಸ್ಸಿನ ಮತ್ತು ಅದಕ್ಕೂ ಹೆಚ್ಚು ವಯಸ್ಸಿನ ಮಹಿಳೆಯರು ಹೆಚ್ಚಾಗಿ ಸಿಸೇರಿಯನ್‌ಗೆ ಒಳಗಾಗುತ್ತಿದ್ದಾರೆ. 2019–21ರ ಅಂಕಿಸಂಖ್ಯೆಯ ಪ್ರಕಾರ, ಖಾಸಗಿ ಆಸ್ಪತ್ರೆಗಳಲ್ಲಿ ಶೇ 47.5 ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ14.3ರಷ್ಟು ಸಿಸೇರಿಯನ್ ಹೆರಿಗೆಗಳು ನಡೆದಿವೆ.

ಆರ್ಥಿಕ ದುರ್ಬಲ ವರ್ಗಗಳ ಮಹಿಳೆಯರಿಗೆ ಅನಿವಾರ್ಯ ಸಂದರ್ಭಗಳಲ್ಲಿ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಿಕೊಳ್ಳಲು ಸರ್ಕಾರವು ಸಬ್ಸಿಡಿ ನೀಡುತ್ತದೆ. ಉದಾಹರಣೆಗೆ, ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳ ಮಹಿಳೆಯರಿಗೆ ಜನನಿ ಸುರಕ್ಷಾ ಯೋಜನೆಯ (ಜೆಎಸ್‌ವೈ) ಅಡಿ ಧನಸಹಾಯ ಮಾಡಲಾಗುತ್ತದೆ. ಆದರೆ, ಶೇ 36ರಷ್ಟು ಮಂದಿ ಮಾತ್ರ ಇದರ ಲಾಭ ಪಡೆದುಕೊಂಡಿದ್ದಾರೆ.

ಪ್ರದೇಶವಾರು ವ್ಯತ್ಯಾಸ: ದೇಶದಲ್ಲಿ ಸಿಸೇರಿಯನ್ ಪ್ರಮಾಣ ಹೆಚ್ಚಾಗುತ್ತಿದ್ದರೂ ಎಲ್ಲಾ ಕಡೆ ಒಂದೇ ಪರಿಸ್ಥಿತಿ ಇಲ್ಲ. ವಿವಿಧ ರಾಜ್ಯಗಳ ನಡುವೆ ಸಿಸೇರಿಯನ್ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಹಾಗೆಯೇ ಪ್ರದೇಶ, ಕುಟುಂಬದ ಆದಾಯ, ಸಾಕ್ಷರತೆ ಮತ್ತು ಇತರ ಅಂಶಗಳು ಕೂಡ ಸಿಸೇರಿಯನ್ ಪ್ರಮಾಣದ ವ್ಯತ್ಯಾಸಕ್ಕೆ ಕಾರಣವಾಗಿವೆ. ಬಡ ವರ್ಗಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ, ಅನಕ್ಷರಸ್ಥರ ನಡುವೆ ಸಿಸೇರಿಯನ್ ಪ್ರಮಾಣ ಕಡಿಮೆ ಇದೆ. ಉದಾಹರಣೆಗೆ, ಅರುಣಾಚಲ ಪ್ರದೇಶದಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ ಶೇ 14.5 ಇದೆ. ಇದಕ್ಕೆ, ಮಹಿಳೆಯರಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಬಗ್ಗೆ ಇರುವ ಭಯ, ಅಲ್ಲಿನ ಸಾಂಸ್ಕೃತಿಕ ನಂಬಿಕೆಗಳು, ಆಸ್ಪತ್ರೆಗಳ ಸೌಲಭ್ಯದ ಕೊರತೆ ಸೇರಿದಂತೆ ಹಲವು ಕಾರಣಗಳು.

ನಗರಗಳ ಮೇಲ್ಮಧ್ಯಮ ಮತ್ತು ಮಧ್ಯಮ ವರ್ಗದ ಮಹಿಳೆಯರಲ್ಲಿ ಕಡಿಮೆ ದೈಹಿಕ ದುಡಿಮೆಯ ಜೀವನ ಶೈಲಿಯಿಂದ ಹಲವು ರೀತಿಯ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಹೀಗಾಗಿ ಶ್ರೀಮಂತ ಮತ್ತು ಮಧ್ಯಮ ಆದಾಯದ ಪ್ರದೇಶ ಮತ್ತು ಕುಟುಂಬಗಳಲ್ಲಿ ಹಾಗೂ ಸುಶಿಕ್ಷಿತರಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ, ನಗರ ಪ್ರದೇಶಗಳಲ್ಲಿ ಈ ಪ್ರಮಾಣ ಹೆಚ್ಚು. ಇನ್ನೊಂದೆಡೆ ಕೆಲವು ಪ್ರದೇಶ ಅಥವಾ ವರ್ಗಗಳಲ್ಲಿ ಸಕಾಲಕ್ಕೆ ಸಿಸೇರಿಯನ್ ಹೆರಿಗೆ ಸೌಲಭ್ಯ ಸಿಗದೇ ತಾಯಿ, ಮಗುವಿನ ಸಾವು ಸೇರಿದಂತೆ ಹಲವು ರೀತಿಯ ಸಮಸ್ಯೆಗಳು ಉಂಟಾಗುತ್ತಿವೆ. ಅಗತ್ಯವಿಲ್ಲದಿದ್ದರೂ ಸಿಸೇರಿಯನ್ ಮಾಡುತ್ತಿರುವುದರಿಂದ ತಾಯಿ ಆರೋಗ್ಯದ ಮೇಲೂ ಪರಿಣಾಮಗಳಾಗುತ್ತಿವೆ. ವೈದ್ಯಕೀಯವಾಗಿ ಅನಗತ್ಯವಾಗಿದ್ದರೂ ಸಿಸೇರಿಯನ್ ಪ್ರಕ್ರಿಯೆ ನಡೆಸುವುದರಿಂದ ಸೋಂಕು, ರಕ್ತಸ್ರಾವ, ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇವುಗಳ ಜತೆಗೆ ಹಣದ ಅಪವ್ಯಯವಾಗುತ್ತಿದೆ. ಸಿಸೇರಿಯನ್ ಹೆರಿಗೆಗೆ ಸಹಜ ಹೆರಿಗೆಗಿಂತ ಎಂಟು ಪಟ್ಟು ಮತ್ತು ಅದಕ್ಕಿಂತ ಹೆಚ್ಚು ಮೊತ್ತವನ್ನು ಭರಿಸಬೇಕಾಗುತ್ತದೆ. ಅದರಿಂದ ಬಡ ಕುಟುಂಬಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗುತ್ತದೆ.

ಭಾರತದಲ್ಲಿ ಸಿಸೇರಿಯನ್ ಹೆರಿಗೆಯು ಗಂಭೀರ ಆರೋಗ್ಯ ಸಮಸ್ಯೆಯಾಗಿ ಮಾರ್ಪಟ್ಟಿದ್ದು, ಬಹುತೇಕ ರಾಜ್ಯಗಳಲ್ಲಿ ಪ್ರತಿ ಐದು ಹೆರಿಗೆಗಳಲ್ಲಿ ಒಂದು ಸಿಸೇರಿಯನ್ ಆಗಿದೆ. 2030ರ ಹೊತ್ತಿಗೆ ದೇಶವು ಜಗತ್ತಿನಲ್ಲಿ ಅಗ್ರಸ್ಥಾನ ಪಡೆಯಲಿದೆ ಎಂದು ಅಂದಾಜಿಸಲಾಗಿದೆ. ಅನಗತ್ಯ ಸಿಸೇರಿಯನ್ ಹೆರಿಗೆಗಳನ್ನು ತಡೆಯುವ ದಿಸೆಯಲ್ಲಿ ಸರ್ಕಾರ ಸೂಕ್ತ ನಿಯಮಗಳನ್ನು ಜಾರಿ ಮಾಡಬೇಕಿದೆ. ಪ್ರಕರಣಗಳು ಹೆಚ್ಚಾಗಿರುವ ರಾಜ್ಯಗಳಲ್ಲಿ ಸಮುದಾಯ ಆರೋಗ್ಯ ಕಾರ್ಯಕರ್ತರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ಅರಿವು ಮೂಡಿಸುವ ಕೆಲಸ ಆಗಬೇಕಿದೆ ಎಂದೂ ಅಧ್ಯಯನ ವರದಿಗಳು ಪ್ರತಿಪಾದಿಸಿವೆ.

ತಾಯಿ ಮತ್ತು ಮಗುವಿನ ಪ್ರಾಣ ರಕ್ಷಣೆಯಲ್ಲಿ ಸಿಸೇರಿಯನ್ ಪಾತ್ರ ಮುಖ್ಯವಾದದ್ದು. ಆದರೆ, ಅದನ್ನು ಬಳಸುವ ರೀತಿಯಲ್ಲಿ ವ್ಯತ್ಯಾಸಗಳಾಗುತ್ತಿವೆ. ಜಾಗತಿಕ, ದೇಶ ರಾಜ್ಯಮಟ್ಟದಲ್ಲಿ ಸಿಸೇರಿಯನ್ ಹೆರಿಗೆಗಳು ಹೆಚ್ಚಳವಾಗುತ್ತಿದ್ದು, ಅದೀಗ ಸಹಜ ಶಸ್ತ್ರಚಿಕಿತ್ಸೆಯಾಗಿ ಮಾರ್ಪಟ್ಟಿದೆ ಎಂದು ಹೇಳುತ್ತವೆ ಅಧ್ಯಯನಗಳು. ವೈದ್ಯಕೀಯ ತುರ್ತು ಸಂದರ್ಭದಲ್ಲಿ ತಾಯಿ –ಮಗುವಿನ ಪ್ರಾಣ ಉಳಿಸುವುದಕ್ಕಾಗಿ ಸಿಸೇರಿಯನ್ ಹೆರಿಗೆ ಮಾಡಿಸಲಾಗುತ್ತದೆ. ಆದರೆ ಈಗ ವೈದ್ಯಕೀಯ ಅಲ್ಲದ ಕಾರಣಗಳಿಗೂ ಸಿಸೇರಿಯನ್ ಮಾಡಲಾಗುತ್ತಿದೆ. ಅನಗತ್ಯ ಸಿಸೇರಿಯನ್ ಪ್ರಮಾಣ ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತವಾಗಿದೆ

ಸಿಸೇರಿಯನ್: ಯಾವ ರಾಜ್ಯದಲ್ಲಿ ಹೆಚ್ಚು? ಎಲ್ಲಿ ಕಡಿಮೆ? (ಶೇಕಡಾವಾರು)



ಜಗತ್ತಿನಲ್ಲೂ ಏರುಮುಖ

ಸಿಸೇರಿಯನ್ ಹೆರಿಗೆಗಳ ಸಂಖ್ಯೆ ಕರ್ನಾಟಕ, ಭಾರತದಲ್ಲಿ ಮಾತ್ರ ಹೆಚ್ಚಳವಾಗುತ್ತಿಲ್ಲ. ಜಾಗತಿಕ ಮಟ್ಟದಲ್ಲೂ ಇದೇ ಪ್ರವೃತ್ತಿ ಕಂಡು ಬರುತ್ತಿದೆ. ಜಾಗತಿಕ ಮಟ್ಟದಲ್ಲಿ 1990ರಲ್ಲಿ ಸಿಸೇರಿಯನ್ ಹೆರಿಗೆಗಳ ಪ್ರಮಾಣ ಶೇ 7ರಷ್ಟು ಇದ್ದಿದ್ದರೆ, ಈಗ ಅದು ಶೇ 21ರಷ್ಟಿದೆ. 2030ರ ವೇಳೆಗೆ ಇದು ಶೇ 29ಕ್ಕೆ ಏರಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಒಟ್ಟು ಹೆರಿಗೆಗಳಲ್ಲಿ ಸಿಸೇರಿಯನ್ ಪ್ರಮಾಣ ಶೇ 10ರಿಂದ 15ರ ಒಳಗೆ ಇರಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಆದರೆ, ಭಾರತವು ನಾಲ್ಕನೇ ಆರೋಗ್ಯ ಕುಟುಂಬ ಸಮೀಕ್ಷೆ ಸಂದರ್ಭದಲ್ಲಿಯೇ ಈ ಮಿತಿ ದಾಟಿದೆ. ಆಗ ದೇಶದ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ 22ರಲ್ಲಿ ಈ ಮಿತಿಗಿಂತಲೂ ಹೆಚ್ಚು ಸಿಸೇರಿಯನ್ ಹೆರಿಗೆಗಳು ನಡೆದಿವೆ. 2019–21ರ ಹೊತ್ತಿಗೆ ಈ ಮಿತಿ ದಾಟಿದ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ 28ಕ್ಕೆ ಏರಿದೆ.

ದೇಶದಲ್ಲಿ ಸಿಸೇರಿಯನ್ ಹೆರಿಗೆ

21.5% 2019-21

17.2% 2015-16

8.5% 2005-06

ದಕ್ಷಿಣ ರಾಜ್ಯಗಳಲ್ಲಿ ಹೆಚ್ಚು

ದೇಶದಲ್ಲಿ ಸಿಸೇರಿಯನ್ ಹೆರಿಗೆಗಳ ಪ್ರಮಾಣವು ನಾಗಾಲ್ಯಾಂಡ್‌ನಲ್ಲಿ ಅತಿ ಕಡಿಮೆ (ಶೇ 5.2) ಇದ್ದರೆ, ತೆಲಂಗಾಣದಲ್ಲಿ ಅತಿ ಹೆಚ್ಚು (ಶೇ 60.7) ಇದೆ. ದೇಶದ ಉತ್ತರ, ಈಶಾನ್ಯ ರಾಜ್ಯಗಳಿಗೆ ಹೋಲಿಸಿದರೆ ದಕ್ಷಿಣದ ರಾಜ್ಯಗಳಲ್ಲಿ ಹೆಚ್ಚು ಸಿಸೇರಿಯನ್ ಹೆರಿಗೆಗಳು ನಡೆಯುತ್ತಿವೆ. ಅದರಲ್ಲೂ ತೆಲಂಗಾಣ, ಕೇರಳ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಹೆಚ್ಚು ಗರ್ಭಿಣಿಯರು ಸಿಸೇರಿಯನ್ ಹೆರಿಗೆಗಳ ಮೂಲಕ ಮಕ್ಕಳಿಗೆ ಜನ್ಮ ನೀಡುತ್ತಿದ್ದಾರೆ. ಈ ರಾಜ್ಯಗಳಿಗೆ ಹೋಲಿಸಿದರೆ ಉತ್ತರ ಪ್ರದೇಶ, ಬಿಹಾರ ಮತ್ತು ರಾಜಸ್ಥಾನದಲ್ಲಿ ಸಹಜ ಹೆರಿಗೆಗಳು ಹೆಚ್ಚು.

ಕರ್ನಾಟಕದಲ್ಲಿ ಕಡಿಮೆ

ಕರ್ನಾಟಕದಲ್ಲೂ ಸಿಸೇರಿಯನ್ ಹೆರಿಗೆಗಳು ಹೆಚ್ಚಾಗುತ್ತಿದ್ದರೂ ದಕ್ಷಿಣದ ಇತರ ರಾಜ್ಯಗಳಿಗೆ ಹೋಲಿಸಿದರೆ ಸರಾಸರಿ ಪ್ರಮಾಣ ಕಡಿಮೆ ಇದೆ. 2015–16ರಲ್ಲಿ ನಡೆದಿದ್ದ ನಾಲ್ಕನೇ ರಾಷ್ಟ್ರೀಯ ಆರೋಗ್ಯ ಕುಟುಂಬ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಸರಾಸರಿ ಸಿಸೇರಿಯನ್ ಹೆರಿಗೆ ಪ್ರಮಾಣ ಶೇ 23.6ರಷ್ಟಿತ್ತು. 2019–21ರಲ್ಲಿ ನಡೆದಿದ್ದ ಐದನೇ ಸಮೀಕ್ಷೆಯ ವೇಳೆಗೆ ಈ ಪ್ರಮಾಣ ಶೇ 31.5ಕ್ಕೆ ಏರಿಕೆ ಕಂಡಿದೆ.

ಹೆಚ್ಚಳಕ್ಕೆ ಕಾರಣ, ಪರಿಣಾಮ ಏನು?

- ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಈಗ ನಡೆಯುತ್ತಿರುವ ಸಿಸೇರಿಯನ್ ಹೆರಿಗೆಗಳಲ್ಲಿ ಎಲ್ಲವೂ ವೈದ್ಯಕೀಯ ಕಾರಣಗಳಿಗಾಗಿ ಆಗುತ್ತಿಲ್ಲ
- ಗರ್ಭಿಣಿ, ಅವರ ಪೋಷಕರ ಮನವಿ ಮೇರೆಗೆ ವೈದ್ಯರು ಸಿಸೇರಿಯನ್ ಹೆರಿಗೆ ನಡೆಸುವ ನಿದರ್ಶನಗಳು ಹೆಚ್ಚಾಗುತ್ತಿವೆ
- ಸಿಸೇರಿಯನ್ ಹೆರಿಗೆಯಲ್ಲಿ ಹೆಚ್ಚು ನೋವು ಅನುಭವಿಸಬೇಕಿಲ್ಲ, ಅಪಾಯವೂ ಕಡಿಮೆ ಎಂಬ ಧೋರಣೆ ಕೆಲವು ಗರ್ಭಿಣಿಯರಲ್ಲಿದೆ
- ನಿರ್ದಿಷ್ಟ ದಿನ, ಸಮಯದಂದೇ ಮಗುವಿಗೆ ಜನ್ಮ ನೀಡಬೇಕು ಎಂಬ ನಂಬಿಕೆ, ವೈದ್ಯರ ಅನುಕೂಲ, ಸಿಸೇರಿಯನ್ ಹೆರಿಗೆ ಮಾಡಿಸಿದರೆ ಆಸ್ಪತ್ರೆಯ ಆಡಳಿತ ಮಂಡಳಿ ವೈದ್ಯರಿಗೆ ನೀಡುವ ಇನ್ಸೆಂಟಿವ್‌ಗಳು ಕೂಡ ಸಿಸೇರಿಯನ್ ಪ್ರಕರಣಗಳ ಹೆಚ್ಚಳಕ್ಕೆ ಕಾರಣ. ಇದೇ ಕಾರಣಕ್ಕೆ ಸರ್ಕಾರಿ ಆಸ್ಪತ್ರೆಗಳಿಗಿಂತ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಸಿಸೇರಿಯನ್ ಹೆರಿಗೆಗಳು ನಡೆಯುತ್ತಿವೆ
- ಸಹಜ ಹೆರಿಗೆ ಸಂದರ್ಭದಲ್ಲಿ ಏನಾದರೂ ವ್ಯತ್ಯಾಸವಾದರೆ ಎದುರಾಗಬಹುದಾದ ಸಂದರ್ಭಗಳು, ಕಾನೂನು ತೊಡಕುಗಳು ಕೂಡ ವೈದ್ಯರು ಸಿಸೇರಿಯನ್ ಹೆರಿಗೆಯತ್ತ ಮುಖಮಾಡಲು ಕಾರಣವಾಗುತ್ತಿವೆ
- ಸಹಜ ಹೆರಿಗೆ ಸಾಧ್ಯವಿದ್ದರೂ ಸಿಸೇರಿಯನ್ ಹೆರಿಗೆ ಮಾಡಿದರೆ ಅದು ತಾಯಿ ಮತ್ತು ಮಗುವಿನ ಆರೋಗ್ಯದ ಮೇಲೆ ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಣಾಮ ಬೀರುತ್ತದೆ. ಮಕ್ಕಳಲ್ಲಿ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಮತ್ತು ರೋಗ ಪ್ರತಿರೋಧಕ್ಕೆ ಸಂಬಂಧಿಸಿದ ಸಮಸ್ಯೆಗಳು ನಂತರ ತಲೆ ತೋರಬಹುದು

ಆಧಾರ: ಭಾರತದಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣದಲ್ಲಿ ರಾಜ್ಯವಾರು ವ್ಯತ್ಯಾಸ ಮತ್ತು ಅಸಮಾನತೆಗಳ ಕುರಿತು ಲ್ಯಾನ್ಸೆಟ್ ಅಧ್ಯಯನ ವರದಿ, ಮದ್ರಾಸ್ ಐಐಟಿಯ ಅಧ್ಯಯನ ವರದಿ, ಅಮೆರಿಕದ ನ್ಯಾಷನಲ್ ಲೈಬ್ರೆರಿ ಆಫ್ ಮೆಡಿಸಿನ್‌ನಲ್ಲಿ ಪ್ರಕಟಿತ ವರದಿಗಳು, ವಿಶ್ವ ಆರೋಗ್ಯ ಸಂಸ್ಥೆ

ಸಿನಿ ಬಿಟ್ಸ್

ಮಾಸ್ ಪಾತ್ರದಲ್ಲಿ ಪೃಥ್ವಿ ಅಂಬರ್

ಪೃಥ್ವಿ ಅಂಬರ್ ನಟನೆಯ ‘ಚೌಕಿದಾರ್’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರೋಮ್ಯಾಂಟಿಕ್, ಭಾವನಾತ್ಮಕ ಪಾತ್ರಗಳಿಗೆ ಸೀಮಿತವಾಗಿದ್ದ ಪೃಥ್ವಿ ಈ ಚಿತ್ರದಲ್ಲಿ ಲಾಂಗ್ ಹಿಡಿದು ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಹಿಂದೆ ‘ರಥಾವರ’ ಚಿತ್ರ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶನದ ಚಿತ್ರವಿದು. ಕಲ್ಲಹಳ್ಳಿ ಚಂದ್ರಶೇಖರ್ ಬಂಡವಾಳ ಹೂಡಿದ್ದಾರೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಮೇ ತಿಂಗಳಲ್ಲಿ ಚಿತ್ರ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಹೇಳಿದೆ.

‘ಚೌಕಿದಾರ್ ಕೇವಲ ಮಾಸ್ ಸಿನಿಮಾವಲ್ಲ. ಇದು ಫ್ಯಾಮಿಲಿ ಎಂಟರ್‌ಟೈನರ್. ಆ್ಯಕ್ಷನ್ ಜೊತೆಗೆ ಪ್ರೀತಿ, ಭಾವನಾತ್ಮಕ ಸನ್ನಿವೇಶಗಳು ಇವೆ. ಕನ್ನಡದ ಜೊತೆಗೆ ಬಹುಭಾಷೆಯಲ್ಲಿ ಸಿನಿಮಾ ಮೂಡಿಬರಲಿದೆ’ ಎಂದಿದೆ ಚಿತ್ರತಂಡ.

ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಟೀಸರ್ ಬಿಡುಗಡೆ ಮಾಡಲಾಗಿದ್ದು, ಸುಧಾರಾಣಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಧನ್ಯ ರಾಮಕುಮಾರ್ ಚಿತ್ರದ ನಾಯಕಿ. ಹಿರಿಯ ನಟ ಸಾಯಿ ಕುಮಾರ್ ನಾಯಕನ ತಂದೆ ಪಾತ್ರದಲ್ಲಿದ್ದಾರೆ. ಧರ್ಮ, ಹಿರಿಯ ನಟಿ ಶ್ವೇತಾ ತಾರಾ ಬಳಗದಲ್ಲಿದ್ದಾರೆ.

ಸಚಿನ್ ಬಸ್ರೂರ್ ಸಂಗೀತ, ಸಿದ್ದು ಕಂಚನಹಳ್ಳಿ ಛಾಯಾ ಚಿತ್ರಗ್ರಹಣವಿದೆ.



ಪೃಥ್ವಿ ಅಂಬರ್

ಲಕ್ಷ್ಮೀಪುತ್ರನಾದ ಚಿಕ್ಕಣ್ಣ!

‘ಅಂಬಾರಿ’, ‘ಅದ್ದೂರಿ’, ‘ಐರಾವತ’, ‘ರಾಟೆ’ಯಂತಹ ಸಿನಿಮಾಗಳನ್ನು ನಿರ್ದೇಶಿಸಿರುವ ಎ.ಪಿ.ಅರ್ಜುನ್ ತಮ್ಮದೇ ಎಪಿ ಅರ್ಜುನ್ ಫಿಲ್ಮ್ಸ್ ನಡಿ ಮೂರನೇ ಸಿನಿಮಾ ಘೋಷಿಸಿದ್ದಾರೆ. ‘ಲಕ್ಷ್ಮೀಪುತ್ರ’ ಎಂಬ ಶೀರ್ಷಿಕೆ ಹೊತ್ತ ಈ ಸಿನಿಮಾದಲ್ಲಿ ನಟ ಚಿಕ್ಕಣ್ಣ ಮುಖ್ಯಭೂಮಿಕೆಯಲ್ಲಿದ್ದಾರೆ.

ಚಿತ್ರಕ್ಕೆ ಅರ್ಜುನ್ ಕಥೆ ಹಾಗೂ ಸಾಹಿತ್ಯ ಬರೆದಿದ್ದು, ಅವರ ಜೊತೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ವಿಜಯ್ ಎಸ್. ಸ್ವಾಮಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಇದು ಇವರ ಚೊಚ್ಚಲ ಸಿನಿಮಾ. ಚಿತ್ರವನ್ನು ಅರ್ಜುನ್ ಪತ್ನಿ ಅನ್ನಪೂರ್ಣ ಎ.ಪಿ. ಅರ್ಜುನ್ ನಿರ್ಮಾಣ ಮಾಡುತ್ತಿದ್ದಾರೆ. ಗಿರೀಶ್ ಆರ್. ಗೌಡ ಛಾಯಾ-ಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ, ದೀಪು ಎಸ್. ಕುಮಾರ್ ಸಂಕಲನ, ಕೆ.ರವಿವರ್ಮಾ ಸಾಹಸ ನಿರ್ದೇಶನ, ಮೋಹನ್ ಬಿ. ಕೆರೆ ಕಲಾ ನಿರ್ದೇಶನ ಚಿತ್ರಕ್ಕಿದೆ. ಇದೇ ಜ.24ರಂದು ಚಿತ್ರದ ಮುಹೂರ್ತ ನಡೆಯಲಿದೆ.

ಚಿಕ್ಕಣ್ಣ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭ ಮೇಳ ನಡೆಯುತ್ತಿರುವ ಪ್ರದೇಶದ ಆಸ್ಪತ್ರೆಯೊಂದರಲ್ಲಿ ಅಗ್ನಿ ಅನಾಹುತ ಸಂಭವಿಸಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಿಕೊಂಡು ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಪೊಲೀಸ್ ಸಿಬ್ಬಂದಿ ಬೆಂಕಿ ನಂದಿಸುವ ಉಪಕರಣಗಳನ್ನು ಬಳಸಿಕೊಂಡು ಕಾರ್ಯಾಚರಣೆಯಲ್ಲಿ ತೊಡಗಿರುವ ದೃಶ್ಯ ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು. ಕುಂಭಮೇಳದಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿಲ್ಲ.

ವಿಡಿಯೊವನ್ನು ಇನ್‌ವಿಡ್ ಟೂಲ್ ಸರ್ಚ್‌ನಲ್ಲಿ ಹಾಕಿ ಹುಡುಕಾಡಿದಾಗ, ಹಲವು ಕೀಫ್ರೇಮ್‌ಗಳು ಕಂಡು ಬಂದವು. ಅದರಲ್ಲಿ ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ, ಇದೇ ವಿಡಿಯೊವನ್ನು ಹಲವರು ಹಂಚಿಕೊಂಡಿರುವುದು ತಿಳಿಯಿತು. ನಂತರ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಜಾಲಾಡಿದಾಗ, ಅಗ್ನಿ ಆಕಸ್ಮಿಕ ಸಂಭವಿಸಿರುವ ಬಗ್ಗೆ ಅಧಿಕೃತವಾದ ಮಾಹಿತಿ ಸಿಗಲಿಲ್ಲ. ಆದರೆ, ಉತ್ತರ ಪ್ರದೇಶದ ಕುಂಭಮೇಳ ಪೊಲೀಸ್ ಘಟಕದ ಅಧಿಕೃತ ‘ಎಕ್ಸ್’ ಖಾತೆಯು ಮಾಡಿರುವ ಪೋಸ್ಟ್ ಸಿಕ್ಕಿತು. ಅದು ಎಕ್ಸ್‌ನಲ್ಲಿ ಮಾಡಿದ ಪೋಸ್ಟ್‌ಗೆ (ಈಗ ಡಿಲೀಟ್ ಆಗಿದೆ) ಪೊಲೀಸರು ನೀಡಿದ ಪ್ರತಿಕ್ರಿಯೆಯಾಗಿತ್ತು. ಮಹಾಕುಂಭ ಆರಂಭಕ್ಕೂ ಮುನ್ನ ಮಾಡಲಾಗಿದ್ದ ಬೆಂಕಿ ನಂದಿಸುವ ಅಣಕು ಕಾರ್ಯಾಚರಣೆಯ ವಿಡಿಯೊ ಅದು ಎಂದು ಪೊಲೀಸರು ಅದರಲ್ಲಿ ಸ್ಪಷ್ಟಪಡಿಸಿದ್ದರು. ಅಲ್ಲದೇ, ಉತ್ತರ ಪ್ರದೇಶದ ಅಗ್ನಿಶಾಮಕ ಇಲಾಖೆ ಕೂಡ, ‘ಈ ವಿಡಿಯೊವು ಡಿ.27ರಂದು ನಡೆಸಲಾಗಿದ್ದ ಅಣಕು ಕಾರ್ಯಾಚರಣೆಯದ್ದು. ತಪ್ಪು ಮಾಹಿತಿ, ವದಂತಿಗಳನ್ನು ಹರಡಬೇಡಿ’ ಎಂದು ಹೇಳಿಕೆ ನೀಡಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಜನವರಿ 17, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಚತುರ್ಥಿ ಗಂ. 29-31 ನಕ್ಷತ್ರ: ಮಘ ಗಂ. 12-45 ಯೋಗ: ಸೌಭಾಗ್ಯ ಗಂ. 24-57 ಕರಣ: ಬವ ಗಂ. 16-44, ಮಕರ ಮಾಸದ 03 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 07-01 ಸೂರ್ಯಾಸ್ತ : 06-20 ಮುಸ್ಲಿಂ ದಿನಾಂಕ : 16 ರಜಬ್
ದಿನ ವಿಶೇಷ : ಸಂಕಷ್ಟಹರ ಚತುರ್ಥಿ, ಚಂದ್ರೋದಯ: ರಾತ್ರಿ 09-23
ಅದೃಷ್ಟ ಸಂಖ್ಯೆ : 12, 7

ಮೇಷ: ಏಕಕಾಲದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಬೇಕಾದ ಅನಿವಾರ್ಯ ಎದುರಾಗುವುದು. ನಿಮ್ಮಲ್ಲಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ವೇದಿಕೆ ಸಿಗುವುದು. ಕುಟುಂಬದವರಿಂದ ಶುಭವಾರ್ತೆ ಕೇಳುವಿರಿ.

ವೃಷಭ: ವೃತ್ತಿ ವಿಷಯಗಳು ಮತ್ತು ಹೊಸ ಅವಕಾಶಗಳಿಗೆ ನಿಮ್ಮ ಮುಂದೆ ಸರಿಯಾದ ಹಾದಿ ಇದೆ. ಒಂದೆಡೆ ಹಣದ ಉಳಿತಾಯಕ್ಕೆ ಯತ್ನಿಸುತ್ತಿದ್ದರೆ, ಮತ್ತೊಂದೆಡೆ ಖರ್ಚು ಹೆಚ್ಚಲಿದೆ. ನಿಮ್ಮ ಮಾತುಗಳಲ್ಲಿ ಸತ್ಯವಿರಲಿ.

ಮಿಥುನ: ಕೆಲಸದ ನಿಮಿತ್ತವಾಗಿ ದೂರ ಪ್ರಯಾಣ ಬೆಳೆಸುವುದು ಉಚಿತವಲ್ಲ, ಆದ್ದರಿಂದ ಅನಿವಾರ್ಯವಾದಲ್ಲಿ ಸ್ನೇಹಿತರೊಂದಿಗೆ ಕೈಗೊಳ್ಳಿರಿ. ದಿನದ ಮಧ್ಯದಲ್ಲಿ ಅಚ್ಚರಿಯ ಸುದ್ದಿ ಕೇಳಲಿರುವಿರಿ. ಗೃಹಿಣಿಯರಿಗೆ ವಿಶೇಷ ದಿನ.

ಕರ್ಕಾಟಕ: ಆಧ್ಯಾತ್ಮಿಕ ವಿಚಾರಗಳ ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗ ವಾಗುವುದು. ಮನೆಗೆ ಹಿರಿಯರ ಆಗಮನವಾಗುವುದು ನವ ಉಲ್ಲಾಸವನ್ನು ತರಲಿದೆ. ನಿಮ್ಮ ವೈಯುಕ್ತಿಕವಾದ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವುದು.

ಸಿಂಹ: ನಿಮ್ಮ ತೀಕ್ಷ್ಣ ಮಾತುಗಳಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗುವ ಸಂದರ್ಭ ಬರಲಿದೆ. ಈ ದಿನ ಕೃಷಿ ಕಾರ್ಯಗಳಿಂದಾಗಿ ಹೆಚ್ಚಿನ ಆದಾಯವಿರುವುದು. ಸಿನಿಮಾ ರಂಗದವರಿಗೆ ಹೆಚ್ಚಿನ ಅವಕಾಶ ಲಭಿಸುವುದು.

ಕನ್ಯಾ: ನಿಮಗೆ ವಹಿಸಿದ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ.

ತುಲಾ: ವಿದ್ಯಾರ್ಥಿಗಳು ಸರಾಗವಾಗಿ ಅಭ್ಯಾಸವನ್ನು ಮುಂದುವರಿಸುವುದರಿಂದ ಜಯ ಪ್ರಾಪ್ತಿ. ವೈದ್ಯರ ಸಲಹೆಯಂತೆ ಧ್ಯಾನ, ಯೋಗದ ಅಭ್ಯಾಸ ಮಾಡಿಕೊಳ್ಳಿ. ಸೌಜನ್ಯವು ನಿಮ್ಮ ಹುದ್ದೆಗೆ ಬಹಳಷ್ಟು ಮೆರಗು ತರುವುದು.

ವೃಶ್ಚಿಕ: ಕೆಲವು ದಿನಗಳಿಂದ ಮುಂದೂಡಿದ್ದ ವಿದೇಶ ಪ್ರಯಾಣವನ್ನು ಮತ್ತೆ ಕೈಗೊಳ್ಳುವ ಬಗ್ಗೆ ಯೋಚನೆ ಬರುವುದು. ಮಹಾಲಕ್ಷ್ಮೀ ಅಷ್ಟೋತ್ತರವನ್ನು ಪಠಿಸಿದಲ್ಲಿ ಹೆಚ್ಚಿನ ಯಶಸ್ಸು ನಿಮ್ಮದಾಗುವುದು. ಹಿರಿಯರನ್ನು ಗೌರವಿಸುವಿರಿ.

ಧನು: ಸೃಜನಶೀಲತೆಯಿಂದ ಕಾರ್ಯನಿರ್ವಹಿಸಿ ಹೆಸರು ಗಳಿಸುವಿರಿ. ರಾಜಕಾರಣಿಗಳಿಗೆ ತಮ್ಮ ಚಟುವಟಿಕೆಗಳಿಗಾಗಿ ಬಿರುಸಿನ ಓಡಾಟ ಅನಿವಾರ್ಯವಾಗುವುದು. ಮನೆಯ ಆಲಂಕಾರಿಕ ವಸ್ತುಗಳಿಗಾಗಿ ಖರ್ಚು ಮಾಡುವಿರಿ.

ಮಕರ: ಸ್ವಂತ ಹೂಡಿಕೆಯಿಂದ ಧನಾರ್ಜನೆಯ ವಿಷಯದಲ್ಲಿ ಸಮತೋಲನವನ್ನು ಸಾಧಿಸಬಹುದು. ಒತ್ತಡ ತರುವಂತಹ ಕೆಲಸಗಳಿಂದ ದೂರವಿರುವುದು ಉತ್ತಮ. ಆದಾಯಕ್ಕೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗಲಾರದು.

ಕುಂಭ: ಸೂಕ್ಷ್ಮ ಮನಸ್ಸಿನ ನಿಮಗೆ ಹೆಚ್ಚಿನ ಜವಾಬ್ದಾರಿ ಜೊತೆಗೆ ರಹಸ್ಯ ಭೇದಿಸುವ ಹುದ್ದೆಗೆ ವರ್ಗವಾಗಲಿದೆ. ನಿಮ್ಮ ಅಭಿವೃದ್ಧಿಗೆ ಸ್ನೇಹಿತರ ಬಳಗವು ಕಾರಣವಾಗುತ್ತದೆ. ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ.

ಮೀನ: ಮಕ್ಕಳ ಆಸೆಗೆ ಅಡ್ಡಗಾಲು ಹಾಕಿ ಮನಸ್ಸನ್ನು ನೋಯಿಸುವ ಕೆಲಸವನ್ನು ಮಾಡದಿರಿ. ನಡೆದು ಹೋದ ಸಂಗತಿಗಳ, ದುರ್ಘಟನೆಗಳ ಬಗ್ಗೆ ಯೋಚಿಸದೆ ಕಾರ್ಯ ಪ್ರವೃತ್ತರಾದಲ್ಲಿ ಜಯ ಸಾಧ್ಯ. ಶತ್ರು ಬಾಧೆ ನಿವಾರಣೆ ಆಗಲಿದೆ.

ಸಂತರ ಮಾತಿನ ಕ್ಯೂರಿಂಗ್!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

112

ನೀವು ಒಂದು ಪ್ರಯೋಗ ಮಾಡಿ. ನಿಮ್ಮ ಮನೆಯ ಹುಡುಗನನ್ನು ಕರೆದು ಅವನ ಮುಂದೆ ಒಂದು ಗ್ಲಾಸ್‌ನಲ್ಲಿ ಹಾಲು ಇನ್ನೊಂದು ಗ್ಲಾಸ್‌ನಲ್ಲಿ ಅಲ್ಕೊಹಾಲ್ ಇಡಿ. ಅವ ಯಾವುದನ್ನು ತೆಗೆದುಕೊಳ್ಳುತ್ತಾನೆ. ಖಂಡಿತವಾಗಿಯೂ ಹಾಲನ್ನೇ ತೆಗೆದುಕೊಳ್ಳುತ್ತಾನೆ. ಅದೇ ಗ್ಲಾಸುಗಳನ್ನು ಒಬ್ಬ ಪುರುಷನ ಮುಂದೆ ಇಡಿ. ಅವ ಅಲ್ಕೊಹಾಲ್ ಗ್ಲಾಸ್ ತೆಗೆದುಕೊಳ್ಳುತ್ತಾನೆ. ಅವನಿಗೆ ಅಲ್ಕೊಹಾಲ್ ಪರಿಣಾಮಗಳ ಬಗ್ಗೆ ಗೊತ್ತಿಲ್ಲೇನು? ಗೊತ್ತೈತಿ. ಆದರೂ ಅದನ್ನೇ ತೆಗೆದುಕೊಳ್ಳುತ್ತಾನೆ. ಆಗ ಆ ಹುಡುಗ ಅಂದ, ‘ಹಾಲಿನ ಬೆಲೆ ಗೊತ್ತಿರೋದರಿಂದ ನಾನು ಅದನ್ನು ತೆಗೆದುಕೊಂಡೆ. ಹಾಲು ಕುಡಿದು ನಾನು ತಾಯಿ ತೊಡೆ ಮೇಲೆ ಮಲಗತೀನಿ. ನೀನು ಅಲ್ಕೊಹಾಲ್ ಕುಡಿದು ನಾಯಿ ತೊಡಿ ಮೇಲೆ ಮಲಗಿ ಎದ್ದು ಬರ್ತಿ’ ಅಂತ. ಒಂದು ದಿನ ಒಬ್ಬ ಮನುಷ್ಯ ತನ್ನ ಹೆಂಡತಿ ಮಾಡಿದ ಅಡುಗೆ ಚೆನ್ನಾಗಿಲ್ಲ ಎಂದು ಬಿಸಾಡಿದ. ಅದನ್ನು ನೋಡಿದ ಪತ್ನಿ ‘ಯಾಕ್ರೀ ಬಿಸಾಡ್ತೀರಿ’ ಎಂದು ಕೇಳಿದಳು. ‘ಇದಕ್ಕ ರುಚಿನೇ ಇಲ್ಲ. ದಿನಾಲೂ ಒಂದೇ ರುಚಿ. ಏನೂ ಬದಲಾವಣೆನೇ ಇಲ್ಲ. ಅದನ್ನು ಯಾರು ತಿನ್ನುತ್ತಾರೆ’ ಎಂದ ಗಂಡ. ಅದಕ್ಕೆ ಕೆರಳಿದ ಪತ್ನಿ, ‘ದಿನಾ ಸಂಜೆ ಕುಡಿದು ಮನೆಗೆ ಬರ್ತಿ. ಒಂದು ದಿನವಾದರೂ ಸಾರಾಯಿ ಒಂದೇ ರುಚಿ ಅಂತ ಬಾಟಲಿ ಬಿಸಾಡಿ ಬಂದಿಯೇನು?’ ಎಂದು ಕೇಳಿದಳು. ನಮಗೆ ಏನನ್ನು ಕುಡೀಬೇಕು, ಏನನ್ನು ಕುಡೀಬಾರದು ಎಂಬ ಅರಿವು ಇರಬೇಕು. ಅದಕ್ಕೆ ಮುಕ್ತಾಯಕ್ಕ ಹೇಳ್ತಾಳೆ, ‘ನಮ್ಮ ಬದುಕು ಸುಂದರವಾಗಬೇಕು ಎಂದರೆ ಆನಂದ ಇರಬೇಕು. ಐಶ್ವರ್ಯ ಇರಬೇಕು, ಅರಿವು ಇರಬೇಕು ಅಂತ.

ಹೌದು, ಇವೆಲ್ಲ ಎಲ್ಲಿ ಸಿಗ್ತಾವೆ? ಯಾವುದಾರೂ ಮಾಲ್‌ನಲ್ಲಿ ಸಿಗ್ತಾವೇನು ಎಂದು ಕೇಳಬೇಡಿ. ಮುಕ್ತಾಯಕ್ಕನೇ ಇವೆಲ್ಲ ಎಲ್ಲಿ ಸಿಗ್ತವೆ ಎಂದೂ ಹೇಳಿದ್ದಾಳೆ. ಶರಣರು ಈ ಬಗ್ಗೆ ಸಂಶೋಧನೆ ಮಾಡಿದ್ದಾರೆ. ‘ಜ್ಞಾನಮೂಲ ಗುರುಸೇವೆ ಎಂಬೆನು. ಐಶ್ವರ್ಯಮೂಲ ಲಿಂಗಾರ್ಚನೆ ಎಂಬೆನು. ಮೋಕ್ಷಮೂಲ ಘಟಸಂತೃಪ್ತಿ ಎಂಬೆನು ಅಜಗಣ್ಣಲಿಂಗವೆ’ ಎಂದು ಹೇಳುತ್ತಾಳೆ ಅವಳು. ಮುಕ್ತಾಯಕ್ಕ ಈಗ ದೇಹದಿಂದ ಇಲ್ಲ. ಸಿದ್ದೇಶ್ವರ ಸ್ವಾಮೀಜಿ ರೂಪದಿಂದ ಇಲ್ಲ. 12ನೇ ಶತಮಾನದ ಶರಣರೂ ಈಗ ಇಲ್ಲ. ಆದರೆ ಅವರೆಲ್ಲರೂ ವಚನಗಳ ಮೂಲಕ ಶಬ್ದದಿಂದ ಇದ್ದಾರೆ. ಇದಕ್ಕೆ ಶಬ್ದಾವತಾರ ಅಂತಾರ.

ಈಗ ನೀವು ಮನೆ ಕಟ್ಟಿಸ್ತೀರಿ. ಒಳ್ಳೆ ಕಬ್ಬಿಣ ತಂದೀರಿ, ಒಳ್ಳೆ ಸಿಮೆಂಟ್ ತಂದೀರಿ. ಆದರೂ ಕ್ಯೂರಿಂಗ್ ಮಾಡಲೇ ಬೇಕಲ್ಲ. ಎಷ್ಟೇ ಒಳ್ಳೆ ಸಿಮೆಂಟ್ ಆದರೂ ಕ್ಯೂರಿಂಗ್ ಸರಿ ಆಗದಿದ್ದರೆ ಕಟ್ಟಡ ಬಿರುಕು ಬಿಡತೈತಿ. ಹಾಗೆಯೇ ಸಂಸಾರದಲ್ಲಿ ಬಿರುಕು ಬರಬಾರದು ಎಂದರೆ ಸಂತರ ಮಾತಿನ ಕ್ಯೂರಿಂಗ್ ಬೇಕೇಬೇಕು. ನಿಮ್ಮ ಮನದಲ್ಲಿ ನೂರು ಚಿಂತೆಗಳು ಇರಬಹುದು. ನೂರೂ ಚಿಂತೆಗಳನ್ನು ಏಕಕಾಲದಲ್ಲಿ ದೂರಮಾಡಲು ಶರಣರ ಒಂದು ವಚನ ಸಾಕು. ಮರದ ಕೊಂಬೆಯ ಮೇಲೆ ನೂರು ಕಾಗೆಗಳು ಕುಳಿತಿದ್ದರೂ ಅವುಗಳನ್ನು ಓಡಿಸಲು ನೂರು ಕಲ್ಲುಗಳು ಬೇಡ. ಒಂದು ಕಲ್ಲು ಒಗೆದರೆ ನೂರೂ ಕಾಗೆಗಳು ಹಾರಿ ಹೋಗ್ತವೆ. ಹಾಗೆಯೇ ಇದು. ಸೂಪರ್ ಮಾರ್ಕೆಟಿಗೆ ಹೋದರೆ ಜ್ಞಾನ ಸಿಗುವುದಲ್ಲ. ಗುರುಸೇವೆ ಮಾಡಿದರೆ ಸಿಗ್ತದೆ. ಮೈ, ಮನಸ್ಸು, ಕೈ ಹೊಲಸು ಮಾಡಿಕೊಳ್ಳದೆ ಶುದ್ಧವಾಗಿಟ್ಟುಕೊಂಡವರೇ ಗುರುಗಳು.

ಪದಬಂಧ 5925

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಸಿರನ್ನು ಹೊರ ಬಿಡುವುದು (3)
3.ಉಸಾಬರಿ ಬೇಡವೆಂದಾಗ ಈ ಹೆದರಿಕೆ! (3)
5.ಅಭಿಪ್ರಾಯ ಭೇದವಿದು (5)
7.ಲೋಹದ್ರವ್ಯವನ್ನು ಅಚ್ಚಿಗೆ ಎರೆಯುವಿಕೆ (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗೆನ್ನಿ (3)
11.ತಿಗರಿಯ ಬಳಿಯಿರುವ ಪತಿವ್ರತೆ (3)
13.ಸುಮ್ಮನಿರಿ! ಹಿಗ್ಗು ಹೀಗೆ ಬಂದಿದೆ! (3)
15. ಕುಯುಕ್ತಿಯಿಂದ ಎಗರಿಸಿದ ಕಪ್ಪೆ ಚಿಪ್ಪು! (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಕೊಯಿಲು ಮಾಡುವಾಗ ಉಂಟಾದ ಗದ್ದಲ (3)
18.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ದ್ರವ್ಯ (3)

ಮೇಲಿಂದ ಕೆಳಕ್ಕೆ

2.ಸಭೆಯಲ್ಲಿ ಕುಳಿತಿರುವವನು (3)
3.ಗೀತೆಗಳನ್ನು ರಾಗಬದ್ಧವಾಗಿ ಹಾಡುವವನು (3)
6.ಕಾರಿನ ಹತ್ತಿರ ಭಿಕ್ಷೆ ಬೇಡುವವನಿದ್ದಾನೆ (3)
9.ಓಲಗಶಾಲೆಯಲ್ಲಿ ವಾಚಕನಿದ್ದಾನೆ (3)
10.ಗೆಳೆಯನೊಡನಿರುವ ಸ್ನೇಹಿತೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಮ್ಮ ರಾಷ್ಟ್ರಪಕ್ಷಿ (3)
15.ಶುಕದ ಹತ್ತಿರವಿರುವ ನಾಯಿ (3)



5924ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
14.ನವಸಾಗರ 5.ಕವಡೆ
7.ಆಮಲಕ 9.ರಿಕ್ತಹಸ್ತ
10.ರಾಕ್ಷಸ 11.ಅನುಭವ
13.ರಣಾಂಗಣ 15.ಅಂಗಡಿ
16.ಕೊಲೆಪಾತಕ

ಮೇಲಿಂದ ಕೆಳಕ್ಕೆ:
1.ನವಸುಮ 2.ಜಾಗ
3.ಅವಗಾಹ 6.ಪರಿಸರ
8.ಕರಾವಳಿ 12.ನುಡಿಗಟ್ಟು
14.ಗರಂತಲಂ 17.ಲೆತ್ತ

ಸುಡೊಕು 6310

		6		7		3		8
			2		4			
7		1		5		4		9
	9		5				7	
1				4	7			3
	6				8		5	
9		5			6			1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6309 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,213
ಇಂದಿನ ಅಂತ್ಯ	23,311
▲	98
ದಿನದ ಗರಿಷ್ಠ	23,391

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹505
12 ಕ್ಕೆ	₹70
ಮೈಸೂರು	
100ಕ್ಕೆ	₹505

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹400-656

ದ್ವಿತಳಿ (ಬಿ.ವಿ) ₹485-789

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹189

ಆರ್‌ಎಸ್‌ಎಸ್-5 ₹184

ಗುಡ್ ಲಾಟ್ ₹178

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22750
ಎಸಿ	₹12320
ಆರ್‌ಪಿ	₹19200
ಆರ್‌ಸಿ	₹11125

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹10500-11000
ಮಧುಗಿರಿ	₹10000-15000
ತಿಪಟೂರು	₹14000-14900

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹2500-3000
ಮಧ್ಯಮ	₹2000-2500
ಸಣ್ಣ	₹1500-2000

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-35000
ಹಳತು	45000-49000
ಕಾರ್ಕಳ	
ಹೊಸತು	25000-36000
ಹಳತು	30000-45000
ಕುಮಟ	
ಚಾಲಿ	32669-37800
ಚಿಪ್ಪು	14100-29569
ಕೋಕ	5150-24609
ಹಳೆಚಾಲಿ	37069-39519
ಹೊಸಚಾಲಿ	23010-29705
ಸಾಗರ	
ಬಿಳಿಗೋಟು	10989-26899
ಚಾಲಿ	24299-34170
ಕೋಕ	10219-26209
ಕೆಂಪುಗೋಟು	16989-31399
ರಾಶಿ	34119-51129
ಸಿಪ್ಪೆಗೋಟು	10520-17313
ಶಿವಮೊಗ್ಗ	
ಬೆಟ್ಟೆ	41100-56939
ಗೊರಬಲು	17009-33869
ರಾಶಿ	30000-51299
ಸರಕು	52129-88210
ಸಿದ್ದಾಪುರ	
ಬಿಳಿಗೋಟು	24109-27209
ಚಾಲಿ	32399-38309
ಕೋಕ	15299-23109
ಹೊಸಚಾಲಿ	24609-31509
ಕೆಂಪುಗೋಟು	20319-21389
ರಾಶಿ	42809-49129
ತಟ್ಟಿಬೆಟ್ಟೆ	26819-36099
ಶಿರಸಿ	
ಬೆಟ್ಟೆ	30300-40808
ಬಿಳಿಗೋಟು	21199-30499
ಚಾಲಿ	35118-39412
ಕೆಂಪುಗೋಟು	13619-23601
ರಾಶಿ	42009-46228
ಯಲ್ಲಾಪುರ	
ಅಪಿ	57295-67169
ಬಿಳಿಗೋಟು	12899-28311
ಚಾಲಿ	28629-39109
ಕೋಕ	4809-17799
ಕೆಂಪುಗೋಟು	14099-24969
ರಾಶಿ	37639-56679
ತಟ್ಟಿಬೆಟ್ಟೆ	26519-37399

ಅದಾನಿ ಸಮೂಹ ಅಲುಗಾಡಿಸಿದ್ದ ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ

ಹಿಂಡನ್‌ಬರ್ಗ್ ಬಾಗಿಲು ಬಂದ್

ವಾಷಿಂಗ್ಟನ್/ ನವದೆಹಲಿ (ಪಿಟಿಐ): ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ. ಕಂಪನಿಯ ಅಧ್ಯಕ್ಷ ನಾಥನ್ (ನಾಟೆ) ಆ್ಯಂಡರ್‌ಸನ್ ಗುರುವಾರ ಈ ಕುರಿತು ಅಧಿಕೃತವಾಗಿ ಪ್ರಕಟಿಸಿದ್ದಾರೆ.

2017ರಲ್ಲಿ 11 ಮಂದಿ ಸಮಾನ ಮನಸ್ಕರಿಂದ ಈ ಕಂಪನಿ ಸ್ಥಾಪನೆಗೊಂಡಿತ್ತು. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲು ನಾಲ್ಕು ದಿನಗಳು ಬಾಕಿ ಇರುವ ಮೊದಲೇ ಕಂಪನಿಯ ಬಾಗಿಲು ಮುಚ್ಚಿದೆ.

2023ರ ಜನವರಿಯಲ್ಲಿ ಅದಾನಿ ಸಮೂಹದ ವಿರುದ್ಧ ಹಿಂಡನ್‌ಬರ್ಗ್ ಪ್ರಕಟಿಸಿದ ವರದಿಯು ದೇಶದ ಷೇರುಪೇಟೆಯಲ್ಲಿ ತಲ್ಲಣ ಸೃಷ್ಟಿಸಿತ್ತು. ವಾಸ್ತವಿಕ ಬೆಲೆಗಿಂತ ಶೇ 80ರಷ್ಟು ಹೆಚ್ಚು ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ ಎಂದು ಆರೋಪಿಸಿತ್ತು. ಇದನ್ನು ಅದಾನಿ ಸಮೂಹವು ನಿರಾಕರಿಸಿತ್ತು.

ಆದರೆ, ಈ ಆರೋಪದಿಂದಾಗಿ ಅದಾನಿ ಕಂಪನಿಗಳ ಷೇರಿನ ಮೌಲ್ಯದಲ್ಲಿ ಭಾರಿ ಇಳಿಕೆಯಾಗಿತ್ತು. ಈ ವರದಿಯು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ವಾಕ್ಸಮರಕ್ಕೂ ಕಾರಣವಾಗಿತ್ತು.

ಸ್ಥಗಿತಕ್ಕೆ ಕಾರಣ ಏನು?: 'ಕಂಪನಿಯ ವಿಸರ್ಜನೆ ಹಿಂದೆ ನಿರ್ದಿಷ್ಟ ಕಾರಣ ವಿಲ್ಲ. ಯಾವುದೇ ಬೆದರಿಕೆ ಇಲ್ಲ. ಆರೋಗ್ಯ, ವೈಯಕ್ತಿಕ ಸಮಸ್ಯೆಯೂ ಇಲ್ಲ. ಜಗತ್ತಿನಲ್ಲಿ ಹಲವು ವಿಚಾರಗಳು ಮತ್ತು ನನ್ನ ಪ್ರೀತಿಪಾತ್ರರಿಂದ ದೂರ ಇದ್ದೇನೆ. ನನ್ನ ಬದುಕಿನಲ್ಲಿ ಹಿಂಡನ್‌ಬರ್ಗ್ ಒಂದು ಮುಗಿದ ಅಧ್ಯಾಯವಾಗಿದೆ' ಎಂದು ನಾಥನ್ ಅವರು, ಕಂಪನಿಯ ವೆಬ್‌ಸೈಟ್‌ನಲ್ಲಿ ಬರೆದುಕೊಂಡಿದ್ದಾರೆ.

'ಇನ್ನು ಮುಂದೆ ಕುಟುಂಬದ ಸದಸ್ಯರ ಜೊತೆಗೆ ಹೆಚ್ಚು ಸಮಯ ಕಳೆಯಲು ಬಯಸುತ್ತೇನೆ. ಮನಸ್ಸಿಗೆ ಹೆಚ್ಚು ಖುಷಿ ನೀಡುವ ಸಂಗತಿಗಳತ್ತ ಗಮನ ಕೇಂದ್ರೀಕರಿಸುವೆ' ಎಂದು ಹೇಳಿದ್ದಾರೆ.

'ವಿಶ್ವದ ಹಲವು ಉದ್ಯಮ ಸಾಮ್ರಾಜ್ಯಗಳು ನಾವು ಪ್ರಕಟಿಸಿದ ವರದಿಯಿಂದ ಬೆಚ್ಚಿಬಿದ್ದಿವೆ. 100ಕ್ಕೂ ಹೆಚ್ಚು ಉದ್ಯಮಿಗಳ ವಿರುದ್ಧ ಆಯಾ ದೇಶಗಳ ಕಾನೂನು ಪರಿಪಾಲನಾ ಸಂಸ್ಥೆಗಳಿಂದ ಕ್ರಮ ಜರುಗಿಸಲಾಗಿದೆ' ಎಂದು ಹೇಳಿದ್ದಾರೆ.

ಹಿಂಡನ್‌ಬರ್ಗ್ ಯಾವ ರೀತಿಯಲ್ಲಿ ಸಂಶೋಧನಾ ವರದಿ ತಯಾರಿಸುತ್ತಿತ್ತು ಎಂಬ ಬಗ್ಗೆ ಮುಂದಿನ ಆರು ತಿಂಗಳಿನಲ್ಲಿ ವಿಡಿಯೊಗಳನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಅಮೆರಿಕದ ನಿಕೋಲಾ, ಲಾರ್ಡ್‌ಸ್ಟೌನ್ ಮೋಟರ್ಸ್ ಕಾರ್ಪೊರೇಷನ್, ಕ್ಲೋಬರ್ ಹೆಲ್ತ್, ಚೀನಾದ ಕಾಂಡಿ, ಕೊಲಂಬಿಯಾದ ಟೆಕ್ನೊಗ್ಲಾಸ್ ಕಂಪನಿ ಸೇರಿ ಹಲವು ಕಂಪನಿಗಳ ಲೆಕ್ಕಪತ್ರ ದೋಷ ಹಾಗೂ ಅಕ್ರಮ ಚಟುವಟಿಕೆಗಳ ಬಗ್ಗೆ ಹಿಂಡನ್‌ಬರ್ಗ್ ವರದಿ ಪ್ರಕಟಿಸಿ ಜಾಗತಿಕ ಗಮನ ಸೆಳೆದಿತ್ತು.

ಅದಾನಿ ಕಂಪನಿ ಷೇರಿನ ಮೌಲ್ಯ ಏರಿಕೆ

ಹಿಂಡನ್‌ಬರ್ಗ್ ರಿಸರ್ಚ್ ಸ್ಥಗಿತಗೊಂಡ ಬೆನ್ನಲ್ಲೇ ಗುರುವಾರದ ವಹಿವಾಟಿನಲ್ಲಿ ಅದಾನಿ ಸಮೂಹದ ಕಂಪನಿ ಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಎನ್‌ಡಿಟಿವಿ ಶೇ 9.15, ಅಂಬುಜಾ ಸಿಮೆಂಟ್ಸ್ ಶೇ 3.88, ಅದಾನಿ ಗ್ರೀನ್ ಎನರ್ಜಿ ಶೇ 3.35, ಶಾಂಘಿ ಇಂಡಸ್ಟ್ರೀಸ್ ಶೇ 3.34, ಅದಾನಿ ಪವರ್ ಶೇ 2.45, ಅದಾನಿ ಪೋರ್ಟ್ಸ್ ಶೇ 2.03, ಅದಾನಿ ಟೋಟಲ್ ಗ್ಯಾಸ್ ಶೇ 1.78, ಅದಾನಿ ಎಂಟರ್‌ಪ್ರೈಸಸ್ ಶೇ 1.74, ಅದಾನಿ ಗ್ರೀನ್ ಸಲ್ಯೂಷನ್ಸ್ ಶೇ 1.54 ಹಾಗೂ ಎಸಿಸಿ ಷೇರಿನ ಮೌಲ್ಯದಲ್ಲಿ ಶೇ 0.77ರಷ್ಟು ಏರಿಕೆಯಾಗಿದೆ. ಅದಾನಿ ವಿಲ್ಮರ್ ಷೇರಿನ ಮೌಲ್ಯದಲ್ಲಿ ಶೇ 1.19ರಷ್ಟು ಇಳಿಕೆಯಾಗಿದೆ.

ಸುದ್ದಿ 2 ನಿಮಿಷ

ಮುಂದುವರಿದ ಗೂಳಿ ಓಟ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಗುರುವಾರ ಕೂಡ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿಯಿತು.

ಡಿಸೆಂಬರ್‌ನಲ್ಲಿ ಅಮೆರಿಕದಲ್ಲಿ ಚಿಲ್ಲರೆ ಹಣದುಬ್ಬರವು ನಿರೀಕ್ಷೆ ಮಾಡಿದ್ದಕ್ಕಿಂತಲೂ ಕಡಿಮೆ ದಾಖಲಾಗಿದೆ. ಹಾಗಾಗಿ, ಫೆಡರಲ್ ರಿಸರ್ವ್ ಹೆಚ್ಚಿನ ಬಡ್ಡಿದರ ಕಡಿತಕ್ಕೆ ಮುಂದಾಗುವ ನಿರೀಕ್ಷೆ ಇರುವುದರಿಂದ ಜಾಗತಿಕ ಷೇರುಪೇಟೆಗಳಲ್ಲೂ ಸಕಾರಾತ್ಮಕ ವಹಿವಾಟು ನಡೆದಿದೆ. ಇದು ದೇಶೀಯ ಮಾರುಕಟ್ಟೆಯ ಏರಿಕೆಗೆ ನೆರವಾಗಿದೆ ಎಂದು ಷೇರುಪೇಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 318 ಅಂಶ ಏರಿಕೆ ಕಂಡು, 77,042 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 98 ಅಂಶ ಹೆಚ್ಚಳ ಕಂಡು 23,311 ಅಂಶಗಳಲ್ಲಿ ಸ್ಥಿರಗೊಂಡಿತು.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,533 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಶೇ 0.18ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 81.88 ಡಾಲರ್ ಆಗಿದೆ.

ಸೋಯಾಬಿನ್ ದಾಖಲೆ ಖರೀದಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ಇಲ್ಲಿಯವರೆಗೆ ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) 13.73 ಲಕ್ಷ ಟನ್‌ನಷ್ಟು ಸೋಯಾಬಿನ್ ಖರೀದಿಸಿರುವುದು ದಾಖಲೆಯಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಎಂಎಸ್‌ಪಿ ಅಡಿ ಸೋಯಾಬಿನ್ ಖರೀದಿಸಲಾಗುತ್ತದೆ. 2018–19ರಲ್ಲಿ 19,483 ಟನ್ ಖರೀದಿಸಿದ್ದು, ಇಲ್ಲಿಯವರೆಗಿನ ದಾಖಲೆಯಾಗಿತ್ತು ಎಂದು ಹೇಳಿದ್ದಾರೆ. ನಾಫೆಡ್ ಮತ್ತು ಎನ್‌ಸಿಸಿಎಫ್ ಮೂಲಕ ಸೋಯಾಬಿನ್ ಖರೀದಿಸಲಾಗುತ್ತಿದೆ. ಪ್ರತಿ ಕ್ವಿಂಟಲ್‌ಗೆ ₹4,892 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಮಧ್ಯಪ್ರದೇಶದಲ್ಲಿ 6.22 ಲಕ್ಷ ಟನ್, ಮಹಾರಾಷ್ಟ್ರ 5.39 ಲಕ್ಷ ಟನ್, ತೆಲಂಗಾಣ 83,075 ಟನ್, ರಾಜಸ್ಥಾನ 67,268 ಟನ್, ಗುಜರಾತ್ 43,210 ಟನ್ ಮತ್ತು ಕರ್ನಾಟಕದಲ್ಲಿ 18,282 ಟನ್ ಖರೀದಿಸಲಾಗಿದೆ ಎಂದು ವಿವರಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ಗೀತಾಲಕ್ಷ್ಮೀ ಆರ್.
ನಿಧನ : 17-1-1994
ನೀವು ನಮ್ಮನ್ನಗಲಿ ಇಂದಿಗೆ ಮೂವತ್ತೊಂದು ವರ್ಷಗಳಾದವು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ
ಎ. ರವೀಂದ್ರನಾಥ್ ಮತ್ತು ಎ. ಆರ್. ಅಶ್ವಥ್
ಹಾಗೂ ಕುಟುಂಬವರ್ಗದವರು
ರಾಜ್‌ಹನ್ಸ್ ಎಂಟರ್‌ಪ್ರೈಸಸ್, ರಾಜ್‌ಹನ್ಸ್ ಪಬ್ಲಿಕೇಷನ್, ಪ್ರಿಯಾಂಕ ಮತ್ತು ಚಿತ್ರ ಪತ್ರಿಕೆಗಳು
ಬೆಂಗಳೂರು – 560 044.

ತೃತೀಯ ವರ್ಷದ ಪುಣ್ಯಸ್ಮರಣೆ

ನಿಧನ : 17-01-2022
ದೇವನಹಳ್ಳಿ
ಶ್ರೀ ಕೆ.ಹೆಚ್. ರಾಮಕೃಷ್ಣಪ್ಪ
ಶ್ರೀ ಮಾರುತಿ ಫಾರಂ
ಕೊಡಿಗೇಹಳ್ಳಿ, ಬೆಂಗಳೂರು-560092
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವೆಂದು ಪ್ರಾರ್ಥಿಸುವೆ.
ಇಂತಿ ದುಃಖತಪ್ತರು: ಶ್ರೀ ಕೆ.ಆರ್.ರಾಜು ಸಹೋದರರು ಮತ್ತು ಸಹೋದರಿಯರು ಹಾಗೂ ಕುಟುಂಬ ವರ್ಗದವರು

ಫೆಮಾ ನಿಯಮ ಸರಳಗೊಳಿಸಿದ ಭಾರತೀಯ ರಿಸರ್ವ್ ಬ್ಯಾಂಕ್

ರೂಪಾಯಿಯಲ್ಲಿ ವಹಿವಾಟಿಗೆ ಉತ್ತೇಜನ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಕುಸಿತದ ಹಾದಿ ಹಿಡಿದಿರುವ ರೂಪಾಯಿಗೆ ಬಲ ನೀಡುವ ನಿಟ್ಟಿನಲ್ಲಿ, ಜಾಗತಿಕ ವಹಿವಾಟಿನಲ್ಲಿ ರೂಪಾಯಿ ಬಳಕೆಗೆ ಉತ್ತೇಜನ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂದಾಗಿದೆ.

ಇದಕ್ಕೆ ಅನುಗುಣವಾಗಿ ಗುರುವಾರ ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆಯ (ಫೆಮಾ) ನಿಯಮಾವಳಿಗಳನ್ನು ಸರಳೀಕರಣಗೊಳಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ಭಾರತದ ರೂಪಾಯಿ ಹಾಗೂ ಆಯಾ ದೇಶಗಳ ಸ್ಥಳೀಯ ಕರೆನ್ಸಿ ಜೊತೆಗೆ ವಹಿವಾಟು ನಡೆಸಲು ಅನುವಾಗುವಂತೆ ಯುಎಇ, ಇಂಡೊನೇಷ್ಯಾ ಮತ್ತು ಮಾಲ್ದೀವ್ಸ್ ಜೊತೆ ಈಗಾಗಲೇ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ.

ರೂಪಾಯಿಯಲ್ಲಿ ವಹಿವಾಟು ನಡೆಸಲು ಅನುಕೂಲವಾಗುವಂತೆ 2022ರ ಜುಲೈನಲ್ಲಿ ಹಲವು ದೇಶಗಳ ಬ್ಯಾಂಕ್‌ಗಳಲ್ಲಿ ವಿಶೇಷ ಖಾತೆಗಳನ್ನು ಆರಂಭಿಸಲಾಗಿದೆ. ಇದರಿಂದ ಉಭಯ ದೇಶಗಳ ನಡುವಿನ ವಹಿವಾಟುಗಳಿಗೆ ರೂಪಾಯಿಯಲ್ಲಿಯೇ ಹಣ ಪಾವತಿಯು ಸಾಧ್ಯವಾಗಲಿದೆ.

ಭಾರತದ ರಫ್ತುದಾರರು ಮತ್ತು ಆಮದುದಾರರು ಯಾವುದೇ ವಿದೇಶಿ ಕರೆನ್ಸಿಯೊಟ್ಟಿಗೆ ವ್ಯಾಪಾರ ವಹಿವಾಟು ನಡೆಸಲು ವಿಶೇಷ ಖಾತೆ ತೆರೆಯಬಹುದಾಗಿದೆ. ಇದರಿಂದ ಆಮದು ಮತ್ತು ರಫ್ತು ವಹಿವಾಟುಗಳ ಪಾವತಿಯು ರೂಪಾಯಿಯಲ್ಲಿ ನಡೆಯಲು ನೆರವಾಗಲಿದೆ.

ರೂಪಾಯಿ ಮೌಲ್ಯ 21 ಪೈಸೆ ಇಳಿಕೆ

ಮುಂಬೈ (ಪಿಟಿಐ): ಕಳೆದ ಎರಡು ದಿನಗಳಲ್ಲಿ ಅಮೆರಿಕದ ಡಾಲರ್ ಎದುರು ಚೇತರಿಕೆ ಕಂಡಿದ್ದ ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿನಲ್ಲಿ 21 ಪೈಸೆ ಇಳಿಕೆ ಕಂಡಿದೆ.

ಪ್ರತೀ ಡಾಲರ್ ಮೌಲ್ಯ ₹86.61 ಆಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಬಲಗೊಂಡಿದೆ. ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗುತ್ತಿದೆ. ದೇಶೀಯ ಮಾರುಕಟ್ಟೆಯಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ವಾಪಸ್ ಪಡೆಯುವುದನ್ನು ಮುಂದುವರಿಸಿದ್ದಾರೆ. ಹಾಗಾಗಿ, ರೂಪಾಯಿ ಮತ್ತೆ ಒತ್ತಡಕ್ಕೆ ಸಿಲುಕಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಇನ್ಫೊಸಿಸ್‌ಗೆ ₹6,806 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಇನ್ಫೊಸಿಸ್ ಕಂಪನಿಯ ನಿವ್ವಳ ಲಾಭದಲ್ಲಿ ಶೇ 11.5ರಷ್ಟು ಏರಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹6,106 ಕೋಟಿ ಲಾಭ ಗಳಿಸಲಾಗಿತ್ತು. ಈ ಬಾರಿ ₹6,806 ಕೋಟಿ ಗಳಿಸಲಾಗಿದೆ ಎಂದು ಕಂಪನಿಯು ಗುರುವಾರ ಷೇರುಪೇಟೆಗೆ ತಿಳಿಸಿದೆ.

ವರಮಾನವು ಶೇ 7.5ರಷ್ಟು ಹೆಚ್ಚಳವಾಗಿ, ₹41,764 ಕೋಟಿ ಆಗಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹38,821 ಕೋಟಿ ಗಳಿಸಿತ್ತು. ವರಮಾನದಲ್ಲಿನ ಏರಿಕೆಯಿಂದ ಲಾಭದ ಪ್ರಮಾಣವು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಕಂಪನಿಯು ಹೊಸದಾಗಿ 5,591 ಉದ್ಯೋಗಿಗಳನ್ನು ನೇಮಕ ಮಾಡಿಕೊಂಡಿದೆ. ಒಟ್ಟು ಉದ್ಯೋಗಿಗಳ ಸಂಖ್ಯೆ 3.23 ಲಕ್ಷಕ್ಕೆ ಮುಟ್ಟಿದೆ.

ಸಂಕ್ಷಿಪ್ತ ಸುದ್ದಿ

ಬೆಳ್ಳಿ ಧಾರಣೆ ₹2,300 ಚಿನ್ನ ₹500 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆ ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2,300 ಹೆಚ್ಚಳವಾಗಿ, ₹94 ಸಾವಿರ ಆಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹500 ಹೆಚ್ಚಳವಾಗಿ ₹81,300ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ ₹80,900ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಆಭರಣ ತಯಾರಕರು ಮತ್ತು ಚಿಲ್ಲರೆ ವ್ಯಾಪಾರಿಗಳಿಂದ ಚಿನ್ನದ ಖರೀದಿ ಪ್ರಮಾಣ ಹೆಚ್ಚಳವಾಗಿದೆ. ಜೊತೆಗೆ ರೂಪಾಯಿ ಮೌಲ್ಯವು ಇಳಿಕೆಯಾಗಿದೆ. ಇದರಿಂದ ಹಳದಿ ಲೋಹದ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಿಲಯನ್ಸ್ ಲಾಭ ಶೇ 7.4ರಷ್ಟು ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ₹18,540 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಗಳಿಸಿದ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 7.4ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಒಟ್ಟು ವರಮಾನ ₹2.40 ಲಕ್ಷ ಕೋಟಿ ಆಗಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2.25 ಲಕ್ಷ ಕೋಟಿ ವರಮಾನಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 6.7ರಷ್ಟು ಏರಿಕೆಯಾಗಿದೆ.

ಮೂರನೇ ತ್ರೈಮಾಸಿಕದಲ್ಲಿ ರಿಲಯನ್ಸ್ ಜಿಯೊದ ನಿವ್ವಳ ಲಾಭದಲ್ಲಿ ಶೇ 26ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹6,861 ಕೋಟಿ ಗಳಿಸಿದೆ. ರಿಲಯನ್ಸ್ ರಿಟೇಲ್ ಲಾಭದಲ್ಲಿ ಶೇ 10ರಷ್ಟು ಏರಿಕೆಯಾಗಿದ್ದು, ₹3,458 ಕೋಟಿ ಗಳಿಸಿದೆ ಎಂದು ತಿಳಿಸಿದೆ.

ಕುಂಭಮೇಳದಿಂದ ಹೊರಟ ಸ್ಟೀವ್ ಜಾಬ್ಸ್ ಪತ್ನಿ

ಮಹಾಕುಂಭ ನಗರ (ಉತ್ತರ ಪ್ರದೇಶ, ಪಿಟಿಐ): ಆ್ಯಪಲ್ ಸಹ ಸಂಸ್ಥಾಪಕ ಹಾಗೂ ಮಾಜಿ ಸಿಇಒ ಸ್ಟೀವ್ ಜಾಬ್ಸ್ ಪತ್ನಿ ಕುಂಭಮೇಳದಲ್ಲಿ ಭಾಗಿಯಾಗಿದ್ದ ಲಾರೆನ್ ಪೊವೆಲ್ ಜಾಬ್ಸ್ ಅವರು ಅನಾರೋಗ್ಯದಿಂದಾಗಿ ಪ್ರಯಾಗ್‌ರಾಜ್ ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದಾರೆ..

ವಿಶೇಷ ವಿಮಾನದ ಮೂಲಕ ಅವರು ಭೂತಾನ್‌ಗೆ ಬುಧವಾರ ತೆರಳಿದ್ದು, ಅಲ್ಲಿ ಕೆಲ ದಿನ ತಂಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೊರಡುವ ಮುನ್ನ ಪೊವೆಲ್ ಅವರಿಗೆ 'ಮಂತ್ರ ದೀಕ್ಷೆ' ನೀಡಲಾಯಿತು. ಕಾಳಿ ದೇವಿಯ ಮಂತ್ರ ದೀಕ್ಷೆಯನ್ನು ಅವರಿಗೆ ನೀಡಲಾಗಿದ್ದು, ಆ ಮಂತ್ರವನ್ನು ಅವರು ಜಪಿಸಲಿದ್ದಾರೆ ಎಂದು ಹಿರಿಯ ಸಂತರೊಬ್ಬರು ತಿಳಿಸಿದರು.

ಜ.13ರಂದು ಪ್ರಯಾಗ್‌ರಾಜ್‌ಗೆ ಆಗಮಿಸಿದ್ದ ಪೊವೆಲ್ ಜಾಬ್ಸ್ ಅವರು 29ರವರೆಗೆ ಮಹಾಕುಂಭ ಮೇಳದಲ್ಲಿ ಭಾಗಿಯಾಗಲು ನಿರ್ಧರಿಸಿದ್ದ ಪೊವೆಲ್ ತಮ್ಮ ಗುರು ಮಹಾಮಂಡಳೇಶ್ವರ ಸ್ವಾಮಿ ಕೈಲಾಶಾನಂದ ಗಿರಿ ನಿರಂಜನಿ ಅಖಾಡ ಅವರ ಶಿಬಿರದಲ್ಲಿ ತಂಗಿದ್ದರು. ಮಂಗಳವಾರ 'ಅಮೃತ ಸ್ನಾನ' ಮಾಡಿದ ಬಳಿಕ ಪೊವೆಲ್ ಅವರಿಗೆ ಅಲರ್ಜಿಯಾಗಿದ್ದು, ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎನ್ನಲಾಗಿತ್ತು.

ತಮ್ಮ ಗುರುಗಳಾದ ಸ್ವಾಮಿ ಕೈಲಾಶನಂದ ಗಿರಿ ಅವರ ಶಿಬಿರದಲ್ಲಿ ಲಾರೆನ್ ಪೊವೆಲ್ ಜಾಬ್ಸ್ ತಂಗಿದ್ದರು – ಪಿಟಿಐ ಚಿತ್ರ

ವಾರಾಣಸಿಗೆ ತೆರಳಿದ್ದ ಪೊವೆಲ್ ಜಾಬ್ಸ್ ಪ್ರಸಿದ್ಧ ಕಾಶಿ ವಿಶ್ವನಾಥ ದೇವಸ್ಥಾನಕ್ಕೆತೆರಳಿದರ್ಶನಪಡೆದಿದ್ದರು.

ಆರ್‌ಎಸ್‌ಎಸ್‌ನಿಂದ ಪ್ಲಾಸ್ಟಿಕ್ ಮುಕ್ತ ಅಭಿಯಾನ: ಮಹಾಕುಂಭ ಮೇಳವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು 'ಒಂದು ತಟ್ಟೆ, ಒಂದು ಚೀಲ' ಎಂಬ ಅಭಿ ಯಾನವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಆರಂಭಿಸಿದೆ.

ನ್ಯಾ. ಶೇಖರ್ ಭಾಷಣ: ವಿಶ್ವ ಹಿಂದೂ ಪರಿಷತ್‌ನ ಕಾರ್ಯಕ್ರಮವೊಂದರಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದ ಅಲಹಾಬಾದ್ ಹೈಕೋರ್ಟ್ ನ್ಯಾ. ಶೇಖರ್ ಯಾದವ್ ಅವರು ಮಹಾಕುಂಭ ನಗರ ಪ್ರದೇಶದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಷಣ ಮಾಡಲಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Tumkur

3ACRES AGRICULTURE Land for Sale in Prime Spot near Gubbi, Very fertile Soil with Borewell &120 coconut trees. Call: 9902030976.

Sites

Peenya

4800SQFT. PLOT For Sale in Nelagadaranahalli (N.G.Halli), Prime Spot near NTTF Suitable for Residential/ Commercial Purposes. Contact: 9902030976.

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ, ಬ್ರಿಟಾನಿಯಾ, TVSಕಂಪನಿಗಳಿಗೆ SSLC, PUC, Degree, Diploma, ITIನವರು 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036791033

Teachers/ Professors

ಬೇಕಾಗಿದ್ದಾರೆ

ಗ್ರಾಮೋತ್ಥಾನ ಫೌಂಡೇಶನ್ ಬೆಂಗಳೂರು
ಕಾರ್ಯಾಲಯ ಮಚ್ಚೂರು
ಹೆಚ್.ಡಿ. ಕೋಟೆ ತಾಲ್ಲೂಕಿನ ಡಿ. ಬಿ. ಕುಪ್ಪೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಲು ನುರಿತ ಶಿಕ್ಷಕರು ಬೇಕಾಗಿದ್ದಾರೆ.
ಅರ್ಹತೆಗಳು:
- B,A, B.Ed
- B.Sc, B.Ed
- B.A, D.Ed
- ಗಣಿತ ಮತ್ತು ಇಂಗ್ಲೀಷ್ ವಿಷಯದ ಬೋಧನೆಯಲ್ಲಿ ಅನುಭವ ಇರುವವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.
- 1ರಿಂದ 8ನೇ ತರಗತಿಯ ಮಕ್ಕಳಿಗೆ ಬೋಧನೆ ಮಾಡುವ ಕೌಶಲ್ಯ ಇರಬೇಕು.
ಸೌಲಭ್ಯಗಳು:
- ಉಚಿತ ವಸತಿ ಸೌಲಭ್ಯ
- ಆಕರ್ಷಕ ವೇತನ ಶ್ರೇಣಿ ಇರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಗ್ರಾಮೋತ್ಥಾನ ಫೌಂಡೇಶನ್ ಮಚ್ಚೂರು
ಮೊಬೈಲ್: 82174 87343
89715 88334

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಪ್ರವಾಸ

Travel Agencies

ಕಮಾಕ್ಯ ಶಕ್ತಿಪೀಠ ಪ್ರವಾಸ 8 ದಿನಗಳು 11/2/25, ಮಧ್ಯಪ್ರದೇಶ 4 ದಿನಗಳು 6/2/25, ಗುಜರಾತ್ 8 ದಿನಗಳು 12/2/25 ಸುವರ್ಣಯಾತ್ರ 9019462508/ 6360146483

Travel

ಭಾರತಪರಂಪರ ದರ್ಶನ: 10.2.25 7ದಿನ ನವಗ್ರಹಸಹಿತ ರಾಮೇಶ್ವರಂ. 8.3.25 7ದಿನ ಕಾಶಿ,ಅಯೋಧ್ಯ,ಗಯಾ. 17.3.25 11ದಿನ ಮುಕ್ತಿನಾಥ್`ಸಹಿತ ಕಾಶಿ,ಅಯೋಧ್ಯ. ಪ್ರಕಾಶ್`ಹೆಬ್ಬಾರ್ 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS

www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ಗಾಜಾ ಪಟ್ಟಿಯಾದ್ಯಂತ ಮುಂದುವರಿದ ವೈಮಾನಿಕ ದಾಳಿ: ಹಲವು ಮಂದಿ ಸಾವು

ಗಾಜಾ ಕದನ ವಿರಾಮಕ್ಕೆ ಇಸ್ರೇಲ್ ನಕಾರ

ಟೆಲ್ ಅವಿವ್ (ಎಪಿ): ಇಸ್ರೇಲ್‌ನ ಮಿತ್ರರಾಷ್ಟ್ರ ಅಮೆರಿಕ ಮತ್ತು ಯುದ್ಧ ಕೊನೆಗಾಣಿಸಲು ಮಧ್ಯಸ್ಥಿಕೆ ವಹಿಸಿದ್ದ ಕತಾರ್ 'ಗಾಜಾ ಕದನ ವಿರಾಮ ಒಪ್ಪಂದ' ಘೋಷಿಸಿದ ಬೆನ್ನಲ್ಲೇ ಇಸ್ರೇಲ್ ಗಾಜಾ ಪಟ್ಟಿ ಮೇಲೆ ವೈಮಾನಿಕ ದಾಳಿ ನಡೆಸಿದೆ. ಆ ಮೂಲಕ ಒಪ್ಪಂದಕ್ಕೆ ತಾನು ಇನ್ನೂ ಸಂಪೂರ್ಣ ಒಪ್ಪಿಗೆ ಸೂಚಿಸಿಲ್ಲ ಎನ್ನುವ ಸಂದೇಶವನ್ನು ರವಾನಿಸಿದೆ.

ಯುದ್ಧದಿಂದ ಧ್ವಂಸಗೊಂಡಿರುವ ಗಾಜಾ ಪ್ರದೇಶದಾದ್ಯಂತ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಗಳಲ್ಲಿ ಹಲವು ನಾಗರಿಕರು ಹತರಾಗಿದ್ದಾರೆ.

'ಗಾಜಾಪಟ್ಟಿಯಲ್ಲಿ ಬಹಳ ದಿನಗಳಿಂದ ಎದುರು ನೋಡುತ್ತಿದ್ದ ಕದನ ವಿರಾಮ ಘೋಷಣೆ ಮತ್ತು ಒತ್ತೆಯಾಳುಗಳ ಬಿಡುಗಡೆ ಒಪ್ಪಂದವನ್ನು, ಹಮಾಸ್ ಸೃಷ್ಟಿಸಿದ ಕೊನೆ ಕ್ಷಣದ ಬಿಕ್ಕಟ್ಟಿನಿಂದ ತಡೆಹಿಡಿಯಲಾಗಿದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಗುರುವಾರ ಹೇಳಿದ್ದಾರೆ. ಆದರೆ, ಅವರು ಕೊನೆ ಕ್ಷಣದ ಬಿಕ್ಕಟ್ಟು ಏನೆಂಬುದನ್ನು ವಿವರಿಸಿಲ್ಲ.

'ಹಮಾಸ್ ಹೋರಾಟದಿಂದ ಹಿಂದೆ ಸರಿಯುವವರೆಗೆ ಒಪ್ಪಂದವನ್ನು ಅನುಮೋದಿಸಲು ತಮ್ಮ ಸಂಪುಟವು ಸಭೆ ಸೇರುವುದಿಲ್ಲ' ಎಂದು ನೆತನ್ಯಾಹು ಅವರ ಕಚೇರಿ ಹೇಳಿದೆ. ಅಲ್ಲದೆ, ಮತ್ತಷ್ಟು ರಿಯಾಯಿತಿಗಳನ್ನು ಪಡೆಯುವ ಪ್ರಯತ್ನದಲ್ಲಿ ಹಮಾಸ್ ಒಪ್ಪಂದದ ಭಾಗಗಳನ್ನು ಹಿಂತೆಗೆದುಕೊಳ್ಳುತ್ತಿದೆ ಎಂದು ಅದು ಆರೋಪಿಸಿದೆ.

'ಗಾಜಾ ಕದನ ವಿರಾಮ ಒಪ್ಪಂದಕ್ಕೆ ಬಂಡುಕೋರರ ಗುಂಪು ಹಮಾಸ್ ಬದ್ಧವಾಗಿದೆ' ಎಂದು ಹಮಾಸ್ ಹಿರಿಯ ಅಧಿಕಾರಿ ಇಜ್ಜತ್ ಅಲ್-ರಶ್ಕ್ ಹೇಳಿದ್ದಾರೆ.

ಭಾರತ, ಅಮೆರಿಕ, ರಷ್ಯಾ ಚೀನಾ, ಸೇರಿದಂತೆ ಹಲವು ರಾಷ್ಟ್ರಗಲು 'ಗಾಜಾ ಕದನ ವಿರಾಮ ಒಪ್ಪಂದ'ವನ್ನು ಸ್ವಾಗತಿಸಿವೆ. ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟರೆಸ್ ಕೂಡ ಒಪ್ಪಂದವನ್ನು ಸ್ವಾಗತಿಸಿದ್ದಾರೆ.

ಶ್ವೇತಭವನವು ಟ್ರಂಪ್ ಅವರ ಮುಂಬರುವ ಆಡಳಿತದ ಪಶ್ಚಿಮ ಏಷ್ಯಾ ರಾಯಭಾರಿಯನ್ನು ಮಾತುಕತೆಗೆ ಕಳುಹಿತ್ತು. ಆನಂತರ ಬುಧವಾರ ಗಾಜಾದಲ್ಲಿ ಕದನ ವಿರಾಮ ಒಪ್ಪಂದಕ್ಕೆ ಇಸ್ರೇಲ್ ಮತ್ತು ಹಮಾಸ್ ಸಮ್ಮತಿಸಿದವು ಎಂದು ಅಧ್ಯಕ್ಷ ಜೋ ಬೈಡನ್ ಮತ್ತು ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ.

ಜೋ ಬೈಡನ್ ಮತ್ತು ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರಹ್ಮಾನ್ ಅಲ್ ಥಾನಿ ಅವರು ಬುಧವಾರ ಗಾಜಾ ಕದನ ವಿರಾಮ ಒಪ್ಪಂದವನ್ನು ಘೋಷಿಸಿದ್ದರು. ಈ ಒಪ್ಪಂದವು ಭಾನುವಾರದಿಂದ ಜಾರಿಗೆ ಬರಲಿದ್ದು, ಗಾಜಾದಲ್ಲಿ ಒತ್ತೆಯಾಳುಗಳ ಬಿಡುಗಡೆಯ ಗುರಿ ಹೊಂದಿದೆ. ಪಶ್ಚಿಮ ಏಷ್ಯಾವನ್ನು ಅಸ್ಥಿರಗೊಳಿಸಿದ ಮತ್ತು ವಿಶ್ವದಾದ್ಯಂತ ಪ್ರತಿಭಟನೆಗೆ ಕಾರಣವಾದ 15 ತಿಂಗಳ ಯುದ್ಧ ಅಂತ್ಯಗೊಳಿಸಲಿದೆ ಎಂದು ಪ್ರಕಟಿಸಿದ್ದರು.

ಬುಧವಾರ ತಡರಾತ್ರಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, 'ಹಮಾಸ್ ಜೊತೆಗಿನ ಕದನ ವಿರಾಮ ಒಪ್ಪಂದ ಇನ್ನೂ ಪೂರ್ಣಗೊಂಡಿಲ್ಲ ಮತ್ತು ಅಂತಿಮ ವಿವರಗಳನ್ನು ಸಿದ್ಧಪಡಿಸಲಾಗುತ್ತಿದೆ' ಎಂದು ಹೇಳಿದ್ದರು.

ಒತ್ತೆಯಾಳುಗಳ ಬಿಡುಗಡೆಗಾಗಿ ನೆತನ್ಯಾಹು ಅವರ ಮೇಲೆ ಇಸ್ರೇಲ್‌ನಲ್ಲಿ ಭಾರಿ ಒತ್ತಡ ಹೆಚ್ಚುತ್ತಿದೆ. ಆದರೆ, ಇದರ ನಡುವೆ ಅವರ ಸರ್ಕಾರದ ಬಲಪಂಥೀಯ ಮಿತ್ರಪಕ್ಷಗಳು, ಹಮಾಸ್‌ಗೆ ಹೆಚ್ಚಿನ ವಿನಾಯಿತಿ ನೀಡಿದರೆ ಸರ್ಕಾರ ಉರುಳಿಸುವ ಬೆದರಿಕೆ ಹಾಕಿವೆ.

ಬುಧವಾರ ಘೋಷಣೆಯಾದ ಒಪ್ಪಂದದ ಪ್ರಕಾರ, ಹಮಾಸ್ ಒತ್ತೆ ಇರಿಸಿಕೊಂಡಿರುವ 33 ಮಂದಿಯ ಬಿಡುಗಡೆಗೆ, ಇಸ್ರೇಲ್‌ನ ಬಂಧನದಲ್ಲಿರುವ ನೂರಾರು ಪ್ಯಾಲೆಸ್ಟೀನಿಯರನ್ನು ಮುಂದಿನ ಆರು ವಾರಗಳಲ್ಲಿ ಬಿಡುಗಡೆ ಮಾಡಬೇಕಿದೆ.

ನೆಮ್ಮದಿ ಕಸಿದುಕೊಂಡ ವಾಯುದಾಳಿ

ಕದನ ವಿರಾಮ ಒಪ್ಪಂದದ ಸುದ್ದಿ ಹೊರಬೀಳುತ್ತಿದ್ದಂತೆ ಸಂತೋಷದಲ್ಲಿ ಮುಳುಗಿದ್ದ ಗಾಜಾ ಪಟ್ಟಿಯ ಜನರು ಬುಧವಾರ ರಾತ್ರಿ ನೆಮ್ಮದಿಯ ನಿದ್ರೆ ಮಾಡಿದ್ದರು. ಆದರೆ, ಗುರುವಾರ ಬೆಳಿಗ್ಗೆ ಅವರು ಎದ್ದೇಳುವ ಹೊತ್ತಿಗೆ, ಇಸ್ರೇಲ್ ಸೇನೆ ರಾತ್ರಿಯಿಂದ ನಸುಕಿನವರೆಗೆ ನಡೆಸಿದ ವಾಯುದಾಳಿಯಲ್ಲಿ ಹಲವು ಮಹಿಳೆಯರು ಮತ್ತು ಮಕ್ಕಳು ಮೃತಪಟ್ಟ ಸುದ್ದಿ ಮತ್ತೆ ಅವರನ್ನು ದುಃಖದ ಮಡುವಿಗೆ ದೂಡಿತು.

ವಾಯುದಾಳಿಯಿಂದ ಸುತ್ತಲೂ ಆವರಿಸಿರುವ ದಟ್ಟ ಹೊಗೆ, ಛಿದ್ರಗೊಂಡ ಕಟ್ಟಡಗಳ ಅವಶೇಷಗಳಡಿ ಬದುಕುಳಿದವರಿಗಾಗಿ ನಡೆಯುತ್ತಿದ್ದ ಹುಡುಕಾಟ, ಆಸ್ಪತ್ರೆಗಳ ಎದುರು ಮೃತರ ಸಂಬಂಧಿಕರ ಆಕ್ರಂದನದ ದೃಶ್ಯಗಳು ಗಾಜಾದ ಜನರ ನೆಮ್ಮದಿ ಕಸಿದಿವೆ.

ಇಸ್ರೇಲ್ ಸೇನಾ ದಾಳಿಗೆ 48 ಜನರು ಹತರಾಗಿದ್ದಾರೆ. ಮೃತರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು ಇದ್ದಾರೆ ಎಂದು ಗಾಜಾ ಪ್ರದೇಶದ ಆರೋಗ್ಯ ಸಚಿವಾಲಯ ಹೇಳಿದೆ.

'ಬುಧವಾರ ಕದನ ವಿರಾಮ ಘೋಷಣೆಯಾದ ನಂತರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ 73 ಜನರು ಮೃತಪಟ್ಟಿದ್ದಾರೆ. ಇವರಲ್ಲಿ 20 ಮಕ್ಕಳು ಮತ್ತು 25 ಮಹಿಳೆಯರು ಇದ್ದಾರೆ. 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ' ಎಂದು ಗಾಜಾದ ಸಿವಿಲ್ ಡಿಫೆನ್ಸ್ ಏಜೆನ್ಸಿಯ ವಕ್ತಾರ ಮಹ್ಮದ್ ಬಸ್ಸಾಲ್ ಗುರುವಾರ ಹೇಳಿದ್ದಾರೆ.

ಕದನ ವಿರಾಮ ಘೋಷಣೆ ಹೊರಬೀಳುವುದಕ್ಕೂ ಮುನ್ನ ಕೊನೆ ಕ್ಷಣಗಳಲ್ಲಿ ಎರಡೂ ಕಡೆಯವರು ಬಲ ಪ್ರದರ್ಶನದ ರೀತಿಯಲ್ಲಿ ತೀವ್ರ ಘರ್ಷಣೆ ನಡೆಸಿದ್ದಾರೆ ಎಂದು ಹೇಳಲಾಗಿದೆ.

ಒಪ್ಪಂದ ಸ್ವಾಗತಾರ್ಹ. ಪ್ಯಾಲೆಸ್ಟೀನಿಯನ್ನರು, ಇಸ್ರೇಲಿಗಳು ಮತ್ತು ಈ ವಿಶಾಲ ಪ್ರದೇಶದ ಭವಿಷ್ಯಕ್ಕೆ ಈ ಒಪ್ಪಂದವು ನಿರ್ಣಾಯಕವಾದ ಮೊದಲ ಹೆಜ್ಜೆ

ಆಂಟೊನಿಯೊ ಗುಟರೆಸ್, ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ

ಮೂರು ಹಂತಗಳ ಕದನ ವಿರಾಮ ಮತ್ತು ಒತ್ತೆಯಾಳುಗಳ ಬಿಡುಗಡೆ ಒಪ್ಪಂದವನ್ನು ನಾವು ಸ್ವಾಗತಿಸುತ್ತೇವೆ. ಇದರಿಂದ ಗಾಜಾದ ಜನರಿಗೆ ಮಾನವೀಯ ನೆರವು ಪೂರೈಕೆ ಸಾಧ್ಯವಾಗಲಿದೆ

ಭಾರತದ ವಿದೇಶಾಂಗ ಸಚಿವಾಲಯ

ಈ ಐತಿಹಾಸಿಕ ಕದನ ವಿರಾಮ ಒಪ್ಪಂದವು ನವೆಂಬರ್‌ನಲ್ಲಿ ನಮ್ಮ ಐತಿಹಾಸಿಕ ವಿಜಯದ ಪರಿಣಾಮವಾಗಿ ಮಾತ್ರ ಸಂಭವಿಸಿದೆ

ಡೊನಾಲ್ಡ್ ಟ್ರಂಪ್, ಅಮೆರಿಕದ ಚುನಾಯಿತ ಅಧ್ಯಕ್ಷ

ಟಿಬೆಟ್‌ನ 5 ಜಲಾಶಯಗಳಲ್ಲಿ ಸಮಸ್ಯೆ: ಚೀನಾ

ಬೀಜಿಂಗ್(ರಾಯಿಟರ್ಸ್): ಕಳೆದ ವಾರ ಸಂಭವಿಸಿದ ಭೂಕಂಪನದ ಪರಿಣಾಮ, ಟಿಬೆಟ್‌ನಲ್ಲಿನ ಐದು ಜಲಾಶಯಗಳಲ್ಲಿ ತೊಂದರೆಗಳಿರುವುದನ್ನು ಪತ್ತೆ ಮಾಡಲಾಗಿದೆ ಎಂದು ಚೀನಾ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ದೇಶದ ನೈರುತ್ಯ ಭಾಗದಲ್ಲಿ ಕಳೆದ ವಾರ 6.8 ತೀವ್ರತೆಯ ಭೂಕಂಪನವಾಗಿತ್ತು. ಹೀಗಾಗಿ, ಈ ಭಾಗದಲ್ಲಿರುವ 14 ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದ ಅಣೆಕಟ್ಟುಗಳ ಪರಿಶೀಲನೆ ನಡೆಸಲಾಗಿತ್ತು. ಈ ಪೈಕಿ 5 ಜಲಾಶಯಗಳಲ್ಲಿ ತೊಂದರೆಗಳು ಕಾಣಿಸಿಕೊಂಡಿರುವುದು ಪತ್ತೆಯಾಗಿದೆ ಎಂದು ಟಿಬೆಟ್‌ನ ತುರ್ತು ನಿರ್ವಹಣೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಐದು ಜಲಾಶಯಗಳ ಪೈಕಿ, ಮೂರು ಜಲಾಶಯಗಳನ್ನು ಖಾಲಿ ಮಾಡಲಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಭೂಕಂಪನ ಕೇಂದ್ರ ದಾಖಲಾಗಿದ್ದ ಟಿಂಗ್ರಿ ಕೌಂಟಿಯಲ್ಲಿರುವ ಜಲಾಶಯವೊಂದರ ಗೋಡೆ ವಾಲಿರುವುದರಿಂದ, ತಗ್ಗು ಪ್ರದೇಶಗಳಲ್ಲಿರುವ ಆರು ಗ್ರಾಮಗಳ ಅಂದಾಜು 1,500 ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಜ. 21ರಂದು ದೆಹಲಿಗೆ ರೈತರ ಪಾದಯಾತ್ರೆ

ಚಂಡೀಗಢ (ಪಿಟಿಐ): ಕನಿಷ್ಠ ಬೆಂಬಲ ಬೆಲೆಗೆ ಕಾಯ್ದೆಯ ಖಾತರಿ ನೀಡಬೇಕು ಎಂಬುದೂ ಸೇರಿ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು 101 ರೈತರು ಜನವರಿ 21ರಂದು ಶಂಭು ಗಡಿಯಿಂದ ದೆಹಲಿಗೆ ಪಾದಯಾತ್ರೆ ಆರಂಭಿಸಲಿದ್ದಾರೆ ಎಂದು ರೈತ ನಾಯಕ ಸರವಣ ಸಿಂಗ್ ಪಂಢೇರ್ ಗುರುವಾರ ತಿಳಿಸಿದರು.

ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಗಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕಿಸಾನ್ ಮಜ್ದೂರ್ ಮೋರ್ಚಾದ (ಕೆಎಂಎಂ) ನಾಯಕ ಪಂಢೇರ್, 'ಕಳೆದ 11 ತಿಂಗಳಿಂದ ಶಂಭು ಮತ್ತು ಖನೌರಿಯಲ್ಲಿ ವಾಸ್ತವ್ಯ ಹೂಡಿರುವ ರೈತರ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಈಡೇರಿಸಿಲ್ಲ' ಎಂದರು.

'ಸರ್ಕಾರದ ಪ್ರತಿಕ್ರಿಯೆಗಾಗಿ ನಾವು ಕಾದಿದ್ದೇವೆ. ಆದರೆ, ಸರ್ಕಾರ ಯಾವುದೇ ಮಾತುಕತೆಗೂ ಸಿದ್ಧವಿಲ್ಲ. ಈ ಕಾರಣ ಪ್ರತಿಭಟನೆಯನ್ನು ತೀವ್ರಗೊಳಿಸಲು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) (ರಾಜಕೀಯೇತರ) ಮತ್ತು ಕೆಎಂಎಂ ನಿರ್ಧರಿಸಿವೆ ಎಂದು ಪಂಢೇರ್ ಹೇಳಿದರು.

ಇಸ್ರೊಗೆ ಬಾಹ್ಯಾಕಾಶ 'ಡಾಕಿಂಗ್' ಕರಗತ

ಅಲ್ಪ ಗುರುತ್ವ ಪ್ರದೇಶದಲ್ಲಿ ಎರಡು ಉಪಗ್ರಹಗಳನ್ನು ಪರಸ್ಪರ ಜೋಡಿಸುವ 'ಡಾಕಿಂಗ್' ಕಾರ್ಯಾಚರಣೆಯು ಅತ್ಯಂತ ಸವಾಲಿನದ್ದಾಗಿತ್ತು. ನಿಗದಿತ ವೇಗ ಮತ್ತು ಕಕ್ಷೆಯಲ್ಲಿ ಉಪಗ್ರಹಗಳ ಸ್ಥಾನದಲ್ಲಿ ಸ್ವಲ್ಪವೇ ಬದಲಾಗಿದ್ದರೂ ಎರಡೂ ಉಪಗ್ರಹಗಳು ಪರಸ್ಪರ ಅಪ್ಪಳಿಸಿ, ಸ್ಫೋಟಿಸುವ ಅಪಾಯವಿತ್ತು. ಹೀಗಿದ್ದೂ ಕಾರ್ಯಾಚರಣೆಯಲ್ಲಿನ ಕೊರತೆಗಳನ್ನು ತುಂಬಿಕೊಂಡು ಕಾರ್ಯಾಚರಣೆಯನ್ನು ಇಸ್ರೊ ಯಶಸ್ವಿಗೊಳಿಸಿದೆ. ಡಾಕಿಂಗ್ ವ್ಯವಸ್ಥೆ, ಉಪಗ್ರಹಗಳನ್ನು ನಿಗದಿತ ಸ್ಥಳಕ್ಕೆ ಸೇರಿಸುವ ವ್ಯವಸ್ಥೆ, ಉಪಗ್ರಹಗಳನ್ನು ಬೇರ್ಪಡಿಸುವ (ಅನ್ ಡಾಕಿಂಗ್) ವ್ಯವಸ್ಥೆ ಸೇರಿದಂತೆ ಈ ಯೋಜನೆಯ ಎಲ್ಲ ಹಂತಗಳಲ್ಲಿಯೂ ದೇಶೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನೇ ಬಳಸಿಕೊಳ್ಳಲಾಗಿದೆ

ಜ.6: ಜೋಡಣೆ ಪ್ರಕಿಯೆಯಲ್ಲಿ ತಾಂತ್ರಿಕ ದೋಷ ಕಂಡುಬಂದಿತ್ತು. ಈ ಪ್ರಕ್ರಿಯೆಯನ್ನು ಭೂಮಿಯಿಂದ ನಿಯಂತ್ರಿಸಬೇಕಿರುವುದರಿಂದ ಜ.7ರಂದು ನಡೆಯಬೇಕಿದ್ದ ಜೋಡಣೆ ಪ್ರಕ್ರಿಯೆಯನ್ನು ಜ.9ಕ್ಕೆ ಮುಂದೂಡಲಾಯಿತು

ಜ.8: ಚೇಸರ್ ಉಪಗ್ರಹವು ಟಾರ್ಗೆಟ್ ಉಪಗ್ರಹದಿಂದ 500 ಮೀ. ದೂರದಲ್ಲಿತ್ತು. ಈ ಅಂತರವು ಕಡಿಮೆಯಾಗಿ 225 ಮೀ. ನಷ್ಟಾಗಲು ಚೇಸರ್ ಉಪಗ್ರಹವು ಟಾರ್ಗೆಟ್ ಉಪಗ್ರಹದ ಬಳಿ ಸಾಗಿತು. 225 ಮೀ. ಅಂತರಕ್ಕೆ ತಲುಪುತ್ತಿದ್ದಂತೆಯೇ ಚೇಸರ್ ಉಪಗ್ರಹದ ವೇಗ ನಿಗದಿಗಿಂತ ಹೆಚ್ಚಾಯಿತು. ಹೀಗಾಗಿ ಕಾರ್ಯಾಚರಣೆ ಮುಂದೂಡಲಾಯಿತು

ಜ.9: ಚೇಸರ್ ಉಪಗ್ರಹದ ವೇಗವನ್ನು ತಗ್ಗಿಸಲಾಯಿತು. ಎರಡೂ ಉಪಗ್ರಹಗಳು ಸುಲಲಿತವಾಗಿ ಹತ್ತಿರಕ್ಕೆ ಬರುವಂತೆ ಮಾಡಲಾಯಿತು



3ನೇ ಉಡ್ಡಯನ ವೇದಿಕೆಗೆ ಅಸ್ತು

ಶ್ರೀಹರಿಕೋಟಾದಲ್ಲಿರುವ ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಮೂರನೇ ಉಡಾವಣಾ ವೇದಿಕೆ (ಟಿಎಲ್‌ಪಿ) ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

₹4,000 ಕೋಟಿ ಯೋಜನಾ ವೆಚ್ಚ

ಮಾಹಿತಿ: ಇಸ್ರೊದ 'ಎಕ್ಸ್' ಪೋಸ್ಟ್‌ಗಳು

ಛತ್ತೀಸಗಢ: 12 ನಕ್ಸಲರ ಹತ್ಯೆ

ಬಿಜಾಪುರ(ಛತ್ತೀಸಗಢ)(ಪಿಟಿಐ): ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಭೀಕರ ಗುಂಡಿನ ಕಾಳಗದಲ್ಲಿ 12 ನಕ್ಸಲರು ಹತರಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಇದರೊಂದಿಗೆ ಈ ತಿಂಗಳು ಹತ್ಯೆ ಮಾಡಲಾದ ನಕ್ಸಲರ ಸಂಖ್ಯೆ 26ಕ್ಕೆ ಏರಿದಂತಾಗಿದೆ.

ಜಿಲ್ಲೆಯ ದಕ್ಷಿಣದಲ್ಲಿರುವ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ನಕ್ಸಲ್ ನಿಗ್ರಹ ಕಾರ್ಯಾಚರಣೆ ಆರಂಭಿಸಿದವು. ಬೆಳಿಗ್ಗೆ 9ರ ವೇಳೆಗೆ ಶುರುವಾದ ಗುಂಡಿನ ಚಕಮಕಿ ಸಂಜೆವರೆಗೂ ನಡೆಯಿತು ಎಂದು ಅಧಿಕಾರಿ ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ, ಭದ್ರತಾ ಪಡೆಗಳ ಸಿಬ್ಬಂದಿಗೆ ಯಾವುದೇ ತೊಂದರೆಯಾಗಿಲ್ಲ ಎಂದೂ ಹೇಳಿದ್ದಾರೆ.

ರಾಜ್ಯ ಪೊಲೀಸ್‌ನ ಜಿಲ್ಲಾ ಮೀಸಲು ಪಡೆಯ(ಡಿಆರ್‌ಜಿ) ಮೂರು ಜಿಲ್ಲೆಗಳ ಸಿಬ್ಬಂದಿ, ಸಿಆರ್‌ಪಿಎಫ್‌ನ 'ಕೋಬ್ರಾ' ಘಟಕದ 5 ಬೆಟಾಲಿಯನ್ ಹಾಗೂ ಸಿಆರ್‌ಪಿಎಫ್‌ನ 229ನೇ ಬೆಟಾಲಿಯನ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಜ.12ರಂದು ಜಿಲ್ಲೆಯ ಮಧೇಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ, ಇಬ್ಬರು ಮಹಿಳೆಯರು ಸೇರಿದಂತೆ ಐವರು ನಕ್ಸಲರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿದ್ದವು.

ಮಣಿಪುರ: 6 ಮಂದಿ ಬಂಧನ

ಗುವಾಹಟಿ: ವ್ಯಕ್ತಿಯೊಬ್ಬರನ್ನು ಅಪಹರಿಸಿ ಕೊಲೆಗೈದ ಪ್ರಕರಣದಲ್ಲಿ ಪೊಲೀಸರು ಗುರುವಾರ ಮೈತೇಯಿಗಳ ಬಂಡುಕೋರ ಸಂಘಟನೆ ಅರಂಬಾಯ್ ಟೆಂಗೋಲ್‌ನ ಆರು ಸದಸ್ಯರನ್ನು ಬಂಧಿಸಿದ್ದಾರೆ.

'ಕೈರಾಂಗ್ ಮಯಾಯಿ ಲೆಕಾಯ್ ಪ್ರದೇಶದಿಂದ 33 ವರ್ಷದ ವ್ಯಕ್ತಿಯನ್ನು ಶಂಕಿತ ಬಂಡುಕೋರರು ಮಂಗಳವಾರ ಅಪಹರಿಸಿದ್ದರು. ಬಳಿಕ ಅವರ ಮೇಲೆ ಹಲ್ಲೆ ನಡೆದಿತ್ತು. ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ರೇಷನ್ ಕಿಟ್, ವಿದ್ಯುತ್ ಉಚಿತ, ₹500ಕ್ಕೆ ಎಲ್‌ಪಿಜಿ ಸಿಲಿಂಡರ್'

ನವದೆಹಲಿ (ಪಿಟಿಐ): 'ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆದ್ದು ಅಧಿಕಾರಕ್ಕೆ ಬಂದರೆ, ರಾಜ್ಯದ ಮತದಾರರಿಗೆ ₹500ಕ್ಕೆ ಎಲ್‌ಪಿಜಿ ಸಿಲಿಂಡರ್, ಉಚಿತ ಪಡಿತರ ಕಿಟ್, 300 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುವುದು' ಎಂದು ಘೋಷಿಸಿದೆ.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಈ ಘೋಷಣೆ ಮಾಡಿದರು. ಎಐಸಿಸಿ ದೆಹಲಿ ಉಸ್ತುವಾರಿ ಖಾಝಿ ನಿಜಾಮುದ್ದೀನ್, ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ ದೇವೇಂದರ್ ಯಾದವ್ ಈ ವೇಳೆ ಇದ್ದರು.

'ದೆಹಲಿಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದರೆ, ಕಾಂಗ್ರೆಸ್ ಪಕ್ಷವು ಐದು ಗ್ಯಾರಂಟಿಗಳನ್ನು ಈಡೇರಿಸಲಿದೆ' ಎಂದರು.

70 ಸದಸ್ಯಬಲದ ದೆಹಲಿ ವಿಧಾನಸಭೆಗೆ ಫೆಬ್ರುವರಿ 5ರಂದು ಮತದಾನ ನಡೆಯಲಿದ್ದು, 8ರಂದು ಫಲಿತಾಂಶ ಪ್ರಕಟ ಆಗಲಿದೆ.

ಎ.ಐ ಆಧರಿತ ಚುನಾವಣಾ ಪ್ರಚಾರ–ಪಾರದರ್ಶಕತೆಗೆ ಆಯೋಗ ಸೂಚನೆ: ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ಕೃತಕ ಬುದ್ಧಿಮತ್ತೆ (ಎ.ಐ) ಆಧರಿಸಿದ ಪ್ರಚಾರ ಸರಕು ಬಳಸುತ್ತಿರುವ ರಾಜಕೀಯ ಪಕ್ಷಗಳು ಪಾರದರ್ಶಕತೆ ಕಾಪಾಡುವ ಜೊತೆಗೆ ಹೊಣೆಗಾರಿಕೆ ಪ್ರದರ್ಶಿಸಬೇಕು ಎಂದು ಚುನಾವಣಾ ಆಯೋಗವು ಸಲಹೆ ನೀಡಿದೆ.

ಎ.ಐನಿಂದ ನಿರ್ಮಿಸಿದ ಚಿತ್ರ, ವಿಡಿಯೊ, ಆಡಿಯೊ ಹಾಗೂ ಇತರೆ ಕರಪತ್ರಗಳ ಮೇಲೆ 'ಎ.ಐ ರಚಿತ', 'ಡಿಜಿಟಲ್ ಆಧರಿತ' ಎಂಬುದನ್ನು ಉಲ್ಲೇಖಿಸಬೇಕು ಎಂದು ಸ್ಪಷ್ಟಪಡಿಸಿದೆ.

ಮಂದಹಾಸ ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಚಿತ್ರವನ್ನು ನಾಸಾ ಗುರುವಾರ ಬಿಡುಗಡೆ ಮಾಡಿತು –ಪಿಟಿಐ ಚಿತ್ರ

ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿಕೆ

2ಕ್ಕಿಂತ ಹೆಚ್ಚು ಮಕ್ಕಳಿದ್ದವರಿಗಷ್ಟೆ ಸ್ಥಳೀಯ ಸಂಸ್ಥೆ ಚುನಾವಣೆ ಟಿಕೆಟ್



ತಿರುಪತಿ (ಆಂಧ್ರ ಪ್ರದೇಶ) (ಪಿಟಿಐ): 'ವ್ಯಕ್ತಿಯೊಬ್ಬ ಸರಪಂಚ, ಪುರಸಭಾ ಸದಸ್ಯ ಅಥವಾ ಮೇಯರ್ ಆಗಲು ಎರಡು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವುದು ಕಡ್ಡಾಯವಾಗಬೇಕು. ಕುಸಿಯುತ್ತಿರುವ ಜನಸಂಖ್ಯೆಯನ್ನು ಹೆಚ್ಚಿಸಲು ಇದು ಅಗತ್ಯ' ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದರು. 'ಒಂದು ಕಾಲದಲ್ಲಿ ಹೆಚ್ಚು ಮಕ್ಕಳಿದ್ದವರಿಗೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಇರಲಿಲ್ಲ. ಈಗ ನಾನು ಇದಕ್ಕೆ ತದ್ವಿರುದ್ಧವಾದ ವಿಷಯವನ್ನು ಹೇಳುತ್ತಿದ್ದೇನೆ. ಈ ಕುರಿತು ಕಾಯ್ದೆ ತರುವ ಯೋಜನೆ ಇದೆ' ಎಂದು ನಾರಾವಾರಿಪಲ್ಲೆಯಲ್ಲಿ ಈಚೆಗೆ ಸುದ್ದಿಗಾರರಿಗೆ ತಿಳಿಸಿದರು.

ಜನಸಂಖ್ಯೆ ಹೆಚ್ಚಿಸಬೇಕೆಂಬ ತಮ್ಮ ಪ್ರತಿಪಾದನೆಗೆ ನಾಯ್ಡು ಅವರು ನೀಡಿದ ಸಮರ್ಥನೆಗಳಿವು

- ಹಿಂದೆಲ್ಲ ನಾಲ್ಕೈದು ಮಕ್ಕಳನ್ನು ತಂದೆ–ತಾಯಿ ಪಡೆಯುತ್ತಿದ್ದರು. ಈಗಿನವರು ಒಂದೇ ಸಾಕೆನ್ನುತ್ತಾರೆ. ಇನ್ನು ಕೆಲವರು ತಮ್ಮಷ್ಟಕ್ಕೆ ಖುಷಿಯಾಗಿ ಇರಲೆಂದು ಮಕ್ಕಳೇ ಬೇಡವೆನ್ನುತ್ತಿದ್ದಾರೆ. ಇದು ಸರಿಯಲ್ಲ
- ಒಂದೇ ಮಗು ಸಾಕು ಎಂದರೆ 2047ರ ಹೊತ್ತಿಗೆ ವೃದ್ಧರ ಸಂಖ್ಯೆಯೇ ಹೆಚ್ಚಾಗಿ ಯುವಕರ ಸಂಖ್ಯೆ ಕಡಿಮೆಯಾಗುತ್ತದೆ
- ದಕ್ಷಿಣ ಕೊರಿಯಾ, ಜಪಾನ್ ಕೂಡ ಮಕ್ಕಳು ಬೇಡ ಎಂದು ತೀರ್ಮಾನ ತೆಗೆದುಕೊಂಡು, ಸಂಪತ್ತಿನ ಕ್ರೋಡೀಕರಣಕ್ಕೆ ಮುಂದಾಗಿದ್ದವು. ಈಗ ಅಲ್ಲಿ ಜನಸಂಖ್ಯೆ ಇಲ್ಲದಿರುವುದೇ ಸಮಸ್ಯೆಯಾಗಿದೆ. ಮಾನವ ಸಂಪನ್ಮೂಲವನ್ನು ಅಲ್ಲಿಗೆ ನಾವು ಕಳುಹಿಸಬೇಕಾಗಿದೆ. ಯುರೋಪ್‌ನ ಕೆಲವೆಡೆಯೂ ಇದೇ ಸಮಸ್ಯೆ ಇದೆ

'ಸುಪ್ರೀಂ'ಗೆ ಸಲ್ಲಿಸಿರುವ ಮೇಲ್ಮನವಿಯಲ್ಲಿ ಕಾಂಗ್ರೆಸ್ ಪ್ರತಿಪಾದನೆ

'ಜಾತ್ಯತೀತತೆ ರಕ್ಷಣೆಗೆ ಪೂಜಾ ಸ್ಥಳ ಕಾಯ್ದೆ ಅಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಜಾತ್ಯತೀತತೆಯನ್ನು ರಕ್ಷಿಸುವ ಸಲುವಾಗಿ 'ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ-1991'ರ ಅಗತ್ಯವಿದೆ ಎಂದು ಕಾಂಗ್ರೆಸ್ ಪಕ್ಷ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ವಿರೋಧಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮಧ್ಯಂತರ ಮೇಲ್ಮನವಿಯಲ್ಲಿ ಪಕ್ಷವು ಈ ಪ್ರತಿಪಾದನೆ ಮಾಡಿದೆ.

'ಈ ಕಾಯ್ದೆಯನ್ನು ಸಂಸತ್ ರೂಪಿಸಿದ್ದು, ಇದು ಜಾತ್ಯತೀತತೆ ಕುರಿತ ಭಾರತೀಯರ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತದೆ' ಎಂದೂ ಹೇಳಿದೆ.

'ಜಾತ್ಯತೀತ ತತ್ವಗಳನ್ನು ಬುಡಮೇಲು ಮಾಡುವ ದುರುದ್ದೇಶ ಪೂರಿತ ಪ್ರಯತ್ನದ ಭಾಗವಾಗಿ ಈ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದೆ. ಕಾಯ್ದೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿದರೂ ಅದು ದೇಶದ ಕೋಮು ಸೌಹಾರ್ದ ಹಾಗೂ ಜಾತ್ಯತೀತತೆಯನ್ನು ಸಂಕಷ್ಟಕ್ಕೆ ದೂಡುತ್ತದೆ. ಆ ಮೂಲಕ, ದೇಶದ ಸಾರ್ವಭೌಮತೆ ಹಾಗೂ ಸಮಗ್ರತೆಗೆ ಬೆದರಿಕೆ ಒಡ್ಡುತ್ತದೆ' ಎಂದು ಕಾಂಗ್ರೆಸ್ ತನ್ನ ಅರ್ಜಿಯಲ್ಲಿ ಹೇಳಿದೆ.

ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ವಕೀಲ ಅಶ್ವಿನಿ ಉಪಾಧ್ಯಾಯ ಸಲ್ಲಿಸಿರುವ ಅರ್ಜಿಯನ್ನು ಸಾರಾಸಗಟಾಗಿ ತಿರಸ್ಕರಿಸುವಂತೆಯೂ ಕೋರಿದೆ.

ಅರ್ಜಿಯ ಪ್ರಮುಖ ಅಂಶಗಳು

- ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆಯು ಸಂವಿಧಾನದಲ್ಲಿ ಉಲ್ಲೇಖಿಸಲಾಗಿರುವ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿ ಇಲ್ಲ
- ಸಂವಿಧಾನದ 25, 26, 27 ಹಾಗೂ 28ನೇ ವಿಧಿಗಳಲ್ಲಿ ಹೇಳಿರುವಂತೆ ಜಾತ್ಯತೀತ ತತ್ವಗಳ ಪಾಲನೆ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಈ ಕಾಯ್ದೆ ಎತ್ತಿ ಹಿಡಿಯುತ್ತದೆ
- ದೇಶದ ಎಲ್ಲ ಸಮುದಾಯಗಳ ನಡುವೆ ಸೌಹಾರ್ದಯುತ ಸಂಬಂಧ ಉತ್ತೇಜಿಸುವುದಕ್ಕಾಗಿ ಈ ಕಾಯ್ದೆ ಅಗತ್ಯವಿದೆ

ಗೋಧ್ರಾ ಪ್ರಕರಣ: ಫೆ.13ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಗೋಧ್ರಾದಲ್ಲಿ ರೈಲು ಬೋಗಿಗಳಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್ ಸರ್ಕಾರ ಹಾಗೂ ಇತರ ಅಪರಾಧಿಗಳು ಸಲ್ಲಿಸಿರುವ ಮೇಲ್ಮನವಿ ಅರ್ಜಿಗಳ ವಿಚಾರಣೆಯನ್ನು ಫೆ.13ರಂದು ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಫೆ.13ರ ವಿಚಾರಣೆ ಬಳಿಕ ಪ್ರಕರಣವನ್ನು ಯಾವುದೇ ಕಾರಣಕ್ಕೂ ಮುಂದೂಡಲಾಗುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಜೆ.ಕೆ ಮಾಹೇಶ್ವರಿ ಹಾಗೂ ಅರವಿಂದ ಕುಮಾರ್ ಅವರ ಪೀಠವು ಸ್ಪಷ್ಟಪಡಿಸಿದೆ.

ಅಯೋಧ್ಯೆಯಿಂದ ಹಿಂತಿರುಗುತ್ತಿದ್ದ, ಕರಸೇವಕರಿದ್ದ ಸಾಬರಮತಿ ಎಕ್ಸ್‌ಪ್ರೆಸ್ ರೈಲಿಗೆ 2002ರ ಫೆಬ್ರುವರಿ 27ರಂದು ಬೆಂಕಿ ಹಚ್ಚಲಾಗಿತ್ತು. ಘಟನೆಯಲ್ಲಿ 59 ಕರಸೇವಕರು ಮೃತಪಟ್ಟಿದ್ದರು.

ಪ್ರಕರಣದ 11 ಅಪರಾಧಿಗಳಿಗೆ ವಿಧಿಸಲಾಗಿದ್ದ ಮರಣ ದಂಡನೆಯನ್ನು ಜೀವಾವಧಿ ಶಿಕ್ಷೆಗೆ ಪರಿವರ್ತಿಸಿ ಹಲವಾರು ಅಪರಾಧಿಗಳಿಗೆ ಶಿಕ್ಷೆ ವಿಧಿಸಿದ ಗುಜರಾತ್‌ನ ಹೈಕೋರ್ಟ್‌ನ 2017ರ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಹಲವು ಮೇಲ್ಮನವಿಗಳು ಸಲ್ಲಿಕೆಯಾಗಿವೆ.

11 ಅಪರಾಧಿಗಳಿಗೆ ಮತ್ತೆ ಮರಣ ದಂಡನೆಯನ್ನೇ ವಿಧಿಸಬೇಕೆಂದು ಗುಜರಾತ್ ಸರ್ಕಾರ ಮೇಲ್ಮನವಿ ಸಲ್ಲಿಸಿದೆ.

ಸಂಕ್ಷಿಪ್ತ ಸುದ್ದಿ

ಮನಮೋಹನ ಸಿಂಗ್ ಸ್ಮಾರಕಕ್ಕೆ ಸ್ಥಳ ಗುರುತು

ಮನಮೋಹನ ಸಿಂಗ್

ನವದೆಹಲಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಸ್ಮಾರಕ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರವು 'ರಾಷ್ಟ್ರೀಯ ಸ್ಮೃತಿ ಸ್ಥಳ'ದಲ್ಲಿ ಜಾಗವೊಂದನ್ನು ಗುರುತಿಸಿದ್ದು, ಈ ಬಗ್ಗೆ ಸಿಂಗ್ ಕುಟುಂಬಸ್ಥರಿಗೆ ಜನವರಿ ಆರಂಭದಲ್ಲೇ ಮಾಹಿತಿ ನೀಡಲಾಗಿದೆ ಎಂದು ಮೂಲಗಳು ಗುರುವಾರ ಹೇಳಿವೆ.

ಸಿಂಗ್ ಕುಟುಂಬವು ದುಃಖದಲ್ಲಿರುವುದರಿಂದ ಸರ್ಕಾರದ ಪ್ರಸ್ತಾವಕ್ಕೆ ಇನ್ನೂ ಒಪ್ಪಿಗೆ ಸೂಚಿಸಿಲ್ಲ ಎಂದು ಮೂಲಗಳು ತಿಳಿಸಿವೆ. ಈ ಉದ್ದೇಶಿತ ಸ್ಥಳವು ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಸ್ಮಾರಕದ ಪಕ್ಕದಲ್ಲೇ ಇದೆ. ಸಿಂಗ್ ಕುಟುಂಬಸ್ಥರನ್ನು ಇತ್ತೀಚೆಗೆ ಭೇಟಿ ಮಾಡಿದ ವಸತಿ ಮತ್ತು ನಗರ ವ್ಯವಹಾರಗಳ ಕಾರ್ಯದರ್ಶಿ ಕೆ. ಶ್ರೀನಿವಾಸನ್ ಅವರು, ಸಿಂಗ್ ಸ್ಮಾರಕಕ್ಕಾಗಿ 'ರಾಷ್ಟ್ರೀಯ ಸ್ಮೃತಿ ಸ್ಥಳ'ದಲ್ಲಿ 1.5 ಎಕರೆ ಜಾಗ ಗುರುತಿಸಿರುವ ಕುರಿತಾದ ಪ್ರಸ್ತಾವವನ್ನು ತಿಳಿಸಿದ್ದಾರೆ. ನಿಯಮಗಳ ಪ್ರಕಾರ ಕುಟುಂಬಸ್ಥರು ಮೊದಲು ಟ್ರಸ್ಟ್‌ವೊಂದನ್ನು ರಚಿಸಬೇಕು. ಬಳಿಕ ಆ ಟ್ರಸ್ಟ್‌ಗೆ ಜಾಗವನ್ನು ನೀಡಲಾಗುತ್ತದೆ.

ನೀಟ್–ಯುಜಿ: ಆನ್‌ಲೈನ್ ಇಲ್ಲ, ಲಿಖಿತ ಪರೀಕ್ಷೆ-ಎನ್‌ಟಿಎ

ನವದೆಹಲಿ (ಪಿಟಿಐ): ಸದ್ಯಕ್ಕೆ ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್-ಯುಜಿಯನ್ನು ಆನ್‌ಲೈನ್ ಮೂಲಕ ನಡೆಸದಿರಲು ನಿರ್ಧರಿಸಿರುವ ಕೇಂದ್ರ ಸರ್ಕಾರ, ಈ ಹಿಂದಿನ ಪದ್ಧತಿಯಂತೆ ಲಿಖಿತ ಸ್ವರೂಪದಲ್ಲಿ ನಡೆಸುವುದಾಗಿ ಗುರುವಾರ ಪ್ರಕಟಿಸಿದೆ.

ನೀಟ್-ಯುಜಿಯನ್ನು ಲಿಖಿತ ಸ್ವರೂಪದಲ್ಲಿ ನಡೆಸಬೇಕೆ ಅಥವಾ ಆನ್‌ಲೈನ್‌ನಲ್ಲಿ ನಡೆಸಬೇಕೆ ಎಂಬುದರ ಕುರಿತು ಶಿಕ್ಷಣ ಮತ್ತು ಆರೋಗ್ಯ ಸಚಿವಾಲಯಗಳ ನಡುವೆ ನಡೆದ ವಿಸ್ತೃತ ಚರ್ಚೆಯ ನಂತರ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ನಿರ್ಧರಿಸಿದಂತೆ, ನೀಟ್–ಯುಜಿಯನ್ನು ಲಿಖಿತ ಸ್ವರೂಪದಲ್ಲಿ (ಒಎಂಆರ್ ಆಧಾರಿತ) ಒಂದೇ ದಿನ ಮತ್ತು ಪಾಳಿ ಪ್ರಕಾರ ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

'ಭಾಗವತ್ ಹೇಳಿಕೆ ಇತಿಹಾಸ ತಿರುಚುವ ಯತ್ನ'

ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯಾದ ದಿನವನ್ನು ಭಾರತಕ್ಕೆ ನಿಜವಾಗಿಯೂ ಸ್ವಾತಂತ್ರ್ಯ ಸಿಕ್ಕ ದಿನವಾಗಿ ಆಚರಿಸಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿರುವುದು ಇತಿಹಾಸವನ್ನು ತಿರುಚುವ ಪ್ರಯತ್ನವಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಪ್ರತಿಕ್ರಿಯಿಸಿದ್ದಾರೆ.

'ಇದು ದೇಶವಿರೋಧಿಯೂ ಆತಂಕಕಾರಿಯೂ ಆದ ಹೇಳಿಕೆ. ಇದನ್ನು ನಾನು ಕಟುವಾಗಿ ವಿರೋಧಿಸುತ್ತೇನೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಲು ನಾವೂ ಸಿದ್ಧರಿದ್ದೇವೆ. ಇತಿಹಾಸ ಬದಲಿಸುವ ಉದ್ದೇಶದ ಇಂತಹ ಹೇಳಿಕೆಗಳನ್ನು ಸಹಿಸುವುದಿಲ್ಲ' ಎಂದಿದ್ದಾರೆ.

ವಿನೋದ್ ಚಂದ್ರನ್ ಪ್ರಮಾಣ

ನವದೆಹಲಿ: ಪಟ್ನಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಕೃಷ್ಣನ್ ವಿನೋದ್ ಚಂದ್ರನ್ ಅವರು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು, ವಿನೋದ್ ಚಂದ್ರನ್ ಅವರಿಗೆ ಪ್ರಮಾಣವಚನ ಬೋಧಿಸಿದರು.

ಬೆಂಗಳೂರಿನ ಕೆಒಎ ಭವನದಲ್ಲಿ ಗುರುವಾರ ಕರ್ನಾಟಕ 3x3 ಬ್ಯಾಸ್ಕೆಟ್‌ಬಾಲ್ ಪುರುಷ ಮತ್ತು ಮಹಿಳಾ ತಂಡದವರಿಗೆ ಕೆ. ಗೋವಿಂದರಾಜ್ ಅವರು ಪೋಷಾಕುಗಳನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ ಆರ್. ರಾಜೇಂದ್ರ ಹಾಜರಿದ್ದರು

ರಾಷ್ಟ್ರೀಯ 3x3 ಬ್ಯಾಸ್ಕೆಟ್‌ಬಾಲ್ ಇಂದಿನಿಂದ

ಪ್ರಶಸ್ತಿ ಮೇಲೆ ಕರ್ನಾಟಕದ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಮೊದಲ ಬಾರಿಗೆ ಉದ್ಯಾನ ನಗರಿಯಲ್ಲಿ 4ನೇ ರಾಷ್ಟ್ರೀಯ ಸೀನಿಯರ್ 3x3 ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ನಡೆಯಲಿದೆ.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ (ಜ.17) ಆರಂಭವಾಗಲಿದೆ. 19ರವರೆಗೆ ನಡೆಯಲಿರುವ ಈ ಟೂರ್ನಿಯಲ್ಲಿ ಪುರುಷರ 30 ಮತ್ತು ಮಹಿಳೆಯರ 26 ತಂಡಗಳು ಸ್ಪರ್ಧಿಸಲಿವೆ.

'ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಕರ್ನಾಟಕವು ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ಹಲವು ಖ್ಯಾತನಾಮ ಆಟಗಾರರನ್ನು ನೀಡಿರುವ ಹೆಗ್ಗಳಿಕೆ ಕರ್ನಾಟಕದ್ದು. ಬಹಳ ಜನಪ್ರಿಯವಾಗುತ್ತಿರುವ 3x3 ಬ್ಯಾಸ್ಕೆಟ್‌ಬಾಲ್ ಮಾದರಿಯ ರಾಷ್ಟ್ರೀಯ ಟೂರ್ನಿಯನ್ನು ಇಲ್ಲಿ ಪ್ರಥಮ ಬಾರಿಗೆ ಆಯೋಜಿಸಲಾಗುತ್ತಿದೆ.

30 ರಾಜ್ಯಗಳ ತಂಡಗಳು ಇಲ್ಲಿ ಆಡಲಿವೆ. ಟೂರ್ನಿಯಲ್ಲಿ ಉತ್ತಮವಾಗಿ ಆಡುವ ಆಟಗಾರರನ್ನು ರಾಷ್ಟ್ರೀಯ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದು' ಎಂದು ಫಿಬಾ ಏಷ್ಯಾ ಅಧ್ಯಕ್ಷ ಕೆ. ಗೋವಿಂದರಾಜ್ ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

'ಕಳೆದ ಒಲಿಂಪಿಕ್ ಕೂಟದಲ್ಲಿಯೂ ಈ ಮಾದರಿಯನ್ನು ಸೇರ್ಪಡೆ ಮಾಡಲಾಗಿತ್ತು. ಕರ್ನಾಟಕ ತಂಡವೂ ಉತ್ತಮ ಆಟಗಾರರನ್ನು ಒಳಗೊಂಡಿದೆ' ಎಂದೂ ತಿಳಿಸಿದರು.

ಟೂರ್ನಿಯು ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ನಡೆಯಲಿದೆ. ಕರ್ನಾಟಕ ಪುರುಷರ ತಂಡದಲ್ಲಿ ಪ್ರತ್ಯಾಂಶು ತೋಮರ್, ಶಶಾಂಕ್ ರೈ, ಅಭಿಷೇಕ್ ಗೌಡ ಮತ್ತು ಏರಾನ್ ಇದ್ದಾರೆ. ರಾಜ್ಯ ಮಹಿಳೆಯರ ಬಳಗದಲ್ಲಿ ಎಚ್.ಎಂ. ಬಾಂಧವ್ಯ, ಮೇಖಲಾ ಗೌಡ, ಸದಿಯಾ ಸೆಲ್ವಕುಮಾರ್ ಮತ್ತು ಪ್ರೀತಿ ಮಲ್ಲಪ್ಪ ಇದ್ದಾರೆ.

'ಫಿಬಾ ನಿಯಮಗಳ ಅನ್ವಯವೇ ಈ ಟೂರ್ನಿ ನಡೆಯಲಿದೆ. ಅಂತರರಾಷ್ಟ್ರೀಯ ಆಟಗಾರರಾದ ಗುರುಭಕ್ಷ್ ಸಿಂಗ್ ಸಂಧು, ಪೀಯೂಷ್ ಮೀನಾ ಮತ್ತಿತರರು ಆಡಲಿದ್ದಾರೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಮಾಜಿ ಅಂತರರಾಷ್ಟ್ರೀಯ ಆಟಗಾರ ಆರ್. ರಾಜೇಂದ್ರ ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕದ ಆಟಗಾರರಿಗೆ ಪೋಷಾಕುಗಳನ್ನು ಪ್ರದಾನ ಮಾಡಲಾಯಿತು.

ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ತಾಂತ್ರಿಕ ಸಮಿತಿ ಮುಖ್ಯಸ್ಥ ನಾರ್ಮನ್ ಐಸಾಕ್ ಈ ಸಂದರ್ಭದಲ್ಲಿ ಹಾಜರಿದ್ದರು.

ಕೂಟಕ್ಕೆ ಇಂದು ಚಾಲನೆ; 25 ಕ್ರೀಡೆಗಳಲ್ಲಿ ಅಥ್ಲೀಟ್‌ಗೆ ಪದಕ ಗೆಲ್ಲುವ ಛಲ

ಕರಾವಳಿಯಲ್ಲಿ ಯುವಶಕ್ತಿ ಪ್ರದರ್ಶನ

• ವಿಕ್ರಂ ಕಾಂತಿಕೆರೆ

ಮಂಗಳೂರು: ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಓಟ, ಜಿಗಿತ, ಎಸೆತದ ರೋಮಾಂಚನ; ಒಳಾಂಗಣ– ಹೊರಾಂಗಣಗಳಲ್ಲಿ ಸಾಂಘಿಕ ಶಕ್ತಿ ಪ್ರದರ್ಶನದ ರೋಚಕತೆ, ನದಿನೀರಿನಲ್ಲಿ ವಾಟರ್ ಸ್ಪೋರ್ಟ್ಸ್‌ನ ಖುಷಿಯ ಅಲೆ, ರಸ್ತೆಯಲ್ಲಿ ಸೈಕಲ್‌ಗಳ ಮಿಂಚಿನ ಸಂಚಾರ...

ಕರಾವಳಿಯಲ್ಲಿ ಇದೇ ಮೊದಲ ಬಾರಿ ನಡೆಯಲಿರುವ 'ಕರ್ನಾಟಕ ಕ್ರೀಡಾಕೂಟ'ದಲ್ಲಿ ಇದೆಲ್ಲದರ ಜೊತೆಗೆ ವೈಯಕ್ತಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳುವವರ ತಾಕತ್ತು ಮತ್ತು ಮನೋಬಲ ಪ್ರದರ್ಶನಗೊಳ್ಳಲಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಾಗೂ ದಕ್ಷಿಣ ಕನ್ನಡ–ಉಡುಪಿ ಜಿಲ್ಲಾಡಳಿತ ಜ.17ರಿಂದ 23ರ ವರೆಗೆ ಆಯೋಜಿಸಿರುವ ಕ್ರೀಡಾಕೂಟದ ಸ್ಪರ್ಧೆಗಳು ಮಂಗಳೂರು, ಉಡುಪಿ, ಮಣಿಪಾಲದಲ್ಲಿ ನಡೆಯಲಿವೆ. ಶೂಟಿಂಗ್ ಮತ್ತು ಜಿಮ್ನಾಸ್ಟಿಕ್ಸ್‌ಗೆ ಬೆಂಗಳೂರು ಆತಿಥ್ಯ ವಹಿಸಲಿದೆ. ಮೊದಲ ದಿನ ಮಧ್ಯಾಹ್ನದವರೆಗೆ ಮಾತ್ರ ಸ್ಪರ್ಧೆಗಳು ಇರುತ್ತವೆ.

ಕಯಾಕಿಂಗ್, ಕೆನೊಯಿಂಗ್, ಬಾಕ್ಸಿಂಗ್, ಆರ್ಚರಿ ಮುಂತಾದ ಕ್ರೀಡೆಗಳಲ್ಲಿ ಪ್ರಮುಖ ಅಥ್ಲೀಟ್ಸ್ ಪಾಲ್ಗೊಳ್ಳಲಿದ್ದು ಅಥ್ಲೆಟಿಕ್ಸ್, ಈಜು, ವುಷು, ಜೂಡೊ, ಕುಸ್ತಿ ಮುಂತಾದ ಕ್ರೀಡೆಗಳಲ್ಲಿ ಉತ್ತಮ ಹಣಾಹಣಿಯ ನಿರೀಕ್ಷೆ ಇದೆ. ಕಬಡ್ಡಿ, ಫುಟ್‌ಬಾಲ್ ಬ್ಯಾಸ್ಕೆಟ್‌ಬಾಲ್, ಹಾಕಿಯಲ್ಲಿ ಜಿಲ್ಲಾ ತಂಡಗಳು ಮತ್ತು ಡಿವೈಇಎಸ್ ಹಾಸ್ಟೆಲ್ ತಂಡಗಳು ಪಾಲ್ಗೊಳ್ಳಲಿದ್ದು ಭಾರಿ ಪೈಪೋಟಿಯ ಸಾಧ್ಯತೆ ಇದೆ.

ಬ್ರಹ್ಮಾವರದಲ್ಲಿ ಕಯಾಕಿಂಗ್: ಉಡುಪಿ ಜಿಲ್ಲೆ ಬ್ರಹ್ಮಾವರದಲ್ಲಿ 17ರಿಂದ 19ರ ವರೆಗೆ ಕಯಾಕ್ ಮತ್ತು ಕೆನೊಯಿಂಗ್ ನಡೆಯಲಿದೆ. ಕಳೆದ ವರ್ಷ ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದ ಮತ್ತು ಏಷ್ಯನ್ ಕನೊಯ್ ಮ್ಯಾರಥಾನ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಸಮರ ಚಾಕೊ ಪಾಲ್ಗೊಳ್ಳಲಿದ್ದು, ಧನಲಕ್ಷ್ಮಿ, ದಾದಾಪೀರ್, ನಾಗೇಶ್ ನಾಯಕ್, ಐಶ್ವರ್ಯಾ, ಪ್ರಾಂಜಲ ಶೆಟ್ಟಿ ಕೂಡ ಕಣದಲ್ಲಿದ್ದಾರೆ. ಈಜುಕೊಳದಲ್ಲಿ ಪ್ರಜ್ವಲ್ ಗೌಡ, ಅಲೆಸ್ಟರ್ ಸ್ಯಾಮುವೆಲ್, ಧ್ಯಾನ್ ಬಾಲಕೃಷ್ಣ, ರಚನಾ ರಾವ್, ಚಿಂತನ್ ಶೆಟ್ಟಿ ಮಿಂಚಲು ಸಜ್ಜಾಗಿದ್ದಾರೆ.

ಕರ್ನಾಟಕ ಕ್ರೀಡಾಕೂಟದ ಅಥ್ಲೆಟಿಕ್ಸ್ ನಡೆಯಲಿರುವ ಉಡುಪಿ ಅಜ್ಜರಕಾಡು ಮಹಾತ್ಮಗಾಂಧಿ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಗುರುವಾರ ಲೇನಿಂಗ್ ಮಾಡಲಾಯಿತು

ರಾಷ್ಟ್ರೀಯ ಕ್ರೀಡಾಕೂಟದ ನೆರಳು

ಕರ್ನಾಟಕದ ಪ್ರಮುಖ ಅಥ್ಲೀಟ್‌ಗಳು ಇದೇ ತಿಂಗಳ 28ರಿಂದ ಫೆ.14ರ ವರೆಗೆ ಉತ್ತರಾಖಂಡದಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಸಜ್ಜಾಗುತ್ತಿದ್ದಾರೆ. ಅವರ ಪೈಕಿ ಅನೇಕರು ಕರ್ನಾಟಕ ಕ್ರೀಡಾಕೂಟಕ್ಕೆ ಗೈರು.

ರಾಷ್ಟ್ರೀಯ ಕ್ರೀಡಾಕೂಟದ ರಾಜ್ಯ ಶಿಬಿರದಲ್ಲಿ ಇರುವುದರಿಂದ ಹಾಕಿ ಮಹಿಳೆಯರ ವಿಭಾಗದಲ್ಲಿ ತಂಡಗಳು ಪಾಲ್ಗೊಳ್ಳುತ್ತಿಲ್ಲ ಎಂದು ಮೂಲಗಳು ತಿಳಿಸಿವೆ. ಪುರುಷರ ವಿಭಾಗದಲ್ಲಿ ಹಾವೇರಿ, ಹಾಸನ, ಗದಗ, ಬಳ್ಳಾರಿ, ಬಾಗಲಕೋಟೆ, ಬೆಂಗಳೂರು ನಗರ, ಧಾರವಾಡ ಮತ್ತು ದಕ್ಷಿಣ ಕನ್ನಡ ಜಿಲ್ಲಾ ತಂಡಗಳು ಪಾಲ್ಗೊಳ್ಳುತ್ತಿವೆ.

ಮಹಿಳೆಯರಿಗೆ ಮೈಸೂರು ಮತ್ತು ಕೊಡಗಿನಲ್ಲಿ ಮಾತ್ರ ಹಾಸ್ಟೆಲ್ ಇದ್ದು ಈ ಎರಡೂ ತಂಡಗಳ ಆಟಗಾರರು ರಾಜ್ಯ ಶಿಬಿರದಲ್ಲಿದ್ದಾರೆ. ಸೈಕ್ಲಿಂಗ್‌ನಲ್ಲೂ ಪ್ರಮುಖರು ಶಿಬಿರದಲ್ಲಿರುವುದರಿಂದ ಕರ್ನಾಟಕ ಕ್ರೀಡಾಕೂಟವು ಹೊಸ ಪೀಳಿಗೆಯ ಸೈಕ್ಲಿಸ್ಟ್‌ಗಳ ಹೋರಾಟಕ್ಕೆ ಸಾಕ್ಷಿಯಾಗಲಿದೆ.

ಆರ್ಚರಿ ರಿಕರ್ವ್ ವಿಭಾಗದಲ್ಲಿ ಪಾಲ್ಗೊಳ್ಳುತ್ತಿರುವ ರಕ್ಷಕ್, ಸುಭಾಷ್, ರಾಜೇಶ್, ಸಿಂಚನಾ, ಅಶ್ಮಿತಾ ಮತ್ತು ಗೌತಮಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದವರು. ಬಾಕ್ಸಿಂಗ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತೆ ಸಂಭ್ರಮ ಅವರೊಂದಿಗೆ ಕಿರಣ್, ನಿಖಿಲ್, ಪವನ್ ಕ್ಷೇವಿಯರ್, ಸಮಂತಾ ಅವರೂ ಇದ್ದಾರೆ.

ಬ್ಯಾಸ್ಕೆಟ್‌ಬಾಲ್‌ನಲ್ಲಿ ಬ್ಯಾಂಕ್ ಆಫ್ ಬರೋಡಾ, ಬೀಗಲ್ಸ್, ಯಂಗ್ ಒರಾಯನ್ಸ್ ಇದ್ದು ಹಾಕಿ ಮತ್ತು ಕಬಡ್ಡಿಯಲ್ಲಿ ಜಿಲ್ಲಾ ತಂಡಗಳ ಪೈಪೋಟಿಗೆ ಕಣ ಸಜ್ಜಾಗಿದೆ.

ಪ್ರೊ ಲೀಗ್‌ನೊಡನೆ ಭಾರತ ತಂಡಗಳ ಹಾಕಿ ಋತು ಆರಂಭ

ಹರ್ಮನ್‌ಪ್ರೀತ್

ಭುವನೇಶ್ವರ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ಹಾಕಿ ತಂಡಗಳು, ಫೆಬ್ರುವರಿ 15ರಿಂದ ಇಲ್ಲಿ ನಡೆಯುವ ಎಫ್‌ಐಎಚ್ ಪ್ರೊ ಲೀಗ್ ಪಂದ್ಯಗಳಲ್ಲಿ ಆಡುವ ಮೂಲಕ ಈ ವರ್ಷದ ಅಂತರರಾಷ್ಟ್ರೀಯ ಋತುವನ್ನು ಆರಂಭಿಸಲಿದೆ.

ಪುರುಷರ ತಂಡವು, ಅಂದು ಕಳಿಂಗ ಕ್ರೀಡಾಂಗಣದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ. ವನಿತೆಯರ ತಂಡವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ತಂಡದ ಬಹುತೇಕ ಆಟಗಾರರು ಮತ್ತು ಆಟಗಾರ್ತಿಯರು ಕ್ರಮವಾಗಿ ರೂರ್ಕೆಲಾ ಮತ್ತು ರಾಂಚಿಯಲ್ಲಿ ನಡೆಯುತ್ತಿರುವ ಹಾಕಿ ಇಂಡಿಯಾ ಲೀಗ್‌ನಲ್ಲಿ ಆಡುತ್ತಿದ್ದಾರೆ. ಎಫ್‌ಐಎಚ್ ಆಸ್ಟ್ರೇಲಿಯಾ ಲೆಗ್ (ಫೆ. 4 ರಿಂದ 9) ನಂತರ ಭುವನೇಶ್ವರದಲ್ಲಿ ಲೀಗ್ ನಡೆಯುತ್ತದೆ.

ಭಾರತದಲ್ಲಿ ಪ್ರೊ ಲೀಗ್ ನಡೆಯುವ ವೇಳೆಯೇ (ಫೆ. 19 ರಿಂದ 24) ಅರ್ಜೆಂಟೀನಾದಲ್ಲೂ ಕೆಲವು ಪಂದ್ಯಗಳು ನಿಗದಿಯಾಗಿವೆ. ಅಲ್ಲಿ ಆತಿಥೇಯ ಅರ್ಜೆಂಟೀನಾ ಜೊತೆಗೆ, ಬೆಲ್ಜಿಯಂ ಮತ್ತು ಆಸ್ಟ್ರೇಲಿಯಾ ತಂಡಗಳು ಆಡಲಿವೆ.

ರಾಷ್ಟ್ರೀಯ ಕ್ರೀಡೆಗಳ ಗಾತ್ರ ಮೊಟಕು: ಉಷಾ ಪ್ರಸ್ತಾವ

ನವದೆಹಲಿ (ಪಿಟಿಐ): 'ಹಲವು ಪ್ರಾದೇಶಿಕ ಆಟ'ಗಳನ್ನು ಪದಕದ ಕ್ರೀಡೆಯಾಗಿಸುವುದನ್ನು ತಪ್ಪಿಸುವ ಉದ್ದೇಶದಿಂದ ಒಲಿಂಪಿಕ್ಸ್, ಕಾಮನ್ವೆಲ್ತ್ ಮತ್ತು ಏಷ್ಯನ್ ಕ್ರೀಡೆಗಳಲ್ಲಿರುವ ಆಟಗಳನ್ನೇ, ಭವಿಷ್ಯದ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಪರಿಗಣಿಸಬೇಕು ಎಂದು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರು ಗುರುವಾರ ಪ್ರಸ್ತಾವ ಮುಂದಿಟ್ಟಿದ್ದಾರೆ.

ಒಲಿಂಪಿಕ್ ಸಂಸ್ಥೆಯ ಮುಂದಿನ ಸಾಮಾನ್ಯಸಭೆಯಲ್ಲಿ ಈ ಪ್ರಸ್ತಾವ ಮಂಡಿಸುವುದಾಗಿ ಉಷಾ ತಿಳಿಸಿದ್ದಾರೆ.

ರಾಷ್ಟ್ರೀಯ ಕ್ರೀಡೆಗಳು ಶುರುವಾಗುವ ಒಂದು ವರ್ಷ ಮೊದಲಿನವರೆಗೆ ಐಒಎ ಜೊತೆ 'ಉತ್ತಮ ಬಾಂಧವ್ಯ' ಹೊಂದಿರುವ ರಾಷ್ಟ್ರೀಯ ಫೆಡರೇಷನ್‌ನ ಕ್ರೀಡೆಗಳನ್ನು ಮಾತ್ರ ಪರಿಗಣಿಸಬೇಕೆಂದು ಪ್ರಸ್ತಾವದಲ್ಲಿ ಸೇರಿಸುವುದಾಗಿಯೂ ಉಷಾ ಹೇಳಿದ್ದಾರೆ.

'ರಾಷ್ಟ್ರೀಯ ಕ್ರೀಡೆಗಳ ತಾಂತ್ರಿಕ ಆಯೋಜನಾ ಸಮಿತಿಯು (ಜಿಟಿಸಿಸಿ) ಕಳೆದ ಬಾರಿಯ ಕ್ರೀಡೆಗಳಲ್ಲಿ ಹಲವು ಪ್ರಾದೇಶಿಕ ಕ್ರೀಡೆಗಳನ್ನು ಪದಕ ಕ್ರೀಡೆಗಳನ್ನಾಗಿ ಸೇರ್ಪಡೆಗೊಳಿಸಿತ್ತು. ಐಒಎಗೆ ಈ ಕ್ರೀಡೆಗಳ ಮಹತ್ವದ ಅರಿವು ಇದೆ. ಆದರೆ ಪ್ರದರ್ಶನ ಕ್ರೀಡೆಗಳು ಮತ್ತು ಪದಕ ಕ್ರೀಡೆಗಳ ನಡುವೆ ಸ್ಪಷ್ಟವಾದ ಗೆರೆಯಿರಬೇಕು ಎಂದು ಉಷಾ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಸ್ಟ್ರೇಲಿಯನ್ ಓಪನ್: ಅಮೆರಿಕದ ಫ್ರಿಟ್ಜ್‌ಗೆ ನಿರಾಯಾಸ ಜಯ

3ನೇ ಸುತ್ತಿಗೆ ಸಿನ್ನರ್, ಶ್ವಾಂಟೆಕ್

ಮೆಲ್ಬರ್ನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಮೊದಲ ಸೆಟ್ ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿ ಗುರುವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ಮುನ್ನಡೆದರು. ಪೋಲೆಂಡ್‌ನ ಇಗಾ ಶ್ವಾಂಟೆಕ್ ಕೂಡ ಮುನ್ನಡೆದಿದ್ದು, ಮೂರನೇ ಸುತ್ತಿನಲ್ಲಿ ಎಮ್ಮಾ ರಾಡುಕಾನು ಜೊತೆ ಮುಖಾಮುಖಿಯಾಗಲಿದ್ದಾರೆ.

ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯತ್ತ ಕಣ್ಣಿಟ್ಟಿರುವ ಅಮೆರಿಕದ ಆಟಗಾರ ಟೇಲರ್ ಫ್ರಿಟ್ಜ್ ತಮ್ಮ ಪಂದ್ಯವನ್ನು ಗೆಲ್ಲಲು ಕಷ್ಟಪಡಲಿಲ್ಲ. ಮೊದಲ ಸುತ್ತಿನಲ್ಲಿ ಶ್ರೇಯಾಂಕ ಆಟಗಾರ ಆಂದ್ರೆ ರುಬ್ಲೇವ್ ಅವರನ್ನು ಹೊರದೂಡಿ ಗಮನಸೆಳೆದ 18 ವರ್ಷ ವಯಸ್ಸಿನ ಜೊವೊ ಫೊನ್ಸೆಕಾ ಐದು ಸೆಟ್‌ಗಳ ತೀವ್ರ ಹೋರಾಟದಲ್ಲಿ ಸೋಲನುಭವಿಸಬೇಕಾಯಿತು.

ಸಿನ್ನರ್ 14 ಪಂದ್ಯಗಳಲ್ಲಿ ಇದೇ ಮೊದಲ ಬಾರಿ ಸೆಟ್ ಕಳೆದುಕೊಂಡರು. ತಂಗಾಳಿ ಬೀಸುತ್ತಿದ್ದ ರಾಡ್ ಲೇವರ್ ಅರೇನಾದಲ್ಲಿ ಅವರು ತಕ್ಷಣ ಚೇತರಿಸಿ ಆಸ್ಟ್ರೇಲಿಯಾದ ಟ್ರಿಸ್ಟನ್ ಸ್ಕೂಲ್ಕೇಟ್ ಅವರನ್ನು 4–6, 6–4, 6–1, 6–3 ರಿಂದ ಸೋಲಿಸಿದರು. 173ನೇ ಕ್ರಮಾಂಕದ ಸ್ಕೂಲ್ಕೇಟ್ ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದರು.

ನಾಲ್ಕನೇ ಶ್ರೇಯಾಂಕದ ಫ್ರಿಟ್ಜ್ ಎರಡನೇ ಸುತ್ತಿನಲ್ಲಿ ಪ್ರಬಲ ಹೊಡೆತಗಳನ್ನು ಪ್ರದರ್ಶಿಸಿ ಕ್ವಾಲಿಫೈಯರ್, ಚಿಲಿಯ ಕ್ರಿಸ್ಟಿಯಾನ್ ಗಾರಿನ್ ಅವರನ್ನು 6–2, 6–1, 6–0ಯಿಂದ ಪರಾಭವಗೊಳಿಸಿದರು. ಫ್ರಿಟ್ಜ್ ಕಳೆದ ವರ್ಷ ಅಮೆರಿಕ ಓಪನ್ ಫೈನಲ್ ತಲುಪಿದ್ದರು. ಮೂರನೇ ಸುತ್ತಿನಲ್ಲಿ ಅವರ ಎದುರಾಳಿ ಫ್ರಾನ್ಸ್‌ನ ಗೇಲ್ ಮಾನ್ಫಿಲ್ಸ್.

ಕಾರ್ಲೋಸ್ ಅಲ್ಕರಾಜ್, ಜೊಕೊವಿಚ್ ಮೊದಲಾದ ತಾರೆಗಳ ಮೆಚ್ಚುಗೆ ಪಡೆದಿರುವ ಹದಿಹರೆಯದ ಫೊನ್ಸೆಕಾ ಅವರನ್ನು ಇಟಲಿಯ ಲೊರೆಂಝೊ ಸೊನೆಗೊ ಅವರು ಸೋಲಿಸಿದರು. ಇಟಲಿಯ ಆಟಗಾರ 6–7 (6–8), 6–3, 6–1, 3–6, 6–3ರಲ್ಲಿ ಜಯಗಳಿಸಿದರು. ಸಾಕಷ್ಟು ಸಂಖ್ಯೆಯಲ್ಲಿದ್ದ ಬ್ರೆಜಿಲ್ ಅಭಿಮಾನಿಗಳು ಫೊನ್ಸೆಕಾ ಸೋಲಿನಿಂದ ನಿರಾಶರಾದರು.

ಆಸ್ಟ್ರೇಲಿಯಾದ ಭರವಸೆಯಾಗಿರುವ ಅಲೆಕ್ಸ್ ಡಿ ಮಿನೋರ್ ಮತ್ತು 13ನೇ ಶ್ರೇಯಾಂಕದ ಡೆನ್ಮಾರ್ಕ್ ಆಟಗಾರ ಹೋಲ್ಗರ್ ರೂನ್ ಕೂಡ ಮೂರನೇ ಸುತ್ತಿಗೆ ಮುನ್ನಡೆದಿದ್ದಾರೆ.

ಶ್ವಾಂಟೆಕ್‌ಗೆ ಜಯ: ಎರಡನೇ ಶ್ರೇಯಾಂಕದ ಪೋಲೆಂಡ್ ಆಟಗಾರ್ತಿ ಇಗಾ ಶ್ವಾಂಟೆಕ್ 6–0, 6–2 ರಿಂದ ರೆಬೆಕಾ ಸ್ರಮ್ಕೋವಾ ಅವರನ್ನು ಸದೆಬಡಿದರು. ಬ್ರಿಟನಿನ ಎಮ್ಮಾ ರಾಡುಕಾನು 6–3, 7–5 ರಿಂದ ಅಮಂಡಾ ಅನಿಸಿಮೊವಾ ಅವರನ್ನು ಸೋಲಿಸಿ ಮೊದಲ ಬಾರಿ ಈ ಟೂರ್ನಿಯ ಮೂರನೇ ಸುತ್ತಿಗೇರಿದರು.

ಮೂರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಫೈನಲ್ ಆಡಿರುವ ಟ್ಯುನೀಸಿಯಾದ ಆನ್ಸ್ ಜೇಬರ್ 7–5, 6–3 ರಿಂದ ಕೊಲಂಬಿಯಾದ ಕ್ಯಾಮಿಲಾ ಒಸೊರಿಯೊ ಮೇಲೆ ಜಯಗಳಿಸಿದರು.

ಪ್ರೇಕ್ಷಕರಿಗೆ ತಿರುಗೇಟು: ಹತ್ತನೇ ಶ್ರೇಯಾಂಕದ ಡೇನಿಲಿ ಕಾಲಿನ್ಸ್ 7–6 (4), 4–6, 6–2 ರಿಂದ ದೆಸ್ತಾನೀ ಐಯೇವಾ (ಆಸ್ಟ್ರೇಲಿಯಾ) ವಿರುದ್ಧ ಜಯ ಗಳಿಸಿದರು. ಪಂದ್ಯದುದ್ದಕ್ಕೂ ತಮ್ಮನ್ನು ಕೆಣಕುತ್ತಿದ್ದ ಪ್ರೇಕ್ಷಕರತ್ತ ಅಮೆರಿಕದ ಆಟಗಾರ್ತಿ ಮುತ್ತುಗಳನ್ನು ಹರಿಬಿಟ್ಟು ತಿರುಗೇಟು ಕೊಟ್ಟರು.

ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಮಣಿಸಿದ ಕ್ಯಾಲಿಫೋರ್ನಿಯಾದ ಲರ್ನರ್ ಟಿಯನ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಮಡ್ವೆಡೇವ್‌ಗೆ ‘ಲರ್ನರ್’ ಆಘಾತ

ಮೆಲ್ಬರ್ನ್ (ಎಎಫ್‌ಪಿ): ಕ್ವಾಲಿಫೈಯರ್, 19 ವರ್ಷ ವಯಸ್ಸಿನ ಲರ್ನರ್ ಟಿಯನ್ ಅವರು ಗುರುವಾರ ತಡರಾತ್ರಿಯವರೆಗೆ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಕಳೆದ ಬಾರಿಯ ರನ್ನರ್ ಅಪ್ ಡೇನಿಯಲ್ ಮೆಡ್ವೆಡೇವ್ ಅವರನ್ನು ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಸೋಲಿಸಿ ಅತಿ ದೊಡ್ಡ ಅನಿರೀಕ್ಷಿತ ಫಲಿತಾಂಶಕ್ಕೆ ಕಾರಣರಾದರು.

ವಿಶ್ವ ಕ್ರಮಾಂಕದಲ್ಲಿ 121ನೇ ಸ್ಥಾನದಲ್ಲಿರುವ ಲರ್ನರ್ 6–3, 7–6 (7–4), 6–7 (8–10), 1–6, 7–6 (10–7) ರಿಂದ ವಿಶ್ವ ಕ್ರಮಾಂಕದಲ್ಲಿ ಐದನೇ ಸ್ಥಾನದಲ್ಲಿರುವ ರಷ್ಯಾದ ಆಟಗಾರನಿಗೆ ಆಘಾತ ನೀಡಿದರು. 4 ಗಂಟೆ 48 ನಿಮಿಷಗಳವರೆಗೆ ನಡೆದ ಈ ಪಂದ್ಯ ಸ್ಥಳೀಯ ಕಾಲಮಾನ ಶುಕ್ರವಾರ ಬೆಳಗಿನ ಜಾವ 3 ಗಂಟೆಗೆ ಮುಗಿಯಿತು. ಮೊದಲ ಬಾರಿ ಇಲ್ಲಿ ಆಡುತ್ತಿರುವ ಕ್ಯಾಲಿಫೋರ್ನಿಯಾದ ಎಡಗೈ ಆಟಗಾರ ಮೂರನೇ ಸುತ್ತಿನಲ್ಲಿ ಫ್ರಾನ್ಸ್‌ನ ಕೊರೆಂಟಿನ್ ಮೊಟೆಟ್ ಅವರನ್ನು ಎದುರಿಸಲಿದ್ದಾರೆ.

ಬಾಲಾಜಿ–ಮಿಗೆಲ್ ಜೋಡಿಗೆ ಜಯ

ಮೆಲ್ಬರ್ನ್ (ಪಿಟಿಐ): ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಮೆಕ್ಸಿಕೊದ ಅವರ ಜೊತೆಗಾರ ಮಿಗೆಲ್ ಏಂಜೆಲ್ ರೇಯೆಸ್–ವರೆಲಾ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ನೇರ ಸೆಟ್‌ಗಳ ಗೆಲುವಿನೊಡನೆ ಡಬಲ್ಸ್ ಎರಡನೇ ಸುತ್ತನ್ನು ತಲುಪಿದರು.

ಗುರುವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಶ್ರೀರಾಮ್–ಮಿಗೆಲ್ ಜೋಡಿ 6–4, 6–3 ರಿಂದ ರಾಬಿನ್ ಹಾಸೆ (ನೆದರ್ಲೆಂಡ್ಸ್) ಮತ್ತು ಅಲೆಕ್ಸಾಂಡರ್ ನೆಡೊವಿಸೊವ್ (ಕಜಕಸ್ತಾನ) ಅವರನ್ನು ಸೋಲಿಸಿತು. ಇದೇ ವೇಳೆ ಕಣದಲ್ಲಿದ್ದ ಭಾರತದ ರಿತ್ವಿಕ್ ಬೊಲ್ಲಿಪಳ್ಳಿ– ಅಮೆರಿಕದ ರಯಾನ್ ಸೆಗ್ಗರ್‌ಮನ್ (ಅಮೆರಿಕ) ಅವರು 6–7, 1–6 ರಿಂದ ಹ್ಯಾರಿ ಹೆಲಿಯೊವರ (ಫಿನ್ಲೆಂಡ್)– ಹೆನ್ರಿ ಪ್ಯಾಟೆನ್ (ಯು.ಕೆ) ಜೋಡಿ ಎದುರು ಸೋಲನುಭವಿಸಿತು.

ಬೆಂಗಳೂರು ಸೇರಿ 4 ನಗರಗಳಲ್ಲಿ ಡಬ್ಲ್ಯುಪಿಎಲ್ ಪಂದ್ಯಗಳು

ನವದೆಹಲಿ (ಪಿಟಿಐ): ಮಹಿಳಾ ಪ್ರೀಮಿಯರ್ ಕ್ರಿಕೆಟ್ ಲೀಗ್ ಟೂರ್ನಿಯು ಫೆಬ್ರುವರಿ 14ರಿಂದ ಆರಂಭವಾಗಲಿದೆ. ಇದೇ ಮೊದಲ ಸಲ ಟೂರ್ನಿಯ ಪಂದ್ಯಗಳು ನಾಲ್ಕು ನಗರಗಳಲ್ಲಿ ಆಡಲಿವೆ.

ಈ ಬಾರಿ ಬೆಂಗಳೂರು, ಮುಂಬೈ, ಲಖನೌ ಮತ್ತು ಬರೋಡಾದಲ್ಲಿ ಪಂದ್ಯಗಳು ನಡೆಯಲಿವೆ. ಟೂರ್ನಿಯ ಮೊದಲ ಪಂದ್ಯವು ಬರೋಡಾದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಬಿಸಿಎ ಕ್ರೀಡಾಂಗಣದಲ್ಲಿ ನಡೆಯಲಿದೆ. ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುಜರಾತ್ ಜೈಂಟ್ಸ್ ಎದುರು ಆಡಲಿದೆ.

ಲಖನೌನಲ್ಲಿ ಇದೇ ಮೊದಲ ಸಲ ಪಂದ್ಯಗಳೂ ನಡೆಯಲಿವೆ. ಮುಂಬೈನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಮಾ. 15ರಂದು ಫೈನಲ್ ನಡೆಯಲಿದೆ. 2024ರಲ್ಲಿ ಬೆಂಗಳೂರು ಮತ್ತು ನವದೆಹಲಿಯಲ್ಲಿ ಪಂದ್ಯಗಳು ನಡೆದಿದ್ದವು.

‘ಫೆ.21ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಆರ್‌ಸಿಬಿಯು ಮುಂಬೈ ಇಂಡಿಯನ್ಸ್ ಎದುರು ಆಡಲಿದೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

‘ಮುಂಬೈನಲ್ಲಿ ಅಂತಿಮ ಹಂತದ ಪಂದ್ಯಗಳು ನಡೆಯುತ್ತವೆ. ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾ (ಸಿಸಿಐ)ದಲ್ಲಿ ಲೀಗ್ ಹಂತದ ಕೊನೆಯ ಎರಡು ಪಂದ್ಯಗಳು, ಪ್ಲೇ ಆಫ್ ಹಾಗೂ ಫೈನಲ್ ಹಂತದ ಪಂದ್ಯಗಳು ನಡೆಯಲಿವೆ’ ಎಂದು ತಿಳಿಸಲಾಗಿದೆ.

ಹೋದ ಆವೃತ್ತಿಯಲ್ಲಿದ್ದ ನಿಯಮಾವಳಿಯೇ ಈ ಬಾರಿಯೂ ಇರಲಿದೆ. ಈ ಆವೃತ್ತಿಯಲ್ಲಿ ಸಿಂಗಲ್ ಹೆಡರ್ ಪಂದ್ಯಗಳಿವೆ.

ಆರ್‌ಸಿಬಿ ತಂಡಕ್ಕೆ ಚಾರ್ಲಿ ಡೀನ್

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ್ತಿ ಸೋಫಿ ಮಾಲಿನೆ ಗಾಯಗೊಂಡಿದ್ದಾರೆ.

ಆದ್ದರಿಂದ ಅವರ ಸ್ಥಾನಕ್ಕೆ ಇಂಗ್ಲೆಂಡ್‌ನ ಚಾರ್ಲಿ ಡೀನ್ ಅವರನ್ನು ಆಯ್ಕೆ ಮಾಡಲಾಗಿದೆ.

ಚೆಸ್: ಗುಕೇಶ್‌ಗೆ ಸತ್ವಪರೀಕ್ಷೆ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್): ವಿಶ್ವ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡ ನಂತರ ಡಿ.ಗುಕೇಶ್ ಅವರಿಗೆ ಮೊದಲ ಸತ್ವ ಪರೀಕ್ಷೆ ಎದುರಾಗುತ್ತಿದೆ. ‘ಚೆಸ್‌ನ ವಿಂಬಲ್ಡನ್’ ಎಂದೇ ಹೆಸರಾಗಿರುವ ಟಾಟಾ ಸ್ಟೀಲ್ ಚೆಸ್ ಟೂರ್ನಿ ಶುಕ್ರವಾರ ಇಲ್ಲಿ ಆರಂಭವಾಗುತ್ತಿದ್ದು, ಮೊದಲ ಬಾರಿ ಭಾರತದ ಐವರು ಕಣದಲ್ಲಿದ್ದಾರೆ.

ಸಿಂಗಪುರದಲ್ಲಿ ಕಳೆದ ತಿಂಗಳು ಡಿಂಗ್ ಲಿರೆನ್ ಅವರನ್ನು 14 ಪಂದ್ಯಗಳ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಸೋಲಿಸಿ ಚಾಂಪಿಯನ್ ಆದ ನಂತರ ಗುಕೇಶ್ ಯಾವುದೇ ಟೂರ್ನಿಯಲ್ಲಿ ಆಡಿರಲಿಲ್ಲ. ವಿಶ್ವ ಬ್ಲಿಟ್ಜ್ ಮತ್ತು ರ್‍ಯಾಪಿಡ್ ಟೂರ್ನಿಯಿಂದ ಅವರು ಹಿಂದೆಸರಿದಿದ್ದರು.

14 ಆಟಗಾರರು ಭಾಗವಹಿಸುತ್ತಿರುವ 13 ಸುತ್ತುಗಳ ಈ ಟೂರ್ನಿಯ ‘ಪೇರಿಂಗ್’ (ಮುಖಾಮುಖಿ ಡ್ರಾ) ಅನ್ನು ಶುಕ್ರವಾರ ನಡೆಸಲಾಗುವುದು. ವಿಶ್ವದ ನಾಲ್ಕನೇ ಕ್ರಮಾಂಕದ ಹಾಗೂ ಭಾರತದ ಅಗ್ರ ರ್‍ಯಾಂಕಿನ ಆಟಗಾರ ಅರ್ಜುನ್ ಇರಿಗೇಶಿ ಕೂಡ ಕಣದಲ್ಲಿದ್ದಾರೆ. ಆರ್.ಪ್ರಜ್ಞಾನಂದ, ಪಿ.ಹರಿಕೃಷ್ಣ ಮತ್ತು ಲಿಯಾನ್ ಲ್ಯೂಕ್ ಮೆಂಡೊನ್ಸಾ ಕಣದಲ್ಲಿರುವ ಭಾರತದ ಇತರ ಮೂವರು. ಕಳೆದ ಬಾರಿ ಈ ಟೂರ್ನಿಯ ಚಾಲೆಂಜರ್ಸ್ ವಿಭಾಗದಲ್ಲಿ ಲಿಯಾನ್ ವಿಜೇತರಾಗಿದ್ದರು.

ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಇತ್ತೀಚೆಗೆ ಮದುವೆಯಾಗಿದ್ದು ಅವರು ಭಾಗವಹಿಸುತ್ತಿಲ್ಲ. ಮೂರನೇ ಕ್ರಮಾಂಕದ ಹಿಕಾರು ನಕಾಮುರಾ ಕೂಡ ಕಣದಲ್ಲಿಲ್ಲ. ಅಮೆರಿಕದ ಫ್ಯಾಬಿಯಾನೊ ಕರುವಾನ ಅವರಿಗೆ ಅಗ್ರ ಶ್ರೇಯಾಂಕ ನೀಡಲಾಗಿದೆ. ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಮತ್ತು ಹಾಲಿ ಚಾಂಪಿಯನ್ ವಿ ಯಿ (ಚೀನಾ) ಅವರೂ ಭಾಗವಹಿಸುತ್ತಿದ್ದಾರೆ.

2024ರಲ್ಲಿ ಗುಕೇಶ್ ಅವರು ಪ್ರಶಸ್ತಿ ಸನಿಹದಲ್ಲಿದ್ದರು. ಆದರೆ ಅಲ್ಪಾವಧಿ ಟೈಬ್ರೇಕರ್‌ನಲ್ಲಿ ಚೀನಾದ ವಿ ಅವರಿಗೆ ಸೋತಿದ್ದರು. ವಿಶ್ವ ಚಾಂಪಿಯನ್‌ಷಿಪ್ ವೇಳೆ ಗುಕೇಶ್ ಅವರಿಗೆ ನೆರವು ತಂಡದಲ್ಲಿದ್ದ ವಿನ್ಸೆಂಟ್ ಕೀಮರ್ (ಜರ್ಮನಿ) ಸಹ ಕಣದಲ್ಲಿದ್ದಾರೆ.

ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್, ಆರ್.ವೈಶಾಲಿ ಭಾಗವಹಿಸುತ್ತಿದ್ದಾರೆ.

ಫೈನಲ್‌ನಲ್ಲಿ ಕರುಣ್– ಕರ್ನಾಟಕ ಮುಖಾಮುಖಿ

ವಿಜಯ್ ಹಜಾರೆ ಟ್ರೋಫಿ: ಸೆಮಿಫೈನಲ್‌ನಲ್ಲಿ ವಿದರ್ಭಕ್ಕೆ ಮಣಿದ ಮಹಾರಾಷ್ಟ್ರ

ಪ್ರಜಾವಾಣಿ ವಾರ್ತೆ

ವಡೋದರಾ: ಈ ಬಾರಿಯ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವು ತೀವ್ರ ಕುತೂಹಲ ಕೆರಳಿಸಿದೆ. ಏಕೆಂದರೆ ಪ್ರಶಸ್ತಿಗಾಗಿ ಕರ್ನಾಟಕ ತಂಡವು ಕನ್ನಡಿಗ ಕರುಣ್ ನಾಯರ್ ನಾಯಕತ್ವದ ವಿದರ್ಭ ತಂಡವನ್ನು ಎದುರಿಸಬೇಕಿದೆ.

ಗುರುವಾರ ನಡೆದ ಎರಡನೇ ಸೆಮಿಫೈನಲ್‌ನಲ್ಲಿ ವಿದರ್ಭ ತಂಡವು 69 ರನ್‌ಗಳಿಂದ ಮಹಾರಾಷ್ಟ್ರ ವಿರುದ್ಧ ಜಯಿಸಿತು. ಅದರೊಂದಿಗೆ ತಮ್ಮ ‘ನಿಕಟಪೂರ್ವ ತಂಡ’ದ ಎದುರು ಸೆಣಸಲು ಕರುಣ್ ಸಜ್ಜಾಗಿದ್ದಾರೆ. ಈ ಟೂರ್ನಿಯಲ್ಲಿ ಅವರು ರನ್‌ಗಳ ಹೊಳೆ ಹರಿಸಿದ್ದಾರೆ. ಒಟ್ಟು 752 ರನ್‌ಗಳನ್ನು ಅವರು ಕಲೆಹಾಕಿದ್ದಾರೆ. ಅದರಲ್ಲಿ ಐದು ಶತಕಗಳು ಇವೆ. ಸೆಮಿಫೈನಲ್‌ನಲ್ಲಿಯೂ ಅವರದ್ದು ಮಿಂಚಿನ ಬ್ಯಾಟಿಂಗ್. 44 ಎಸೆತಗಳಲ್ಲಿ ಅಜೇಯ 88 ರನ್ ಗಳಿಸಿದರು. ಅದರಲ್ಲಿ 9 ಬೌಂಡರಿ ಮತ್ತು 5 ಸಿಕ್ಸರ್‌ಗಳ ಭರಾಟೆ ಇತ್ತು. ಅವರಿಗಿಂತ ಮುನ್ನ ವಿದರ್ಭ ಆರಂಭಿಕ ಜೋಡಿ ಧ್ರುವ ಶೋರೆ (114; 120ಎ) ಮತ್ತು ಯಶ್ ರಾಥೋಡ್ (116; 101ಎ) ಅವರಿಬ್ಬರೂ ಶತಕ ಗಳಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 224 ರನ್ ಸೇರಿಸಿದರು.

ಈ ಅಡಿಪಾಯದ ಮೇಲೆ ಕರುಣ್ ಮಿಂಚಿನ ಬ್ಯಾಟಿಂಗ್ ಮೂಲಕ ರನ್‌ಗಳ ಸೌಧ ಕಟ್ಟಿದರು. ತಂಡವು 50 ಓವರ್‌ಗಳಲ್ಲಿ 3 ವಿಕೆಟ್‌ಗೆ 380 ರನ್ ಗಳಿಸಿತು.

ಇದಕ್ಕುತ್ತರವಾಗಿ ಋತುರಾಜ್ ಗಾಯಕವಾಡ ನಾಯಕತ್ವದ ಮಹಾರಾಷ್ಟ್ರ ನಿಗದಿತ ಓವರ್‌ಗಳಲ್ಲಿ 7ಕ್ಕೆ311 ರನ್ ಗಳಿಸಿತು. ಯುವಪ್ರತಿಭೆ ಅರ್ಷಿನ್ ಕುಲಕರ್ಣಿ (90; 101ಎ), ಅಂಕಿತ್ ಭಾವ್ನೆ (50; 49ಎ) ಮತ್ತು ನಿಖಿಲ್ ನಾಯಕ (49; 26ಎ) ಅವರ ಹೋರಾಟಕ್ಕೆ ಗೆಲುವು ದಕ್ಕಲಿಲ್ಲ.

2022ರಲ್ಲಿ ಫಾರ್ಮ್ ಕೊರತೆ ಅನುಭವಿಸಿದ್ದ ಕರುಣ್ ಅವರು ಕರ್ನಾಟಕ ತಂಡದಿಂದ ಸ್ಥಾನ ಕಳೆದುಕೊಂಡಿದ್ದರು. ಅದರ ನಂತರ ವಿದರ್ಭಕ್ಕೆ ವಲಸೆ ಹೋಗಿದ್ದರು. ವೈಫಲ್ಯದ ಕೂಪದಿಂದ ಮೇಲೆದ್ದು ನಿಂತಿರುವ ಕರುಣ್ ಬ್ಯಾಟಿಂಗ್ ವೈಭವ ಮೆರೆಯುತ್ತಿದ್ದಾರೆ.

ಅನುಭವಿ 33 ವರ್ಷದ ಕರುಣ್ ಈಗ ತಮ್ಮ ಮುಂದಾಳತ್ವದ ವಿದರ್ಭಕ್ಕೆ ಟ್ರೋಫಿ ಜಯಿಸಿಕೊಡುವ ಛಲದಲ್ಲಿದ್ದಾರೆ. ಅದಕ್ಕಾಗಿ ತಮ್ಮ ಹಳೆಯ ಮಿತ್ರ ಮಯಂಕ್ ಅಗರವಾಲ್ ನಾಯಕತ್ವದ ಬಳಗವನ್ನು ಮಣಿಸುವ ಸವಾಲು ಅವರ ಮುಂದಿದೆ.

‘ಪ್ರಿಯ ಕ್ರಿಕೆಟ್ ನನಗೆ ಇನ್ನೊಂದು ಅವಕಾಶ ಕೊಡು..’ ಎಂದು ಎರಡು ವರ್ಷಗಳ ಹಿಂದೆ ಟ್ವೀಟ್ ಮಾಡಿದ್ದ ಕರುಣ್ ತಮಗೆ ಸಿಕ್ಕ ಅವಕಾಶವನ್ನು ಭರ್ಜರಿಯಾಗಿ ಬಳಸಿಕೊಂಡಿದ್ದಾರೆ.

ಸಂಕ್ಷಿಪ್ತ ಸ್ಕೋರು: ವಿದರ್ಭ: 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 380 (ಧ್ರುವ ಶೋರೆ 114, ಯಶ್ ರಾಥೋಡ್ 116, ಕರುಣ್ ನಾಯರ್ ಔಟಾಗದೇ 88, ಜಿತೇಶ್ ಶರ್ಮಾ 51, ಮುಕೇಶ್ ಚೌಧರಿ 80ಕ್ಕೆ2) ಮಹಾರಾಷ್ಟ್ರ: 50 ಓವರ್‌ಗಳಲ್ಲಿ 7ಕ್ಕೆ 311 (ಅರ್ಷಿನ್ ಕುಲಕರ್ಣಿ 90, ಸಿದ್ಧೇಶ್ ವೀರ್ 30, ಅಂಕಿತ್ ಭಾವ್ನೆ 50, ನಿಖಿಲ್ ನಾಯಕ್ 49, ದರ್ಶನ್ ನಾಲ್ಕಂಡೆ 64ಕ್ಕೆ3, ನಚಿಕೇತ್ ಭೂತೆ 68ಕ್ಕೆ3). ಪಂದ್ಯದ ಆಟಗಾರ: ಯಶ್ ರಾಥೋಡ್

ಫೈನಲ್: ಕರ್ನಾಟಕ– ವಿದರ್ಭ (ಜ. 18)

(ಮಾಹಿತಿ: ಬಿಸಿಸಿಐ ಡಾಟ್ ಟಿವಿ ಮತ್ತು ವೆಬ್‌ಸೈಟ್)

ಕರುಣ್ ನಾಯರ್

ನಾಯರ್ ದಾಖಲೆ

ಕರುಣ್ ಅವರು ಟೂರ್ನಿಯ ಎಂಟು ಪಂದ್ಯಗಳಲ್ಲಿ ಒಟ್ಟು 752 ರನ್ ಕಲೆ ಹಾಕಿದರು. ಈ ಮೂಲಕ ವಿಜಯ್ ಹಜಾರೆ ಟ್ರೋಫಿಯ ಒಂದೇ ಆವೃತ್ತಿಯಲ್ಲಿ 750ಕ್ಕಿಂತ ಅಧಿಕ ರನ್ ದಾಖಲಿಸಿದ ಮೂರನೇ ಆಟಗಾರ ಎಂಬ ದಾಖಲೆ ಬರೆದರು.

ತಮಿಳುನಾಡಿನ ಎನ್. ಜಗದೀಶ್ವರನ್ 830 ರನ್ (2022–23), ಮುಂಬೈನ ಪೃಥ್ವಿ ಶಾ 827 ರನ್ (2020–21) ಕ್ರಮವಾಗಿ ಮೊದಲೆರಡು ಆಟಗಾರರಾಗಿದ್ದಾರೆ. ಈ ಹಾದಿಯಲ್ಲಿ ಕರುಣ್ ಅವರು ಕರ್ನಾಟಕದ ದೇವದತ್ತ ಪಡಿಕ್ಕಲ್ (737 ರನ್) ಮತ್ತು ಮಯಂಕ್ ಅಗರವಾಲ್ (723 ರನ್) ಅವರನ್ನು ಹಿಂದಿಕ್ಕಿದರು.

ಮಾಹಿತಿ: ಎಚ್.ಆರ್. ಗೋಪಾಲಕೃಷ್ಣ

ಭಾರತ ತಂಡಗಳ ಅಜೇಯ ಓಟ

ನವದೆಹಲಿ (ಪಿಟಿಐ): ಅಜೇಯ ಓಟವನ್ನು ಮುಂದುವರಿಸಿರುವ ಭಾರತದ ಪುರುಷ ಮತ್ತು ಮಹಿಳೆಯರ ತಂಡಗಳು ಕೊಕ್ಕೊ ವಿಶ್ವಕಪ್‌ನ ಗುಂಪುಹಂತದ ಅಭಿಯಾನವನ್ನು ಅಗ್ರಸ್ಥಾನದೊಂದಿಗೆ ಮುಗಿಸಿ, ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿವೆ.

ಆತಿಥೇಯ ಪುರುಷರ ತಂಡವು ಗುರುವಾರ ‘ಎ’ ಗುಂಪಿನ ಅಂತಿಮ ಪಂದ್ಯದಲ್ಲಿ 37 (71-34) ಅಂಕಗಳಿಂದ ಭೂತಾನ್ ತಂಡವನ್ನು ಮಣಿಸಿತು.

ಇದರೊಂದಿಗೆ ಆಡಿರುವ ನಾಲ್ಕೂ ಪಂದ್ಯಗಳನ್ನು ಗೆದ್ದು 12 ಅಂಕ ಪಡೆದಿದೆ. ಶುಕ್ರವಾರ ಕ್ವಾರ್ಟರ್ ಫೈನಲ್‌ನಲ್ಲಿ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಆತಿಥೇಯ ವನಿತೆಯರ ತಂಡವು ‘ಎ’ ಗುಂಪಿನ ಕೊನೆಯ ಪಂದ್ಯದಲ್ಲಿ ಗುರುವಾರ ಮಲೇಷ್ಯಾ ತಂಡವನ್ನು 80 (100-20) ಪಾಯಿಂಟ್‌ಗಳಿಂದ ಸೋಲಿಸಿತು. ಈ ಮೂಲಕ ಗುಂಪಿನಲ್ಲಿ ಆಡಿದ ಮೂರೂ ಪಂದ್ಯಗಳನ್ನು ಗೆದ್ದು 9 ಅಂಕ ಪಡೆಯಿತು. ಶುಕ್ರವಾರ ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಕೊಕ್ಕೊ ವಿಶ್ವಕಪ್ ಭಾರತ–2025

ಕೊಕ್ಕೊ ಪಂದ್ಯದಲ್ಲಿ ಭಾರತ ತಂಡದ ಆಟಗಾರನ ಜಿಗಿತ

ಕ್ವಾರ್ಟರ್ ಫೈನಲ್‌ಗೆ ಸಿಂಧು, ಕಿರಣ್

ನವದೆಹಲಿ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಕಿರಣ್ ಜಾರ್ಜ್ ಅವರು ಇಲ್ಲಿ ನಡೆಯುತ್ತಿರುವ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸಿಂಧು ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 21-15, 21-13ರಿಂದ ಜಪಾನ್‌ನ ಮನಾಮಿ ಸುಯಿಜು ಅವರನ್ನು ಹಿಮ್ಮೆಟ್ಟಿಸಿದರು. ಮುಂದಿನ ಸುತ್ತಿನಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ (ಇಂಡೊನೇಷ್ಯಾ) ಅವರನ್ನು ಎದುರಿಸಲಿದ್ದಾರೆ.

ಕೇರಳದ 24 ವರ್ಷ ವಯಸ್ಸಿನ ಕಿರಣ್ 16ರ ಘಟ್ಟದ ಪಂದ್ಯದಲ್ಲಿ 22-20, 21-13ರಿಂದ ಫ್ರಾನ್ಸ್‌ನ ಅಲೆಕ್ಸ್ ಲೇನಿಯರ್ ಅವರನ್ನು ಸೋಲಿಸಿದರು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಅಗ್ರಮಾನ್ಯ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಪುರುಷರ ಡಬಲ್ಸ್‌ನ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಕಳೆದ ಬಾರಿಯ ರನ್ನರ್ಸ್ ಅಪ್ ಜೋಡಿಯು 20–22, 21–14, 21–16ರಿಂದ ಜಪಾನ್‌ನ ಹಿರೋಕಿ ಒಕಮುರಾ ಮತ್ತು ಕೀನ್ಯಾ ಮಿತ್ಸುಹಾಶಿ ಅವರನ್ನು ಮಣಿಸಿತು.

ಫುಟ್‌ಬಾಲ್: ಬೆಂಗಳೂರು ಯುನೈಟೆಡ್ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧ್ರುವ ಶರ್ಮಾ ಮತ್ತು ಸೂರಜ್ ರಾವತ್ ಅವರು ಗಳಿಸಿದ ಗೋಲುಗಳ ಬಲದಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 2–0ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಗುರುವಾರ ನಡೆದ ಮತ್ತೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ 2–1 ಗೋಲುಗಳಿಂದ ಅಗ್ನಿಪುತ್ರ ಎಫ್‌ಸಿ ತಂಡವನ್ನು ಸೋಲಿಸಿತು. ಎ

ಸ್ಟ್ರೈಡ್‌ಗೆ ಗೆಲುವು: ಸ್ಟ್ರೈಡ್ ಎಫ್‌ಸಿ ತಂಡವು ಸಾಯ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಿ ಡಿವಿಷನ್ ಲೀಗ್‌ನ ಪಂದ್ಯದಲ್ಲಿ 2–1 ಗೋಲುಗಳಿಂದ ರಿವೀವ್ ಎಫ್‌ಸಿ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಎಡಿಇ ಎಫ್‌ಸಿ 3–3 ಗೋಲುಗಳಿಂದ ವೆಟರನ್ಸ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಸಂಕ್ಷಿಪ್ತ ಸುದ್ದಿ

ಭಾರತ ತಂಡಕ್ಕೆ ಸಿತಾಂಶು ಬ್ಯಾಟಿಂಗ್ ಕೋಚ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಸಿತಾಂಶು ಕೋಟಕ್ ಅವರನ್ನು ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಬ್ಯಾಟಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ.

ಸೌರಾಷ್ಟ್ರ ಕ್ರಿಕೆಟ್ ತಂಡದ ಮಾಜಿ ಬ್ಯಾಟರ್ ಆಗಿದ್ದ ಸಿತಾಂಶು ದೀರ್ಘ ಸಮಯದಿಂದ ಎನ್‌ಸಿಎನಲ್ಲಿ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. 52 ವರ್ಷದ ಕೋಟಕ್ ಅವರನ್ನು ನೇಮಕ ಮಾಡಿರುವುದರಿಂದ, ಪ್ರಸ್ತುತ ಕೋಚ್ ಆಗಿರುವ ಅಭಿಷೇಕ್ ನಾಯರ್ ಅವರನ್ನು ಮುಂದುವರಿಸುವ ಬಗ್ಗೆ ಅನುಮಾನಗಳು ಮೂಡಿವೆ. ಈಚೆಗೆ ಆಸ್ಟ್ರೇಲಿಯಾ ಎದುರು ಟೆಸ್ಟ್ ಸರಣಿ ಸೋತ ನಂತರದ ಬೆಳವಣಿಗೆಯಲ್ಲಿ ಅಭಿಷೇಕ್ ಅವರ ಕಾರ್ಯಕ್ಷಮತೆ ಕುರಿತು ಅವಲೋಕನ ನಡೆಸಲಾಗಿತ್ತು.

ಕೋಟಕ್ ಅವರು ಭಾರತದ ಸೀನಿಯರ್ ಮತ್ತು ಎ ತಂಡಗಳೊಂದಿಗೆ ಕಳೆದ ಕೆಲವು ವರ್ಷಗಳಿಂದ ಕಾರ್ಯನಿರ್ವಹಿಸಿದ್ದಾರೆ.

ಕ್ವಾರ್ಟರ್‌ಗೆ ಕರ್ನಾಟಕ

ಬೆಂಗಳೂರು: ಸಲೋನಿ ಪಿ (20ಕ್ಕೆ 4) ಮತ್ತು ಪೂಜಾ ಕುಮಾರಿ (13ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 26 ರನ್‌ಗಳಿಂದ ಬರೋಡಾ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 126 (ಶಿಶಿರಾ ಎ. ಗೌಡ 40, ಕೃಷಿಕಾ ರೆಡ್ಡಿ 28, ಚಾಂದಸಿ ಕೃಷ್ಣಮೂರ್ತಿ ಔಟಾಗದೇ 24; ರಾಥೋಡ್ ಜಾನಕಿ 23ಕ್ಕೆ 3, ವಿಧಿ ಎಚ್. ಪರಮಾರ್ 29ಕ್ಕೆ 2). ಬರೋಡಾ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 100 (ಪ್ರಾಥಿ 28; ಪೂಜಾ ಕುಮಾರಿ 13ಕ್ಕೆ 3, ಸಲೋನಿ 20ಕ್ಕೆ 4).